ಕಸ್ತೂರಿ

ಫೆಬ್ರುವರಿ ೧೯೭೬

ಬೆಲೆ: ರೂ. ೧-೨೫




ರುಚಿ, ವಿಟಮಿನ್‌ಗಳು
ಮತ್ತು ಪೋಷಣೆ-
ಇವುಗಳಿಗಾಗಿ ಅಪ್ಪಟ ಬಿಸ್ಕಿಟ್
ಬ್ರಿಟಾನಿಯಾ
ಗ್ಲೂಕೋಸ್-ಡಿ
ತುಲನಾತ್ಮಕ ಪರೀಕ್ಷಣಗಳು ಸಿದ್ಧಪಡಿಸಿವೆ: ಗ್ಲೂಕೋಸ್ ಡಿ ಯಲ್ಲಿ ವಿಟಮಿನ್ ಮತ್ತು ಪೋಷಕಾಂಶಗಳು ಅಧಿಕ ಪ್ರಮಾಣದಲ್ಲಿವೆ, ಮತ್ತು ಅದರ ರುಚಿ, ಸಿಹಿ ಹಾಗೂ ಗರಿಮುರಿತನಕ್ಕಾಗಿ ಜನ ಮೆಚ್ಚುತ್ತಾರೆ.
ಆದ್ದರಿಂದಲೇ ಬೇರೆ ಯಾವುದೇ ಗ್ಲೂಕೋಸ್ ಬಿಸ್ಕಿಟ್‌ಗಿಂತ ಅಧಿಕವಾಗಿ ಬ್ರಿಟಾನಿಯಾ ಗ್ಲೂಕೋಸ್ ಡಿ ಜನರನ್ನು ಆಕರ್ಷಿಸುತ್ತದೆ.
BRITANNIA
Glucose
Glucose-D
BRITANNIA
ಈಗ ಆಕರ್ಷಕವಾದ ಹೊಸ ಪ್ಯಾಕೆಟ್‌ನಲ್ಲಿ ದೊರೆಯುತ್ತದೆ
ಬ್ರಿಟಾನಿಯಾ ಬ್ರಿಟಾನಿಯಾ ಬಿಸ್ಕಿಟ್ ಬಲು ಶ್ರೇಷ್ಠ
ಲಿಂಟಾಸ್.BBC.GL.10-77 KN

‘ಕಸ್ತೂರಿ’ ಅರ್ಧವಾರ್ಷಿಕ ಪರಿವಿಡಿ

ಸೆಪ್ಟೆಂಬರ್ ೧೯೭೫ ರಿಂದ ಫೆಬ್ರುವರಿ ೧೯೭೬ ರ ವರೆಗೆ

ಕ್ರಮ: ಲೇಖನದ ಹೆಸರು, ತಿಂಗಳು, ಪುಟ ಸಂಖ್ಯೆ

ಸೆ. = ಸೆಪ್ಟೆಂಬರ್, ಅ. = ಅಕ್ಟೋಬರ್, ನ. = ನವಂಬರ್, ಡಿ. = ಡಿಸೆಂಬರ್

ಜ. = ಜನವರಿ, ಫೆ. = ಫೆಬ್ರುವರಿ

ಕಥೆ

ಜನಪದ ಸಾಹಿತ್ಯ

ಜೀವನ ಚರಿತ್ರೆ

ನಗೆಮಲ್ಲಿಗೆ

ಕಸ್ತೂರಿ

ಪ್ರಕಟನೆ :
ಪ್ರತಿ ತಿಂಗಳ ೧ ನೇ ದಿನಾಂಕ

ವ್ಯವಸ್ಥಾಪಕ ಸಂಪಾದಕರು :
ರಂಗನಾಥ ದಿವಾಕರ

ಸಂಪಾದಕರು :
ದ. ಲ. ಕೆರೂರ

ಪ್ರಕಾಶಕರು :
ಕರ್ನಾಟಕ ಪತ್ರಿಕಾ ಪ್ರೈ. ಲಿ.
ಹುಬ್ಬಳ್ಳಿ

ಕಚೇರಿ :
ಕಸ್ತೂರಿ ಕಾರ್ಯಾಲಯ ಹುಬ್ಬಳ್ಳಿ

ಕಲೆ :
ಕೆ. ಬಿ. ಕುಲಕರ್ಣಿ

ಮುದ್ರಣ :
ಸಂಯುಕ್ತ ಕರ್ನಾಟಕ ಪ್ರೆಸ್
ಹುಬ್ಬಳ್ಳಿ

ಮುಖಪುಟ :
ಕರಾವಳಿಯ ವನಸಿರಿ
ದೇವದಾಸ ಕುಸುಮ

ಚಂದಾದರ

೩ ವರ್ಷ	(ಅಂಚೆ ಸೇರಿ)	ರೂ. ೩೫-೦೦
೨ ವರ್ಷ	”	ರೂ. ೨೫-೦೦
೧ ವರ್ಷ	”	ರೂ. ೧೪-೦೦
ಅರ್ಧ ವರ್ಷ	”	ರೂ. ೭-೫೦

KASTURI February 1976

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವುದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸವನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಅವುಗಳ ಮೂಲ ಲೇಖಕ ಹಾಗೂ ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖನಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವುದು. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ ಲೇಖಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯ ಬೇಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು 'ಇದುವೆ ಜೀವ' ಮೊದಲಾದ ಚುಟುಕುಗಳನ್ನು ತಿರುಗಿ ಕಳಿಸಲು, ಆ ಬಗ್ಗೆ ಪತ್ರವ್ಯವಹಾರ ಮಾಡಲು ಸಾಧ್ಯವಿಲ್ಲ. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವುದು. ಲೇಖಕರು ತಮ್ಮ ಲೇಖನಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವುದೊಳಿತು. ಲೇಖನಗಳು ಆಕಸ್ಮಾತ್ತಾಗಿ ಕಳೆದುಹೋದರೆ ಸಂಪಾದಕರು ಜೋಖೆಗಾರರಲ್ಲ.

ಲೇಖನ ಪ್ರಕಟವಾದರೆ, ಕಸ್ತೂರಿಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡುವುದು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿ ತಿಂಗಳ ಕಸ್ತೂರಿ ಆಯಾ ತಿಂಗಳ ೧ ನೇ ದಿನಾಂಕದೊಳಗೆ ಪ್ರಕಟವಾಗುವುದು. ಅದು ಚಂದಾದಾರರಿಗೆ ಆಯಾ ತಿಂಗಳ ೫ ನೇ ದಿನಾಂಕದೊಳಗೆ ತಲುಪುವುದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲುಕಚೇರಿಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರ್ ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಸಹಚಿಂತನ

ನಾನು ನಂಜಪ್ಪನ ಗುಂಡಿಗೆ

ಕಸ್ತೂರಿ ಉತ್ತಮವಾದ ಲೇಖನಕ್ಕೆ ಹೆಸರಾಂತ ಮಾಸ ಪತ್ರಿಕೆ. ಜನವರಿ ೧೯೭೭ ರ ಸಂಚಿಕೆಯಲ್ಲಿ ಬಂದ ಡಾ. ಎಸ್. ರಾಮರಾವ ಅವರ ಲೇಖನ "ನಾನು ನಂಜಪ್ಪನ ಗುಂಡಿಗೆ''ಯು ಕತೆಯಂತೆ ಅನೇಕರಿಗೆ ಅನಿಸಬಹುದು. ಇದು ಬಹಳ ಅಮೂಲ್ಯ ಲೇಖನ. ಈಚೀಚೆಗೆ ಜನರ ಆಹಾರ ಪಾನೀಯ ನಡೆ ನುಡಿಗಳಿಂದಾಗಿ ಹೃದ್ರೋಗ ಹರಡುತ್ತಿದೆ. ಆದ್ದರಿಂದ ಈ ರೋಗದ ಬಗ್ಗೆ ಆಗಿಂದಾಗ್ಗೆ ಲೇಖನಗಳು ಬಂದು ಜನರನ್ನು ಎಚ್ಚರಿಸುತ್ತಿರುವುದು ಬಹಳ ಉಪಯುಕ್ತ. ಪ್ರಕೃತ ಲೇಖನದಲ್ಲಿ ಹೃದಯದ ವ್ಯಾಪಾರ ಚೆನ್ನಾಗಿ ವಿವರಿಸಲ್ಪಟ್ಟಿದೆ. ಮುಂದೆ ರೋಗಕ್ಕೆ ಕಾರಣ ಅದರ ವಿವರಗಳು ಆಹಾರ-ಪಥ್ಯ ಪಾನಗಳನ್ನೂ ಸಹಾ ಸಾಮಾನ್ಯ ಜನರಿಗೂ ತಿಳಿಯುವಂತೆ ಲೇಖನಗಳನ್ನು ಡಾ. ಎಸ್. ರಾಮರಾವ್ ಅವರೇ ಆಗಲಿ. ಅಥವಾ ತಿಳಿಗನ್ನಡವನ್ನರಿತ ನುರಿತ ಲೇಖಕರೇ ಆಗಲಿ ಬರೆಯುತ್ತ ಬಂದರೆ ಮಹದುಪಕಾರವಾಗುತ್ತದೆ. ಇಂಥ ಲೇಖನಗಳನ್ನು ಪ್ರಕಟಿಸುತ್ತಾ ಬರುತ್ತಿರುವ ಕಸ್ತೂರಿಗೆ ಚಿರಋಣಿ.

ಬೆಟ್ಟದಪುರ — ಡಾ ಎ. ಜಿ ಕೃಷ್ಣಪ್ಪ

ಮದುವೆ

ಶ್ರೀ ಶರ್ಮರ 'ಮದುವೆ' ಲೇಖನದ ಬಗ್ಗೆ ಜನವರಿ ಸಂಚಿಕೆಯಲ್ಲಿ ಬಂದ ಪ್ರತಿಕ್ರಿಯೆಗಳಲ್ಲಿ ಕೆಲವು ಅಂಶಗಳನ್ನು ಓದಿ ಅತ್ಯಾಶ್ಚರ್ಯವಾಯಿತು ವಿವಾಹದ ವಿಷಯದಲ್ಲೇಳುವ ಹಲವಾರು ಸಮಸ್ಯೆಗಳಿಂದ ಪಾರಾಗಲು ರಿಜಿಸ್ಟರು ಮದುವೆ ತೀರ ಸಹಾಯಕಾರಿ ಅನ್ನುವುದನ್ನು ಲೇಖಕರು ಸೂಚಿಸಿದ್ದು ಸಂದರ್ಭೋಚಿತವಾಗಿದೆ. ಆದರೆ ಅದೇಕೋ ಬಹಳ ಮಂದಿ ರಿಜಿಸ್ಟರು ಮದುವೆಯೆಂದರೆ ೧) ಹಿರಿಯರನ್ನೆಲ್ಲ ತುಚ್ಛೀಕರಿಸುವ, ೨) ವಿಚ್ಛೇದನಕ್ಕೆ ಸುಲಭ ಸಾಧ್ಯವಾದ, ೩) ಕೇವಲ ಕಾಮ-ಪ್ರೇಮಗಳಲ್ಲಿ ಸಿಲುಕಿಕೊಂಡವರು ಮಾತ್ರ ಅನುಸರಿಸುವ ಮಾರ್ಗವೆಂದು ತಿಳಿದುಕೊಂಡಂತಿದೆ. ಇದು ತೀರ ವಿಷಾದನೀಯ. ಇವರೆಲ್ಲ ಹೇಳುವ ಆ ಹಿರಿಯರಲ್ಲೇ ಅದೆಷ್ಟೋ ಮಂದಿ ಹೆಣ್ಣು ಹೆತ್ತ ಬಡಪಾಯಿಗಳಿದ್ದಾರೆ ಅನ್ನುವ ಅರಿವೂ ಬಹಳ ಮುಖ್ಯ. ಹೀಗಾಗಿ ಆ ಹಿರಿಯರೇ ಇದಕ್ಕೆ ಬೆಂಬಲವೀಯಬೇಕಾದುದು ಮತ್ತು ಅವರು ಬೆಂಬಲವೀಯುವಂತೆ ವಿದ್ಯಾವಂತರು ಪ್ರಯತ್ನಿಸಬೇಕಾದುದೂ ಅನಿವಾರ್ಯ. ಅದರಲ್ಲೂ ಹೆಚ್ಚಾಗಿ ಪರಿಶ್ರಮಿಸಬೇಕಾದವರು ಯುವಕರು, ಯಾಕೆಂದರೆ ಬಹಳಷ್ಟು ಸ್ತ್ರೀಯರು ಆರ್ಥಿಕವಾಗಿ ಸ್ವತಂತ್ರರಿರುವುದಿಲ್ಲವಾದ್ದರಿಂದ ಅನೇಕ ವಿವಾಹಗಳಲ್ಲಿ ಯುವಕರ ಅಭಿಪ್ರಾಯಕ್ಕೇ ಹೆಚ್ಚಿನ ಒತ್ತು ಕೊಡಲ್ಪಡುತ್ತಿರುವುದು ಸುಳ್ಳಲ್ಲ.

ಇನ್ನು ವಿಚ್ಛೇದನದ ಕುರಿತು:- ಮಂತ್ರ ಘೋಷಗಳ ನಡುವೆ ನಡೆದ ವಿವಾಹಗಳಲ್ಲೇ ಅದೆಷ್ಟೋ ವಿಚ್ಛೇದನಗಳು ನಡೆಯುತ್ತವೆ; ಜಗಳ-ದ್ವೇಷಗಳು ಹುಟ್ಟಿಕೊಳ್ಳುತ್ತವೆ ಅನ್ನುವುದು ಸರ್ವವಿದಿತ. ಆದರೆ ರಿಜಿಸ್ಟರ್ ಮ್ಯಾರೇಜ್ ಕಾನೂನಿನ ದೃಷ್ಟಿಯಲ್ಲಿ ಮತ್ತಷ್ಟು ಭದ್ರ. ಲಿಖಿತ ದಾಖಲೆ ಇರುವಾಗ ಸಕಾರಣಗಳಿಲ್ಲದೇ ಕೇವಲ ಮಂಗನಾಟಕ್ಕಾಗಿ ಡೈವೋರ್ಸ್ ಪಡೆಯಲು ಯಾರಿಗೂ ಸಾಧ್ಯವಿಲ್ಲ. ಅಥವಾ ಸಾಧ್ಯವೆಂದು ಸಾಧಿಸುವುದಾದರೆ ಸಾಂಪ್ರದಾಯಿಕ ವಿವಾಹಗಳಲ್ಲೂ ಇಷ್ಟೇ ಅವಕಾಶವಿದೆ ಎಂಬುದನ್ನೂ ಗಮನದಲ್ಲಿಡಬೇಕು. ಗುರು ಹಿರಿಯರನ್ನು ತುಚ್ಛೀಕರಿಸಿ ಯುವ ಜನಾಂಗ ತಮ್ಮ ಬಾಳನ್ನು ರೂಪಿಸಿಕೊಳ್ಳಬೇಕೆಂದು ಲೇಖಕರು ಎಲ್ಲೂ ಸೂಚಿಸಿಲ್ಲ.

ಹಾಗೇ ಯುವಕ-ಯುವತಿಯರು ಯಾರ ಲಂಗು ಲಗಾಮಿಲ್ಲದೆ ಬರೇ ಕಾಮ-ಪ್ರೇಮಗಳ ಆಟಕ್ಕಾಗಿ ರಿಜಿಸ್ಟರ್ ಮದುವೆಗೆ ಶರಣಾಗುತ್ತಾರೆ ಎನ್ನುವ ಅಭಿಪ್ರಾಯವೂ ಸರಿಯಲ್ಲ.

ವರದಕ್ಷಿಣೆ ಕಾನೂನು ಜಾರಿಯಾಗಿದ್ದರೂ ಆ ಪಿಡುಗು ದಿನೇ ದಿನೇ ಬೃಹದಾಕಾರವಾಗಿ ಬೆಳೆಯುತ್ತಿರುವುದು ಎಲ್ಲರಿಗೂ ತಿಳಿದಿದೆ. ಇಂಥ ಶೋಷಣೆಯ ಮದುವೆಗಳು ಸರಕಾರಿ ಕಚೇರಿಯಲ್ಲಿ ನಡೆದರೆ ಕಳ್ಳ ಮಾಲು ಸಹಿತ ಸಿಕ್ಕಿಬೀಳುವ ಅಪಾಯ ತಪ್ಪಿದ್ದಲ್ಲ. ಈ ಕಾರಣಕ್ಕಾಗಿಯೇ ಹೆಚ್ಚಿನವರು ರಿಜಿಸ್ಟರ್ ಮದುವೆಯನ್ನು ವಿರೋಧಿಸುತ್ತಿದ್ದಾರೇನೋ ಅನ್ನುವ ಅನುಮಾನ.

ಬೆಳ್ವೆ, ದ. ಕ. — ಮೀನಾಕ್ಷಿ ಹೆಂಗವಳ್ಳಿ

ಅರ್ಥಪೂರ್ಣ

ಜನವರಿ ತಿಂಗಳ ಕಸ್ತೂರಿ ಮಾಸಪತ್ರಿಕೆಯ ಮುಖಪುಟದ ಮೇಲೆ ಮುದ್ರಿಸಿರುವ ಭಾವಚಿತ್ರ ಆಕರ್ಷಣೀಯವಾಗಿದೆ. ಮತ್ತು ಅದಕ್ಕೆ ಕೊಟ್ಟಿರುವ ಶೀರ್ಷಿಕೆ ಅರ್ಥಪೂರ್ಣವಾಗಿದೆ; ಇದಕ್ಕಾಗಿ ಕಸ್ತೂರಿಗೆ ವಂದನೆಗಳು. ಇದೇ ರೀತಿ ಇನ್ನು ಮುಂದೆಯೂ ಒಳ್ಳೆಯ ನಿಸರ್ಗಕ್ಕೆ ಸಂಬಂಧಿಸಿದ ಭಾವ ಚಿತ್ರಗಳನ್ನು ಪ್ರಕಟಿಸುವರೆಂದು ನಂಬಿದ್ದೇವೆ.

ಬೆಂಗಳೂರು — ಎಲ್. ಆರ್. ಸ್ವಾಮಿ
— ಪ್ರಭಾಕರ ದೇಸಾಯಿ

ಆಕರ್ಷಕ

"ನಾನು ಅನೇಕ ವರ್ಷಗಳಿಂದ ಕಸ್ತೂರಿ ಮಾಸಪತ್ರಿಕೆಯನ್ನು ಪ್ರತಿ ತಿಂಗಳು ತಪ್ಪದೇ ಓದುತ್ತಿರುವೆನು. ಈಗ ಕಳೆದ ೩-೪ ತಿಂಗಳುಗಳಿಂದ ಕಸ್ತೂರಿ ಮತ್ತೆ ಉತ್ತಮವಾಗಿ ರೂಪಿತವಾಗಹತ್ತಿದೆ. ಜನವರಿ ತಿಂಗಳ ಕಸ್ತೂರಿಯಲ್ಲಿಯ ಲೇಖನಗಳು ಅತಿಶಯ ಚೆನ್ನಾಗಿವೆ. ನಿರರ್ಥಕವಾದ ಕಾಲ್ಪನಿಕ ಕಥೆಗಳನ್ನು ಪ್ರಕಟಿಸುವದಕ್ಕಿಂತ-ಇಂತಹ ಒಳ್ಳೇ ಲೇಖನಗಳನ್ನು ಪ್ರಕಟಿಸಿದರೆ ಒಳ್ಳೆಯದು, ಸಂಶೋಧನಾತ್ಮಕ, ಮನೋವಿಶ್ಲೇಷಣಾತ್ಮಕ ವೈಜ್ಞಾನಿಕ, ಐತಿಹಾಸಿಕ ಹಾಗೂ ಸತ

ಘಟನೆಗಳನ್ನು ಪ್ರಕಟಿಸಿದರೆ ಕನ್ನಡ ಜನತೆಗೆ ಅತಿಶಯ ಉಪಯೋಗವಾಗುವದು

ಜಾಲನಾ —ಕೆ. ಎನ್. ಪರ್ವತೀಕರ

ಭಟ್ಟನ ಮದುವೆ

ಜನವರಿ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ಜಿ. ಎಸ್. ಕೇಶವಾಚಾರ್ಯರ 'ಭಟ್ಟನ ಮದುವೆ' ಸುಂದರವೂ ಸಕಾಲಿಕವಾಗಿಯೂ ಇದೆ. ವರದಕ್ಷಿಣೆ, ವರೋಪಚಾರ ಮತ್ತು ಮದುವೆಯ ಸಮಯದ ದುಂದು ವ್ಯಯ ನಮ್ಮ ಸಮಾಜದ ಸರ್ವ ಸಾಮಾನ್ಯದ ರೂಢಿಯ ವಿಷಯವಾಗಿ, ಅದರಿಂದಾಗುವ ಹಾನಿಯತ್ತ ನಮ್ಮ ಗಮನ ಹೋಗುವುದಿಲ್ಲ. ಈ ಸಂಪ್ರದಾಯದಿಂದ ಹೊರತಾದ ನಾವು ಸುಶಿಕ್ಷಿತ ವರ್ಗದಲ್ಲ ಕೂಡ ಮೆಚ್ಚುಗೆ ಪಡೆಯುವುದು ಅಪರೂಪ.

ಕೆಲ ವರ್ಷಗಳ ಕೆಳಗೆ, ನನ್ನ ಒಬ್ಬ ಪಂಜಾಬಿ ಸ್ನೇಹಿತ, ತನ್ನ ಮದುವೆಯನ್ನು ಬಹಳ ಸರಳವಾಗಿ ನಿರಾಡಂಬರದಿಂದ ನಡೆಸಿದ್ದ. ಅದು ನಡೆದಿದ್ದು ಹೀಗಿದೆ. ಆತ, ಆತನ ತಂದೆ ತಾಯಿ ವಧು ಮತ್ತು ಅವಳ ತಂದೆ ತಾಯಿ ಇಪ್ಪತ್ತೇ ಜನರ ದಿಬ್ಬಣ, ಅದೇ ಊರಿನ ಆರ್ಯ ಸಮಾಜ ದೇವಾಲಯಕ್ಕೆ ಹೋಗಿ, ಕೇವಲ ಹನ್ನೊಂದು ರೂಪಾಯಿ ಖರ್ಚಿನಲ್ಲಿ ವಿವಾಹ ಶಾಸ್ತ್ರ ಮುಗಿಸಿದರು. ವರ ತನ್ನ ಮಾವನಿಂದ ಯಾವ ತರಹದ ಉಡುಗೊರೆ ಪಡೆಯಲು ಒಪ್ಪಲಿಲ್ಲ. ಮದುವೆಯ ಸಂದರ್ಭದಲ್ಲಿ ರಿಸೆಪ್ಶನ್ ಕೂಡ ನಡೆಸಲಿಲ್ಲ.

ಬಂಧು ಬಳಗ, ಮಿತ್ರವರ್ಗ ಅವನನ್ನು 'ಜಿಪ್ಪ' ಎಂದು ಕರೆಯಿತು. ಎಲ್ಲರಿಗಿಂತ ಕಟುವಾಗಿ ಟೀಕಿಸಿದವಳು ಆತನ ಅಕ್ಕ, ದೆಹಲಿಯ ಆಸ್ಪತ್ರೆಯಲ್ಲಿ ಡಾಕ್ಟರು. ಆತ ಕೇಂದ್ರ ಸರಕಾರದ ಒಬ್ಬ ಪ್ರಥಮ ವರ್ಗದ ಅಧಿಕಾರಿ.

ಮುಂಬಯಿ —ವೈ. ಪಾ ವಾ. ಶೆಟ್ಟಿ

'ಭಟ್ಟನ ಮದುವೆ' (ಜ. ೭೩)ಯ ಸರಳತೆಯನ್ನು ಓದಿ ಸಂತೋಷವಾಯಿತು. ಆದರೆ ಈ ತರಹದ 'ವರ'ಗಳು ಎಷ್ಟು ಜನರಿದ್ದಾರೆ? ಈಗಿನ ಹುಡುಗರು ಬರೀ MOD ಆಗಿದ್ದಾರೆ MODERN ಆಗಿಲ್ಲ. ಮದುವೆಯ ವಿಷಯದಲ್ಲಿ (ಮಾಡುವ ವಿತರಣೆಯಲ್ಲಿ) ಗೊಡ್ಡು ಸಂಪ್ರದಾಯಗಳಿಗೆ ಒಳಗಾಗಿ ಅನ್ಯಥಾ ಹಣ ವ್ಯಯ ಮಾಡುವವರೇ ಹೆಚ್ಚು. ಇಂಥ 'ವಿಚಾರ ಸಂಕಿರಣ'ಗಳಿಂದ ಈಗಿನ ಜನಾಂಗ ಎದ್ದರೆ ಎಷ್ಟು ಚೆನ್ನ? ಇಂಥಾ ಲೇಖನಗಳು ಆಗಾಗ್ಗೆ ಪ್ರಕಟನೆಯಾಗುತ್ತಿರಲೆಂದು ಆಶಿಸುತ್ತೇನೆ.

ಮುಂಬಯಿ —ವಸುಂಧರಾ ರಾವ್

ದುರಾಸೆಯ ದುಂದು ವೆಚ್ಚದ ಮದುವೆಯ ದುಷ್ಪರಿಣಾಮಗಳನ್ನೂ ಮತ್ತು ಮಿತ ವೆಚ್ಚದ ಸರಳ ಮದುವೆಯ ಸತ್ಪರಿಣಾಮಗಳನ್ನೂ ಮಾನ್ಯ ಲೇಖಕ ಶ್ರೀ ಕೇಶವಾಚಾರ್ಯರು ನಿದರ್ಶನಗಳೊಡನೆ 'ಭಟ್ಟನ ಮದುವೆ'ಯಲ್ಲಿ ಹೃದಯಂಗಮವಾಗಿ ವಿವರಿಸಿರುತ್ತಾರೆ. ವರದಕ್ಷಿಣೆ, ವರೋಪಚಾರ, ಹಾಗೂ ವೈಭವ ಮಿತಿ ಮೀರಿರುವ ಈಗಿನ ದಿನಗಳಲ್ಲಿ ಇಂತಹ ಲೇಖನಗಳಿಂದ ಜನಮನ ಪರಿವರ್ತನೆಗೊಳ್ಳಬಹುದಾದ ಸಾಧ್ಯತೆ ಇದೆ. ಲೇಖಕರಿಗೆ ಧನ್ಯವಾದಗಳು.

ಹಸನ ಎಚ್ ವಿ ಶ್ರೀನಾಥ

ಮಾನಿನಿದೇತರ ಜನ್ಮ

ತಮ್ಮ ಜನವರಿ ಸಂಚಿಕೆಯಲ್ಲಿನ "ಮಕ್ಕಳಿಲ್ಲದ ಮಾನಿನಿದೇತರ ಜನ್ಮ" ಎಂಬ ಜಾನಪದ ಸಾಹಿತ್ಯ ಆಧಾರಿತ ಲೇಖನ ನಿಜಕ್ಕೂ ಸೊಗಸಾಗಿದೆ. ಭಾರತ ನಾರಿ (ಬಂಜೆ ಸೊಸೆ)ಯ 'ಕಂದನ ಕನಸು', ಶಿವನಿಗೆ ಮೊರೆಯಿಡುವ ರೀತಿ ಜನಪದದಲ್ಲಿ ಹೇಗೆ ನಿರೂಪಿತವಾಗಿವೆ, ಎಂಬುದನ್ನು ಮನ ಮುಟ್ಟುವಂತೆ ಪದ್ಯ ಸಹಿತ ವಿವರಗಳನ್ನಿತ್ತಿರುವ ಪ ರಾಮಕೃಷ್ಣ ಶಾಸ್ತ್ರಿಗಳಿಗೆ ಅನೇಕ ಧನ್ಯವಾದಗಳು. ಕರ್ನಾಟಕದ ಎಲ್ಲಾ ಭಾಗಗಳ ಮನೆ ಮನೆಗಳಲ್ಲಿ ಪ್ರಚಲಿತವಿ ುವ ಈ ದಿನ ನಿತ್ಯದ ಜನಪದ ಗೀತೆಗಳು 'ತಾಳು' ಪ್ರಧಾನವಾಗಿರುವ ಜಿಲ್ಲೆಯಾದ "ದಕ್ಷಿಣ ಕನ್ನಡ ಜಿಲ್ಲೆಯ ಹವ್ಯಕ ಬ್ರಾಹ್ಮಣರ ಜಾನಪದ ಗೀತೆಗಳು" ಎಂಬುದರಲ್ಲಿ ನನಗೆ ಸಂಶಯ. ಹಾಡು ಕೇಳಿ ಲೇಖನಕ್ಕೆ ಕಾರಣರಾಗಿರುವ ತಾಯಿ ಗುಣವತಿ ಅಮ್ಮನವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಕರಡಿ —ಹೋ ಮ ರೇ...

ಕಿಟೆಲ್‌ರ ಸಂದೇಶ

ಶ್ರೀ ಟಿ. ಸ್. ಸಾವನಗೌಡರು ಬರೆದಿರುವ 'ರೆ ಕಿಟೆಲ್‌ರ ಯುಗಾದಿ ಸಂದೇಶ' ಲೇಖನ ತುಂಬ ಕುತೂಹಲಕಾರಿಯಾಗಿದೆ ಶಬ್ದಕೋಶದ ಕರ್ತೃ ಕಿಟೆಲ್‌ರ ಕವಿ ಹೃದಯವನ್ನೂ ಕ್ರಿಸ್ತನಲ್ಲಿದ್ದ ಭಕ್ತಿಯನ್ನೂ ಎತ್ತಿ ತೋರಿಸುವ ಈ ಲೇಖನದ ಪದ್ಯಗಳು ಆಧುನಿಕ ಕಾಲದ ಕವಿತೆಗಳಿಗೆ ನಾಂದಿಯನ್ನು ಹಾಡಿದಂತಿವೆ.

ಧಾರವಾಡ ಎಸ್. ಆರ್. ಗುಂಜಾಳ

ನಾಲ್ಕನೆಯ ಆಯಾಮ

ಜನವರಿ ಕಸ್ತೂರಿಯ ಪುಸ್ತಕ ವಿಭಾಗದ 'ನಾಲ್ಕನೆಯ ಆಯಾಮ' ಒಂದು ಬೋಧಪರ ಕಥೆ. ನೆಲವಿಗೆ ಹಾರದ ಬೆಕ್ಕು ಸ್ವರ್ಗಕ್ಕೆ ಹಾರಿತು ಎಂಬಂತೆ ನೆಗೆದಾಡಿದ ಅವನ ಕಥೆ ತುಂಬಾ ಮಾರ್ಮಿಕ. ಮೂಲ ಕಾದಂಬರಿಯು ಕನ್ನಡದಲ್ಲಿದ್ದರೂ ಮತ್ತೆ ಕನ್ನಡಕ್ಕೆ- ಕೆ-ಶಾರದಾ ಎಂದು ಕಾಣಿಸಿರುವದು ವಿಚಿತ್ರ ಅಲ್ಲವೆ?

—ಡಿ ಕುಸುಮಾಕರ

(ನಿಜ ಸಂಗ್ರಹ ಎಂದಿರಬೇಕಾದದ್ದು ತಪ್ಪಿನಿಂದ ಕನ್ನಡಕ್ಕೆ ಎಂದಾಗಿದೆ ಕ್ಷಮೆ ಇರಲಿ —ಸಂ)

ಕಸ್ತೂರಿ

ಸಂಚಿಕೆ : ೬ ಕಸ್ತೂರಿ, ಫೆಬ್ರುವರಿ ೧೯೭೬ ವರ್ಷ : ೨೦

ಅನುಭವ

ಒಮ್ಮೆ ಭಕ್ತನೊಬ್ಬ ಭಗವಾನ್ ರಮಣ ಮಹರ್ಷಿಗಳಲ್ಲಿ "ಭಗವಾನ್ ಮಹರ್ಷಿಗಳು ಶಂಕರಾಚಾರ್ಯರ ಅದ್ವೈತ ತತ್ವವನ್ನು ಹೇಳುವರೆ ?" ಎಂದು ಪ್ರಶ್ನಿಸುತ್ತಾನೆ.

ಅದಕ್ಕೆ ರಮಣರು. "ಇಲ್ಲ, ಭಗವಾನ್ ಮಹರ್ಷಿಗಳು ತಮ್ಮ ಅನುಭವವನ್ನೇ ಹೇಳುತ್ತಾರೆ. ಅದು ಶಂಕರಾಚಾರ್ಯರ ತತ್ವದಂತೆ ತೋರಬಹುದಿಷ್ಟೇ" ಎಂದರು.

ಹಾಗಾದರೆ ಭಗವಾನರ ತತ್ತ್ವ ಯಾವದು? ಕೆಲವರು ದೇವರೆಂದರೆ ಮೂರು ಕಣ್ಣು, ನಾಲ್ಕು ಕೈಗಳು, ಚತುರ್ಮುಖ ಇದ್ದಂಥವನೊಬ್ಬನು ಕೈಲಾಸದಲ್ಲೊ, ಕ್ಷೀರಸಾಗರದಲ್ಲೊ, ವೈಕುಂಠ, ನಂದನವನ, ಆದಮನ ತೋಟದಲ್ಲಿಯೊ ಇದ್ದಾನೆನ್ನಬಹುದು. ಅಥವಾ ದೇವರೆಂದರೆ ಬ್ರಹ್ಮ, ವಿಷ್ಣು, ಮಹೇಶ್ವರ, ದೇವಿ, ಅಲ್ಲಾ, ಕ್ರೈಸ್ತ ಎಂದು ವಿಧವಿಧವಾಗಿ ಭಾವಿಸಿರಬಹುದು. ಬೇರೆ ಕೆಲವರು ಇವೆಲ್ಲ ಮೂಢನಂಬಿಗೆ, ಅವನನ್ನು ನೋಡಿದವರಾರು ? ನಿಜವಾಗಿಯೂ ದೇವರೆ ಇಲ್ಲ ಎನ್ನಬಹುದು. ಈ ವಿಷಯವಾಗಿಯೆ ಅನೇಕ ಪಕ್ಷ–ಪಂಗಡ, ಮತ–ತತ್ವಗಳೆಂದು ಪಂಡಿತರಿಂದ ಪಾಮರರ ವರೆಗೂ ದಿನ ನಿತ್ಯವೂ ಅನೇಕ ವಾದವಿವಾದಗಳು ನಡೆದೇ ಇವೆ. ಇವಕ್ಕೆಲ್ಲ ಯಾರ ಆಕ್ಷೇಪಣೆಯೂ ಇಲ್ಲದೆ ಭಗವಾನ್ ಮಹರ್ಷಿಗಳಾದಂಥ ಜ್ಞಾನಿ ಪರಮಹಂಸರೆನ್ನುವದೇನೆಂದರೆ, "ಬೆಣ್ಣೆಯನ್ನು ಕಾಯಿಸಲಿಟ್ಟಾಗ ಅದು ಎಲ್ಲಿಯವರೆಗೆ ಶುದ್ಧವಾಗಿರುವದಿಲ್ಲವೊ ಅಲ್ಲಿಯವರೆಗೂ ಗಳಗಳ ಶಬ್ದವಾಗುತ್ತಲೇ ಇರುತ್ತದೆ."

ಏನಾದರೂ ತಿನ್ನಲು ಸಿಕ್ಕ ನಾಯಿಗಳು ತಿನ್ನುವದರಲ್ಲಿಯೆ ಗುಂಗಾಗಿರುತ್ತವೆ. ಅದೇ

ಏನೂ ತಿನ್ನಲು ಸಿಕ್ಕದ ನಾಯಿಗಳು ಒಂದಕ್ಕೊಂದು ಕಚ್ಚಾಡುತ್ತ ಬೊಗಳುತ್ತಿರುತ್ತವೆ. ಹಾಗೇ ಎಲ್ಲಿಯ ವರೆಗೆ ನಿಜವಾದ ಅನುಭವ ಜ್ಞಾನವಾಗಿರುವದಿಲ್ಲವೊ, ಅಜ್ಞಾನವಿದೆಯೊ, ಪಕ್ವವಾಗಿಲ್ಲವೊ ಅಲ್ಲಿಯವರೆಗೆ ಮಾತ್ರ ಅಂಥ ಅಪಕ್ವರು ವಾದ ವಿವಾದ, ಘರ್ಷಣೆಯಲ್ಲಿಯೇ ಮಗ್ನರಾಗಿ ಶುಷ್ಕ ಪಾಂಡಿತ್ಯ ಪ್ರದರ್ಶನದಲ್ಲಿಯೆ ಕಾಲ ವ್ಯಯಿಸುತ್ತಾರೆ. ಇವೆಲ್ಲ ಮಹಡಿಯ ಮೇಲೆನಿದೆಂಬುದನ್ನು ಕೇಳಗೇ ನಿಂತು ವೃಥಾ ಏನೇನೊ ಕಲ್ಪಿಸಿಕೊಂಡಂತೆ.

ಒಮ್ಮೆ ಮಹೋನ್ನತ ಪಂಡಿತರ ಒಂದು ಸಭೆಯಲ್ಲಿ ವಿಷ್ಣು ಪರಮಾತ್ಮನೇ ಶ್ರೇಷ್ಠನೆಂದೂ ಶಿವನೇ ಶ್ರೇಷ್ಠನೆಂದೂ ಕಾಳಿ (ದೇವಿ) ಶಕ್ತಿಯೆ ಸರ್ವಸಮರ್ಥಳೆಂದೂ ಭಾರಿ ಭಾರಿ ವಾದವಿವಾದ ಘರ್ಷಣೆಗಳು ನಡೆದು ಕೊನೆಯ ನಿರ್ಣಯಕ್ಕಾಗಿ ಶ್ರೀ ರಾಮಕೃಷ್ಣ ಪರಮಹಂಸರಲ್ಲಿಗೆ ಬಂದರು. ಆಗ ಪರಮಹಂಸರು," ನಾನು ವಿಷ್ಣುವನ್ನೂ ನೋಡಿಲ್ಲ, ಶಿವನನ್ನೂ ನೋಡಿಲ್ಲ. ಅಂದ ಮೇಲೆ ಅವರಲ್ಲಿ ಯಾರು ಸರ್ವಶ್ರೇಷ್ಠರೆಂದು ಹೇಗೆ ಹೇಳಲಿ ?" ಎಂದರು.

ಒಮ್ಮೆ ಒಬ್ಬನು ಗೌತಮಬುದ್ಧರಲ್ಲಿಗೆ ಬಂದು, ತಾವು ಹಿಂದೆ ಆಗಿ ಹೋದ ಈಗಿದ್ದ ಮುಂದೆ ಆಗಬಹುದಾದ ಎಲ್ಲ ಬುದ್ಧರಲ್ಲಿಯೂ ಸರ್ವಶ್ರೇಷ್ಠರೆಂದರು. ಅದಕ್ಕೆ ಬುದ್ಧರು "ನೀನು ಹಿಂದೆ ಆಗಿಹೋದ ಎಷ್ಟು ಬುದ್ಧರನ್ನು ನೋಡಿದ್ದೀಯಾ ? ಈಗಿದ್ದ ಎಷ್ಟು ಬುದ್ಧರನ್ನು ನೋಡಿದ್ದೀ ? ಮುಂದೆ ಆಗಬಹುದಾದ ಎಷ್ಟು ಬುದ್ಧರನ್ನು ತಿಳಿದಿದ್ದೀ ?" ಎಂದು ಕೇಳಿದರು. ಅದಕ್ಕೆ ಆತನು, "ನಾನು ಯಾವ ಬುದ್ಧನನ್ನೂ ನೋಡಿಲ್ಲ" ಎಂದನು. "ಹಾಗಾದರೆ ಎಲ್ಲ ಬುದ್ಧರಲ್ಲಿ ನಾನೇ ಶ್ರೇಷ್ಠ ಬುದ್ಧನೆಂದು ಹೇಗೆ ಹೇಳುತ್ತೀ ?"ಯೆಂದು ಕೇಳಲಾಗಿ ನಾಚಿ ತಲೆತಗ್ಗಿಸಿ ಅಲ್ಲಿಂದ ಪಾರಾದನು. ಹಾಗೇ ಒಮ್ಮೆ "ಯಾವ ದೇವರು ಶ್ರೇಷ್ಠ ?" ಎಂದು ಭಗವಾನ್ ರಮಣರನ್ನೇ ಕೇಳಿದಾಗ· "ನಾನು ಯಾವ ದೇವರನ್ನೂ ನೋಡಿಲ್ಲ. ನಾನಿದ್ದೇನೆ ಎಂಬುದಿಷ್ಟೇ ಗೊತ್ತು." ಎಂದರು. ಇದನ್ನು ದೇವರೇ ಇಲ್ಲವೆನ್ನುವ ನಾಸ್ತಿಕನಾದರೂ ಒಪ್ಪುತ್ತಾನೆ. 'ನಾನೇ ಇಲ್ಲ' ಎಂದು ಯಾರೂ ಹೇಳಲಾರರು. ಇಂದು ನನ್ನ ಪತಿ, ಪತ್ನಿ, ಸ್ನೇಹಿತರೆಂದು ಅಪ್ಪಿಕೊಂಡು ಮುತ್ತುಕೊಟ್ಟಿರಬಹುದು. ಈ ನಾನೊಂದಿಲ್ಲದಿದ್ದರೆ ಯಾರೂ ಅಪ್ಪಿಕೊಂಡು ಮುತ್ತುಕೊಡಲಾರರು. ಹೊಲಸು ನಾರುವದೆಂದು ಮೂಗುಮುಚ್ಚಿಕೊಂಡು ಸ್ಮಶಾನಕ್ಕೆ ಸಾಗಿಸಿಬಿಡುತ್ತಾರೆ. "ನಾನು ಇದ್ದೇನೆ' ಎಂದೇ ಒಂದು ರೆಪ್ಪೆ ಬಡೆಯುವಂಥ ಚಿಕ್ಕ ಕಾರ್ಯದಿಂದ ಹಿಡಿದು, ಚಂದ್ರಲೋಕಕ್ಕೆ ನೆಗೆಯುವಂಥ ಮಹಾ ಕಾರ್ಯದ ವರೆಗೂ ನಾನು ನಾನು ನಾನೆಂದು ಎದೆತಟ್ಟಿ ಜಿಗಿದಾಡುತ್ತಿದ್ದಾನೆ.

"ಈ ಯಾವದೊಂದನ್ನು ಅರಿತರೆ ಏನೆಲ್ಲವನ್ನೂ ಅರಿತಂತಾಗುವದೊ ಆ ಒಂದನ್ನು ಅರಿತಿರುವಿಯಾ? ಒಂದಗುಳನ್ನು ಒತ್ತಿದಾಕ್ಷಣ ಎಲ್ಲ ಅನ್ನವೂ ಬೆಂದದ್ದು ತಿಳಿಯುವಂತೆ. ಈ 'ನಾನು ಯಾರು ?' ಎಂಬುದನ್ನೊಂದು ಅರಿತಾಕ್ಷಣ ಉಳಿದೆಲ್ಲವೂ ನಿನ್ನಂತೆಯೆ ಇದೆ ಎಂಬ ಜ್ಞಾನವಾಗಿಬಿಡುವದು. ಇದುವೆ ನಿಜದ ಅನುಭವ." ✡



ತಪಸ್ವಿ ಸಾಹಿತಿ

ಮಿರ್ಜಿ ಅಣ್ಣಾರಾಯ

ಜಿ. ಬ್ರಹ್ಮಪ್ಪ

ಕರ್ನಾಟಕದ ಉತ್ತರ ಗಡಿಯಾದ ಶೇಡಬಾಳವು ಜೈನ ಸಂಸ್ಕೃತಿಯ ಆಗರವಾಗಿದೆ. ಶಾಂತಿಸಾಗರ ಸೇವಾಶ್ರಮ, ಹಾಲ್ಗಲ್ಲಿನ ಬಾಹುಬಲಿಮೂರ್ತಿ, ೨೪ ಜನ ತೀರ್ಥಂಕರರ ಭವ್ಯಮೂರ್ತಿಗಳ ಜಿನಾಲಯ, ಈ ಪರಿಸರದಲ್ಲಿ ಸುಮಾರು ೬೦೦ ಜೈನ ಮನೆತನಗಳಿರುವ ಶೇಡಬಾಳದಲ್ಲಿ ಮಿರ್ಜಿ ಅಣ್ಣಾರಾಯರು ೧೯೧೮ರಲ್ಲಿ ಜನಿಸಿದರು. ಇವರದು ರೈತ ಮನೆತನ. ಇವರ ತಂದೆ ಅಪ್ಪಣ್ಣನವರು. ಇವರಿಗೆ ಮಿರ್ಜಿ ಅಣ್ಣಾರಾಯರು ಏಕಮಾತ್ರ ಪುತ್ರರು. ಬೆವರು ಸುರಿಸಿ ಬದುಕುವ ಈ ಮನೆತನದಲ್ಲಿ ಜನಿಸಿದ ಅಣ್ಣಾರಾಯರಿಗೆ ಜ್ಞಾನದಾಹ ಹೇಳತೀರದು. ಆದರೆ ಓದಲು ನೂರೆಂಟು ವಿಘ್ನಗಳು. ಶ್ರದ್ಧಾವಂತರಾದ ಇವರು ತಮಗೆ ತಾವೇ ಗುರುವಾಗಿ ಮನೆಯಲ್ಲೇ ಅಭ್ಯಾಸ ಮಾಡಿ ೧೯೩೯ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 'ಜಾಣ' ಪರೀಕ್ಷೆಯಲ್ಲಿ ತೇರ್ಗಡೆಯಾದರು. ಪ್ರಾಥಮಿಕ ಶಾಲಾ ಉಪಾಧ್ಯಾಯರಾದರು. ಸ್ವಂತ ಪರಿಶ್ರಮದಿಂದ ಮರಾಠಿ, ಹಿಂದಿ ಪ್ರಾಕೃತ ಗ್ರಂಥಗಳನ್ನು ವ್ಯಾಸಂಗಮಾಡಿದರು. ಧಾರವಾಡಕ್ಕೆ ಬಂದು ಶಿಕ್ಷಕ ವೃತ್ತಿಗೆ ಬೇಕಾದ ಟ್ರೈನಿಂಗ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಇವರ ಬಾಳಿಗೆ ಭದ್ರವಾದ ಬುನಾದಿ ಧಾರವಾಡದಲ್ಲಿ ರಚಿತವಾಯಿತು. ಕನ್ನಡದ ಕಾರಣ ಪುರುಷರಾದ ಶ್ರೀ ದ. ರಾ. ಬೇಂದ್ರೆ, ಶ್ರೀ ರಂ ಶ್ರೀ ಮುಗಳಿ, ಶ್ರೀ ವಿ. ಕೃ. ಗೋಕಾಕ ಇವರ ಪರಿಚಯ ಮಾಡಿಕೊಂಡರು. ಇವರಿಂದ ಮಾರ್ಗದರ್ಶನ ಪಡೆದುಕೊಂಡರು. ತಮಗೆ ತಾವೇ ಶಿಲ್ಪಿಯಾದರು. ಧಾರವಾಡದ ವಿದ್ಯಾವರ್ಧಕ ಪರಿಸರವು ಮಿರ್ಜಿ ಅಣ್ಣಾರಾಯರ ಶ್ರದ್ಧೆಗೆ ಒಳ್ಳೆಯ ಸತ್ಕಾರ ನೀಡಿತು.

೧೯೪೪ರ ಹೊತ್ತಿಗೆ ಮಿರ್ಜಿ ಅಣ್ಣಾರಾಯರು ಕನ್ನಡದ ಶ್ರೇಷ್ಠ ಕಾದಂಬರಿಯಾದ 'ನಿಸರ್ಗ'ವನ್ನು ಬರೆದರು. ಇವರ ನೈಸರ್ಗಿಕ ಪ್ರತಿಭೆ ಪ್ರಕಾಶವಾಯಿತು. ಕನ್ನಡ ಕಾದಂಬರಿ ಲೋಕದ ಅತಿರಥ ಮಹಾರಥರೂ 'ನಿಸರ್ಗ'ವನ್ನು ಕಂಡು ನಿಬ್ಬೆರಗಾಗಿ ಮಿರ್ಜಿಯವರನ್ನು ಕೊಂಡಾಡಿದರು. ದೇವರಾಜ ಬಹದ್ದೂರ ಬಹುಮಾನವನ್ನು ಮಿರ್ಜಿಯವರಿಗೆ ಕನ್ನಡ ವಿಮರ್ಶಾಲೋಕವು ಅರ್ಪಿಸಿತು. ಅಂದಿನಿಂದ ಮಿರ್ಜಿಯವರು ಬಹದ್ದೂರ್ ಸಾಹಿತಿಯಾದರು. ಚಳಿಬಿಟ್ಟು ಹೋಯಿತು. ಅಶೋಕ ಚಕ್ರ, ರಾಷ್ಟ್ರ ಪುರುಷ, ಭಸ್ಮಾಸುರ, ರಾಮಣ್ಣ ಮಾಸ್ತರು, ಶ್ರೇಯಾಂಸ, ಹದಗೆಟ್ಟಹಳ್ಳಿ



ಈ ರೀತಿ ಹಲವು ಕಾದಂಬರಿಗಳು ಇವರ ಲೇಖನಿಯಿಂದ ಕಾಣಿಸಿಕೊಂಡವು. ಉತ್ತರ ಕರ್ನಾಟಕದ ಜೈನ ರೈತ ಕುಟುಂಬದ ಸಹಜ ಚಿತ್ರಣವನ್ನು ನಿಸರ್ಗ, ಅಶೋಕಚಕ್ರಗಳಲ್ಲಿ ಕಾಣಬಹುದು. ರಾಷ್ಟ್ರ ಪುರುಷ, ಭಸ್ಮಾಸುರ ಇವುಗಳಲ್ಲಿ ಅಂದಿನ ರಾಜಕೀಯ ಆಂದೋಲನದ ಒಳಿತು ಕೆಡಕುಗಳನ್ನು ಇವರು ಸೊಗಸಾಗಿ ಬಣ್ಣಿಸಿರುವರು. ಶ್ರೇಯಾಂಸ ಕಾದಂಬರಿಯು ಎರಡು ಭಾಗವಾಗಿ ಮಿರ್ಜಿಯವರ ವ್ಯಕ್ತಿಚಿತ್ರವನ್ನು ಅಂತರ್ಗತವಮಾಡಿಕೊಂಡಿದೆ. 'ಹದಗೆಟ್ಟಹಳ್ಳಿ'ಯಲ್ಲಿ ಸ್ವಾತಂತ್ರ್ಯಾನಂತರ ಬಂದ ಪಿಡುಗುಗಳನ್ನು ಚಿತ್ರಿಸಿರುವರು.

ಮಿರ್ಜಿ ಅಣ್ಣಾರಾಯರು ಘನವಿದ್ವಾಂಸರೂ ಆಹುದು. ದಿವಂಗತ ಆ. ನೆ. ಉಪಾಧ್ಯೆಯವರ ಮಾರ್ಗದರ್ಶನದಲ್ಲಿ ಇವರು ಜೈನ ಪರಿಭಾಷೆಯನ್ನು ರಕ್ತಗತ ಮಾಡಿಕೊಂಡರು. ಜೈನ ಮೂಲ ಗ್ರಂಥಗಳನ್ನು ಅಭ್ಯಾಸ ಮಾಡಿದರು. ಜೈನ ಆಚಾರ ಹಾಗೂ ಕಂದಾಚಾರ ಎರಡನ್ನೂ ಅವಲೋಕಿಸಿದರು. ಜೈನ ಸಿದ್ಧಾಂತ, ಜೈನ ಇತಿಹಾಸ, ಜೈನ ಸಾಹಿತ್ಯ, ಜೈನ ಆಚಾರ, ಜೈನ ವಿಚಾರ ಇವನ್ನೆಲ್ಲ ವಿಮರ್ಶಾತ್ಮಕವಾಗಿ ಅಡಕವಮಾಡಿ 'ಜೈನ ಧರ್ಮ' ಎಂಬ ಹೆಬ್ಬೊತ್ತಿಗೆಯನ್ನು ಇವರು ೧೯೫೦ ರಲ್ಲಿ ಬರೆದರು. ಇದನ್ನು ಜೈನ ಧರ್ಮದ ಕೈಪಿಡಿಯೆನ್ನಬಹುದು. ಜೈನ ಧರ್ಮದ ಎಲ್ಲ ಮುಖಗಳನ್ನು ಈ ಕೃತಿಯಲ್ಲಿ ಲೇಖಕರು ಸರಳ ಶೈಲಿಯಲ್ಲಿ ಸಂಗ್ರಹಿಸಿರುವರು. 'ರತ್ನಕರಂಡಕ ಶ್ರಾವಕಾಚಾರ', ಭಾರತೀಯ ಧರ್ಮಕ್ಕೆ ಜೈನ ಧರ್ಮದ ಕೊಡುಗೆ, ಸಮಯಸಾರ ಇವು ಇವರ ವಿದ್ವತ್ತಿಗೆ ಸಾಕ್ಷಿಯಾಗಿವೆ.

ಮಿರ್ಜಿಯವರು ಉಪಾಧ್ಯಾಯರಾಗಿ ೩೫ ವರ್ಷ ದುಡಿದರು. ನಿಷ್ಠಾವಂತ ಅಧ್ಯಾಪಕರೆಂದು ಸನ್ಮಾನವನ್ನು ಪಡೆದರು. ಸಹಸ್ರಾವಧಿ ಜನ ವಿದ್ಯಾರ್ಥಿಗಳಲ್ಲಿ ಕ್ರಿಯಾಶಕ್ತಿಯನ್ನು ತುಂಬಿದರು.

ಅಣ್ಣಾರಾಯರು ನಿಃಸ್ಪೃಹರು. ಮುದ್ದಾದ ಮುಖದಲ್ಲಿ ಧ್ರುವತಾರೆಗಳಂತೆ ಮಿನುಗುವ ಲೋಚನದ್ವಯ, ಕಾಸಿದ ಬಂಗಾರದ ಹೊಳಪಿನ. ಮಧ್ಯಮ ತನು, ಹಿತಮಿತ ಮೃದು ವಚನ. ಶುದ್ಧ ಶ್ವೇತಾಂಬರಧಾರಿ. ಅದರಲ್ಲೂ ಖಾದಿ. ತಾವೇ ನೂತ ನೂಲಿಂದ ತಯಾರಿಸಿದ ಶ್ವೇತ ವಸ್ತ್ರ. ಸದ್ದಿಲ್ಲ ಗದ್ದಲವಿಲ್ಲ. ಸದಾ ಕಾರ್ಯ ನಿರತರಾದ ಇವರನ್ನು ಲೇಖಕ ತಪಸ್ವಿ ಎಂದು ಕರೆದರೆ ತಪ್ಪಾಗದು.

ವ್ಯವಸಾಯದಲ್ಲೂ ಇವರು ನಿಪುಣರು. ತಮಗಾಗುವಷ್ಟು ಜೋಳ, ಶೇಂಗಾ, ಬೆಲ್ಲ ಇವನ್ನು ಇವರೇ ಬೆಳೆದುಕೊಳ್ಳುತ್ತಿದ್ದರು. ಹಾಲನ್ನು ಇವರು ಎಂದೂ ಕೊಂಡವರಲ್ಲ. ಮನೆಯಲ್ಲೇ ಹಸುಗಳು, ಇವರ ಬಾಳ್ವೆ ಸ್ವಯಂಪೂರ್ಣವಾದುದು. ಈ ಪ್ರಾಥಮಿಕ ಶಿಕ್ಷಕರ ಕೃತಿಗಳ ಮೇಲೆ ಐದಾರು ಜನ ಡಾಕ್ಟರೇಟ್ ಪಡೆಯಬಹುದು. ಇವರ ಸತ್ವ ಪರೀಕ್ಷೆಗೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ ?

ಕರ್ನಾಟಕದ ಎಲ್ಲ ಲೇಖಕರಿಗೂ ಇವರು ಬೇಕಾದವರಾಗಿದ್ದರು. ಪಂಡಿತರು ಇವರ ಪಾಂಡಿತ್ಯವನ್ನು ಮೆಚ್ಚಿದ್ದರು. ಕವಿಗಳು ಇವರ ಕಾವ್ಯಮಯ ಶೈಲಿಗೆ ತಲೆದೂಗಿದ್ದರು. ಪ್ರಗತಿಶೀಲರು ಇವರ ಪ್ರಗತಿಪಥವನ್ನು ಆಶಾದೃಷ್ಟಿಯಿಂದ ನೋಡುತ್ತಿದ್ದರು. ನವ್ಯ ಸಾಹಿತಿಗಳು ಈ ಭವ್ಯ ಸಾಹಿತಿಯನ್ನು ವಿಶ್ವಾಸದಿಂದ ಸ್ವಾಗತಿಸುತ್ತಿದ್ದರು. ವಿಚಾರವಂತರಲ್ಲಿ ಅಣ್ಣಾರಾಯರು ವಿಚಾರವಂತರು!

ಕೃತಕೃತ್ಯರಾದ ಮಿರ್ಜಿ ಅಣ್ಣಾರಾಯರು ೨೩–೧೨–೧೯೭೫ ರಂದು ತಮ್ಮ ಹುಟ್ಟೂರಿನಲ್ಲಿ ಸ್ವರ್ಗಸ್ಥರಾದರು. ಕನ್ನಡ ಸಾಹಿತ್ಯಾಕಾಶದ ಧ್ರುವತಾರೆ ಕಣ್ಮರೆಯಾದಂತಾಯಿತು! ಕೃತಕೃತ್ಯರಾದ ಇವರ ಆತ್ಮಕ್ಕೆ ಚಿರಶಾಂತಿಯಾರೂ ಕೋರಬೇಕಾದ ಅಗತ್ಯವಿಲ್ಲ. ಚಿರಶಾಂತಿ ಮಿರ್ಜಿಯವರ ಮುಖದ ಕಾಂತಿಯಾಗಿತ್ತು. ✡

ರಾವಣನ ಲಂಕೆ ಇದ್ದುದೆಲ್ಲಿ?

ಗೋಪಾಲಕೃಷ್ಣ ಪಾಲೆಪ್ಪಾಡಿ

ವಾಲ್ಮೀಕಿ ರಾಮಾಯಣದಲ್ಲಿ ಉಕ್ತವಾದ ಲಂಕೆಯು ಇದ್ದುದೆಲ್ಲಿ ಎನ್ನುವುದನ್ನು ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ನರ್ಮದಾ ನದಿಯ ಉತ್ತರಕ್ಕೆ ಒಂದು ಕಡೆ ಪಶ್ಚಿಮ ಕರಾವಳಿಯ ಆಚೆಗೆ ಲಂಕೆಯು ಇದ್ದಿರಬೇಕು ಎನ್ನುವ ಅಭಿಪ್ರಾಯವು ನಾಲ್ಕಾರು ವರ್ಷಗಳ ಹಿಂದೆ ಕನ್ನಡ ಮಾಸಿಕವೊಂದರ ಒಂದು ಲೇಖನದಲ್ಲಿ ಪ್ರಕಟವಾಗಿದೆ. ಇನ್ನು ಪಲವು ಆಧುನಿಕ ವಿದ್ವಾಂಸರು ಅಂದಮಾನ್, ಸುಮಾತ್ರಾ, ಜಾವಾ, ಆಸ್ಟ್ರೇಲಿಯಾ ಅಥವಾ ನ್ಯೂಗಿನಿಯೇ ಮೊದಲಾದ ಭಾರತದ ಆಗ್ನೇಯಕ್ಕಿರುವ ದ್ವೀಪಗಳಲ್ಲಿ ಯಾವುದೋ ಒಂದು ರಾವಣನ ಲಂಕೆಯಾಗಿದ್ದಿರಬೇಕು ಎಂದು ಊಹಿಸಿದ್ದಾರೆ. ಪೂರ್ವ ಕರಾವಳಿಯಲ್ಲಿ ಬಂಗಾಲ ಆಖಾತವನ್ನು ಸೇರುವ ಮಹಾನದಿಯ ಮುಖಜ ಭೂಮಿಯಲ್ಲಿ (ಒಡಿಸ್ಸಾ ಪ್ರಾಂತದ ಬಯಲುಭೂಮಿ) ಎಲ್ಲಿಯೋ ಒಂದೆಡೆ ರಾವಣಪಾಲಿತ ಲಂಕೆ ಇದ್ದಿರಬೇಕು ಎನ್ನುವ ಇನ್ನೊಂದು ವಾದವೂ ಇದೆ. ಈಗ ಶ್ರೀಲಂಕಾ ಎಂದು ಕರೆಯಲ್ಪಡುವ, ಭಾರತದ ದಕ್ಷಿಣ ದಿಕ್ಕಿಗಿರುವ ಸಿಂಹಳ ದ್ವೀಪವೇ ರಾಮಾಯಣದಲ್ಲಿ ಉಲ್ಲೇಖಿಸಲ್ಪಟ್ಟ ರಾವಣನ ಲಂಕೆಯೆಂದು ಸಾಮಾನ್ಯವಾಗಿ ಭಾವಿಸಲಾಗುತ್ತಿದೆ. ಸಿಂಹಳದ ನಿವಾಸಿಗಳು ತಮ್ಮ ದ್ವೀಪವನ್ನೇ ಲಂಕೆಯೆಂದು ಹೇಳಿಕೊಳ್ಳುತ್ತಾರೆ. ಹೀಗೆ ಲಂಕೆ ಯಾವುದೆಂಬ ಬಗ್ಗೆ ಏಕಾಭಿಪ್ರಾಯವಿಲ್ಲ. ತಮ್ಮ ವಾದಗಳಿಗೆಲ್ಲ ವಿದ್ವಾಂಸರು ತಮಗೆ ಯುಕ್ತವಾಗಿ ಕಂಡ ಕಾರಣಗಳನ್ನು ನಿವೇದಿಸಿರುತ್ತಾರೆ. ಆದರೆ ಯಾವ ಊಹೆಯೇ ಆಗಲಿ ವಾಲ್ಮೀಕಿ ರಾಮಾಯಣದಲ್ಲಿ ಹೇಳಿದ ಅಭಿಪ್ರಾಯಕ್ಕೆ ಹೊಂದುವಂತೆ ಇರಬೇಕಲ್ಲದೆ ವಿರೋಧವಾಗಿರಬಾರದು. ಭಾರತದ ದಕ್ಷಿಣ ದಿಕ್ಕಿಗೆ ೧೦೦ ಯೋಜನ ದೂರದಲ್ಲಿ ಲಂಕೆಯಿದ್ದಿತು ಎಂದು ವಾಲ್ಮೀಕಿ ರಾಮಾಯಣದಲ್ಲಿ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ ಎಂಬ ಸಂಗತಿಯನ್ನು ಈ ಕೆಳಗಿನ ಶ್ಲೋಕಗಳಿಂದ ತಿಳಿಯಬಹುದು.

"ಪುತ್ರೋ ವಿಶ್ರವಸಃ ಸಾಕ್ಷಾತ್ ಭ್ರಾತಾ
ವೈಶ್ರವಣಸ್ಯ ಚ
ಅಧ್ಯಾಸ್ತೇ ನಗರೀಂ ಲಂಕಾಂ ರಾವಣೋ
ನಾಮ ರಾಕ್ಷಸಃ।
ಇತೋ ದ್ವೀಪೇ ಸಮುದ್ರಸ್ಯ ಸಂಪೂರ್ಣೇ
ಶತಯೋಜನೇ।
ತಸ್ಮಿನ್ ಲಂಕಾಪುರೀ ರಮ್ಯಾ ನಿರ್ಮಿತಾ
ವಿಶ್ವಕರ್ಮಣಾ॥

ಸಂಪ್ರಾಪ್ಯ ಸಾಗರಸ್ಯಾಂತಂ ಸಂಪೂರ್ಣ
ಶತಯೋಜನಂ
ಆಸಾದ್ಯ ದಕ್ಷಿಣಂ ತೀರಂ ತತೋ
ದ್ರಕ್ಷ್ಯಥ ರಾವಣಂ" ||

"ವಿಶ್ರವಸ್ಸಿನ ಮಗನೂ ವೈಶ್ರವಣನ ಸಹೋದರನೂ ಆಗಿರುವ ರಾವಣನೆಂಬ ಹೆಸರಿನ ರಾಕ್ಷಸನು ಲಂಕಾನಗರದಲ್ಲಿ ವಾಸವಾಗಿರುತ್ತಾನೆ. ಸಂಪೂರ್ಣ ಶತಯೋಜನ ದೂರದ ದ್ವೀಪದಲ್ಲಿ ಆ ರಮ್ಯವಾದ ಲಂಕಾನಗರವು ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿತು. ನೂರು ಯೋಜನ ವಿಶಾಲವಾದ ಸಾಗರವನ್ನು ಸಂಪೂರ್ಣ ದಾಟಿ ಕೊನೆಗಾಣುವ ಸಾಗರದ ದಕ್ಷಿಣ ತೀರವನ್ನು ಮುಟ್ಟಿದಾಗ ನೀವು ಆ ರಾವಣನನ್ನು ಕಾಣುವಿರಿ."

ಈ ವಿವರಣೆಯಿಂದ, ಭಾರತದ ದಕ್ಷಿಣಕ್ಕೆ ೧೦೦ ಯೋಜನ ದೂರದಲ್ಲಿ ಸಾಗರದ ನಡುವೆ ಲಂಕೆಯಿದ್ದಿತು ಎಂದು ಸ್ಪಷ್ಟವಾಗುತ್ತದೆ. ಮೇಲೆ ಹೇಳಿದ ಲಂಕೆಯೆನ್ನುವ ಸ್ಥಳಗಳಲ್ಲಿ ಸಿಂಹಳದ ಹೊರತು ಯಾವವೂ ಭಾರತದ ದಕ್ಷಿಣದಲ್ಲಿಲ್ಲ. ಆದುದರಿಂದ ಇವನ್ನು ಲಂಕೆಯೆಂದು ಹೇಗೆ ಒಪ್ಪಿಕೊಳ್ಳಲಾದೀತು? ಸಿಂಹಳದ್ವೀಪವೇ ರಾವಣನ ಲಂಕೆಯನ್ನುವುದೂ ಸಂಶಯಾಸ್ಪದ. ಸಿಂಹಳದ್ವೀಪವನ್ನು ಶ್ರೀಲಂಕೆಯೆಂದು ಕರೆದರೂ ರಾಮಾಯಣದಲ್ಲಿ ಹೇಳಿದ ರಾವಣನ ಲಂಕೆಯು ಅದಾಗಿರಲಾರದು ಎನ್ನುವುದನ್ನು ಈ ಕೆಳಗಣ ಕಾರಣಗಳಿಂದ ತಿಳಿಯಬಹುದು.

ಭಾರತದ ತೆಂಕಣ ಕರೆಯಿಂದ ಲಂಕೆಗೆ ೧೦೦ ಯೋಜನ ದೂರವಿತ್ತು ಎನ್ನುವುದನ್ನು ಸೇತುಬಂಧನವು ಕೂಡ ಸಮರ್ಥಿಸುತ್ತದೆ. ನಲನೆಂಬ ವಾನರ ವೀರನು ಭಾರತದಿಂದ ಲಂಕೆಯವರೆಗೆ ಸಮುದ್ರದ ಮೇಲೆ ಸೇತುವೆಯನ್ನು ರಚಿಸಿದನೆಂದೂ ಸಕಲ ವಾನರ ಸೈನ್ಯವು ಅದರ ಮೇಲೆ ನಡೆದುಕೊಂಡು ಹೋಗಿ ಲಂಕೆಯನ್ನು ಸೇರಿತೆಂದೂ ರಾಮಾಯಣದಲ್ಲಿ ವರ್ಣಿತವಾಗಿದೆ. ಸೇತುರಚನೆಯು ಮೊದಲನೆಯ ದಿನ ೧೪ ಯೋಜನ, ಎರಡನೆಯ ದಿನ ೨೦ ಯೋಜನ, ಮೂರನೆಯ ದಿನ ೨೧ ಯೋಜನ, ನಾಲ್ಕನೆಯ ದಿನ ೨೨ ಯೋಜನ ಮತ್ತು ಐದನೆಯ ದಿನ ೨೩ ಯೋಜನಗಳಷ್ಟು ಸಾಗಿ ಐದು ದಿನಗಳಲ್ಲಿ ಶತ ಯೋಜನ ಆಯತವೂ ಶತಯೋಜನ ದೀರ್ಘವೂ ಇದ್ದ ಸೇತುವೆಯು ಸಂಪೂರ್ಣವಾಯಿತು ಎಂದು ವಾಲ್ಮೀಕಿ ಮಹರ್ಷಿಯು ವರ್ಣಿಸಿದ್ದಾನೆ. ಮೊದಲು ನಾರದನು ವಾಲ್ಮೀಕಿಗೆ ರಾಮನ ಕಥೆಯನ್ನು ಉಪದೇಶಿಸುವಾಗ,

"ತತೋ ಗೃಧ್ರಸ್ಯ ವಚನಾತ್ ಸಂಪಾತೇ
ರ್ಹನುಮಾನ್ ಬಲೀ
ಶತ ಯೋಜನ ವಿಸ್ತೀರ್ಣಂ ಪುಪ್ಲುವೇ
ಲವಣಾರ್ಣವಂ" ||

"ಸಂಪಾತಿಯೆಂಬ ಹದ್ದಿನ ಮಾತಿಗನುಸಾರವಾಗಿ ಬಲಶಾಲಿಯಾದ ಹನುಮಂತನು ೧೦೦ ಯೋಜನ ವಿಶಾಲವಾದ ಲವಣ ಸಮುದ್ರವನ್ನು ಹಾರಿದನು ಎಂದು ನಾರದನು ಹೇಳಿರುತ್ತಾನೆ. ಹೀಗೆ ವಾಲ್ಮೀಕಿ ರಾಮಾಯಣದಲ್ಲಿ ಬರುವ ಹಲವು ಸಂದರ್ಭಗಳಲ್ಲಿಯೂ ಲಂಕೆಗೆ ೧೦೦ ಯೋಜನ ದೂರವೆಂದು ಸ್ಪಷ್ಟವಾಗಿ ಹೇಳಿದೆ. ಆದುದರಿಂದ ಭಾರತದ ದಕ್ಷಿಣ ಗಡಿಯಿಂದ ಲಂಕೆಗೆ ೧೦೦ ಯೋಜನ ದೂರವೆನ್ನುವುದರಲ್ಲಿ ಎರಡಭಿಪ್ರಾಯವಿಲ್ಲ. "ಯೋಜನ"ವೆನ್ನುವುದು ದೂರವನ್ನಳೆಯುವ ಪ್ರಾಚೀನ ಕಾಲದ ಒಂದು ಮಾನ ಆಗಿರುವುದರಿಂದ ಅದು ಇಂತಿಷ್ಟೇ ಎಂದು ಈಗ ನಿಖರವಾಗಿ ಹೇಳಲು ಸಾಧ್ಯವಿಲ್ಲ. ಆದರೂ "ಯೋಜನ" ಎಂದರೆ ಸುಮಾರು ೫½ ಅಥವಾ ೬ ಇಂಗ್ಲೀಷ್ ಮೈಲುಗಳೆಂದೂ ಊಹಿಸುವದಕ್ಕೆ ಅವಕಾಶ ಇದೆ. (೧. ಯೋಜನ = ೪ ಕ್ರೋಶ: ೧ ಕ್ರೋಶ = ಸುಮಾರು ೧⅜ ಮೈಲು) ಆದುದರಿಂದ ರಾವಣ ಪಾಲಿತ ಲಂಕೆಯು ಭಾರತದಿಂದ ಸುಮಾರು ೬೦೦ ಮೈಲು ದಕ್ಷಿಣಕ್ಕೆ ಇದ್ದಿತು ಎಂದು ತಿಳಿಯಬೇಕು. ಪ್ರಾಚೀನ ಕಾಲದ ಜ್ಯೋತಿಷ್ಯಶಾಸ್ತ್ರ ಗ್ರಂಥಗಳಲ್ಲಿ ಲಂಕೆಯನ್ನು 'ನಿರಕ್ಷ ದೇಶ' ಎಂದರೆ ಭೂಮಧ್ಯ ರೇಖೆಯು ಹಾದುಹೋಗುವ

ಪ್ರದೇಶ ಎಂದು ಉಲ್ಲೇಖಿಸಿದ್ದಾರೆ. ಭಾರತದ ಅತಿ ದಕ್ಷಿಣ ಭಾಗದಿಂದ ಭೂಮಧ್ಯರೇಖೆಗೆ ನೇರವಾಗಿ ಸುಮಾರು ೬೦೦ ಮೈಲುಗಳಾಗುತ್ತವೆ. ಆದುದರಿಂದ ರಾವಣನ ಲಂಕೆಯು ಭೂಮಧ್ಯರೇಖೆಯಲ್ಲಿ ಇದ್ದಿತು ಎಂದು ತಿಳಿಯಬೇಕಾಗುತ್ತದೆ. ಪ್ರಕೃತ ಶ್ರೀಲಂಕಾ ಎಂದು ಕರೆಯಲ್ಪಡುವ ಸಿಂಹಳವು ೫ ಡಿಗ್ರಿ ೫೭ ಮಿನಿಟು ಉತ್ತರದಲ್ಲಿ ಇವೆ. ಅಲ್ಲದೆ ಭಾರತದ ಕರಾವಳಿಯಿಂದ ಸಿಂಹಳಕ್ಕೆ ಸುಮಾರು ೩೦ ಮೈಲುಗಳಿಗಿಂತ ಹೆಚ್ಚು ಅಂತರವಿಲ್ಲ. ಆದ್ದರಿಂದ ಸಿಂಹಳವನ್ನು ರಾವಣನ ಲಂಕೆಯಲ್ಲ ಎಂದು ಹೇಳಬೇಕಾಗುತ್ತದೆ.

ಇನ್ನು ಕೆಲವು ಮಂದಿ ವಿದ್ವಾಂಸರು, ರಾಮಾಯಣದ ಕರ್ತೃ ವಾಲ್ಮೀಕಿ ಮಹರ್ಷಿಗಾಗಲಿ ರಾಮಾಯಣದಲ್ಲಿ ಉಕ್ತವಾದ ಪಾತ್ರಗಳಿಗಾಗಲಿ ದಕ್ಷಿಣ ಭಾರತದ ಪರಿಚಯವೇ ಇದ್ದಿರಲಿಲ್ಲ; ಹಿಮಾಲಯದಿಂದ ವಿಂಧ್ಯದವರೆಗೂ ಬಯಲು ಸೀಮೆ, ಮತ್ತು ವಿಂಧ್ಯ ಪರ್ವತಾವಳಿಯ ಸಮೀಪದ ಸ್ವಲ್ಪ ದಕ್ಷಿಣ ಭಾಗದ ತನಕ ಮಾತ್ರ ರಾಮಾಯಣದ ಭೂಮಿಯು ಸೀಮಿತವಾದುದು ಎಂದು ಹೇಳುತ್ತಾರೆ. ಆದರೆ ಈ ಊಹೆಯು ಕೇವಲ ನಿರಾಧಾರವಾದುದು ಮತ್ತು ಸತ್ಯಕ್ಕೆ ದೂರವಾದುದು. ವಾಲ್ಮೀಕಿ ಮಹರ್ಷಿಯ ಭೌಗೋಲಿಕ ವಿಜ್ಞಾನವು ಅಸಾಮಾನ್ಯವಾದುದು ಎನ್ನುವುದಕ್ಕೆ ಸಾಕಷ್ಟು ನಿದರ್ಶನಗಳು ರಾಮಾಯಣದಲ್ಲಿವೆ. ಉದಾಹರಣೆಗಾಗಿ ಇಲ್ಲಿ ಈ ಶ್ಲೋಕಗಳನ್ನು ಉದ್ಧರಿಸಬಹುದು.

> ವಿದರ್ಭಾನ್ ಋಷಿಕಾನ್ ಶ್ಚೈವ
> ರಮ್ಯಾನ್ ಮಾಹಿಷಕಾನಪಿ।
> ತಥಾವಂಗಾನ್ ಕಲಿಂಗಾಂಶ್ಚ
> ಕೌಶಿಕಾಂಶ್ಚ ಸಮಂತತಃ॥
> ತದ್ಯೈವಾಂಧ್ರಾಂಶ್ಚ ಪುಂಡ್ರಾಂಶ್ಚ
> ಚೋಲಪಾಂಡ್ಯಾನ್ ಚ ಕೇರಲಾನ್॥
> ತತಸ್ತ್ವಯಾಪಗಾಂ ದಿವ್ಯಾಂ
> ಪ್ರಸನ್ನ ಸಲಿಲಾಂ ಶಿವಾಂ।
> ತತ್ರದ್ರಕ್ಷ್ಯಥ ಕಾವೇರೀಂ
> ವಿಹಿತಾಮಪ್ಸರೋಗಣೈಃ॥

"ವಿದರ್ಭ, ಋಷಿಕ, ರಮ್ಯವಾದ ಮಾಹಿಷಕ (ಮೈಸೂರು), ಅಂತೆಯೇ ವಂಗಕಲಿಂಗ, ಕೌಶಿಕ, ಆಂಧ್ರ, ಪುಂಡ್ರ, ಚೋಲ, ಪಾಂಡ್ಯ ಹಾಗೂ ಕೇರಲ ಮೊದಲಾದ ದೇಶಗಳನ್ನೂ ಅಪ್ಸರ ಸ್ತ್ರೀ ಗಣದಿಂದ ಕೂಡಿದ ಸ್ವಚ್ಛವಾದ ನೀರುಳ್ಳ ಪುಣ್ಯಕರವಾದ ಕಾವೇರೀ ನದಿಯನ್ನೂ ಕಾಣುತ್ತೀರಿ." ಇವುಗಳಲ್ಲಿ ಒಂದೆರಡರ ಹೊರತು ಉಳಿದುವೆಲ್ಲ ದಕ್ಷಿಣ ಭಾರತದಲ್ಲಿ ಇವೆಯಷ್ಟೆ!

> ತತಸ್ತೇನಾಭ್ಯನುಜ್ಞಾತಾ:
> ಪ್ರಸನ್ನೇನ ಮಹಾತ್ಮನಾ।
> ತಾಮ್ರಪರ್ಣೀಂ ಗ್ರಾಹ ಜುಷ್ಟಾಂ
> ತರಿಷ್ಯಥ ಮಹಾನದೀಮ್॥

"ಪ್ರಸನ್ನನೂ ಮಹಾತ್ಮನೂ ಆಗಿರುವ ಅಗಸ್ತ್ಯಮುನಿಯ ಅಪ್ಪಣೆಯನ್ನು ಪಡೆದ ಮೇಲೆ ನೀವು ಮೊಸಳೆಗಳಿಂದ ತುಂಬಿರುವ ದೊಡ್ಡ ನದಿಯಾದ ತಾಮ್ರಪರ್ಣಿಯನ್ನು ದಾಟುವಿರಿ" ದಕ್ಷಿಣ ಭಾರತದ ಹಲವು ದೇಶಗಳ ಹೆಸರುಗಳನ್ನೂ ನದಿಗಳನ್ನೂ ಆ ನದಿಗಳು ಹೇಗಿರುವುವು ಎನ್ನುವುದನ್ನೂ ವಾಲ್ಮೀಕಿಯು ವರ್ಣಿಸಿದ್ದಾನೆ. ಇತಿಹಾಸ ಪ್ರಸಿದ್ಧವಾದ ಪಾಂಡ್ಯರಾಜರ ಪ್ರಾಚೀನ ರಾಜಧಾನಿಯಾಗಿದ್ದ ಕವಾಟಪುರದ ವರ್ಣನೆಯನ್ನು ವಾಲ್ಮೀಕಿಯು ಈ ರೀತಿ ಕೊಟ್ಟಿದ್ದಾನೆ.

> "ತತೋ ಹೇಮಮಯಂ ದಿವ್ಯಂ
> ಮುಕ್ತಾಮಣಿ ವಿಭೂಷಿತಂ।
> ಯುಕ್ತಕವಾಟಂ ಪಾಂಡ್ಯಾನಾಂ
> ಗತಾದ್ರಕ್ಷ್ಯಥ ವಾನರಾಃ॥"

"ಆಮೇಲೆ, ಕನಕಮಯವಾಗಿದ್ದ, ಮುತ್ತು ರತ್ನಾದಿಗಳಿಂದ ಶೋಭಿಸುವ ಪಾಂಡ್ಯರಾಜರ ಕವಾಟಪುರವನ್ನು ಕಾಣುವಿರಿ." ದಕ್ಷಿಣ ಭಾರತದ ಪರಿಚಯವಿಲ್ಲದವನು ಹೀಗೆ ಬರೆಯಲು ಸಾಧ್ಯವೇ? ದಕ್ಷಿಣ ಭಾರತದ

ಪರಿಚಯ ಮಾತ್ರವಲ್ಲದೆ ಸಮಸ್ತ ಭೂ—ಮಂಡಲದ ಪ್ರಾಕೃತಿಕ ಜ್ಞಾನವು ವಾಲ್ಮೀಕಿಗೆ ತಿಳಿದಿತ್ತು. ಚೀನ, ಪರಮ ಚೀನ, ಯವನ ಮೊದಲಾದ ದೇಶಗಳನ್ನೂ ಕೆಂಪು ಸಮುದ್ರ ಮೊದಲಾದುದನ್ನೂ ವಾಲ್ಮೀಕಿಯು ವರ್ಣಿಸಿದ್ದಾನೆ. ಈ ಪ್ರಕಾರ ಭೂಮಂಡಲದ ಅರಿವಿದ್ದ ವಾಲ್ಮೀಕಿಗೆ ದಕ್ಷಿಣ ಭಾರತದ ಪರಿಚಯವಿರಲಿಲ್ಲ ಎನ್ನಬಹುದೇ?

ರಾವಣನ ಲಂಕೆಯು ಇದ್ದುದು ದಕ್ಷಿಣ ಸಮುದ್ರದಲ್ಲಿ ಎನ್ನುವುದು ಈ ಮೇಲೆ ಹೇಳಿದ ಸಂಗತಿಗಳಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಹನುಮಂತನ ಸಮುದ್ರೋಲ್ಲಂಘನವೂ ಇದನ್ನು ಸಮರ್ಥಿಸುತ್ತದೆ. ಸಂಪಾತಿಯ ಮಾತಿನಂತೆ ನೂರುಯೋಜನ ವಿಶಾಲವಾದ ಸಮುದ್ರವನ್ನು ಹಾರಲು ಉದ್ಯುಕ್ತನಾದ ಹನುಮಂತನು ಹೀಗೆನ್ನುತ್ತಾನೆ:

"ನೇಯಂ ಮಮ ಮಹೀವೇಗಂ
ಲಂಘನೇ ಧಾರಯಿಷ್ಯತಿ ।
ಏತಾನೀಹ ನಗಸ್ಯಾಸ್ಯ
ಶಿಲಾಸಂಕಟ ಶಾಲಿನಃ ॥
ಶಿಖರಾಣಿ ಮಹೇಂದ್ರಸ್ಯ
ಸ್ಥಿರಾಣಿ ಚ ಮಹಾಂತಿಚ ।
ಏಷುವೇಗಂ ಕರಿಷ್ಯಾಮಿ
ಮಹೇಂದ್ರ ಶಿಖರೇ ಷ್ವಹಂ ॥

"ಈ ಭೂಪ್ರದೇಶವು ನನ್ನ ಲಂಘನ ವೇಗವನ್ನು ಸಹಿಸಲಾರದು. ಆದುದರಿಂದ ಬಂಡೆಗಲ್ಲುಗಳು ನಿಬಿಡವಾಗಿದ್ದು ಮಹತ್ತಾಗಿಯೂ ಸ್ಥಿರವಾಗಿಯೂ ಇರುವ ಈ ಮಹೇಂದ್ರ ಪರ್ವತದ ಶಿಖರವನ್ನೇರಿ ಅಲ್ಲಿಂದ ಲಂಕೆಗೆ ನೆಗೆಯುವೆನು." ಯಾವ ಒಂದು ಕ್ರಿಯೆಗೂ ಅದಕ್ಕೆ ಸಮಾನವಾದ ಹಾಗೂ ವಿರೋಧವಾದ ಪ್ರತಿಕ್ರಿಯೆ ಇದ್ದೇ ಇದೆ ಭೌತಶಾಸ್ತ್ರದ ತತ್ವವು ಹನುಮಂತನಿಗೆ ಮೊದಲೇ ತಿಳಿದಿದ್ದುದರಿಂದ, ಕಡಲತಡಿಯ ಶಿಥಿಲವಾದ ಉಸುಬಿನ ನೆಲದಿಂದ ನೂರು ಯೋಜನ ದೂರ ಹಾರುವ ಯತ್ನವು, ಭೂಕುಸಿತದಿಂದ ವ್ಯರ್ಥವಾಗುವುದೆಂದು ನಿಶ್ಚಯಿಸಿ ಆತನು ಮಹೇಂದ್ರ ಪರ್ವತವನ್ನು ಏರಬೇಕಾಯಿತಂ.

ಮಹೇಂದ್ರ ಪರ್ವತವು ಏಳು ಕುಲಪರ್ವತಗಳಲ್ಲಿ ಒಂದಾಗಿದೆ. ಈ ಪರ್ವತದಿಂದ ತ್ರಿಭಾಗಾ, ಋಷಿ ಕುಲ್ಯಾ, ಇಕ್ಷುದಾ, ಅಚಲಾ, ತ್ರಿದಿವಾ, ಮೂಲೀ, ಶರವಾ, ವಿಮಲಾ ಮತ್ತು ತಾಮ್ರಪರ್ಣಿ ಎಂಬ ನದಿಗಳು ಹುಟ್ಟಿ ಹರಿಯುತ್ತವೆ. ತಾಮ್ರಪರ್ಣಿಗೆ ಇಂದಿಗೂ ಅದೇ ಹೆಸರಿದೆ. ಇದು ತಿರುನೆಲ್ವೇಲಿ ಜಿಲ್ಲೆಯಲ್ಲಿದೆಯೇ ಹೊರತು ಓಡಿಸ್ಸದಲ್ಲಿಯಾಗಲಿ ನರ್ಮದೆಯ ಉತ್ತರಕ್ಕಾಗಲಿ ಇಲ್ಲ. ಆದುದರಿಂದ ಸಮುದ್ರೋಲ್ಲಂಘನಕ್ಕಾಗಿ ಹನುಮಂತನೇರಿದ್ದ ಮಹೇಂದ್ರ ಪರ್ವತವು ಭಾರತದ ದಕ್ಷಿಣದಲ್ಲಿ, ಸಮುದ್ರ ತೀರಕ್ಕೆ ಅನತಿ ದೂರದಲ್ಲಿ ಇದ್ದಿರಬೇಕು. ಮಹೇಂದ್ರ ಶಿಖರದಿಂದ ನೇರವಾಗಿ ದಕ್ಷಿಣಕ್ಕೆ ಹಾರಿ ೧೦೦ ಯೋಜನದ ಸಮುದ್ರವನ್ನು



"...ಹೊಸ ಜಡ್ಡಿ ಹೊಲಿಸಿ ಕೊಡಿ ಅಂದ್ರೆ ನಮ್ಮಪ್ಪ ಆಗೋದಿಲ್ಲ ಅಂತಪ್ರು..., ಅದಕ್ಕೇ ಈಗ ದಿನಕ್ಕೆ ಇಪ್ಪತ್ತು ಸರ್ತಿ ಜಾರುಗುಪ್ಪೆ ಆಟ ಆಡೋಕೆ ಶುರು ಮಾಡಿದ್ದೀನಿ......!!"

ದಾಟಿದರೆ ಪ್ರಾಪ್ತವಾಗುವುದೇ ರಾಮಾಯಣದ ರಾವಣಪಾಲಿತ ಲಂಕೆ.

ಪ್ರಕೃತ ಹಿಂದೂ ಮಹಾಸಾಗರದ ಈ ಪ್ರದೇಶದಲ್ಲಿ ಲಂಕೆಯೆಂದು ಹೇಳಿಕೊಳ್ಳಬಹುದಾದ ವಿಶಾಲವಾದ ದ್ವೀಪವು ಇಲ್ಲವಲ್ಲಾ ಎಂದು ಯಾರಾದರೂ ಆಕ್ಷೇಪಿಸಬಹುದು. ಆದರೆ ಅತಿ ಪ್ರಾಚೀನ ಕಾಲದಲ್ಲಿ ಅಲ್ಲಿ ಒಂದು ವಿಶಾಲವಾದ ಭೂಖಂಡವಿತ್ತೆಂದೂ ಕಾಲಕ್ರಮೇಣ ಅದು ಸಾಗರದಲ್ಲಿ ಮುಳುಗಿ ಹೋಯಿತೆಂದೂ ಸಾಧಾರಣವಾಗಿ ತಿಳಿದು ಬಂದಿದೆ. ಲಕ್ಷಾಂತರ ವರ್ಷಗಳಲ್ಲಿ ಕೆಲವು ಪ್ರದೇಶಗಳು ಸಮುದ್ರದಲ್ಲಿ ಮುಳುಗಿ ನಾಮಾವಶೇಷವಾಗುವುದೂ ಹೊಸ ಹೊಸ ಪ್ರದೇಶಗಳು ಸಮುದ್ರದಿಂದ ಮೇಲಕ್ಕೆ ಏಳುವುದೂ ಅಸಂಭವವಲ್ಲ. ಸುಮಾತ್ರಾ ಮತ್ತು ಜಾವಾ ದ್ವಿಪಗಳ ನಡುವೆ ಮೊದಲು ಇದ್ದ ಕ್ರಾಕಾಟೋಲಾ ಎಂಬ ಜನನಿಬಿಡವಾದ ಒಂದು ದ್ವೀಪವು ಕ್ರಿ. ಶ. ೧೮೭೨ರಲ್ಲಿ ಮುಳುಗಿ ಹೋದ ಸಂಗತಿ ಇತಿಹಾಸದಿಂದ ತಿಳಿದುಬರುತ್ತದೆ. ಉತ್ತರ ಧ್ರುವ ಸಾಗರವನ್ನೂ ಶಾಂತಸಾಗರವನ್ನೂ ಒಂದುಗೂಡಿಸುವ ಬೇರಿಂಗ್ ಜಲಸಂಧಿಯು ಪ್ರಾಚೀನ ಕಾಲದಲ್ಲಿ ಇದ್ದಿರಲಿಲ್ಲ. ಅಲ್ಲಿ ಭೂಮಿಯಿದ್ದು ಅದು ಕ್ರಮೇಣ ತಗ್ಗಿಹೋಗಿ ಸಮುದ್ರಾವೃತವಾಗಿ ಬೇರಿಂಗ್ ಜಲಸಂಧಿ ಉಂಟಾಯಿತು ಎಂದು ಭೂಗರ್ಭಶಾಸ್ತ್ರ ವಿಜ್ಞಾನಿಗಳು ಹೇಳುತ್ತಾರೆ. ಪರಶುರಾಮ ಸೃಷ್ಟಿಯೆಂದು ಕರೆಯಲ್ಪಡುವ ಭಾರತದ ಪಶ್ಚಿಮ ಕರಾವಳಿಯು ಲಕ್ಷಾಂತರ ವರ್ಷಗಳ ಹಿಂದೆ ಸಮುದ್ರದಲ್ಲಿ ಮುಳುಗಿಕೊಂಡು ಇದ್ದಿತು ಎಂದು ಭೂಗರ್ಭಶಾಸ್ತ್ರಜ್ಞರು ಒಪ್ಪಿಕೊಳ್ಳುತ್ತಾರೆ. ಶ್ರೀಕೃಷ್ಣನ ದ್ವಾರಕೆಯು ಸಮುದ್ರದಲ್ಲಿ ಮುಳುಗಿದುದು ಪುರಾಣೋಕ್ತವಾಗಿದೆ. ಅಂತೆಯೇ ರಾಮಾಯಣದ ರಾವಣನ ಲಂಕೆಯು ಹಿಂದೂ ಸಾಗರದಲ್ಲಿ ಮುಳುಗಿ ನಾಮಾವಶೇಷವಾಗಿದೆ ಎಂದು ಊಹಿಸಿದರೆ ತಪ್ಪಾಗದು. ಈ ಊಹೆಯು ನಿರಾಧಾರವಾದುದಲ್ಲ. ಭಾರತದ ದಕ್ಷಿಣಕ್ಕೆ ಹಿಂದೂ ಮಹಾಸಾಗರದಲ್ಲಿ ತಮಿಳರ ಮೂಲನಿವಾಸವಾಗಿದ್ದ "ತಮಿಳರಮ್" ಎಂಬ ಒಂದು ಭೂಖಂಡವು ಪ್ರಾಚೀನ ಕಾಲದಲ್ಲಿ ಇದ್ದಿತೆಂದೂ ಅಲ್ಲಿಂದ ತಮಿಳರು ಉತ್ತರಕ್ಕೆ ವಲಸೆ ಹೋದರೆಂದೂ ಕಾಲಕ್ರಮೇಣ ಅದು ಸಾಗರದಲ್ಲಿ ಮುಳುಗಿಹೋಯಿತೆಂದೂ ಪ್ರಾಚೀನ ತಮಿಳು ಗ್ರಂಥಗಳಲ್ಲಿ ಉಲ್ಲೇಖವಾಗಿದೆಯೆಂದು ವಿದ್ವಾಂಸರು ಹೇಳುತ್ತಾರೆ. ಹಿಂದೆ ಭಾರತದ ದಕ್ಷಿಣಕ್ಕೆ "ತಿಮೂರಿಯ" ಎನ್ನುವ ಭೂಖಂಡವಿತ್ತೆಂದೂ, ಕಾಲಾಂತರದಲ್ಲಿ ಅದು ಮುಳುಗಿ ಹೋಯಿತೆಂದೂ ಇತಿಹಾಸಜ್ಞರು ಹೇಳುತ್ತಾರೆ. ಪ್ರಾಯಶಃ ಅದೇ ರಾವಣಪಾಲಿತ ಲಂಕೆಯಾಗಿದ್ದಿರಬೇಕು. ✡

ಪ್ರಪಂಚದ ಎಲ್ಲ ದೇಶಗಳಲ್ಲಿ ಆಂಶಿಕವಾಗಿಯೂ ಮತ್ತು ಪಾರಸ್ಪರಿಕವಾಗಿಯೂ, ರಾಜಕೀಯ- ಆರ್ಥಿಕ- ಸಾಮಾಜಿಕ ಬೃಹತ್ ಬದಲಾವಣೆಗಳು ಸಂಭವಿಸುತ್ತಲೇ ಬರುವವೆಂದು ತೋರುತ್ತವೆ. ಹಾಗೆಯೇ ವಿಜ್ಞಾನ ಮತ್ತು ತಾಂತ್ರಿಕ ತಿಳುವಳಿಕೆ ಜ್ಞಾನದ ಹೊಸ ದಿಗಂತವನ್ನು ತೋರಿಸುತ್ತ ಮತ್ತು ಹೊಸ- ಹೊಸ ಸಾಧ್ಯತೆಗಳನ್ನು ಉಂಟು ಮಾಡುತ್ತಾ ಹೋಗುವದೆಂದು ತೋರುತ್ತದೆ. ಈ ಹೊಸ ಜ್ಞಾನವನ್ನು ಒಳ್ಳೆಯದಕ್ಕೂ ಉಪಯೋಗಿಸಬಹುದು ಕೆಡಕಿಗೂ ಉಪಯೋಗಿಸಬಹುದು.

—ಕರ್ಟ್ ವಾಲ್ಡಹೀಂ

ಶಿಕ್ಷಕರು ಬಾಲಕರಿಗೆ ಮನೆಗೆಲಸವನ್ನು ಕೊಡಬೇಕೆ ?

ಓದಿಕೆಟ್ಟ...

"ಏನಪ್ಪಾ, ಮನೆಗೆಲಸ ಮಾಡಿದ್ದೀಯಾ?" ಶಿಕ್ಷಕ ಕೇಳುತ್ತಾನೆ.

"ಇಲ್ಲ ಸಾರ್, ನಿನ್ನೆ ತಾನೇ ಕಕ್ಕಿ ತೀರಿಕೊಂಡ ವರ್ತಮಾನ ಬಂತು," ಶಿಷ್ಯ ಜೋಲು ಮುಖ ಹಾಕಿಕೊಂಡು ಉತ್ತರಿಸುತ್ತಾನೆ.

ಕಳೆದ ಆರೆಂಟು ತಿಂಗಳುಗಳಲ್ಲಿ ಈತನ ಕಕ್ಕಿ 'ತೀರಿಕೊಂಡಿದ್ದು' ನಾಲ್ಕನೆಯ ಸಲವೆಂಬುದು ಶಿಕ್ಷಕನಿಗೆ ಚೆನ್ನಾಗಿ ಗೊತ್ತು. ತಾನು ಹೇಳುತ್ತಿದ್ದುದು ಅಪ್ಪಟ ಸುಳ್ಳೆಂಬುದು ಶಿಷ್ಯನಿಗೂ ಗೊತ್ತು. ಹೀಗೆ ಸುಳ್ಳು ಹೇಳುವುದು ತಪ್ಪೆಂಬುದೂ ಅವನಿಗೆ ಅರಿಯದ ವಿಷಯವೇನಲ್ಲ. ಆದರೆ ಹೇಗಾದರೂ ಆತ ಶಿಕ್ಷಕರ ದೊಣ್ಣೆಯನ್ನು ತಪ್ಪಿಸಿಕೊಳ್ಳಲೇಬೇಕಲ್ಲ.

ಶಿಸ್ತನ್ನು ಮಕ್ಕಳು ಬಾಲ್ಯದಲ್ಲಿಯೇ ರೂಢಿಸಿಕೊಳ್ಳಬೇಕು. ಅವರು ಅದನ್ನು ರೂಢಿಸಿಕೊಳ್ಳುವಂತೆ ನೋಡಿಕೊಳ್ಳುವುದು ಶಿಕ್ಷಕರ ಕರ್ತವ್ಯ. ಆದರೆ ಕರ್ತವ್ಯ ನಿರ್ವಹಣೆಯ ವಿಧಾನ ವಿದ್ಯಾರ್ಥಿಗಳ ಪಾಲಿಗೆ ಭಯಪ್ರದವಾದರೆ ಅವರು ಮನಸಾ ಶಿಸ್ತನ್ನು ಪರಿಪಾಲಿಸುವುದು ಹೇಗೆ? ಶಿಕ್ಷಕರು ಯಾವುದನ್ನು ಶಿಸ್ತೆಂದು ಭಾವಿಸಿದ್ದಾರೋ ಅದು ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಯಲ್ಲಿ ತನ್ನ ಮೌಲ್ಯವನ್ನು ಉಳಿಸಿಕೊಂಡಿರುವುದೂ ಸಂದಿಗ್ಧದ ವಿಷಯ, ಮೇಲಾಗಿ ಶಿಸ್ತಿನ ಪರಿಭಾಷೆ ಸಾರ್ವತ್ರಿಕವಾಗಿರುವುದಕ್ಕಿಂತ ವ್ಯಕ್ತಿಗತವಾಗಿರುವುದೇ ಸಾಮಾನ್ಯವಷ್ಟೆ.

ಸಾಮಾಜಿಕ ಹಾಗೂ ವೈಯಕ್ತಿಕ ಹಿತದ ದೃಷ್ಟಿಯಿಂದ ನಿಯಮಪಾಲನೆ ಅವಶ್ಯವೆನ್ನುವುದರಲ್ಲಿ ಸಂಶಯವೇ ಇಲ್ಲ. ಆದರೆ ನಿಯಮಗಳು ವ್ಯಕ್ತಿತ್ವದ ವಿಕಾಸಕ್ಕೆ ಬಾಧಕವಾಗುವಂತಿದ್ದರೆ ಆ ನಿಯಮಗಳನ್ನು ಪುನರ್ವಿಮರ್ಶಿಸಬೇಕಾದುದು ಅತ್ಯಗತ್ಯ. ಇಂದಿನ ಅನೇಕ ಶಿಕ್ಷಣ ತಜ್ಞರುಗಳ ದೃಷ್ಟಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಮನೆಗೆಲಸ ಕೊಡುತ್ತಿರುವುದೂ ಆ ವಿದ್ಯಾರ್ಥಿಗಳು ಅವುಗಳನ್ನು ಪಾಲಿಸಬೇಕೆಂದು ಅಪೇಕ್ಷಿಸುವುದೂ ಪುನರ್ವಿಮರ್ಶಿತವಾಗಬೇಕಾದ ವಿಚಾರಗಳಲ್ಲೊಂದು.

ಜೇಮ್ಸ್ ಬ್ಲೆಸಿಂಗ್‌ಟನ್ ಎಂಬ ಶಿಕ್ಷಣತಜ್ಞ ಈ ಸಮಸ್ಯೆಯನ್ನು ಕೂಲಂಕಷವಾಗಿ ಚರ್ಚಿಸಿ ಒಂದು ಪುಸ್ತಕವನ್ನೇ ಬರೆದಿದ್ದು ಅದನ್ನು ನ್ಯೂಯಾರ್ಕಿನ ಆ್ಯಂಡರ್ ಪ್ರೆಸ್ ಎಂಬ ಪ್ರಕಾಶನ ಸಂಸ್ಥೆ ಪ್ರಸಿದ್ಧಿಸಿದೆ. ಆತ ಹೇಳುವ ಹಾಗೆ ಮನೆಗೆಲಸ ವಿದ್ಯಾರ್ಥಿಗಳ ಪಾಲಿಗೆ ದುಃಸ್ವಪ್ನವಾಗಿರುತ್ತದೆ. ಅದು ಪಾಠದ ಸಮಯವನ್ನು ವೃಥಾ ಹಾಳುಮಾಡುವುದಲ್ಲದೆ ಗುರು–ಶಿಷ್ಯರ ಸಂಬಂಧದಲ್ಲಿಯೂ ಭಂಗತರುತ್ತದೆ. ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮನೆಗೆಲಸಕ್ಕೆ

ಯಾವ ಸ್ಥಾನವನ್ನೂ ಕೊಡದಿರುವುದೇ ಒಳ್ಳೆಯದೆಂದು ಅವರು ಹೇಳುತ್ತಾರೆ.

ಬಾಲಕ ಶಾಲೆಯಿಂದ ಮನೆಗೆ ಬರುವ ಹೊತ್ತಿಗೆ ದಿನವಿಡಿ ಕೆಲಸ ಮಾಡಿ ತಾಯಿ ದಣಿದಿರುತ್ತಾಳೆ. ನಾಲ್ಕು ಮೈಲೋ ಆರು ಮೈಲೋ ದೂರವಿರುವ ಆಫೀಸಿಗೆ ಹೋಗಿ ಎಂಟು ಗಂಟೆಗಳ ಕಾಲ ದುಡಿದು ಮನೆಗೆ ಬರುವ ತಂದೆಯ ಸ್ಥಿತಿಯನ್ನಂತೂ ಕೇಳುವುದೇ ಬೇಡ. ಇನ್ನು ಏಳು ಗಂಟೆಗಳ ಕಾಲ ಪಾಠ ಹೇಳಿಸಿಕೊಂಡು ಬಂದ ಬಾಲಕನ ಸ್ಥಿತಿ ಇದಕ್ಕಿಂತ ಭಿನ್ನವಾಗಿರುವುದಿಲ್ಲ. ಬೌದ್ಧಿಕ ಶ್ರಮದಿಂದ ಮೊದಲೇ ದಣಿದ ಬಾಲಕರಿಗೆ ಮನೆಯಲ್ಲಿ ಮತ್ತೆ ಎರಡು ಮೂರು ಗಂಟೆಗಳಷ್ಟು ಮನೆಗೆಲಸ ಕೊಟ್ಟರೆ ಅವರ ಬುದ್ಧಿ ಮತ್ತೆ ಕುಂಠಿತಗೊಳ್ಳಲಾರದೆ? ಎಂದು ಬ್ಲೆಸಿಂಗ್‌ಟನ್ ಪ್ರಶ್ನಿಸುತ್ತಾರೆ.

ಶಿಕ್ಷಣದ ಉದ್ದೇಶ ಓದುಬರಹಕ್ಕೆ ಮಾತ್ರ ಪರಿಮಿತವಾಗಿರುವುದಿಲ್ಲ. ಅವರ ವ್ಯಕ್ತಿತ್ವದ ವಿಕಾಸವೂ ಓದು ಬರಹದಷ್ಟೇ ಮುಖ್ಯ. ದಿನದ ಎರಡುಮೂರಂಶಕ್ಕಿಂತ ಹೆಚ್ಚು ಕಾಲವನ್ನು ಬಾಲಕ ಓದುಬರಹ ಹಾಗೂ ನಿದ್ರೆಗಳಲ್ಲಿ ಕಳೆದರೆ ಅವನ ವ್ಯಕ್ತಿತ್ವದ ವಿಕಾಸವಾಗುವುದು ಹೇಗೆ? ಅವನು ನಾಲ್ಕು ಜನರೊಡನೆ ಬೆರೆತು ನಕ್ಕುನಲಿದಾಡಿ ಸಾಮಾಜಿಕ ಪದ್ಧತಿಗಳನ್ನು ರೂಢಿಸಿಕೊಳ್ಳುವುದು ಹೇಗೆ? ಸಮಾಜ ಜೀವಿಯಾಗುವುದು ಹೇಗೆ? ಮನೆಯೆ ಮೊದಲ ಪಾಠಶಾಲೆ ಎಂದು ಹೇಳಲಾಗುತ್ತದೆ. ಆದರೆ ಬಾಲಕ ಶಾಲೆ ಹಾಗೂ ನಿದ್ದೆಯಲ್ಲಿ ಕಳೆದ ಅವಧಿಯನ್ನು ಹೊರತುಪಡಿಸಿದರೆ ನಾಲ್ಕೈದು ಗಂಟೆಗಳಷ್ಟು ಸಮಯ ಕೂಡ ತನ್ನ ತಂದೆ-ತಾಯಿಯರೊಂದಿಗೆ, ತನ್ನ ಅಣ್ಣ-ತಮ್ಮಂದಿರೊಂದಿಗೆ, ತನ್ನ ಅಕ್ಕ-ತಂಗಿಯರೊಡನೆ ಕಳೆಯಲಾರ. ಇಂತಹುದರಲ್ಲಿ ಅವನಿಗೆ ಎರಡು ಮೂರು ಗಂಟೆಗಳ ಮನೆಗೆಲಸವನ್ನು ಕೊಟ್ಟರೆ ಅವರೊಡನೆ ಬರುವ ಸಂಪರ್ಕ ಇನ್ನೂ ಸೀಮಿತಗೊಳ್ಳುತ್ತದೆ. ತನ್ನ ಮನೆಯ ಜನರೊಡನೆಯೆ ಬಾಲಕನಿಗೆ ಸಾಕಷ್ಟು ಸಂಪರ್ಕ ಬಾರದಾಗ ಮನೆಯಲ್ಲಿ ಸುಲಲಿತ ಸಂಬಂಧ ಇನ್ನೂ ದುಸ್ಸಾಧ್ಯವಾಗುತ್ತದೆ.

ಶಿಕ್ಷಕರು ಓದು ಬರಹಕ್ಕಷ್ಟೇ ಅಲ್ಲ, ಬಾಲಕರ ವ್ಯಕ್ತಿತ್ವ ಸಮಗ್ರವಾಗಿ ರೂಪುಗೊಳ್ಳುವುದಕ್ಕೂ ಪ್ರಾಶಸ್ತ್ಯವನ್ನು ಕೊಡಬೇಕು. ಅದಕ್ಕಾಗಿ ಅವರಿಗೆ ಸಾಕಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕು. ಸಾಮಾಜಿಕವಾಗಿ, ಕೌಟುಂಬಿಕವಾಗಿ ಅವರಿಗೆ ಬರುವ ಸಂಪರ್ಕಗಳು ಹೆಚ್ಚುವಂತೆ ನೋಡಿಕೊಳ್ಳಬೇಕು. ಶಿಕ್ಷಕರು ತಾವು ಹೇಳಿಕೊಡಬೇಕಾದ್ದನ್ನು ಶಾಲೆಯಲ್ಲಿಯೆ ಹೇಳಿಕೊಟ್ಟು, ಅದನ್ನು ಗ್ರಹಿಸಿದ್ದಾರೋ ಇಲ್ಲವೋ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕೇ ವಿನಾ ಮನೆಗೆಲಸವನ್ನು ಕೊಡಬಾರದು ಎಂದು ಹೇಳುತ್ತಾರೆ ಜೇಮ್ಸ್ ಬ್ಲೆಸಿಂಗ್‌ಟನ್. ✡

ಯೋಗಕ್ಕೆ ಬಹಿಷ್ಕಾರ

ರಶಿಯಾದಲ್ಲಿ ಯೋಗ ಶಿಕ್ಷಣಕ್ಕೆ ಬಹಿಷ್ಕಾರ ಹಾಕಲಾಗಿದೆ. ಸಾಕಷ್ಟು ತಾತ್ವಿಕ ಆದರ್ಶಗಳಿಂದ ಕೂಡಿದ ಯೋಗ ವಿದ್ಯೆ ರಶಿಯಾದ ದೈಹಿಕ ಶಿಕ್ಷಣ ಕ್ರಮಕ್ಕೆ ಹೊಂದಾಣಿಕೆ ಆಗುವದಿಲ್ಲ ಎಂದು ರಶಿಯಾದ ಶಾರೀರಿಕ ಶಿಕ್ಷಣ ಮತ್ತು ಕ್ರೀಡಾ ಸಮಿತಿಯು ಅಭಿಪ್ರಾಯ ಪಟ್ಟಿರುವದೇ ಇದಕ್ಕೆ ಕಾರಣ. ಇದರಂತೆ ಮಹಿಳೆಯರ ಕಾಲ್ಚೆಂಡಾಟ. ಜೂಡೋ. ಕರಾಟೆ, ಕಾಂಟ್ರಾಕ್ಟ ಬ್ರಿಜ್ ಆಟಗಳೂ ರಶಿಯಾದ ಶಾರೀರಿಕ ಶಿಕ್ಷಣ ಪದ್ಧತಿಗೆ ಅನುಗುಣವಾದವುಗಳಲ್ಲವಂತೆ.

ಅರ್ಥಶಾಸ್ತ್ರದ ಐನ್‌ಸ್ಟೀನ್ ಜಾನ್ ಮೇನಾರ್ಡ ಕೇನ್ಸ್

ವಸಂತ ಗುಮಾಸ್ತೆ

ಅಹಲ್ಯೆಗೆ ಅವಳ ಪತಿಯು ಶಿಲೆಯಾಗುವ ಶಾಪ ಕೊಟ್ಟಿದ್ದ. ತ್ರೇತಾಯುಗದಲ್ಲಿ ಪ್ರಭು ಶ್ರೀ ರಾಮಚಂದ್ರನು ಜನಿಸಿ ಬಂದಾಗ ಅವನ ಪಾದ ಸ್ಪರ್ಶದಿಂದ ಅವಳ ಶಾಪ ಮುಕ್ತಳಾದಳು. ಇದು ರಾಮಾಯಣದಲ್ಲಿ ಶ್ರೀ ರಾಮಚಂದ್ರನ ಮಹಾತ್ಮ್ಯೆಯನ್ನು ಬಣ್ಣಿಸುವ ಒಂದು ಉದಾಹರಣೆ. ಈಗ ಇದೇ ಶತಮಾನದಲ್ಲಿ ಅರ್ಥಶಾಸ್ತ್ರನೊಬ್ಬನ ವಿಚಾರಗಳಿಂದ ಬಂಡವಳವಾದಿ ದೇಶಗಳಿಗೆ ತಗಲಿದ ಶಾಪ ಒಂದರ ನಿವಾರಣೆ ಆಯಿತು ಎಂದು ಧಾರಾಳವಾಗಿ ಹೇಳಬಹುದು. ಅರ್ಥಶಾಸ್ತ್ರೀಯ ಭಾಷೆಯಲ್ಲಿ 'ವ್ಯಾಪಾರ ಚಕ್ರಗಳು (Trade Cycles) ಎಂದು ಗುರುತಿಸಲ್ಪಡುವ ತೇಜಿ–ಮಂದಿಗಳು ಬಂಡವಳವಾದದ ಅರ್ಥವ್ಯವಸ್ಥೆಗಳಿಗೆ ತಗಲಿದ ಶಾಪದಂತಿದ್ದವು. ಒಂದು ಕಾಲ ಆರ್ಥಿಕ ಉತ್ಕರ್ಷದ ಸಂತಸವಾದರೆ ಅದರ ಮರುಗಳಿಗೆ ಆರ್ಥಿಕ ಕುಸಿತದ ನಿರಾಶೆ ಈ ಅರ್ಥವ್ಯವಸ್ಥೆಗಳನ್ನು ಆವರಿಸುತ್ತಿದ್ದವು. ಪ್ರಥಮ ಮಹಾ ಯುದ್ಧದ ನಂತರದ ಕಾಲವನ್ನೇ ತೆಗೆದುಕೊಳ್ಳಿ. ೧೯೧೯ ರಿಂದ ೧೯೨೯ ರ ವರೆಗಿನ ಹತ್ತು ವರ್ಷಗಳಲ್ಲಿ ಅಮೇರಿಕೆಯಲ್ಲಿ ಅಭೂತಪೂರ್ವ ಆರ್ಥಿಕ ಮುನ್ನಡೆ ಆಯಿತು. ಆರ್ಥಿಕ ಯಶಸ್ಸಿನ ಕೀಲಿ ಕೈಯೇ ತಮಗೆ ಸಿಕ್ಕಿತು ಎಂದು ಅಮೇರಿಕೆಯ ಜನರಿಗೆ ಅನ್ನಿಸಿಬಿಟ್ಟಿತು. ಸ್ಟೇಟ ಎಂಪಾಯರದಂತಹ ಗಗನಚುಂಬಿ ಕಟ್ಟಡಗಳು ಇದೇ ಕಾಲದಲ್ಲಿ ಕಟ್ಟಲ್ಪಟ್ಟು ಅವು ಅಮೇರಿಕೆಯ ಆರ್ಥಿಕ ಸಂಭ್ರಮದ ಮೂರ್ತ ದ್ಯೋತಕವಾಗಿದ್ದವೆಂದರೆ ಅಡ್ಡಿ ಇಲ್ಲ. ಆದರೆ ಈ ಸಂಭ್ರಮ ಅಲ್ಪಾಯುಷಿಯಾಗಿತ್ತು. ೧೯೨೯ ರ ನಂತರ ಅಮೇರಿಕೆಯ ಅರ್ಥ ವ್ಯವಸ್ಥೆ ಮಳಲಿನ ಮನೆಯಂತೆ ಕುಸಿದು ಬಿದ್ದಿತು. ಆ ನಂತರದ ೩–೪ ವರ್ಷಗಳ ಕಾಲವು, ಅಮೇರಿಕೆಯ, ಅಷ್ಟೇ ಏಕೆ, ಬಂಡವಾಳುವಾದ ಅರ್ಥ–ವ್ಯವಸ್ಥೆಯ ಇತಿಹಾಸದಲ್ಲಿಯೇ ಕರಾಳ ಭಾಗವಾಗಿದೆ. ಪ್ರತಿ ನಾಲ್ವರು ಕಾರ್ಮಿಕರಲ್ಲಿ ಒಬ್ಬ ಮನೆಯಲ್ಲಿ ಕುಳಿತಿದ್ದ. ಬೆಲೆಗಳು, ಉತ್ಪಾದನೆ, ರಾಷ್ಟ್ರೀಯ ಉತ್ಪನ್ನ, ಅಂತಾರಾಷ್ಟ್ರೀಯ ವ್ಯಾಪಾರ ಇವೆಲ್ಲ ಬುಡಕಂಡವು. ಅಮೇರಿಕೆಯ ರೈತರಂತೂ ಸುಮಾರಾಗಿ ಭಿಕ್ಷೆ ಬೇಡುವ ದುರ್ದೆಶೆಗೆ ಈಡಾಗಿದ್ದರು. ನೇತ್ರದೀಪಕ ಆರ್ಥಿಕ ಪ್ರಗತಿಯನ್ನು ಸಾಧಿಸಿದ ಅಮೇರಿಕ ಹೀಗೆ ಭಯಾನಕ ಆರ್ಥಿಕ ಅವನತಿಯ ಅಪ್ಪುಗೆಯಲ್ಲಿ ಹಿಡಿಯಲ್ಪಟ್ಟಿತ್ತು.

ಬಂಡವಳವಾದಿ ಅರ್ಥ ವ್ಯವಸ್ಥೆಗಳಲ್ಲಿ ಈ ರೀತಿಯ ಏರು ಮತ್ತು ಇಳಿವು ಆರ್ಥಿಕ ಪ್ರಗತಿಯ ಅನಿವಾರ್ಯ ಘಟಕಗಳಾಗಿದ್ದವು. ಸುಮಾರಾಗಿ ಅರ್ಥಶಾಸ್ತ್ರಜ್ಞರೆಲ್ಲ ಇದಕ್ಕೆ

ಉಪಾಯವನ್ನು ಸೂಚಿಸುವಲ್ಲಿ ವಿಫಲರಾಗಿದ್ದರು. ಆದರೆ ಈ ಕಾಲದಲ್ಲಿ ಒಬ್ಬ ಅರ್ಥಶಾಸ್ತ್ರಜ್ಞ ಉದಯಿಸಿದ. ತೇಜಿ–ಮಂದಿಗಳ ಈ ಅಪೆಂಡಿಕ್ಸನ್ನು 'ಆಪರೇಶನ್' ಮಾಡಿ ಕಿತ್ತಿ ಹಾಕುವ ಉಪಾಯವನ್ನು ಅವನು ಸೂಚಿಸಿದ. ಅವನು ಸೂಚಿಸಿದ ಉಪಾಯಗಳನ್ನು ಅಮೇರಿಕದಲ್ಲಿ ಪ್ರಯೋಗಿಸಲಾಯಿತು. ತೇಜಿ–ಮಂದಿಗಳು ಓಡಿ ಹೋದವು. ಅಂದಿನಿಂದ ಇಂದಿನ ವರೆಗೆ ಅಮೇರಿಕೆಯಲ್ಲಾಗಲಿ ಅಥವಾ ಇನ್ನಾವ ಬಂಡವಳವಾದಿ ದೇಶಗಳಲ್ಲಾಗಲಿ ವ್ಯಾಪಾರ-ಚಕ್ರಗಳು ಎನ್ನಬಹುದಾದ ಪುನರಾವರ್ತಿ ಏರಿಳಿವುಗಳಾಗಿಲ್ಲ ಎಂದು ನಿಸ್ಸಂಕೋಚವಾಗಿ ಹೇಳಬಹುದು. ಬಂಡವಾಳವಾದಿ ಅರ್ಥವ್ಯವಸ್ಥೆಗಳನ್ನು ಈ ರೀತಿ ತೇಜಿ–ಮಂದಿಗಳ ಹಿಡಿತದಿಂದ ಬಿಡಿಸಿದ ಈ ಮಹಾನ್ ಅರ್ಥಶಾಸ್ತ್ರಜ್ಞನ ಹೆಸರು ಜಾನ್ ಮೇನಾರ್ಡ ಕೇನ್ಸ. ಅರ್ಥಶಾಸ್ತ್ರೀಯ ವಿಚಾರಗಳಲ್ಲಿ ಮತ್ತು ಆರ್ಥಿಕ ಧೋರಣೆಗಳಲ್ಲಿ ಕ್ರಾಂತಿಕಾರಕ ಪರಿವರ್ತನೆ ಮಾಡಿ 'ಹೊಸ ಅರ್ಥಶಾಸ್ತ್ರ'ಕ್ಕೆ ಜನ್ಮ ಕೊಟ್ಟ ಈ ಅಪ್ರತಿಮ ಅರ್ಥಶಾಸ್ತ್ರಜ್ಞ ಬಂಡವಳವಾದಿ ಅರ್ಥವ್ಯವಸ್ಥೆಗಳ ಪಾಲಿಗೆ ಪ್ರಭು ಶ್ರೀರಾಮಚಂದ್ರನಾಗಿದ್ದಾನೆ.

ಕೇನ್ಸನ ಜನ್ಮ ೫ ಜೂನ ೧೮೮೩ ರಂದು ಇಂಗ್ಲಂಡದಲ್ಲಾಯಿತು. ಕಾಕತಾಲೀಯ ನ್ಯಾಯವೆನ್ನಿ ಅಥವಾ ನಿಯತಿಯ ಲೀಲೆ ಎನ್ನಿ, ಅದೇ ವರುಷ ಅದೇ ದೇಶದಲ್ಲಿ ಬಂಡವಳವಾದಿ ಅರ್ಥ–ವ್ಯವಸ್ಥೆಗಳ ಸ್ಮಶಾನ ಗೀತೆ ಹಾಡಿದ ಕಾರ್ಲ ಮಾರ್ಕ್ಸನ ಮರಣವಾಗಿತ್ತು. ಬಂಡವಳವಾದವನ್ನು ಮಣ್ಣು ಮುಕ್ಕಿಸಲು ರಕ್ತ ಕ್ರಾಂತಿಯ ಕಹಳೆ ಊದಿದ ಮಾರ್ಕ್ಸ ಮಣ್ಣಿನಲ್ಲಿ ಹೋದ ಮತ್ತು ಬಂಡವಾಳವಾದವನ್ನು ಚಿರಂಜೀವಿಯಾಗಿಸಲು ಕೇನ್ಸ ಹುಟ್ಟಿ ಬಂದ. ಕೇನ್ಸನು ಹುಟ್ಟಿ ಬಾರದಿದ್ದರೆ ಇಂದು ಜಗತ್ತೆಲ್ಲ "ಕೆಂಪಾಗುತ್ತಿತ್ತು" ಎಂದು ಹೇಳಿದರೆ ಅಷ್ಟೊಂದು ತಪ್ಪಾಗಲಿಕ್ಕಿಲ್ಲ.

ಕೇನ್ಸನ ತಂದೆ–ತಾಯಿಗಳಿಬ್ಬರೂ ಹಣ ಮತ್ತು ಗುಣಗಳೆರಡರಿಂದಲೂ ಉಚ್ಚ ವರ್ಗದ ಜನ. ತಂದೆ ನೆವಿಲ್ ಕೇನ್ಸನೂ ಒಬ್ಬ ಅರ್ಥಶಾಸ್ತ್ರಜ್ಞ. ಅರ್ಥ ಮತ್ತು ತರ್ಕ ಶಾಸ್ತ್ರಗಳಲ್ಲಿ ಅವನು ಪ್ರಾಧ್ಯಾಪಕ. ಅದರೊಂದಿಗೆ ಅವನೊಬ್ಬ ದಕ್ಷ ಆಡಳಿತಗಾರನೂ ಹೌದು. ತಾಯಿ ಫ್ಲೋರೆನ್ಸ ಅಡಾ ಸಾರ್ವಜನಿಕ ಸೇವಾತತ್ಪರಳು. ಕೆಲ ಕಾಲ ಅವಳು ಕೆಂಬ್ರಿಜ್ ಶಹರದ ನಗರಾಧ್ಯಕ್ಷೆ ಆಗಿದ್ದಳು. ಸಾಹಿತ್ಯದಲ್ಲೂ ಅವಳ ಕೈ ಓಡಾಡುತ್ತಿತ್ತು. ಎಂತಲೇ ತಂದೆ–ತಾಯಿಗಳಿಬ್ಬರೂ ತಮ್ಮ ಈ ಮೇಧಾವಿ ಮಗನಿಗೆ ಕೊನೆಯ ವರೆಗೆ ಸ್ಫೂರ್ತಿಯ ಅಖಂಡ ಬುಗ್ಗೆಯಾಗಿದ್ದರು. ಮೇನಾರ್ಡ ಕೇನ್ಸನಿಗೆ ಮಾರ್ಗರೆಟ್ ಎಂಬ ತಂಗಿ ಮತ್ತು ಜಾಫರಿ ಎಂಬ ತಮ್ಮ ಇದ್ದರು.

ಕೇನ್ಸನ ಪ್ರಾರಂಭಿಕ ಶಿಕ್ಷಣ ವಿಕ್ಟೋರಿಯಾ ಓಲ್ಡ ಸ್ಕೂಲ ಎಂಬಲ್ಲಾಯಿತು. ಚುರುಕು–ಬುದ್ಧಿಯ ಹರಿತತನ ಆಗಿಂದಲೇ ವ್ಯಕ್ತವಾಗಹತ್ತಿತು. ಕೇವಲ ನಾಲ್ಕುವರೆ ವರ್ಷದವನಿರುವಾಗ ಬಡ್ಡಿ (Interest) ಈ ಕಲ್ಪನೆಯ ಅರ್ಥಶಾಸ್ತ್ರೀಯ ವಿಶ್ಲೇಷಣೆ ಹೇಗೆ ಮಾಡಬೇಕು ಎಂಬುದರ ಬಗ್ಗೆ ಕೇನ್ಸ ತಲೆತುರಿಸಿಕೊಳ್ಳಹತ್ತಿದ. ಆರು ವರ್ಷದವನಿರುವಾಗ ತನ್ನ ಮೆದುಳು ಹೇಗೆ ಕಾರ್ಯಮಾಡುತ್ತದೆ ಎಂಬುದನ್ನು ಅರಿತುಕೊಳ್ಳಲು ತವಕಪಟ್ಟ. ಏಳು ವರ್ಷದವನಿರುವಾಗ ತನ್ನ ತಂದೆಗೆ ಬೌದ್ಧಿಕ ಮಿತ್ರನಾದ. ಹದಿನಾಲ್ಕು ವರ್ಷ ವಯಸ್ಸಿನಲ್ಲಿ ಈಟನ್ ವಿದ್ಯಾರ್ಥಿ ವೇತನ ಗಳಿಸಿದ. ಯಾವುದೇ ಪರೀಕ್ಷೆಯಲ್ಲಿ ಅವನಿಗೆ ೭೦% ಗುಣಗಳಿಗಿಂತ ಕಡಿಮೆ ಗುಣಗಳು ಸಿಕ್ಕಿರಲಿಲ್ಲ. ಅವನು ಕೇವಲ ಪುಸ್ತಕೀಯ ಜಾಣತನ ಹೊಂದಿದ್ದನೆಂದಲ್ಲ. ಭಾಷಣ ಕಲೆಯನ್ನು ಅವಗತ ಮಾಡಿಕೊಂಡ ವಾಕ್ ಚತುರ, ರಂಗಮಂಟಪ ನಟ, ಪರ್ವತಾರೋಹಿ... ಆಡು ಮುಟ್ಟದ ಗಿಡವಿಲ್ಲ... ಎಂಬ ನಾಣ್ಣುಡಿ ಕೇನ್ಸನಿಗೆ ಸರಿ ಹೊಂದುತ್ತಿತ್ತು.

ಇಂಗ್ಲಂಡದಲ್ಲಿಯ ಎರಡು ವಿಶ್ವವಿದ್ಯಾಲಯಗಳು ತಮ್ಮಷ್ಟಕ್ಕೇ ಒಂದೊಂದು ರೀತಿಯಲ್ಲಿ ಕೀರ್ತಿ ಪಡೆದಿವೆ. ಆಕ್ಸಫರ್ಡ್ ವಿಶ್ವವಿದ್ಯಾಲಯ ಸಾಹಿತ್ಯ, ಲಲಿತಕಲೆ ಮತ್ತು

ತತ್ವಜ್ಞಾನಿಗಳ ತವರುಮನೆಯಾಗಿದ್ದರೆ ಕ್ಯಾಂಬ್ರಿಜ್ ವಿಶ್ವವಿದ್ಯಾಲಯು ಬುದ್ಧಿವಾದ (Rationalism)ಕ್ಕೆ ಹೆಸರುವಾಸಿಯಾಗಿತ್ತು. ಅರ್ಥಶಾಸ್ತ್ರದ ಉದ್ದಗಲಕ್ಕೂ ವಿವೇಕ ಬುದ್ಧಿಯ ಪ್ರಭಾವ ಪಸರಿಸಿದೆಯಾದ್ದರಿಂದ ಈ ಶಾಸ್ತ್ರದ ವಿಕಾಸ ಕೆಂಬ್ರಿಜ್ ವಿಶ್ವ ವಿದ್ಯಾನಿಲಯುದಲ್ಲಿ ಆದದ್ದು ಸ್ವಾಭಾವಿಕ. ಮೇನಾರ್ಡ್ ಕೇನ್ಸನ ವಿಶ್ವವಿದ್ಯಾಲಯುದ ಶಿಕ್ಷಣ ಕ್ಯಾಂಬ್ರಿಜ್ ವಿಶ್ವವಿದ್ಯಾಲಯುದಲ್ಲಾಯಿತು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆ ವಿಶ್ವವಿದ್ಯಾಲಯುಕ್ಕೆ ಸಂಲಗ್ನವಾಗಿದ್ದ ಕಿಂಗ ಮಹಾ ವಿದ್ಯಾಲಯುದಲ್ಲಿ ಆಲ್ಫ್ರೇಡ್ ಮಾರ್ಶಲ್ ಅವನ ಗುರುವಾಗಿದ್ದ. ಕೇನ್ಸ ಮಾರ್ಶಲ್ ಪಟ್ಟ ಶಿಷ್ಯನ ಸ್ಥಾನ ಗಳಿಸಿದು ಸೋಜಿಗದ ಸಂಗತಿಯೇನಲ್ಲಿ ಮಾರ್ಶಲ್ ನಂತರ ಆ ಸ್ಥಾನವನ್ನು ಅಲಂಕರಿಸಿದ ಪಿಗೂನಿಗೂ ಕೇನ್ಸನ ಮೇಲೆ ಪುತ್ರಸಮಾನ ಪ್ರೇಮು. ವಾರದಲ್ಲೊಂದು ದಿನ ಶಿಷ್ಯನ ಭೋಜನ ಪಿಗೂನ ಮನೆಯುಲ್ಲಿ. ಕೇಂಬ್ರಿಜ್‌ದಲ್ಲಿ ಅಂದಿನ ದಿನಗಳಲ್ಲಿ 'ಬ್ಲೂಮ್ಸಬರಿ ಮಂಡಳ' ಎಂಬ ಹೆಸರಿನ ಬುದ್ಧಿವಾದಿಗಳ ತಂಡ ಒಂದಿತ್ತು. ಇಂಗ್ಲಿಷ್‌ದ ಪ್ರಸಿದ್ಧ ಸಾಹಿತಿಗಳಾದ ವರ್ಜಿನಿಯಾ ವೂಲ್ಫ, ಲಿಟನ್ ಸ್ಟ್ರ್ಯಾಚಿ ಮುಂತಾದವರು ಅದರ ಸದಸ್ಯರು. ಕೇನ್ಸನು ಆ ಮಂಡಳದ ಸದಸ್ಯನಾಗಿ ತನ್ನ ಬೌದ್ಧಿಕ ತೃಷೆಯನ್ನು ಹಿಂಗಿಸಿಕೊಳ್ಳಹತ್ತಿದ.

ಪದವಿಯನ್ನು ಪಡೆದ ನಂತರ ನೌಕರಿಗೆ ಪರದಾಟ ಪ್ರಾರಂಭವಾಯಿತು. ತನ್ನ ಪದವಿಗಳಿಂದ ಕೇನ್ಸಗೆ ಪ್ರಾಧ್ಯಾಪಕನ ಕೆಲಸ ಸುಲಭವಾಗಿ ಸಿಗಬಹುದಾಗಿತ್ತು. ಆದರೆ ಶಿಕ್ಷಕ ವೃತ್ತಿ ಮತ್ತು ಕೈ ತುಂಬ ಸಂಬಳ ಇವುಗಳ ನಡುವಿನ ಎಣ್ಣೆ ನೀರಿನ ಸಂಬಂಧ ಎಲ್ಲರಿಗೂ ಗೊತ್ತಿದ್ದ ವಿಷಯು. ಕೇನ್ಸನಿಗೆ ಪುಡಿಗಾಸಿನ ಸಂಬಳದ ಕೆಲಸ ಬೇಡವಾಗಿತ್ತು. ಸಿವಿಲ್ ಸರ್ವಿಸ ಪರೀಕ್ಷೆಗೆ ಕುಳಿತುಕೊಂಡ, ತಾನು ಆ ಪರೀಕ್ಷೆಯುಲ್ಲಿ ನಾಪಾಸು ಆಗುವೆನೆಂದೇ ತಿಳಿದಿದ್ದ ಕೇನ್ಸ ದ್ವಿತೀಯ ಕ್ರಮಾಂಕದಲ್ಲಿ ಉತ್ತೀರ್ಣನಾದ. ವಿಚಿತ್ರವೆಂದರೆ ಅವನಿಗೆ ಆ ಪರೀಕ್ಷೆಯುಲ್ಲಿ ತೀರ ಕಡಿಮೆ ಗುಣಗಳು ಬಿದ್ದಿದ್ದು ಅರ್ಥಶಾಸ್ತ್ರ ವಿಷಯುದಲ್ಲಿ. ಆ ಗುಣಗಳನ್ನು ಕಂಡು ತನ್ನ ಪರೀಕ್ಷಕರಿಗೆ ತನಗಿಂತ ಕಡಿಮೆ ಅರ್ಥಶಾಸ್ತ್ರ ಬರುತ್ತದೆ ಎಂದು ಕೇನ್ಸ ನುಡಿದ. ಅವನ ಆ ಶಬ್ದಗಳು ಅಕ್ಷರಶಃ ನಿಜವಾದವು.

ಸಿವಿಲ್ ಸರ್ವಿಸ ಪರೀಕ್ಷೆ ಪಾಸಾಗಿ ೧೯೦೬ ರಲ್ಲಿ ಇಂಡಿಯಾ ಆಫೀಸಿನಲ್ಲಿ ಅವನು ಕೆಲಸಕ್ಕೆ ಸೇರಿಕೊಂಡ. ಆದರೆ ಕೆಲವೇ ದಿನಗಳಲ್ಲಿ ಅದರಲ್ಲಿಯ ಯಾಂತ್ರಿಕತೆ ಬೇಸರ ತಂದಿತು. ಕೆಲಸದ ಮೇಲಿದ್ದಾಗಲೇ ಗಣಿತದ ಮೇಲೊಂದು ಪ್ರಬಂಧ ಬರೆದು ಮುಗಿಸಿದ. ಆ ಪ್ರಬಂಧ ಮುಗಿಯುತ್ತಲೇ ಇಂಡಿಯಾ ಆಫೀಸಿನ ಕೆಲಸಕ್ಕೆ ಶರಣು ಹೊಡೆದ. ಶಿಕ್ಷಕ ವೃತ್ತಿಯಲ್ಲಿ ಸಂಬಳ ಕಡಿಮೆಯಾದರೂ ಯಾಂತ್ರಿಕತೆ ಇಲ್ಲವಾದ್ದರಿಂದ ಮತ್ತು ತನ್ನ ಬುದ್ಧಿಗೆ ಸಾಟಿಯಾದ ಕೆಲಸ ಕಲಿಸುವದರಲ್ಲಿ ಇರುವದೆಂದು ತಿಳಿದು ಕೇನ್ಸ ತಾನು ಕಲಿತ ಕ್ಯಾಂಬ್ರಿಜ್ ವಿಶ್ವವಿದ್ಯಾಲಯ ಸೇರಿದ. ಇಂಡಿಯಾ ಆಫೀಸದಲ್ಲಿದ್ದಾಗ ತಾನು ಕಲೆ ಹಾಕಿದ ಮಾಹಿತಿಯನ್ನು ಆಧರಿಸಿ ೧೯೧೩ ರಲ್ಲಿ Indian Currency and Finance ಭಾರತದ ಚಲನ ಮತ್ತು ವಿತ್ತವ್ಯವಸ್ಥೆ ಎಂಬ ಪುಸ್ತಕ ಬರೆದ. ಈ ಈ ಪುಸ್ತಕದ ಕೀರ್ತಿಯಿಂದ ಇಂಗ್ಲಂಡ ಸರಕಾರವು ಭಾರತದ ಚಲನ ಸಮಸ್ಯೆಗೆ ಪರಿಹಾರ ಸೂಚಿಸಲೆಂದು ಒಂದು ಆಯೋಗವನ್ನು ನೇಮಿಸಿ ಅದರ ಸದಸ್ಯತ್ವವನ್ನು ಕೇನ್ಸಗೆ ದಯಪಾಲಿಸಿತು. ಆ ಸಮಿತಿಯ ಸದಸ್ಯನಾದಾಗ ಕೇನ್ಸನ ವಯಸ್ಸು ಕೇವಲ ೩೦ ವರ್ಷಗಳು. ಆ ಸಮಿತಿಯ ಸೂಚನೆಯ ಮೇರೆಗೆ ನಂತರ ೧೯೩೫ ರಲ್ಲಿ ಭಾರತದಲ್ಲಿ ರಿಜರ್ವ ಬ್ಯಾಂಕ ಸ್ಥಾಪಿಸಲ್ಪಟ್ಟಿತು.

ಕೆಂಬ್ರಿಜ್ ವಿಶ್ವವಿದ್ಯಾಲಯುದಲ್ಲಿ ಅವನು ಕೂಡಲೇ ಯಶಸ್ವಿಯಾದ. (Economic Journal)' ಎಂಬ ಪ್ರತಿಷ್ಠಿತ ನಿಯತಕಾಲಿಕದ ಸಂಪಾದಕ ಹುದ್ದೆ ಅವನಿಗೆ ಕೊಡಮಾಡಲ್ಪಟ್ಟಿತು, ಆ ಹುದ್ದೆಯನ್ನು ಅವನು ೩೩ ವರ್ಷಗಳ ವರೆಗೆ ಅಖಂಡವಾಗಿ ನಿರ್ವಹಿಸಿದ. ಮೊದಲ ಜಾಗತಿಕ ಯುದ್ಧ ಮುಗಿದು ಶಾಂತಿ

ಸಂಧಾನವಾಯಿತು. Economic Consequences of Peace (ಶಾಂತಿಯ ಆರ್ಥಿಕ ಪರಿಣಾಮಗಳು) ಎಂಬ ಕೃತಿಯನ್ನು ಕೇನ್ಸ್ ಹೊರ ತಂದ. ಈ ಮೊದಲಿನ ಕೃತಿ ಮತ್ತು ಈಗಿನ ಕೃತಿ ಇವೆರಡೂ ಅವನಿಗೆ ಅರ್ಥಶಾಸ್ತ್ರಜ್ಞನೆಂದು ಅಪಾರ ಕೀರ್ತಿ ತಂದವು. ಈ ಮಧ್ಯೆ ತನ್ನ ಚಾಣಾಕ್ಷ ಬುದ್ಧಿಯಿಂದ ವಿವಿಧ ಉದ್ಯೋಗಗಳಲ್ಲಿ ಹಣತೊಡಗಿಸಿ ಮೂರು ಸಾವಿರ ಪೌಂಡುಗಳಿಂದ ಮೂರು ಲಕ್ಷ ಪೌಂಡುಗಳ ಹಣವನ್ನು ದೊರಕಿಸಿದ್ದ. ಹಣವನ್ನು ಪ್ರತ್ಯಕ್ಷ ಗಳಿಸುವದಲ್ಲದೆ ಹಣದ ಮೇಲೆ ಎರಡು ಪುಸ್ತಕಗಳನ್ನು A Tract on Monetary Reform (ಚಲನ ಸುಧಾರಣೆಯ ಮೇಲೊಂದು ಚಿಕ್ಕಕೃತಿ) –ಮತ್ತು ೧೯೩೦ರಲ್ಲಿ A Treatise on money (ಚಲನದ ಮೇಲೆ ಒಂದು ಪ್ರಬಂಧ) ಬರೆದ.

ಕೇನ್ಸನನ್ನು ಅದ್ವಿತೀಯ ಅರ್ಥಶಾಸ್ತ್ರಜ್ಞನನ್ನಾಗಿ ಘೋಷಿಸಿದ ಪುಸ್ತಕ The General Theory of Employment, Intrest and Money (ಉದ್ಯೋಗ, ಬಡ್ಡಿ ಮತ್ತು ಚಲನಗಳ ಸರ್ವಸಾಮಾನ್ಯ ಸಿದ್ಧಾಂತ) ೧೯೩೬ರಲ್ಲಿ ಹೊರಬಂದಿತು. ಈ ಪುಸ್ತಕದಲ್ಲಿ ಕೇನ್ಸನು ಬಂಡವಾಳವಾದಿ ಅರ್ಥ ವ್ಯವಸ್ಥೆಗಳಲ್ಲಿಯ ಆಗು ಹೋಗುಗಳನ್ನು ವ್ಯಾಪಕವಾಗಿ ಕಂಡಿದ್ದಾನೆ. ತೇಜಿ– ಮಂದಿಗಳ ಮೂಲವನ್ನು ಹುಡುಕಿದ್ದಾನೆ. ಇದರರ್ಥ ಈ ಪುಸ್ತಕ ತೇಜಿ ಮಂದಿಗಳ ಬಗ್ಗೆ ಮಾತ್ರ ಮರ್ಯಾದಿತವಾಗಿದೆ ಎಂದಲ್ಲ. ಬಂಡವಳವಾದ ಅರ್ಥ ವ್ಯವಸ್ಥೆಗಳಲ್ಲಿಯ ಬೇನೆಯನ್ನು ಪರಿಪರಿಸಲು ಮಾರ್ಕ್ಸ ಅವುಗಳನ್ನು ಸಾಯಿಸಿ ಬಿಡುವ ಉಪಾಯ ಸೂಚಿಸಿದ್ದ. ಆದರೆ ಕೇನ್ಸನು ಈ ಪುಸ್ತಕದಲ್ಲಿ ಮನುಷ್ಯನ ಇಚ್ಛೆಗಳು ಹಾಗೂ ಅವನ ಸುತ್ತಲಿನ ಸಾಧನ ಸಾಮುಗ್ರಿಗಳು ಇವುಗಳ ನಡುವೆ ಗ್ರಾಹ್ಯ ಒಡಂಬಡಿಕೆಯನ್ನು ಬಂಡವಳುವಾದದ ಚೌಕಟ್ಟಿನಲ್ಲಿಯೇ ತರುವದು ಸಾಧ್ಯವೆಂದು ತೋರಿಸಿ ಕೊಟ್ಟಿದ್ದಾನೆ.

ಕೇನ್ಸನ ಮೊದಲಿನ ಅರ್ಥಶಾಸ್ತ್ರಜ್ಞರ ವಿಚಾರಗಳಿಗೆ Classical School of Political Economy ಸನಾತನವಾದಿ ಅರ್ಥಶಾಸ್ತ್ರ ಎಂದು ಕರೆಯುತ್ತಾರೆ. ಅವರು (ಸ್ಮಿಥ್, ರಿಕಾರ್ಡೊ, ಮಾಲ್ಥಸ್ ಇತ್ಯಾದಿ ಅರ್ಥಶಾಸ್ತ್ರಜ್ಞರು) ಅರ್ಥವ್ಯವಸ್ಥೆಯ ಆಗು ಹೋಗುಗಳನ್ನು ಆಂಶಿಕ ದೃಷ್ಟಿಯಿಂದ ನೋಡಿದ್ದರು. ಆಂಶಿಕವಾಗಿ ಸರಿ ಎನ್ನಿಸುವ ಧೋರಣೆಗಳನ್ನು ಅವರು ಸರ್ವಸಾಮಾನ್ಯವಾಗಿಯೂ ಸೂಚಿಸುತ್ತಿದ್ದರು. ಇದರಿಂದ ಅಪೇಕ್ಷಿತ ಪರಿಣಾಮಗಳು ಕಂಡು ಬರುತ್ತಿದ್ದಿಲ್ಲ. ಕೇನ್ಸನು ಈ ದೃಷ್ಟಿಕೋನವನ್ನು ಅಲ್ಲಗಳೆದು ಸಾಕಾಲಿಕ ದೃಷ್ಟಿಕೋನದ ಪುರಸ್ಕಾರ್ತನಾದನು. ಸುಮಾರಾಗಿ ಇದೇ ಕಾರ್ಯವನ್ನು ಪದಾರ್ಥ ವಿಜ್ಞಾನದಲ್ಲಿ ಐನಸ್ಟೈನನು ಮಾಡಿದನು. ನ್ಯೂಟನ್ ಪ್ರಣೀತ ಸನಾತನವಾದಿ ಭೌತಶಾಸ್ತ್ರ (Classical Physics) ದಲ್ಲಿ ಆಂಶಿಕವಾಗಿ ಕಂಡ ಸಂಗತಿಗಳು ವ್ಯಾಪಕವಾಗಿ ಕಂಡಾಗ ತಪ್ಪಾಗುವವು ಅಥವಾ ಅಸಮಂಜಸವೆನ್ನಿಸುವವು ಎಂದು ಐನ್‌ಸ್ಟೈನನು ತನ್ನ ಸಾಪೇಕ್ಷವಾದದ ಹೊಸ ಭೌತಶಾಸ್ತ್ರದಲ್ಲಿ ತೋರಿಸಿ ಕೊಟ್ಟಿದ್ದಾನೆ. ಹೀಗೆ ಭೌತ ಶಾಸ್ತ್ರದಲ್ಲಿ ಐನಸ್ಟೈನನಿಗೆ ಇರುವ ಸ್ಥಾನ ಅರ್ಥಶಾಸ್ತ್ರದಲ್ಲಿ ಕೇನ್ಸನಿಗೆ ಇದೆ, ಕೇನ್ಸ ಪ್ರಣೀತ ಅರ್ಥಶಾಸ್ತ್ರದ ರೂಪ ರೇಷೆಗಳು ಇಂತಿವೆ:

ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗೆಲ್ಲ ಅರ್ಥಶಾಸ್ತ್ರವು ಸಾಧನ ಸಾಮುಗ್ರಿಗಳ ಕೊರತೆ (Scarcity)ಯನ್ನು ವಿಶ್ಲೇಷಿಸುವ ಶಾಸ್ತ್ರವೆಂದು ಗೊತ್ತಿರಲು ಸಾಕು. ಮನುಷ್ಯನ ಬೇಡಿಕೆಗಳ ತುಲನೆಯಲ್ಲಿ ಸಾಧನ ಸಾಮುಗ್ರಿಗಳು ಕೊರತೆಯುವಾಗಿದ್ದರಿಂದ ಆರ್ಥಿಕ ಸಮಸ್ಯೆ ನಿರ್ಮಾಣವಾಗುತ್ತದೆ. ಆದರೆ ಕೊರತೆಯಿಂದ ಮಾತ್ರ ಆರ್ಥಿಕ ಸಮಸ್ಯೆ ನಿರ್ಮಾಣವಾಗದೆ ವಿಪುಲತೆ ಮತ್ತು ತದನುಷಂಗವಾಗಿ ಬರುವ ಅಪವ್ಯಯ (Wastage) ದಿಂದಲೂ ನಿರ್ಮಾಣವಾಗುತ್ತದೆ. ಕೇನ್ಸನ ಅರ್ಥಶಾಸ್ತ್ರ ಕೊರತೆಯನ್ನು ವಿಶ್ಲೇಷಿಸುವ ಅರ್ಥಶಾಸ್ತ್ರವಾಗಿರದೆ ಅಪವ್ಯಯ ವಿವೇಚಿಸುವ ಅರ್ಥಶಾಸ್ತ್ರ (Economics of

Waste)ವಾಗಿದೆ.

ನಮ್ಮ ಬೇಡಿಕೆಗಳನ್ನು ತೃಪ್ತಪಡಿಸುವ ವಸ್ತುಗಳನ್ನು ಉತ್ಪಾದಿಸಲು ಸಾಧನ ಸಾಮುಗ್ರಿಗಳು ಬೇಕಷ್ಟೆ. ಈ ಸಾಧನ ಸಾಮುಗ್ರಿಗಳನ್ನು ಸ್ಥೂಲವಾಗಿ ಭೌತಿಕ ಹಾಗು ಮನುಷ್ಯ ಬಲ ಸಾಧನ ಸಾಮುಗ್ರಿಗಳು ಎಂಬ ಎರಡು ವರ್ಗಗಳನ್ನು ಮಾಡಬಹುದು. ಮೊದಲನೆಯ ಪ್ರಕಾರದ ಸಾಧನ ಸಾಮುಗ್ರಿಗಳು ಕೊರತೆಯ ವೈಶಿಷ್ಟ್ಯ ಹೊಂದಿವೆಯಾದ್ದರಿಂದ ಅವುಗಳನ್ನು ಹಂಚುವ (allocation) ಸಮಸ್ಯೆ ಉದ್ಭವಿಸುತ್ತದೆ. ಆದರೆ ಎರಡನೆಯ ಪ್ರಕಾರದ ಸಾಮುಗ್ರಿಯಾದ ಮನುಷ್ಯ ಬಲವನ್ನು ಹಂಚುವ ಪ್ರಶ್ನೆ ಇರದೆ ಉಪಲಬ್ಧ ಮನುಷ್ಯ ಬಲವನ್ನು ಆದಷ್ಟು ಚೆನ್ನಾಗಿ ಉಪಯೋಗಿಸಿಕೊಳ್ಳುವ (Utilization) ಸಮಸ್ಯೆ ಬರುತ್ತದೆ. ನಿರುದ್ಯೋಗ ಇದು ಮನುಷ್ಯ ಬಲದ ಅಪವ್ಯಯ. ಕಾರಣ ಈ ಅಪವ್ಯಯವನ್ನು ಆದಷ್ಟು ಮಟ್ಟಿಗೆ ನಿವಾರಿಸುವದು ಆರ್ಥಿಕ ಧೋರಣೆಯಲ್ಲಿ ಪ್ರಥಮ ಪ್ರಾಧಾನ್ಯತೆಯನ್ನು ಹೊಂದಿರಬೇಕು. ನಿರುದ್ಯೋಗ ಸಮಸ್ಯೆ ಕೇವಲ ಆರ್ಥಿಕ ಸಮಸ್ಯೆಯಾಗಿರದೆ ಮಾನಸಿಕ, ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಯಾಗಿದೆ.

ನಿರುದ್ಯೋಗ ಸಮಸ್ಯೆ ಏಕೆ ನಿರ್ಮಾಣವಾಗುತ್ತದೆ ಎಂಬುದನ್ನು ವಿಶ್ಲೇಷಿಸುವದೇ ಕೇನ್ಸನ ಅರ್ಥಶಾಸ್ತ್ರದ ಕೇಂದ್ರ ಬಿಂದುವಾಗಿದೆ. ಅವನ ಪ್ರಕಾರ ಉದ್ಯೋಗ (ಅಥವಾ ಕಾರ್ಮಿಕರಿಗಾಗಿ ಬೇಡಿಕೆ) ಪರಿಣಾಮಕಾರಕ (Effective Demand) ಬೇಡಿಕೆಯನ್ನು ಅವಲಂಬಿಸಿದೆ. ಈ ಮೊದಲು ಸನಾತನವಾದಿ ಅರ್ಥಶಾಸ್ತ್ರಜ್ಞರು ಉದ್ಯೋಗವು ವೇತನದ ದರವನ್ನು ಅವಲಂಬಿಸಿದೆ ಎಂದು ತಿಳಿದಿದ್ದರು. ವೇತನದ ದರ ಹೆಚ್ಚಿದ್ದರೆ ನಿರುದ್ಯೋಗ ಸಮಸ್ಯೆ ನಿರ್ಮಾಣವಾಗುತ್ತದೆ, ಕಾರಣ ಅದನ್ನು ನಿವಾರಿಸಲು ವೇತನದ ದರವನ್ನು ಇಳಿಸಬೇಕು ಎಂಬುದೇ ಅವರ ದೃಢ ಗ್ರಹಿಕೆ. ಪ್ರಥಮ ಮಹಾಯುದ್ಧದ ನಂತರ ಇಂಗ್ಲಂಡಿನಲ್ಲಿ ನಿರುದ್ಯೋಗ ನಿರ್ಮಾಣವಾದಾಗ ಅದರ ಪರಿಹಾರ ಹೇಗೆ ಮಾಡಬೇಕೆಂಬ ಬಗ್ಗೆ ಇಂಗ್ಲಂಡ ಸರಕಾರ ಸಮಿತಿಯೊಂದನ್ನು ನೇಮಿಸಿತು. ಆ ಸಮಿತಿಯು ಕೇನ್ಸನ ಗುರುವಾಗಿದ್ದ ಪಿಗೂನನ್ನು ಭೆಟ್ಟಿಯಾಗಲು ಅವನು ವೇತನದ ದರವನ್ನು ಇಳಿಸುವದು ಒಂದೇ ಮಾರ್ಗ ಎಂದು ಅನುಮಾನ ಮಾಡದೆ ಹೇಳಿದನು. ಕೇನ್ಸನು ಇದಕ್ಕೆ ಒಪ್ಪಲಿಲ್ಲ. ಅವನು ವೇತನದ ದರವನ್ನು ಇಳಿಸಿದರೆ ನಿರುದ್ಯೋಗ ಪರಿಹಾರವಾಗದೆ· ತದ್ವಿರುದ್ಧ ಅದು ಮತ್ತಿಷ್ಟು ಹೆಚ್ಚಾಗುವ ಭಯವನ್ನು ವ್ಯಕ್ತಪಡಿಸಿದನು. ತಾತ್ವಿಕವಾಗಿ ಜಟಿಲವೆಂದು ಕಂಡು ಬರುವ ಈ ಪರಸ್ಪರ ವಿರೋಧಿ ಮತಗಳನ್ನು ತಿಳಿದುಕೊಳ್ಳಲು ನಾವು ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ.

ನಿರುದ್ಯೋಗ ನಿವಾರಣೆಗಾಗಿ ಸನಾತನವಾದಿ ಅರ್ಥಶಾಸ್ತ್ರಜ್ಞರ ಮತವನ್ನು ಒಪ್ಪಿ ಒಂದು ಉದ್ಯೋಗ–ಅದನ್ನು ಜವಳಿ ಉದ್ಯಮೆಯೆನ್ನಿ ಅಲ್ಲಿಯ ಕಾರ್ಮಿಕರು ಕಡಿಮೆ ವೇತನ ಸ್ವೀಕರಿಸಲು ಸಿದ್ಧರಾದರು ಎಂದು ತಿಳಿಯಿರಿ. ಜವಳಿ ಉದ್ದಿಮೆಯಲ್ಲಿಯ ಕಾರ್ಮಿಕರು ಕಡಿಮೆ ವೇತನದಲ್ಲಿ ಕೆಲಸಕ್ಕೆ ಸೇರುವರು. ಅವರಿಗೆ ಸಿಗುವ ಸಂಬಳ ಈಗ ಕಡಿಮೆಯಾದ್ದರಿಂದ ಅವರೀಗ ಮೊದಲಿಗಿಂತ ಕಡಿಮೆ ವಸ್ತು ಸೇವೆಗಳನ್ನು ಕೊಳ್ಳಲು ಸಮರ್ಥರಾಗುತ್ತಾರೆ. ಇದರ ಅರ್ಥ ಸಾಮಾನ್ಯವಾಗಿ ಆಹಾರ ಧಾನ್ಯ, ಹಾಲು, ಪಾದರಕ್ಷೆ, ಫರ್ನೀಚರು, ರೇಡಿಯೋ ಮುಂತಾದ ವಸ್ತುಗಳಿಗೆ ಮೊದಲಿಗಿಂತ ಕಡಿಮೆ ಬೇಡಿಕೆ ಬರುವದು. ಈ ವಸ್ತುಗಳ ಉತ್ಪಾದಕರು ತಮ್ಮ ವಸ್ತುಗಳಿಗೆ ಕಡಿಮೆ ಬೇಡಿಕೆಬರುವದನ್ನು ಕಂಡು ಮುಂದಿನ ವರುಷ ಕಡಿಮೆ ಉತ್ಪಾದನೆ ಮಾಡುವರು. ಕಾರಣ ಈ ವಸ್ತುಗಳ ಉತ್ಪಾದಕರಿಗೆ ಮೊದಲಿನಷ್ಟು ಕಾರ್ಮಿಕರು ಬೇಕಾಗುವದಿಲ್ಲ. ಹೀಗೆ ಎಷ್ಟೋ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಾರೆ. ಹೀಗೆ ಕಡಿಮೆ ವೇತನ ದರದಿಂದ ಜವಳಿ ಕಾರ್ಮಿಕರಲ್ಲಿಯ ನಿರುದ್ಯೋಗ ಸಮಸ್ಯೆ ಪರಿಹಾರವಾದರೂ ಉಳಿದ ಉದ್ಯೋಗಗಳಲ್ಲಿ ಸಮಸ್ಯೆ ಉಂಟಾಯಿತು.

ಇಂತು ಸನಾತನವಾದಿ ಅರ್ಥಶಾಸ್ತ್ರಜ್ಞರು ಜವಳಿ ಕಾರ್ಮಿಕರಿಗೆ ಸೂಚಿಸಿದ ಮಾರ್ಗ ಸರಿಯಾಗಿರಲಿಲ್ಲ.

ಹಾಗಾದರೆ ನಿರುದ್ಯೋಗ ಸಮಸ್ಯೆಗೆ ಪರಿಹಾರ ಏನು? ಇದಕ್ಕೆ ಕೇನ್ಸನು ಪರಿಣಾಮಕಾರಿಕ ಬೇಡಿಕೆಯನ್ನು ಹೆಚ್ಚಿಸುವ ಬಗ್ಗೆ ಸೂಚಿಸುತ್ತಾನೆ. ಬಂಡವಾಳವಾದಿ ಅರ್ಥವ್ಯವಸ್ಥೆಗಳಲ್ಲಿ ಸುಮಾರಾಗಿ ಎಲ್ಲ ಉತ್ಪಾದನೆ ಖಾಸಗಿ ರಂಗದಲ್ಲಿ ಇದು . ಖಾಸಗಿ ಉತ್ಪಾದಕರು ಲಾಭಗಳಿಕೆಗಾಗಿ ಉತ್ಪಾದನೆ ಮಾಡುತ್ತಾರೆ. ಉತ್ಪಾದಕರ ಲಾಭಗಳಿಕೆ ಅವರು ಉತ್ಪಾದಿಸಿದ ವಸ್ತುಗಳ ಮಾರಾಟವನ್ನು ಅವಲಂಬಿಸಿದೆ. ವಸ್ತುಗಳ ಮಾರಾಟ ಬಳಕೆದಾರರ ಬೇಡಿಕೆಯನ್ನೂ, ಬಳಕೆದಾರರ ಬೇಡಿಕೆ ಅವರ ಬಳಿ ಇರುವ ಉತ್ಪನ್ನವನ್ನು ಮತ್ತು ಅವರ ಬಳಿಯ ಉತ್ಪನ್ನ ಅವರಿಗೆ ಉದ್ಯೋಗ ಇದೆಯೋ ಇಲ್ಲವೋ, ಇದ್ದರೆ ಉತ್ಪನ್ನ ಯಾವ ದರದಲ್ಲಿ ಸಿಗುತ್ತಿದೆ ಎಂಬುದನ್ನೂ ಅವಲಂಬಿಸಿದೆ. ಉದ್ಯೋಗ ಹಾಗು ಉತ್ಪನ್ನಗಳು ಕೆಳಮಟ್ಟದಲ್ಲಿದ್ದರೆ ಪರಿಣಾಮಕಾರಕ ಬೇಡಿಕೆ ಮಂದವಾಗಿರುವದು ಸ್ಪಷ್ಟವಾಗಿದೆ. ಬೇಡಿಕೆ ಮಂದವಾಗಿದ್ದರೆ ಉದ್ಯೋಗ ಮತ್ತು ಉತ್ಪನ್ನಗಳು ಕಡಿಮೆ ಇರುತ್ತವೆ. ಹೀಗೆ ಈ ಮೂರು ಸಂಗತಿಗಳು ಒಂದರೊಂದರ ಕಾರಣ ಮತ್ತು ಪರಿಣಾಮಗಳಾಗಿವೆ. ನಿರುದ್ಯೋಗವಿರುವ ಕಾರಣ ಪರಿಣಾಮಕಾರಕ ಬೇಡಿಕೆ ಮಂದವಾಗಿರುವದು ಮತ್ತು ಪರಿಣಾಮಕಾರಕ ಬೇಡಿಕೆ ಮಂದವಿರುವದು ನಿರುದ್ಯೋಗವಿರುವದರಿಂದ ಎಂಬ ಒಂದು ವಿಷಚಕ್ರ ಬಂಡವಾಳವಾದಿ ದೇಶಗಳಲ್ಲಿ ಚಲಿಸುತ್ತಿರುತ್ತದೆ. ಈ ವಿಷಚಕ್ರವನ್ನು ಭೇದಿಸಿದರೆ ಈ ಸಮಸ್ಯೆಗೆ ಪರಿಹಾರ ಕಂಡಂತಾಗುತ್ತದೆ. ಒಟ್ಟಾರೆ ಉದ್ಯೋಗವನ್ನು ನಿರ್ಮಿಸಬೇಕು—ಪರಿಣಾಮಕಾರಕ ಬೇಡಿಕೆಯನ್ನು ಹೆಚ್ಚಿಸಬೇಕು.

ಶ್ರೀಮಂತ ರಾಷ್ಟ್ರಗಳಲ್ಲಿ ಪರಿಣಾಮಕಾರಕ ಬೇಡಿಕೆಯನ್ನು ಕ್ರಮಶಃ ಹ್ರಾಸಗೊಳಿಸುವ ಒಂದು ಘಟಕನೆಂದರೆ ಉಳಿತಾಯ. ಭಾರತದಂತಹ ವಿಕಾಸಶೀಲವಾದ ದೇಶಗಳಲ್ಲಿ ಉಳಿತಾಯ ವರವಾಗುವದಾದರೂ ಅಮೇರಿಕೆಯಂತಹ ಅಭಿವೃದ್ಧ ದೇಶಗಳಲ್ಲಿ ಉಳಿತಾಯ ಶಾಪವಾಗುವದು. ಬಂಡವಳವಾದಿ ಯಂತ್ರವು ಅಬಾಧಿತವಾಗಿ ನಡೆಯಲು ಉಳಿತಾಯ ಅದಷ್ಟು ಕಡಿಮೆಯಾಗಬೇಕು. ಕೇನ್ಸನು ಉಳಿತಾಯದ ದುಷ್ಪರಿಣಾಮಗಳನ್ನು ತೋರಿಸಿ ಕೊಡಲು ಬಾಳೆ ಹಣ್ಣುಗಳ ಉದಾಹರಣೆಯೊಂದನ್ನು ಕೊಡುತ್ತಾನೆ.

ಕೇವಲ ಬಾಳೆ ಹಣ್ಣುಗಳ ಹುಟ್ಟುವಳಿ ಮತ್ತು ಬಳಕೆ ಮಾಡುವ ದೇಶ ಒಂದಿದೆ ಎಂದು ತಿಳಿಯಿರಿ. ಅಲ್ಲಿಯ ಉತ್ಪಾದನೆ ಬರೀ ಬಾಳೇ ಹಣ್ಣುಗಳು, ಮತ್ತು ಜನರ ಆಹಾರವೂ ಬರೀ ಬಾಳೆ ಹಣ್ಣುಗಳು. ಆದರೆ ಎಲ್ಲ ಪ್ರಕಾರದ ವಿನಿಮಯಗಳಿಗಾಗಿ ಹಣವನ್ನು ಉಪಯೋಗಿಸುತ್ತಾರೆ ಎಂದಿರಲಿ. ಅಂತಹ ದೇಶದಲ್ಲಿ ಒಂದು ವರ್ಷ ಕೆಲ ಬಳಕೆದಾರರು ಉಳಿತಾಯ ಮಾಡುವ ಹುರುಪಿನಿಂದ ತಾವು ಈ ವರೆಗೆ ಕೊಳ್ಳುತ್ತಿದ್ದ ಪ್ರಮಾಣದಲ್ಲಿ ಬಾಳೆ ಹಣ್ಣುಗಳನ್ನು ಕೊಳ್ಳದೆ ಕಡಿಮೆ ಕೊಳ್ಳುವರು ಎಂದು ತಿಳಿಯಿರಿ. ಅವರು ಉಳಿತಾಯ ಮಾಡಿದ ಹಣವನ್ನು ಗಡಿಗೆ ಮಡಿಕೆಗಳಲ್ಲಿ ಬಚ್ಚಿಡುತ್ತಾರೆ...ಪರಿಣಾಮ? ಪ್ರಪ್ರಥಮವಾಗಿ ಬೇಡಿಕೆ ಇಳಿದದ್ದರಿಂದ, ಬಾಳೆ ಹಣ್ಣುಗಳ ಬೆಲೆ ಕಡಿಮೆಯಾಗುತ್ತದೆ. ಬಳಕೆದಾರರಿಗೆ ಇದರಿಂದ ಸಂತಸವೆನೋ ಆಗಬಹುದು. ಆದರೆ ಉತ್ಪಾದಕರಿಗೆ ಲಾಭ ಕಡಿಮೆ ಸಿಗುವದರಿಂದ ಅವರು ದುಃಖ ಪೀಡಿತರಾಗುತ್ತಾರೆ. ಅನಿವಾರ್ಯವಾಗಿ ಮುಂಬರುವ ವರ್ಷದಲ್ಲಿ ಅವರು ಉತ್ಪಾದನೆಯ ಪ್ರಮಾಣವನ್ನು ಕಡಿಮೆ ಮಾಡುತ್ತಾರೆ. ಗತ ವರ್ಷಗಳಲ್ಲಿಯ ಪ್ರಮಾಣದಲ್ಲಿ ಮುಂಬರುವ ವರ್ಷ ಬಾಳೆ ಹಣ್ಣುಗಳ ಹುಟ್ಟುವಳಿ ಮಾಡುವದಿಲ್ಲವಾದ್ದರಿಂದ, ಕಾರ್ಮಿಕರೂ ಗತ ವರ್ಷಗಳ ಪ್ರಮಾಣದಲ್ಲಿ ಬೇಕಾಗುವದಿಲ್ಲ. ಇಂತು ಕೆಲ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಾರೆ. ಪ್ರಚಲಿತ ವರ್ಷಾಂತ್ಯದಲ್ಲಿ ಹೇಗೆ ಉತ್ಪಾದನೆ ಹಾಗೂ ಉದ್ಯೋಗ ಎರಡೂ ಕಡಿಮೆಯಾಗುತ್ತವೆ.

ಉಳಿತಾಯ ಮಾಡಿದ ಮಹಾಶಯರು ತಮ್ಮ ಈ ಸದ್ಗುಣವನ್ನು (!) ಇದೇ ರೀತಿ ಬೆಳಿಸಿಕೊಂಡು ಹೋದರೆ ಆ ದೇಶಕ್ಕೆ ದುರ್ದಶೆ ಬರುವದರಲ್ಲಿ ಸಂಶಯವೇ ಇಲ್ಲ. ಕಾರಣ ಉಳಿತಾಯ ಸದ್ಗುಣವೋ ಅಥವಾ ದುರ್ಗುಣವೋ ಎಂಬ ವಿಚಾರ ಮಾಡಬೇಕಾಗುತ್ತದೆ. ಪ್ರಗತಿಪರ ಬಂಡವಳವಾದ ಅರ್ಥ ವ್ಯವಸ್ಥೆಗಳಲ್ಲಿ ಉಳಿತಾಯ ಮೇಲೆ ತೋರಿಸಿದಂತೆ ದುರ್ದಶೆಯ ಬೀಜವಾಗಿದೆ. ಉಳಿತಾಯವು ಪರಿಣಾಮಕಾರಕ ಬೇಡಿಕೆಯನ್ನು ಕಡಿಮೆ ಮಾಡುತ್ತದೆ, ಅದರಿಂದಾಗಿ ನಿರುದ್ಯೋಗ ನಿರ್ಮಾಣವಾಗುತ್ತದೆ.

ಪರಿಣಾಮಕಾರಕ ಬೇಡಿಕೆಯ ಮೇಲೆ ಇಷ್ಟೆಲ್ಲ ಅವಲಂಬಿಸಿದೆ. ಆದ್ದರಿಂದ ಅದು ಉತ್ತೇಜಿತವಾಗಬೇಕು. ಇದು ಬಂಡವಾಳವಾದದ ಸಾಮಾನ್ಯಸ್ಥಿತಿಯಲ್ಲಿ, ಅವಶ್ಯವಾಗಿದೆ. ತದ್ವಿರುದ್ಧವಾಗಿ ತನ್ನಷ್ಟಕ್ಕೆ ಇದ್ದ ಬಂಡವಳವಾದ ಅರ್ಥ ವ್ಯವಸ್ಥೆ ನಿರುದ್ಯೋಗ ಬಡತನಗಳ ಅಪ್ಪುಗೆಯಲ್ಲಿ ಸಿಲುಕಿ ಬೀಳುತ್ತದೆ. ಇದನ್ನು ತಪ್ಪಿಸಬೇಕಾದರೆ, ಕೇನ್ಸನ ಸೂಚನೆಯ ಪ್ರಕಾರ, ಸರಕಾರವು ಸಕ್ರಿಯ ಧೋರಣೆಯನ್ನು ಅಂಗೀಕರಿಸಬೇಕು.

ಈ ಮೊದಲು ಸನಾತನವಾದಿ ಅರ್ಥಶಾಸ್ತ್ರಜ್ಞರು ಬಂಡವಾಳವಾದ ಅರ್ಥ ವ್ಯವಸ್ಥೆಯಲ್ಲಿ ಸರಕಾರವು ನಿರ್ಹಸ್ತಕ್ಷೇಪ (Laissez faire) ಕೆ ಧೋರಣೆಯನ್ನು ತಾಳಬೇಕು. ಜನರ ಆರ್ಥಿಕ ಜೀವನದಲ್ಲಿ ಬದಲು ತರುವ ಗೊಡವೆಗೆ ಬೀಳಬಾರದು ಎಂಬ ನಿರ್ಧಾರದವರಾಗಿದ್ದರು. ಅವರ ಪ್ರಕಾರ ಸರಕಾರಿ ಹಸ್ತಕ್ಷೇಪದಿಂದ ಜನರ ಅಹಿತವಾಗುವದೇ ವಿನಾ ಹಿತವಾಗುವದಿಲ್ಲ. ಈ ವಿಚಾರವನ್ನು ಕೇನ್ಸನು ನಿರಾಕರಿಸಿ ಸರಕಾರವು ಅರ್ಥ ವ್ಯವಸ್ಥೆಯಲ್ಲಿಯ ಆಗುಹೋಗುಗಳನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡುತ್ತಿರಬೇಕಷ್ಟೇ ಅಲ್ಲ, ಅವಶ್ಯಕತೆ ಕಂಡು ಬಂದ ತಕ್ಷಣ ಕಾರ್ಯ ಕ್ಷೇತ್ರಕ್ಕೆ ಇಳಿಯಬೇಕು ಎಂದು ವಾದಿಸಿದ್ದಾನೆ. ನಿರುದ್ಯೋಗ ಹಾಗು ಮಂದಿಗಳಂತಹ ಆರ್ಥಿಕ ಅನಿಷ್ಟಗಳು ಉದ್ಭವಿಸಿದರೆ ಸರಕಾರ ಹೊಸ ಹೊಸ ಸಾರ್ವಜನಿಕ ಕಾಮಗಿರಿಗಳನ್ನು ಕೈಯಲ್ಲಿ ತೆಗೆದುಕೊಂಡು ಅದರಲ್ಲಿ ಕೆಲ ಜನರಿಗೆ ಉದ್ಯೋಗ ನಿರ್ಮಿಸಿ ನಿರುದ್ಯೋಗವನ್ನು ನಿವಾರಿಸಬೇಕು. ಬಂಡವಾಳವಾದ ಅರ್ಥವ್ಯವಸ್ಥೆ ಎಂದರೆ ರಸ್ತೆಯಲ್ಲಿ ಬಂದು ಬಿದ್ದ ಬಸ್ಸಿನಂತಿದೆ. ಅದನ್ನು ದಬ್ಬಿದರೆ ಮತ್ತೆ ಪ್ರಾರಂಭವಾಗಿ ಓಡಹತ್ತುತ್ತದೆ. ಸರಕಾರ 'ಒದೆತ' ಕೊಡುವ ಕೆಲಸ ಮಾಡಬೇಕು. ನಿರುದ್ಯೋಗವಿದ್ದಾಗ ಸಾರ್ವಜನಿಕ ಕಾಮಗಿರಿಗಳನ್ನು ಪ್ರಾರಂಭಿಸಿದರೆ ಕೆಲ ಮಟ್ಟಿಗೆ ಉದ್ಯೋಗ ನಿರ್ಮಾಣವಾಗುತ್ತದೆ. ಅದರಿಂದ ಪರಿಣಾಮಕಾರಕ ಬೇಡಿಕೆ ಹೆಚ್ಚಾಗುತ್ತದೆ. ಆ ನಂತರ ಉಳಿದ ಜನರಿಗೆ ಉದ್ಯೋಗ ತನ್ನಿಂದ ತಾನೇ ನಿರ್ಮಾಣವಾಗುತ್ತದೆ. ಇಂತು ಪ್ರಾರಂಭಿಕ ಚೈತನ್ಯ ನಿರ್ಮಿಸುವ ಕೆಲಸವನ್ನು ಸರಕಾರ ಕೈಕೊಳ್ಳಬೇಕು. ಇದಕ್ಕಾಗಿ ಸರಕಾರಿ ಸಮತೋಲ ಅರ್ಥ ಸಂಕಲ್ಪ (Balanced Budget) ಮೊದಲಾದ ಭ್ರಾಮಕ ಕಲ್ಪನೆಗಳನ್ನು ಬದಿಗಿರಿಸಿ ಬೇಕೆಂದೇ ಆದಾಯ ಕಡಿಮೆ ಮತ್ತು ಖರ್ಚು ಹೆಚ್ಚಿರುವ ಅಸಮತೋಲ ಅಂದಾಜು ಪತ್ರಿಕೆಯನ್ನು ತಯಾರಿಸಬೇಕು. ಕೇನ್ಸನು ನಿರುದ್ಯೋಗವಿರುವಾಗ ಸಾರ್ವಜನಿಕ ಕಾಮಗಿರಿಗಳಿಗೆ ಎಷ್ಟೊಂದು ಮಹತ್ವ ಕೊಡುತ್ತಾನೆಂದರೆ, ಸರಕಾರ ಕೈಕೊಳ್ಳಬಹುದಾದ ಯಾವುದೇ ಕಾಮಗಿರಿ ಇರದಿದ್ದರೆ, ಕೆಲ ಜನರನ್ನು ನೆಲ ಹಡ್ಡಲು ಮತ್ತು ಇನ್ನು ಕೆಲ ಜನರನ್ನು ಹಡ್ಡಿದ ನೆಲವನ್ನು ಮುಚ್ಚಲು ಕೆಲಸಕ್ಕೆ ಹಚ್ಚಬೇಕು ಎನ್ನುತ್ತಾನೆ.

ಕೇನ್ಸನ ಈ ವಿಚಾರಗಳಿಗೆ ಜಾಗತಿಕ ಮಹಾಮಂದಿಯ ಕಾಲದಲ್ಲಿ ಮುದುಡಿಕೊಂಡು ಬಿದ್ದಿದ್ದ ಅಮೇರಿಕೆಯು ಪ್ರಯೋಗ ಶಾಲೆಯಾಯಿತು. ಅಧ್ಯಕ್ಷ ರೂಜವೆಲ್ಟನು ಕೇನ್ಸನು ಸೂಚಿಸಿದ ಧೋರಣೆಗಳನ್ನು ಪ್ರಯೋಗಕ್ಕೆ ಇಳಿಸಿದ. ಅನೇಕಾನೇಕ ಸಾರ್ವಜನಿಕ ಕಾಮಗಿರಿಗಳನ್ನು ಅಮೇರಿಕಾ ಸರಕಾರ ತೆಗೆದುಕೊಂಡಿತು. ಟೆನಿಸಿ ವ್ಹ್ಯಾಲಿ ಆಥಾರಿಟಿ (T V A) ಎಂದು ಕರೆಯಲ್ಪಡುವ ಪ್ರಚಂಡ

ವಿದ್ಯುತ್ ಸ್ಥಾವರ ಇದೇ ಕಾಲದಲ್ಲಿ ಪ್ರಾರಂಭವಾಯಿತು. ಪಬ್ಲಿಕ್ ವರ್ಕ್ಸ್ ಆಡ್ಮಿನಿಸ್ಟ್ರೇಶನ್ (P W A) ಎಂದು ಕಾರ್ಯಕ್ರಮದಲ್ಲಿ ಅನೇಕ ನಗರಗಳಲ್ಲಿ ರಸ್ತೆಗಳು, ನಗರಭವನಗಳು ರಾಷ್ಟ್ರೀಯ ಹೆದ್ದಾರಿಗಳು ಮಹಾಪೂರ ನಿಯಂತ್ರಣ ಕೇಂದ್ರಗಳು ಪ್ರಾರಂಭವಾದವು. ಇದರಿಂದ ಲಕ್ಷಾವಧಿ ಜನರಿಗೆ ಸರಕಾರಿ ಕಾಮಗಿರಿಗಳಲ್ಲಿ ಉದ್ಯೋಗ ಲಭಿಸಿತು. ಆದರೆ ಒಟ್ಟು ಇದಕ್ಕಿಂತ ಎಷ್ಟೋ ಪಟ್ಟು ಜನರಿಗೆ ಕೆಲಸ ಸಿಕ್ಕಿತು, ಏಕೆಂದರೆ ಕೆಲಸ ಸಿಕ್ಕ ಜನ ವಿವಿಧ ವಸ್ತುಗಳಿಗೆ ಬೇಡಿಕೆ ಮಾಡಹತ್ತಿದರು. ಅದರಿಂದ ಮಾರುಕಟ್ಟೆಯಲ್ಲಿ ಚೈತನ್ಯ ನಿರ್ಮಾಣವಾಯಿತು. ಚಿಲ್ಲರೆ ವ್ಯಾಪಾರಿಗಳು ಠೋಕ ವ್ಯಾಪಾರಿಗಳಿಗೆ ಮತ್ತು ಠೋಕ ವ್ಯಾಪಾರಿಗಳು ಉತ್ಪಾದಕರಿಗೆ ಹೆಚ್ಚು ವಸ್ತುಗಳಿಗಾಗಿ ಆರ್ಡರು ಕೊಡಹತ್ತಿದರು, ಇದರಿಂದ ಉತ್ಪಾದಕರು ಹೆಚ್ಚು ಜನ ಕಾರ್ಮಿಕರನ್ನು ತಮ್ಮ ಕಾರಖಾನೆಗಳಲ್ಲಿ ಕೆಲಸಕ್ಕೆ ತೆಗೆದುಕೊಂಡರು. ಈ ರೀತಿ ಒಟ್ಟು ಉದ್ಯೋಗ ಮೂಲ ಸರಕಾರ ನಿರ್ಮಿಸಿದ. ಉದ್ಯೋಗದ ಅನೇಕ ಪಟ್ಟುಗಳಾಗಿತ್ತು. ಈ ಸಂಗತಿಯನ್ನು ಕೇನ್ಸನು ಉದ್ಯೋಗ ಗುಣಕ* (Employment Multiplier) ಎಂಬ ಕಲ್ಪನೆಯಿಂದ ವಿಶದಪಡಿಸಿದ್ದಾರೆ.

ಕೇನ್ಸನ ಅರ್ಥಶಾಸ್ತ್ರೀಯ ವಿಚಾರಗಳು ಆರ್ಥಿಕ ಧೋರಣೆಗಳ ವ್ಯಾಪ್ತಿ ದೇಶಗಳ ಸೀಮೆಗಳಿಗೆ ಮರ್ಯಾದಿತವಾಗಿರಲಿಲ್ಲ. ಅವು ಜಾಗತಿಕ ಪಾತಳಿಯನ್ನು ಹೊಂದಿದ್ದವು. ೧೯೧೯ ರಿಂದ ೩೯ ರ ಅಂತರ್‌ಯುದ್ಧ ಕಾಲದಲ್ಲಿ ಜಾಗತಿಕ ವ್ಯಾಪಾರ ಯಾವುದೇ ನಿಯಮ ಅಥವಾ ರೂಢಿಗಳಿಲ್ಲದೆ, ಸಿಕ್ಕಾಪಟ್ಟೆ ನಡೆದಿತ್ತು, ಪ್ರತಿದೇಶ ಸ್ವಾವಲಂಬನೆಯ ಹುಂಬತನದಿಂದ ತನ್ನ ಮಟ್ಟಿಗೆ ಆರ್ಥಿಕ ವಿಕಾಸದ ಕಾರ್ಯಕ್ರಮ ಹಾಕಿಕೊಳ್ಳಹತ್ತಿತು. ಕಾರಣ ಪರದೇಶಗಳೊಂದಿಗಿನ ಆರ್ಥಿಕ ಸಂಪರ್ಕವನ್ನು ಅನಿವಾರ್ಯದ ಮಟ್ಟಿಗೆ ಮಾತ್ರ ಇಟ್ಟುಕೊಳ್ಳುತ್ತಿತ್ತು. ಇದರಿಂದ ಜಾಗತಿಕ ವ್ಯಾಪಾರ, ಉತ್ಪಾದನೆ– ಉದ್ಯೋಗ ಇವೆಲ್ಲ ಕೆಳಮಟ್ಟವನ್ನು ಕಂಡಿದ್ದವು. ಸ್ವಹಿತ ಸಾಧನೆಯ ಓಟದಲ್ಲಿ ಎಷ್ಟೋ ದೇಶಗಳು ದ್ವಿದಿಶಾತ್ಮಕ ಕರಾರುಗಳನ್ನು ಹಾಕಿಕೊಂಡು ಮರ್ಯಾದಿತ ವ್ಯಾಪಾರಮಾಡುತ್ತಿದ್ದವು. ಈ ಎಲ್ಲ ಸಂಗತಿಗಳು ಜಾಗತಿಕ ಅರ್ಥ ವ್ಯವಸ್ಥೆಯ ದೃಷ್ಟಿಯಿಂದ ತೀರ ನಿಂದ್ಯವಾಗಿದ್ದವು. ಅದಲ್ಲದೆ ದೀರ್ಘಕಾಲದಲ್ಲಿ ಸ್ವಹಿತಕ್ಕೂ ಹಾನಿಕಾರಕವಾಗಿದ್ದವು. ಇದನ್ನರಿತ ಕೇನ್ಸನು ದ್ವಿತೀಯ ಮಹಾಯುದ್ಧ ಕೊನೆಯ ಹಂತದಲ್ಲಿದ್ದಾಗಲೇ ಅಂತಾರಾಷ್ಟ್ರೀಯ ನಾಣ್ಯ ನಿಧಿ International Monetary fumd) ಮತ್ತು ಜಾಗತಿಕ ಬ್ಯಾಂಕು (International Bank for Reconstruction and Development) ಎಂಬ ಎರಡು ಸಂಸ್ಥೆಗಳನ್ನು ಸ್ಥಾಪಿಸುವ ವಿಚಾರವನ್ನು ಪ್ರಚುರಪಡಿಸಿದನು. ಅವನ ಈ ವಿಚಾರದ ಮಹತ್ವವನ್ನು ಅರಿತ ದೇಶಗಳು ಬ್ರೆಟನ್‌ವುಡ್ಸ ಎಂಬಲ್ಲಿ ೧೯೪೪ ರಲ್ಲಿ ಕಲೆತು ಈ ಎರಡು ಅವಳಿ ಸಂಸ್ಥೆಗಳನ್ನು ಸ್ಥಾಪಿಸಿದವು. ಜಾಗತಿಕ ವ್ಯಾಪಾರ ಮತ್ತು ದೇಶಗಳ ಅಭಿವೃದ್ಧಿ ಸುಲಭವಾಗಿ ಮತ್ತು ಸುರಳೀತವಾಗಿ ಸಾಗಲು ಈ ಸಂಸ್ಥೆಗಳು ಸ್ತುತ್ಯ ಕಾರ್ಯ ನಿರ್ವಹಿಸುತ್ತಿವೆ.

ಈ ರೀತಿ ಕೇನ್ಸನು ಬಂಡವಾಳುವಾದ ಅರ್ಥವ್ಯವಸ್ಥೆಗಳನ್ನು ಅವುಗಳ ಅನೇಕ ಸಮಸ್ಯೆಗಳಿಂದ ಮುಕ್ತಪಡಿಸಿದನು. ಅವನ ವಿಚಾರಗಳು ಮತ್ತು ಅವನು ಸೂಚಿಸಿದ ಧೋರಣೆಗಳು ಭಾರತದಂತಹ ಕೃಷಿ ಪ್ರಧಾನ ದೇಶಗಳಿಗೆ ಅನ್ವಯಿಸುವದಿಲ್ಲ. ನಮ್ಮ ದೇಶದಲ್ಲಿಯ ಉತ್ಪಾದನೆ, ಉದ್ಯೋಗ ಇವೆಲ್ಲ ಮಳೆರಾಯನ ಕೃಪೆಯ ಮೇಲೆ ಅವಲಂಬಿಸಿವೆಯಾದ್ದರಿಂದ ಕೇನ್ಸನ ಧೋರಣೆಗಳು ಇಲ್ಲಿ ನಾಟುವದಿಲ್ಲ, ಈ ಸಂಗತಿಯನ್ನು ಭಾರತದ ಅಗ್ರಗಣ್ಯ ಅರ್ಥಶಾಸ್ತ್ರಿ ಅದರಲ್ಲೂ ಕನ್ನಡಿಗ

* Employment Multiplier ಸಂಜ್ಞೆಯ ಜನಕ ಆರ್. ಎಫ್ ಕಾಹ್ನ ಎಂಬ ಕೇನ್ಸನ ಸಮಕಾಲಿನ ಅರ್ಥಶಾಸ್ತ್ರಜ್ಞ.

ರಾದ ಡಾ. ವ್ಹಿ. ಕೆ. ಆರ್. ವ್ಹಿ. ರಾವ್ ಅವರು ತೋರಿಸಿಕೊಟ್ಟಿದ್ದಾರೆ. ಇತ್ತೀಚಿನ ಬೆಲೆಗಳ ಏರಿಕೆಯ ಸಂದರ್ಭದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿಯೂ ಕೇನ್ಸನ ವಿಚಾರಗಳ ಔಚಿತ್ಯ ವನ್ನು ಶಂಕಿಸಲಾಗುತ್ತಿದೆ. ನಿರುದ್ಯೋಗ ನಿವಾರಣೆ ಮತ್ತು ಬೆಲೆ ಏರಿಕೆ ತಡೆಗಟ್ಟುವ ಈ ಪರಸ್ಪರ ವಿರೋಧಿ ಸಂಗತಿಗಳಲ್ಲಿ ಯಾವು ದಕ್ಕೆ ಪ್ರಾಧಾನ್ಯತೆಯನ್ನೀಯಬೇಕು ಎಂದು ಅರ್ಥಶಾಸ್ತ್ರಿಗಳಿಗೆ ಕೂಡ ದಿಗಿಲುಬಿದ್ದಿದೆ. ಆದರೂ ಕೇನ್ಸನ ವಿಚಾರಗಳಲ್ಲಿಯ ಸತ್ವವು ಅವನನ್ನು ಅಜರಾಮರ ಅರ್ಥಶಾಸ್ತ್ರಜ್ಞ ನನ್ನಾಗಿ ಮಾಡಿದಲ್ಲಿ ಸೋಜಿಗವಿಲ್ಲ.

ಕೇನ್ಸನ ಖಾಸಗಿ ಜೀವನವೂ ಅವನ ಸಾರ್ವ ಜನಿಕ ಜೀವನದಷ್ಟೇ ರಂಗುಮಯವಾಗಿತ್ತು. ರಶಿಯ ದೇಶದ ನೃತ್ಯ ಚಂದ್ರಿಕೆ ಲಿಡಿಯಾ ಲೊಪೊಕೊವಾ ಎಂಬವಳನ್ನು ವಿವಾಹ ವಾಗಿದ್ದ. ಲಲಿತ ಕಲೆ, ಸಾಹಿತ್ಯಗಳಲ್ಲಿ ಅವನಿಗೆ ಅಪಾರ ರುಚಿ, ಅವನ ಮನೆ ಎಂದರೆ ಜಾಗತಿಕ ಖ್ಯಾತಿಯ ಕಲಾವಿದರ ಕೃತಿಗಳ ಒಂದು ಸಂಗ್ರಹಾಲಯವಾಗಿತ್ತು. ತಾನು ಹೋದ ವಿವಿಧ ದೇಶಗಳಲ್ಲಿಯ ಆರ್ಥಿಕ ಸಮ್ಮೇಳನಗಳು ಮುಗಿಯುತ್ತಲೇ ಅಲ್ಲಿಯ ಕಲಾಕೃತಿಗಳ ಮಾರುಕಟ್ಟೆಗೆ ಧಾವಿಸುವದು ಅವನ ಚಟ, ಬ್ರೆಟನ್‌ವುಡ್ಸ ಸಮ್ಮೇಳನಕ್ಕೆ ಹೋದಾಗ ಅವನ ಆರೋಗ್ಯ ಅವನ ಈ ಚಟ ಪೂರ್ತಿ ಮಾಡಿಕೊಳ್ಳಲು ಕೊಡಲಿಲ್ಲ. ಅವನು ಸುಮಾ ರಾಗಿ ಸತ್ತು ಉಳಿದ, ತಿರುಗಿ ಬಂದ ನಂತರವೂ ಅವನು ಬಹಳ ಕಾಲ ಉಳಿಯಲಿಲ್ಲ. ೨೧ ಎಪ್ರಿಲ್ ೧೯೪೬ ರಂದು ಅವನ ಪ್ರಾಣ ಪಕ್ಷಿ ಹಾರಿಹೋಯಿತು. ಅವನು ಹುಟ್ಟಿದಾಗ ಜಗತ್ತಿನ ಏಕಮೇವಾದ್ವಿತೀಯ ರಾಷ್ಟ್ರವಾಗಿ ಮೆರೆಯುತ್ತಿದ್ದ ಇಂಗ್ಲಂಡ ಅವನು ತೀರಿ ಕೊಂಡಾಗ ಒಂದು ಸಾಮಾನ್ಯ ದೇಶವಾಗಿತ್ತು. ಇಂಗ್ಲಂಡದ ಪ್ರತಿಯೊಬ್ಬ ನಾಗರಿಕನಿಗೂ ತನ್ನ ದೇಶ ಮತ್ತೆ ಮೊದಲಿನಂತಾಗುವದು ಎಂಬ ಭ್ರಮೆ, ಆ ಭ್ರಮೆಯ ಸಾಕಾರಕ್ಕೆ ಕೇನ್ಸ- ನಂತಹ ಪ್ರಭೃತಿಗಳು ಕಾರಣೀಭೂತರಾಗು ವರು ಎಂದು ಅವರ ವಿಶ್ವಾಸ. ಅರ್ಥ ಶಾಸ್ತ್ರದ ಮೂಲತತ್ವಗಳನ್ನೂ ಅರಿಯದ ಇಂಗ್ಲಂಡದ ನಾಗರಿಕನೊಬ್ಬ ಕೇನ್ಸ ಸತ್ತ ಸುದ್ದಿ ಕೇಳಿ ಆ ಸಂಧಿಕಾಲದಲ್ಲಿ ಅವನನ್ನು ದೇವರು ತಮ್ಮಿಂದ ಒಯ್ಯಬಾರದಾಗಿತ್ತು ಎಂದು ಕ್ಷೋಭೆ ವ್ಯಕ್ತಪಡಿಸಿದನು. ಕೇನ್ಸನ ಮರಣದ ವರೆಗೆ ಅವನ ತಾಯಿ ತಂದೆ ಇಬ್ಬರೂ ಜೀವಂತವಾಗಿದ್ದರು. ಧೂಮಕೇತುವಿನಂತೆ ತಮ್ಮ ಜೀವನದಲ್ಲಿ ಬಂದು ಹೋದ ತಮ್ಮ- ಮಗನ ಅಂತ್ಯದಲ್ಲಿ ಆ ತಂದೆ ತಾಯಿಗಳಿಗಾದ ದುಃಖ ಕೇವಲ ಖಾಸಗಿಯಾಗಿರಲಿಲ್ಲ.

ಕೇನ್ಸನು ಅರ್ಥಶಾಸ್ತ್ರಕ್ಕೆ ಕೊಡಮಾಡಿದ ದೇಣಿಗೆಯ ಮಹತ್ವವನ್ನು ಶಬ್ದಗಳಲ್ಲಿ ಅಂಕಿತ ಪಡಿಸುವದು ಅಶಕ್ಯ. ಅವನ ಮಹತ್ವವನ್ನು ಅವನ ಶಬ್ದಗಳಲ್ಲೇ ಹೀಗೆ ಹೇಳಬಹುದು. "ಅರ್ಥಶಾಸ್ತ್ರಜ್ಞ ಮತ್ತು ರಾಜ್ಯ ಶಾಸ್ತ್ರಜ್ಞರ ವಿಚಾರಗಳು, ಅವು ಸರಿ ಇದ್ದರೂ ಬಂತು ಅಥವಾ ತಪ್ಪಿದ್ದರೂ ಬಂತು, ನಾವು ಸಾಮಾನ್ಯವಾಗಿ ತಿಳಿದುಕೊಳ್ಳುವದಕ್ಕಿಂತ ಹೆಚ್ಚು ಶಕ್ತಿಯುಳ್ಳವಾಗಿವೆ. ಈ ಜಗ ತ್ತನ್ನು ಆ ವಿಚಾರಗಳ ವಿನಾ ಇನ್ನಾರು ಆಳುವರು ?" ✡

ಸೌಂದರ್ಯ ಸ್ಪರ್ಧೆಯಲ್ಲಿ ಆಯ್ಕೆಯಾದವಳೊಬ್ಬಳು ಹೇಳಿದ್ದು: "ಇದಕ್ಕೆಲ್ಲಾ ನನ್ನ ಕೌಟುಂಬಿಕ ಸದಸ್ಯರ ಸಹಾಯ ಸಹಕಾರ, ಪ್ರೋತ್ಸಾಹಗಳೇ ಕಾರಣವೆನ್ನ ಬೇಕು. ಅದರಲ್ಲೂಂತೂ ನನ್ನ ತಾಯಿಯನ್ನಿಲ್ಲಿ ನಾನು ಕೃತಜ್ಞತೆಯಿಂದ ಸ್ಮರಿಸಲೇ ಬೇಕು. ಅವಳಿಲ್ಲದಿದ್ದರೆ ನಾನಿಂದು ಇಲ್ಲಿ ಇರುತ್ತಲೇ ಇರಲಿಲ್ಲ."

★ ನೀಳಾದೇವಿ

ಬೆಲ್ ಹಾಗೂ ಮೇಬಲ್ ಹಬ್ಬರ್ಡ್

ಮೇಬಲ್ ಹಬ್ಬರ್ಡ್! ಈ ಹೆಸರು ಯಾರಿಗಾದರೂ ಪರಿಚಿತವೇ? ಖಂಡಿತವಾಗಿಯೂ ಬಹುಪಾಲು ಜನಕ್ಕೆ ಗೊತ್ತಿರಲಾರದು. ಈ ವರ್ಷ ದೂರವಾಣಿಯ ಆವಿಷ್ಕಾರದ ಶತಾಬ್ದಿ. ಆದರೆ ಇದರ ಜನನಕ್ಕೆ ಸ್ಫೂರ್ತಿ ಕೊಟ್ಟಾಕೆ ಒಂದು ಹೆಣ್ಣು. ತಾನೇ ಕಿವುಡಾಗಿದ್ದರೂ ದೂರವಾಣಿಗೆ ಇವಳು ಕಾರಣೀಭೂತಳಾದಳು.


ದೂರವಾಣಿಯ ಜನ್ಮದಾತ ಅಲೆಕ್ಸಾಂಡರ್ ಗ್ರಹಾಂ ಬೆಲ್ ಹುಟ್ಟಿದ್ದು ಸಾವಿರದ ಎಂಟನೂರ ನಲವತ್ತೇಳರಲ್ಲಿ. ಎಡಿನ್‌ಬರೋದ ಧ್ವನಿಶಾಸ್ತ್ರ (ಫೊನೆಟಿಕ್ಸ್)ದ ಪ್ರಖ್ಯಾತ ವಿದ್ವಾಂಸನಾದವನ ಪುತ್ರನಿವನು. ಮೊದಲಿನಿಂದ ಧ್ವನಿಯ ಬಗ್ಗೆ ವಿಶೇಷ ಕುತೂಹಲ ಅ ಗ್ಸಾಂ ರ್ ಗ್ರಹಾಂ ಬೆಲ್ಲನಿಗೆ. ಆದರೂ ಆತ ಮೆಚ್ಚಿ ಕೈಹಿಡಿದಾಕೆ ಧ್ವನಿಯ ಅಲೆಯೇ ಕೇಳದಂಥಹ ಒಂದು ಹೆಣ್ಣು!

ಗ್ರಹಾಂ ಬೆಲ್ ಜರ್ಮನಿಯಲ್ಲಿ ಪಿ. ಎಚ್ ಡಿ. ಪಡೆದ ಮೇಲೆ ಎರಡು ವರ್ಷ ಬೋಸ್ಟನ್ನಿನಲ್ಲಿ ಕಿವುಡು ಮಕ್ಕಳ ಶಿಕ್ಷಣಕ್ಕಾಗಿ ಶಿಕ್ಷಕರನ್ನು ತರಬೇತಿಗೊಳಿಸತೊಡಗಿದ. ಗ್ರಹಾಂ ಬೆಲ್ಲನೇ ಮೊದಲಿಗೆ ಕಿವುಡರಿಗೆ ಮಾತಾಡಬಲ್ಲ ಶಿಕ್ಷಣ ಆರಂಭಿಸಿದ್ದು.

ಕಿವುಡರಿಗೆ ತುಟಿಯುಲುಗುವಿಕೆಯಿಂದ ಮಾತಿನ ಶಿಕ್ಷಣ ಕಲಿಸದೇ ಇದ್ದರೆ ಅವರಂತದ ಮೂಕರೇ ಆಗುತ್ತಿದ್ದರು. ಗ್ರಹಾಂ ಬೆಲ್ಲನ ಶ್ರದ್ಧೆಯಿಂದಾಗಿ ಮೂಕರೂ ವಾಚಾಳಿಗಳಾದರು.

ಗ್ರಹಾಂ ಬೆಲ್ ಧ್ವನಿಶಾಸ್ತ್ರದಲ್ಲಿ ಇಷ್ಟೊಂದು ಆಸಕ್ತಿ ಇಟ್ಟುಕೊಂಡದ್ದನ್ನು ಕಂಡ ಬೋಸ್ಟನ್ನಿನ ವಿಶ್ವವಿದ್ಯಾನಿಲಯ ಅವನನ್ನು ಧ್ವನಿಶಾಸ್ತ್ರದ ವಿಜ್ಞಾನಿಯ ಪ್ರೊಫೆಸರನನ್ನಾಗಿ ನೇಮಿಸಿಕೊಂಡಿತು.

ಆಗಲೇ ಗ್ರಹಾಂ ಬೆಲ್ ಮೇಬಲ್



ಹಬ್ಬರ್ಡಳನ್ನು ಮೊದಲಬಾರಿ ಸಂಧಿಸಿದ್ದು ಮತ್ತು ಅವಳಲ್ಲಿ ಅನುರಾಗ ತಾಳಿದ್ದು. ಅಂಗವಿಕಲತೆಯನ್ನು ಕಂಡು ಅನುರಾಗ ದೊಂದಿಗೆ ಅನುಕಂಪವೂ ಮೂಡಿ ಕೊನೆಗೆ ಅವಳ ದುಸ್ಥಿತಿಯನ್ನು ಹೇಗಾದರೂ ಸರಿ ಪಡಿಸಬೇಕೆಂಬ ಛಲವೂ ಅವನಲ್ಲಿ ಮೂಡಿತು. ಕಿವುಡರೂ ಕೇಳಬಹುದಾದಂಥ ಯಂತ್ರ ತಯಾರಿಸುತ್ತೇನೆಂದು ಆ ಬಗ್ಗೆ ಅನೇಕ ಪರೀಕ್ಷೆಗಳನ್ನು ಮಾಡತೊಡಗಿದ. ಅಂತಹ ಯಂತ್ರವೊಂದನ್ನು ತಾನು ಖಂಡಿತವಾಗಿಯೂ ತಯಾರಿಸಿಯೇನು ಎಂದು ಅವನು ದೃಢವಾಗಿ ನಂಬಿದ್ದ.

ಮೇಬ್ಬಲ್ ಹಬ್ಬರ್ಡ್ ಅವನ ಉತ್ಸಾಹ ಕಂಡು ಒಳಗೇ ನಗುತ್ತಿರಬಹುದು. ಕೊನೆಗೂ ಅಂಥಹ ಯಂತ್ರ ಹೊರಬರಲಿಲ್ಲ. ಆದರೆ ಮೇಬಲ್ ಹಬ್ಬರ್ಡ್ ಆ ವೇಳೆಗೆ ಅವನ ಮಡದಿಯಾಗಿ ಬಿಟ್ಟಳು. ಮತ್ತು ಎಲ್ಲ ಹೆಂಗಸರಂತೆ ಗಂಡಂದಿರ ಹಲವೊಂದು ವಿಚಿತ್ರ ಗೀಳುಗಳನ್ನು ನಿವಾರಿಸುವದರಲ್ಲಿ ಸಫಲ ಳಾದಳು. ಅಂತಹ ಯಂತ್ರವೊಂದರಿಂದ ಕಿವಿ ಕೇಳುವುದು ಮತ್ತು ಮಾತುಬರುವುದು ಎಂಬ ದೂರದ ಆಸೆಯಿಂದ ವಾಸ್ತವಿಕತೆಗೆ, ಹೆಚ್ಚು ಉಪಯುಕ್ತತೆ ಕಡೆಗೆ ಅವನನ್ನು ಎಳೆ ತಂದಳು.

ತಾನು ಪತಿಯಿಂದ ತುಟಿಚಲನೆಯಲ್ಲೇ ಮಾತಾಡುವುದನ್ನು ಕಲಿತರೂ ಮೇಧಾವಿ ಪತಿಯನ್ನು ಧ್ವನಿಯ ಬಗ್ಗೆ ಅನೇಕ ಆವಿಷ್ಕಾರ ಗಳನ್ನು ಮಾಡುವಂತೆ ಪ್ರೇರೇಪಿಸಿದಳು. ಮಡದಿಯ ಕಿವಿ ಕೇಳಲಿ ಎಂದು ಆರಂಭ ಮಾಡಿದ ಪರೀಕ್ಷಣಗಳ ಫಲಿತಾಂಶವೇ ಕೊನೆಗೆ ಟೆಲಿಫೋನ್ ಆಗಿ ರೂಪುಗೊಂಡದ್ದು. ಇದೊಂದು ಆಕಸ್ಮಿಕ.

೧೮೭೫ ರಲ್ಲಿ ಹೀಗೆ ತಯಾರಾದ ದೂರವಾಣಿ ಯಂತ್ರವನ್ನು ವ್ಯಾಪಾರಿ ದೃಷ್ಟಿಯಿಂದ ಅಧಿಕ ಸಂಖ್ಯೆಯಲ್ಲಿ ತಯಾರಿಸುವುದು ಬೆಲ್ ನಿಗೆ ಕಷ್ಟವೇ ಆಗಿತ್ತು.

ಕೊನೆಗೆ ಮೇಬಲ್‌ಳ ತಂದೆ ಗಾರ್ಡಿನರ್ ಹಬ್ಬರ್ಡ್ ಮತ್ತು ಥಾಮಸ್ ಸ್ಯಾಂಡರ್ಸ್ ಎನ್ನುವ ಹಬ್ಬರ್ಡ್‌ನ ಗೆಳೆಯರು ಬೆಲ್‌ನಿಗೆ ಆರ್ಥಿಕ ನೆರವು ನೀಡಿದರು. ವಿಚಿತ್ರವೆಂದರೆ ಸ್ಯಾಂಡರ್ಸ್‌ನ ಮಗಳೂ ಸಹ ಕಿವುಡಿ!

ಈ ಇಬ್ಬರು ಕಿವುಡು ಹುಡುಗಿಯರ ತಂದೆ ಯರ ನೆರವಿನಿಂದ ಕೊನೆಗೊಂದು ಪುಟ್ಟ ಕಾರ್ಖಾನೆ ತಯಾರಾಯಿತು.

ಬೆಲ್ ಕ್ರಮೇಣ ಸಿರಿವಂತನೂ ಆದ. ಶಹರಿನ ಗೊಂದಲದಿಂದ ದೂರವಾಗಿದ್ದ, ಪ್ರಶಾಂತ ವಾತಾವರಣವಿದ್ದ 'ಬೆಡ್ಡೆರ್' ಎಂಬಲ್ಲಿ ಒಂದು ಸುಂದರ ಗೂಡು ಕಟ್ಟಿ ಕೊಂಡು ಮೇಬಲ್‌ನೊಡನೆ ವಾಸಿಸತೊಡ ಗಿದ.

ಅಲ್ಲಿ ಬಂದ ಮೇಲೂ ಗ್ರಹಾಂ ಬೆಲ್ ಸಂಶೋಧನೆಯಲ್ಲಿ ತಲ್ಲೀನನಾಗಿದ್ದ. ಒಮ್ಮೆ ಅವನಿಗೆ ಮೂಕರಾದವರಿಗೆ ಮಾತು ಕಲಿಸಿ ದಂತೆಯೇ ಮೂಕ ಪ್ರಾಣಿಗಳಿಗೂ ಏಕೆ ಮಾತುಕಲಿಸಬಾರದು? ಎಂಬ ವಿಚಾರ ಬಂದಿತು. ಆದರೆ ಅವನ ಕಲ್ಪನೆಯನ್ನು ಕಿಂಚಿತ್ತಾದರೂ ತೃಪ್ತಿಪಡಿಸಿದ್ದೆಂದರೆ ನಾಯಿ ಮಾತ್ರ. ಬೊಗಳುವಿಕೆಯಲ್ಲಿ ಅದು ಅಷ್ಟಿಷ್ಟು ಅವನನ್ನು ಅನುಕರಿಸಿತ್ತು!

ಗ್ರಹಾಂಬೆಲ್‌ನ ಸಾಹಸದಲ್ಲಿ ಕೊನೆಗೆ ಸಾರ್ಥಕಗೊಂಡ ಆವಿಷ್ಕಾರಗಳೆಂದರೆ ಟೆಲಿ ಫೋನ್, ಫೋಟೊಫೋನ್ ಮತ್ತು ಗ್ರಾಮೋಫೋನ್.

ಅಲೆಗ್ಸಾಂಡರ್ ಗ್ರಹಾಂ ಬೆಲ್ ತಾನೇ ದೂರವಾಣಿಯನ್ನು ಕಂಡುಹಿಡಿದರೂ ಆ ಯಂತ್ರವನ್ನು ಕಂಡರೆ ಅನಿಗಾಗುತ್ತಿರಲಿಲ್ಲ! ಅವನು ಪ್ರಯೋಗಶಾಲೆಯಲ್ಲಿ ಏಕಾಗ್ರಚಿತ್ತ ನಾಗಿ ಸಂಶೋಧನೆಗಳನ್ನು ಮಾಡುತ್ತಿದ್ದಾಗ ಇದು ಕ್ಷಣಕ್ಕೊಮ್ಮೆ 'ಟ್ರಿನ್' ಎಂದು ಕರ್ಕಶ ವಾಗಿ ಕೂಗಿ ಲಕ್ಷ್ಯವನ್ನು ಬೇರೆಡೆ ಸೆಳೆಯು ತ್ತಿತ್ತು! ಅದಕ್ಕಾಗಿ ಅದನ್ನು ಮೇಜಿನ ದೂರದ ಮೂಲೆಗೆ ತಳ್ಳಿಟ್ಟು ಕಾಗದದಲ್ಲಿ ಸುತ್ತಿ ಮುಚ್ಚಿಟ್ಟು ಬಿಡುತ್ತಿದ್ದ!


ಏನೇ ಆಗಲೀ ಮೇಬಲ್ ಹಬರ್ಡ್ಳ ಕಿವಿ ಕೊನೆಯವರೆಗೂ ಕೇಳದಿದ್ದರೂ ಅವಳಿಗಾಗಿ ಎಂದು ಕಂಡುಹಿಡಿದ ಯಂತ್ರ ರೂಪಾಂತರ

ಹೊಂದಿ ಇಂದು ಪ್ರಪಂಚದಾದ್ಯಂತ ಜನರ ಶ್ರವಣ ಶಕ್ತಿಯನ್ನು ಅಭಿವೃದ್ಧಿ ಪಡಿಸಿ ಮಹದುಪಕಾರ ಮಾಡಿದೆ.

ಇದಂತೂ ಸಾರ್ವಜನಿಕ ಉಪಯೋಗದ ಮಾತಾಗಿ ಹೋಯಿತು. ಆದರೆ ಅವನ ಧ್ವನಿ ಶಾಸ್ತ್ರದ ನೈಪುಣ್ಯದಿಂದ ಅವನು ಮೂಕರಿಗೆ ಕಲಿಸಿದ ಮಾತಿನ ರೀತಿಯನ್ನಂತೂ ಯಾವ ಕಿವುಡು ಮಕ್ಕಳ ತಂದೆತಾಯಂದಿರೂ ಮರೆಯುವಂತಿಲ್ಲ. ಒಂದೊಂದು ವಾಕ್ಯ, ಅಕ್ಷರ, ಧ್ವನಿಗಳನ್ನು ಹೊರಡಿಸಬೇಕಾದರೆ ಅವೆಷ್ಟು ಉಪಾಯಗಳನ್ನು ಮಾಡಬೇಕೊ ಆ ಉಪಾಯಗಳನ್ನೆಲ್ಲ ಹೇಳಿಕೊಟ್ಟ ಬೆಲ್. ಅಷ್ಟೇ ಅಲ್ಲದೆ ಕಿವುಡು ಮೂಕರಿಗಾಗಿ ದೊಡ್ಡ ವಿದ್ಯಾ ಸಂಸ್ಥೆಯನ್ನೇ ಅಮೆರಿಕದಲ್ಲಿ ಸ್ಥಾಪಿಸಿದ. ಅದು ಜಗತ್ತಿನಲ್ಲೆಲ್ಲಾ ಅತ್ಯಂತ ಹಿರಿಯ ಸಂಸ್ಥೆಯಾಗಿ ಇಂದಿಗೂ ಉಳಿದಿದೆ.

ಶಹಜಹಾನ್ ತನ್ನ ಸುಂದರ ಮಡದಿಗಾಗಿ 'ತಾಜ್ ಮಹಲ್' ಕಟ್ಟಿ ಸಾವಿರಾರು ಜನರ ಕಣ್ಮನ ತಣಿಸುವಂತೆ ಒಂದು ಕುರುಹು ಬಿಟ್ಟು ಹೋದರೆ, ಗ್ರಹಾಂಬೆಲ್ ಯಾರೂ ಆಶ್ಚರ್ಯಪಡುವಂತೆ ಅಂಗವಿಕಲ ಮೇಬಲ್ ಹಬ್ಬರ್ಡ್‌ಳನ್ನು ಮನಪೂರ್ವಕವಾಗಿ ಪ್ರೀತಿಸಿ ಅವಳಿಗಾಗಿ ಅಲ್ಲದೆ ಅವಳಂತಹ ಕಿವುಡು-ಮೂಕರಿಗೆ ಮಾತಿನ ಭಾಗ್ಯವಲ್ಲದೆ ಅವರಿಗಾಗಿ ಬೃಹತ್ ಸಂಸ್ಥೆ ಸ್ಥಾಪಿಸಿ ಮಹತ್ತರವಾದ ಪ್ರೀತಿಯ ಕಾಣಿಕೆ ಸಲ್ಲಿಸಿದ.

ನಿಜಕ್ಕೂ ಈ ಕಾಣಿಕೆ ತಾಜ್‌ಮಹಲಿಗಿಂತ ಅದ್ಭುತ ಕಾಣಿಕೆ! ಏಕೆಂದರೆ ಅದೊಂದು ಗೋರಿ; ಇದೊಂದು ನಿರಂತರ ಉಪಯುಕ್ತ ಸ್ಮಾರಕ. ✡



ಕೆನ್ನಡಿ ಖ್ರುಶ್ಚೇವರಿಬ್ಬರೂ ಒಂದು ಒಪ್ಪಂದಕ್ಕೆ ಸಹಿ ಹಾಕಬೇಕಾಗಿತ್ತು. ಆಗ ಖ್ರುಶ್ಚೇವರ ತಲೆಯಲ್ಲಿ ಏನು ಬಂದಿತೋ, ಆದಮ್ ಮತ್ತು ಈವರು ಕಮ್ಯುನಿಸ್ಟರಾಗಿದ್ದರೆಂದು ಕೆನ್ನಡಿ ಒಪ್ಪಿಕೊಂಡರೆ ಮಾತ್ರ ತಾವು ರುಜುಹಾಕುವುದಾಗಿ ಹಟಹಿಡಿದರು.

ಕೆನ್ನಡಿಯವರಿಗೇನೂ ತೋಚಲಿಲ್ಲ. ಖ್ರುಶ್ಚೇವರ ಮಾತಿಗೆ ಆಧಾರವಿದ್ದರೆ ತಾನೆ ಅವರು ವಾದವನ್ನು ಮುನ್ನಿಸುವುದು? ಬೈಬಲ್ಲನ್ನು ಚೆನ್ನಾಗಿ ಬಲ್ಲವರಾದ ಇಸ್ರೇಲಿನ ಪ್ರಧಾನಿ ಬೆನ್ ಗುರಿಯನ್ನರನ್ನು ಕೆನ್ನೆಡಿಯವರು ಈ ಬಗ್ಗೆ ವಿಚಾರಿಸಿದಾಗ ಬೆನ್ ಗುರಿಯನ್ ಹೇಳಿದ್ದಿಷ್ಟು:

"ಆದಮ್ ಮತ್ತು ಈವ್ ಕಮ್ಯುನಿಸ್ಟರಾಗಿದ್ದರೆಂದು ಅನುಮಾನವಿಲ್ಲದೆ ಹೇಳಬಹುದು. ಇಬ್ಬರಿಗೂ ಉಡಲು ಒಂದು ತುಂಡು ಬಟ್ಟೆಯಿರಲಿಲ್ಲ. ಸೇಬು ಹಣ್ಣಿನ ವಿನಾ ತಿನ್ನಲು ಬೇರೇನೂ ಇರಲಿಲ್ಲ. ಆದರೂ ಅವರು ಸ್ವರ್ಗದಲ್ಲಿ ಇರುವುದಾಗಿ ಭಾವಿಸಿದ್ದರು. ಅಂದ ಮೇಲೆ ಅವರನ್ನು ಕಮ್ಯುನಿಸ್ಟರೆಂದು ಒಪ್ಪಿಕೊಳ್ಳುವುದರಲ್ಲಿ ತೊಂದರೆಯೇನು?"

ಒಪ್ಪಂದಕ್ಕೆ ಖ್ರುಶ್ಚೇವರಿಂದ ಕೂಡಲೆ ಸಹಿ ಬಿತ್ತು.

—ಎಸ್. ಎ. ಜಾಂಗವಿ

ಆಕಾಶದಲ್ಲಿ ಕಂದಕಗಳು

'ಬ್ಲ್ಯಾಕ್ ಹೋಲ್'ಗಳ ಅಸ್ತಿತ್ವ ನಮ್ಮ ಪೂರ್ವಜರಿಗೂ ಗೊತ್ತಿತ್ತೆ?

ಕರಿಗಿರಿ ನರಸಿಂಹಮೂರ್ತಿ

ಆಧುನಿಕ ಖಗೋಳ ವಿಜ್ಞಾನಿಗಳು ಆಕಾಶದಲ್ಲಿ ಕಂದಕಗಳು ಇರುವುದು ಗೋಚರವಾಗಿದೆಯೆಂದು ಈಗೀಗ ಹೇಳುತ್ತಾ ಇದ್ದಾರೆ. ಈ ವಿಚಾರವು ಪ್ರಾಚೀನ ಜ್ಯೋತಿಷ್ಯಶಾಸ್ತ್ರಜ್ಞರಿಗೆ ತಿಳಿದಿದ್ದಿತು. ಅವರು ಈ ಕಂದಕಗಳನ್ನು "ಲಗ್ನತ್ಯಾಜ್ಯ ಕಾಲ" ಎಂಬುದಾಗಿಯೂ "ಉಡುಕೂಪ" ಎಂಬುದಾಗಿಯೂ ಜ್ಯೋತಿಶ್ಶಾಸ್ತ್ರದಲ್ಲಿ ನಿರೂಪಿಸಿರುತ್ತಾರೆ. ಇಂತಹ ರಾಶಿಯ ಇಂತಹ ಭಾಗವು ಪೂರ್ವ ಕ್ಷಿತಿಜದಲ್ಲಿ ಉದಯಿಸುತ್ತಿರುವಾಗ "ಲಗ್ನ ತ್ಯಾಜ್ಯ"ವಾಗುತ್ತದೆ ಎಂಬುದಾಗಿ ಜ್ಯೋತಿಶ್ಶಾಸ್ತ್ರವು ಹೇಳುತ್ತದೆ. ಮೇಷಲಗ್ನದ ಪ್ರಾರಂಭದ ಮೂರು ಅಂಶಗಳು ಪೂರ್ವ ಕ್ಷಿತಿಜದಲ್ಲಿ ಇರುವಾಗ "ಲಗ್ನ ತ್ಯಾಜ್ಯ" ಕಾಲವಾಗುತ್ತದೆ. ಮಿಥುನಲಗ್ನದ ಮಧ್ಯಭಾಗದ ೧೪, ೧೫ ಮತ್ತು ೧೬ ನೇ ಅಂಶಗಳು ಪೂರ್ವ ಕ್ಷಿತಿಜದಲ್ಲಿ ಉದಯಿಸುತ್ತಿರುವಾಗ "ಲಗ್ನ ತ್ಯಾಜ್ಯ" ಕಾಲವಾಗುತ್ತದೆಯೆಂದು ಜ್ಯೋತಿಶ್ಶಾಸ್ತ್ರವು ಹೇಳುತ್ತದೆ. ಆದುದರಿಂದ ಆಕಾಶದ ಆ ಸ್ಥಳಗಳಲ್ಲಿ ನಕ್ಷತ್ರ ಸಾಂದ್ರತೆ ಬಹಳ ಕಡಿಮೆಯಾಗಿರಬಹುದೆಂದು ನಾವು ಅನುಮಾನಪಡಬಹುದಾಗಿರುತ್ತದೆ. ಆಕಾಶದಲ್ಲಿ ನಮ್ಮ ಸುತ್ತಲೂ ಇರುವ ನಕ್ಷತ್ರ ಸಮೂಹಗಳ ಕೋಟೆಯು ಎಲ್ಲೆಲ್ಲಿ ಅಲ್ಪ ಸ್ವಲ್ಪ ಛಿದ್ರವಾಗಿದೆಯೋ ಅಲ್ಲಲ್ಲಿ ಕಂದಕಗಳು ಇರಲೇಬೇಕು.

ಇಂತಹ ಕಂದಕಗಳ ಅಸ್ತಿತ್ವವನ್ನು ಪ್ರಾಚೀನ ಜ್ಯೋತಿಶಾಸ್ತ್ರಜ್ಞರು ತಿಳಿದಿದ್ದರು ಎಂಬುದಾಗಿ ನಾವು ಊಹಿಸಲೇಬೇಕಾಗುತ್ತದೆ. ಪೂರ್ವ ಕ್ಷಿತಿಜದಲ್ಲಿ ಉದಯಿಸುತ್ತಿರುವ ಆಕಾಶದ ನಕ್ಷತ್ರ ಕೋಟೆಯ ಒಂದು ಭಾಗವು ಛಿದ್ರವಾಗಿದ್ದರೆ ಆ ಕಾಲದಲ್ಲಿ ನಾವು ಕೈಕೊಳ್ಳುವ ಯಾವ ಮಹತ್ಕಾರ್ಯವೂ ಫಲಿಸಲಾರದೆ ನಿರರ್ಥಕವಾಗಬಹುದು ಎಂಬ ವೈಜ್ಞಾನಿಕ ವಿಚಾರಸರಣಿಯು ಪ್ರಾಚೀನ ಜ್ಯೋತಿಷ್ಯ ಶಾಸ್ತ್ರಜ್ಞರಿಗೆ ತಿಳಿದಿದ್ದಿತು. ಆದುದರಿಂದ ಅಂತಹ ಕಾಲಗಳನ್ನು ಅವರು ಗುರುತಿಸಿ, "ಲಗ್ನ ತ್ಯಾಜ್ಯ" ಕಾಲಗಳು ಎಂಬುದಾಗಿ ಅವುಗಳನ್ನು ಕರೆದಿದ್ದಾರೆ. ಇಂತಹ "ಕಂದಕ"ಗಳನ್ನು ಗುರುತಿಸಿ, ಅವುಗಳನ್ನು ತ್ಯಜಿಸಿ, ಮುಹೂರ್ತಗಳನ್ನು ಇಡುವ ಅಭ್ಯಾಸವು ಜ್ಯೋತಿಶ್ಶಾಸ್ತ್ರಜ್ಞರಿಗೆ ಇರುತ್ತದೆ.

ಪ್ರತಿಯೊಂದು ನಕ್ಷತ್ರದಲ್ಲಿಯೂ ಒಂದೊಂದು "ಉಡುಕೂಪ" ಎಂದರೆ "ನಕ್ಷತ್ರ ಕಂದಕ" ಇರುವುದೆಂದು ಜ್ಯೋತಿಶ್ಶಾಸ್ತ್ರವು ಹೇಳುತ್ತದೆ. ಈ ನಕ್ಷತ್ರ ಕಂದಕಗಳ ಸ್ಥಳಗಳಿಗೆ ಚಂದ್ರನು ಬಂದಾಗ ಈ ಕಂದಕಗಳನ್ನು ದಾಟಲು ಅವನಿಗೆ ಎರಡು ಘಳಿಗೆ ಕಾಲವು ಬೇಕಾಗುತ್ತದೆ ಎಂಬುದಾಗಿಯೂ ಜ್ಯೋತಿಶ್ಶಾಸ್ತ್ರವು ಹೇಳುತ್ತದೆ. ಎಂದರೆ ಆ ನಕ್ಷತ್ರದ ಆ ಸ್ಥಳದಲ್ಲಿ ಸುಮಾರು ಅರ್ಧ ಅಂಶದಷ್ಟು ಒಂದು ರಂಧ್ರವು ಇರಬಹುದೆಂಬುದಾಗಿ ನಮಗೆ ತೋರುತ್ತದೆ. ಈ ರಂಧ್ರವನ್ನು ಚಂದ್ರನು ದಾಟುತ್ತಿರುವಾಗ "ನಕ್ಷತ್ರ ವೈದ್ಯುತಿ ಪ್ರವಾಹದ" ಸಂಬಂಧವು ಚಂದ್ರನಿಗೆ ತಪ್ಪಿ ಹೋಗಬಹುದು ಎಂಬುದಾಗಿ ನಾವು ಅನುಮಾನಪಡಬಹುದಾಗಿರುತ್ತದೆ. ನಕ್ಷತ್ರ ವೈದ್ಯುತಿ ಪ್ರವಾಹದ ಸಂಬಂಧವು ಚಂದ್ರನಿಗೆ ತಪ್ಪಿ ಹೋದಾಗ ನಾವು ಎಚ್ಚರವಾಗಿ ಇರಬೇಕು. ಮಹತ್ಕಾರ್ಯಗಳನ್ನು ಪ್ರಾರಂಭಿಸಬಾರದು ಎಂಬುದು ಜ್ಯೋತಿಶ್ಶಾಸ್ತ್ರದ ಅಭಿಪ್ರಾಯವಾಗಿರುತ್ತದೆ.

ಉದಾಹರಣೆಗೆ ಹೇಳುವದಾದರೆ ಮೇಷ ರಾಶಿಯ ಆರೂವರೆ ಅಂಶದಲ್ಲಿ ಅಶ್ವಿನೀ ನಕ್ಷತ್ರ ಸಮೂಹದಲ್ಲಿ ಒಂದು "ಉಡುಕೂಪ"ವಿರುತ್ತದೆ. ಅದೇ ಮೇಷ ರಾಶಿಯ ಹದಿನೈದೂವರೆ ಅಂಶದಲ್ಲಿ ಭರಣಿ ನಕ್ಷತ್ರ ಸಮೂಹದಲ್ಲಿ ಇನ್ನೊಂದು "ಉಡುಕೂಪ"ವಿರುತ್ತದೆ. ಈ ಸ್ಥಳಗಳಲ್ಲಿ ಚಂದ್ರನು ಇರುವಾಗ "ಉಡುಕೂಪಗ್ರಸ್ತ" ದೋಷವು ಚಂದ್ರನಿಗೆ ಪ್ರಾಪ್ತವಾಗುತ್ತದೆ. ಆದುದರಿಂದ ಅಂತಹ ಕಾಲವು ತ್ಯಾಜ್ಯ ಎಂದು ಜ್ಯೋತಿಶ್ಶಾಸ್ತ್ರವು ಹೇಳುತ್ತದೆ.

ನಕ್ಷತ್ರ ವೈದ್ಯುತಿ ಪ್ರವಾಹದ ಸ್ವರೂಪದಲ್ಲಿ ಭೂಮಿಯ ದಿಕ್ಕಿಗೆ ಬರುತ್ತಿರುವ ಪ್ರಾಣಶಕ್ತಿಯ ಪ್ರವಾಹವನ್ನು ಬೃಹಸ್ಪತಿಯು ಆಕರ್ಷಿಸಿ, ಪರಿಶೋಧಿಸಿ ಅದರೊಡನೆ ಸ್ವವೈದ್ಯುತಿ ತರಂಗಗಳನ್ನು ಸೇರಿಸಿ, ಭೂಮಿಯ ಕಡೆಗೆ ವಿಸರ್ಜಿಸುವಾಗ, ಚಂದ್ರನು ಅಡ್ಡ ಬಂದು, ಅವುಗಳನ್ನು ಆಕರ್ಷಿಸಿ, ಪರಿಶೋಧಿಸಿ, ಸ್ವವೈದ್ಯುತಿ ತರಂಗಗಳನ್ನು ಅವುಗಳೊಡನೆ ಸೇರಿಸಿ, ಭೂಮಿಗೆ ಅವುಗಳನ್ನು ತಲುಪಿಸುತ್ತಾನೆ. ಈ ಕಾರ್ಯವು ನಿರಂತರವಾಗಿ ನಡೆಯುತ್ತಲೇ ಇದೆ. ಆದರೆ "ಉಡುಕೂಪ" ಪ್ರದೇಶಗಳಿಗೆ ಚಂದ್ರನು ಬಂದಾಗ ಈ ಕಾರ್ಯವು ಸ್ಥಗಿತವಾಗುತ್ತದೆ. ಈ ರಹಸ್ಯವನ್ನು ಜ್ಯೋತಿಶ್ಶಾಸ್ತ್ರಕಾರರು ಅನ್ವೇಷಿಸಿ ತಿಳಿದುಕೊಂಡಿರುತ್ತಾರೆ.

"ಲಗ್ನ ತ್ಯಾಜ್ಯ ಕಾಲ" ಎಂಬುದು ಪ್ರತಿಯೊಂದು ಲಗ್ನದಲ್ಲಿಯೂ ಬರುತ್ತದೆ. ಅದರಂತೆಯೇ "ಉಡುಕೂಪ" ಎಂಬುದು ಪ್ರತಿಯೊಂದು ನಕ್ಷತ್ರದಲ್ಲಿಯೂ ಇರುತ್ತದೆ. ಇವುಗಳು ಆಕಾಶದಲ್ಲಿರುವ ನಕ್ಷತ್ರ ಸಮೂಹಗಳ ಕೋಟೆಯ "ಛಿದ್ರ" ಅಥವಾ "ರಂಧ್ರ" ಪ್ರದೇಶಗಳು ಎಂಬುದಾಗಿ ಪ್ರಾಚೀನ ಜ್ಯೋತಿಶ್ಶಾಸ್ತ್ರವು ನಿರೂಪಿಸುತ್ತಲೇ ಬಂದಿರುತ್ತದೆ.

"ಉಡುಕೂಪ"ಗಳ ಸಮಭಾಜಕ ವೃತ್ತೀಯ ಪೂರ್ವ ಪಶ್ಚಿಮ ಸ್ಫುಟಗಳನ್ನು ನಾವು ಗೊತ್ತುಪಡಿಸಬಹುದಾದರೂ ಅವುಗಳ ಉತ್ತರ ದಕ್ಷಿಣ ಕ್ರಾಂತಿ ಸ್ಫುಟಗಳನ್ನು ನಾವು ನಿರ್ದಿಷ್ಟವಾಗಿ ತಿಳಿಯಲು ಸಾಧ್ಯವಿಲ್ಲ. ಅದು ನಮಗೆ ಸಾಧ್ಯವಾಗಿದ್ದರೆ ಆಕಾಶದ ಯಾವ ಪ್ರದೇಶದಲ್ಲಿ ಉಡುಕೂಪವಿರಬಹುದು ಎಂಬುದನ್ನು ನಮ್ಮ ಸಮಕಾಲೀನ ಖಗೋಳ ವಿಜ್ಞಾನಿಗಳಿಗೆ ನಾವು ಖಚಿತವಾಗಿ ಬೊಟ್ಟು ಮಾಡಿ ತೋರಿಬಹುದಾಗಿದ್ದಿತು! ಅವರು ಅದನ್ನು ಪರಿಶೋಧಿಸಿ, ಎಡಬಲಗಳಿಗೆ ಅದು ಚಲಿಸಿದ್ದರೆ, ಅದನ್ನು ಬೇಟೆಯಾಡಿ, ಪತ್ತೆ ಮಾಡಿ, ಲೋಕಕ್ಕೆ ಹೇಳಬಹುದಾಗಿದ್ದಿತು.

ಆದರೂ, ಆಕಾಶದಲ್ಲಿ ರಂಧ್ರಗಳು ಇರುವುದು ನಿಜ. ಆ ರಂಧ್ರಗಳಲ್ಲಿ ಕೆಲವು ಪ್ರಾಣಶಕ್ತಿ ಪ್ರವಾಹಗಳ ಅಂತರ್ಯಾತ ಪ್ರದೇಶಗಳಾಗಿಯೂ ಕೆಲವು ಬಹಿರ್ಯಾತ ಪ್ರದೇಶಗಳಾಗಿಯೂ ಕಾರ್ಯ ನಿರ್ವಹಣೆ ಮಾಡುತ್ತಿರುವುದೂ ನಿಜವಿರಬಹುದು. ✡


ಡಾ. ಗುಂಥರ್ ಸೊಂಥಿಮರ್

ಕೆ. ಎಲ್. ದತ್ತ

ಭಾರತದ ರಾಜಧಾನಿ ದಿಲ್ಲಿಯಲ್ಲಿ ಇತ್ತೀಚೆಗೆ ಮ್ಯಾಕ್ಸ್‌ಮುಲ್ಲರ್ ಭವನದಲ್ಲಿ ಛಾಯಾಚಿತ್ರಗಳ ಅಪೂರ್ವ ಪ್ರದರ್ಶನವೊಂದು ಜರುಗಿತು. ಆ ಪ್ರದರ್ಶನದಲ್ಲಿ ಭಾರತದಲ್ಲಿಯ ವೀರಗಲ್ಲುಗಳ, ಮಾಸ್ತಿಗಲ್ಲುಗಳ ಛಾಯಾಚಿತ್ರಗಳನ್ನು ಕಲಾಪೂರ್ಣವಾಗಿ ಮಂಡಿಸಲಾಗಿತ್ತು. ಆದರೆ ಈ ಪ್ರದರ್ಶನ ಏರ್ಪಡಿಸಿದವರು ಓರ್ವ ಜರ್ಮನ್ ವಿದ್ವಾಂಸ ಎಂದರೆ ಅಚ್ಚರಿಯಾಗದಿರದು. ಜರ್ಮನಿಯ ಡಾಕ್ಟರ್ ಗುಂಥರ್ ಸೊಂಥಿಮರ್ ಎಂಬವರು ದಿಲ್ಲಿಯಲ್ಲಿ ಕಚೇರಿಯಿರುವ ಆಗ್ನೇಯೇಶಿಯಾ ಸಂಸ್ಥೆಯ ಮುಖ್ಯಸ್ಥರು. ಈ ದೇಶಗಳಲ್ಲಿಯ ಪ್ರಾಚೀನ ಧರ್ಮ, ಸಂಸ್ಕೃತಿ, ನಾಗರಿಕತೆಗಳ ಅಧ್ಯಯನಕ್ಕಾಗಿ ಈ ಸಂಸ್ಥೆಯಿದೆ.

ಡಾ. ಗುಂಥರರನ್ನು ನೋಡಿದೊಡನೆ ಇವರೊಬ್ಬ ಚೈತನ್ಯಪೂರ್ಣ ವ್ಯಕ್ತಿ ಎಂಬ ಭಾವನೆ ಉಂಟಾಗುತ್ತದೆ. ಭಾರತದ ಪ್ರಾಚೀನೇತಿಹಾಸದಲ್ಲಿ ಅತ್ಯಂತ ಆಸಕ್ತಿಯುಳ್ಳ, ಗೌರವವುಳ್ಳ ಭಾವನಾಜೀವಿ ಇವರು. ಮುಖದಲ್ಲಿ ಪಾಂಡಿತ್ಯದ ಕಳೆ ತುಂಬಿ ತುಳುಕುತ್ತಿದೆ. ೧೯೫೫ ರಿಂದ ೭೨ರ ವರೆಗಿನ ಅವಧಿಯಲ್ಲಿ ಇವರು ಭಾರತಕ್ಕೆ ಭೇಟ್ಟಿಕೊಡದ ವರ್ಷವೇ ಇಲ್ಲ ಎನ್ನಬಹುದು. ಆಗ ಪ್ರಾರಂಭದಲ್ಲಿ ಇವರಿಗೆ ಭೆಟ್ಟಿಯಾದವರು ಪುಣೆಯ ಪಂ. ದಾಮೋದರ ಧರ್ಮಾನಂದ ಕೌಶಾಂಬಿಯವರು. ಕೌಂಶಾಂಬಿ ಅವರನ್ನು ಡಾ. ಗುಂಥರರು ತಮ್ಮ ಗುರುಗಳೆಂದೇ ಭಾವಿಸಿ ಗೌರವಿಸುತ್ತಿದ್ದಾರೆ.

'ನಿಜವಾದ ಭಾರತವನ್ನು ಅರಿತುಕೊಳ್ಳಬೇಕಾಗಿದ್ದರೆ, ಪ್ರಾಚೀನ ಭಾರತದ ಜೀವನವನ್ನು ಕಾಣಬೇಕಾಗಿದ್ದರೆ ನೀವು ಹಳ್ಳಿಗಳನ್ನು ಸಂದರ್ಶಿಸಬೇಕು.' ಎಂದು ಪಂ. ಕೌಶಾಂಬಿ ಉಪದೇಶಿಸಿದ್ದರಿಂದ ಡಾ. ಗುಂಥರ್ ೧೯೫೮ ರಿಂದ ಭಾರತದ ಹಳ್ಳಿಗಳನ್ನು ಸಂದರ್ಶಿಸಲು ಪ್ರಾರಂಭಿಸಿದರು. ಆಗ ಮೂರು ವರ್ಷಕಾಲ ಪುಣೆಯಲ್ಲಿ ಇದ್ದುಕೊಂಡು ಮಹಾರಾಷ್ಟ್ರದ ಹಳ್ಳಿಗಳನ್ನು ಸಂದರ್ಶಿಸಿದರು. ಹಳ್ಳಿಗಳು ಹೊರನೋಟಕ್ಕೆ ಬದಲಾವಣೆ ಹೊಂದಿದಂತೆ ಕಂಡರೂ ಅಲ್ಲಿಯ ಜನಜೀವನದಲ್ಲಿ ಪ್ರಾಚೀನ ಭಾರತದ ಸಂಸ್ಕೃ



ತಿಯ ಜೀವಾಳವಿನ್ನೂ ಇದೆ ಎಂದು ಅವರ ಅಭಿಪ್ರಾಯ. ಅಂದಿನಿಂದಿಗೆ ೧೫ ವರ್ಷಗಳ ನಂತರ ಭಾರತೀಯ ಹಳ್ಳಿಗಳು ಇನ್ನಷ್ಟು ಮಾರ್ಪಟ್ಟಿದ್ದರೂ ಅವುಗಳ ಅಂತಃಸತ್ವದಲ್ಲಿ ಪ್ರಾಚೀನ ಭಾರತದ ಪ್ರಭಾವವಿನ್ನೂ ಕಂಡು ಬರುತ್ತಿದೆ ಎಂದೂ ಡಾ. ಗುಂಥರ್ ನಂಬಿದ್ದಾರೆ.

ಡಾ. ಗುಂಥರರು ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶ, ತಮಿಳು ನಾಡುಗಳ ಹಳ್ಳಿಗಳನ್ನು ಸುತ್ತಿ ಸುತ್ತಿ ಅಲ್ಲಲ್ಲಿ ಕಣ್ಣಿಗೆ ಬಿದ್ದ ವೀರಗಲ್ಲುಗಳ, ಮಾಸ್ತಿಗಲ್ಲುಗಳ ಛಾಯಾಚಿತ್ರಗಳನ್ನು ತೆಗಿದಿದ್ದಾರೆ. ಅವರ ಸಂಗ್ರಹದಲ್ಲಿ ಈಗ ಇಂಥ ೨೦೦೦ ಛಾಯಾ ಚಿತ್ರಗಳಿವೆಯಂತೆ. ವೀರಗಲ್ಲುಗಳು ಮಾಸ್ತಿಗಲ್ಲುಗಳು ಹೆಚ್ಚಾಗಿ ಕಾಣಸಿಗುವದು ದಕ್ಷಿಣ ಭಾರತದ ಈ ರಾಜ್ಯಗಳಲ್ಲಿಯೆ ಎಂಬುದು ಅವರ ಅನುಭವಕ್ಕೆ ಬಂದ ವಿಷಯ. ಈ ವೀರಗಲ್ಲುಗಳನ್ನೂ ಮಾಸ್ತಿಗಲ್ಲುಗಳನ್ನೂ ಏಕೆ ನಿಲ್ಲಿಸುತ್ತಾರೆ? ಎಂಬ ವಿಷಯವನ್ನು ಚೆನ್ನಾಗಿ ಅರಿತುಕೊಂಡಿರುವ ಡಾ. ಗುಂಥರ್ ತಾವು ಹಳ್ಳಿಗಳಲ್ಲಿ ಈ ಕಲ್ಲುಗಳ ಛಾಯಾಚಿತ್ರ ತೆಗೆದಾಗಲೆಲ್ಲ ಅಲ್ಲಿಯ ಹಳ್ಳಿಗರನ್ನು ಕಂಡು ಅವುಗಳನ್ನು ಕುರಿತು ಪ್ರಚಾರದಲ್ಲಿರುವ ದಂಥಕಥೆಗಳನ್ನು ಕೇಳಿ ಆನಂದಿಸಿ ವಿಷಯ ಸಂಗ್ರಹಿಸಿದ್ದಾರೆ. ಅಲ್ಲದೆ ಜೈನಯತಿಗಳ ಸ್ಮಾರಕಕ್ಕಾಗಿ ನಿಲ್ಲಿಸಿರುವ ಶಿಲೆಗಳ ಛಾಯಾಚಿತ್ರಗಳನ್ನೂ ಇವರು ಸಂಗ್ರಹಿಸಿದ್ದಾರೆ. ಈ ಚಿತ್ರಗಳಲ್ಲಿ ಕೆಲವನ್ನು ಅವರು ಇತ್ತೀಚೆಗೆ ದಿಲ್ಲಿಯ ಮಾಕ್ಸಮುಲ್ಲರ್ ಭವನದಲ್ಲಿ ಪ್ರದರ್ಶಿಸಿದ್ದರು.

ಡಾ. ಗುಂಥರ್ ಪುಣೆಯಲ್ಲಿ ಮೂರು ವರ್ಷ ಇರಬೇಕಾದ್ದರಿಂದ ಅವರು ಮರಾಠಿ ಭಾಷೆಯನ್ನೂ ಸಾಹಿತ್ಯವನ್ನೂ ಚೆನ್ನಾಗಿ ಅಭ್ಯಸಿಸಿದ್ದಾರೆ. ಪ್ರಾಚೀನ ಭಾರತದ ಧರ್ಮ ಶಾಸ್ತ್ರವನ್ನು ಅವರು ಪಂ. ಕೌಶಾಂಬಿಯವರಲ್ಲಿ ಅಧ್ಯಯನ ಮಾಡಿದ್ದಾರೆ. ಆದರ್ಶ-ವ್ಯವಹಾರಗಳ ಸುಮಧುರ ಸಮನ್ವಯ ಈ ಧರ್ಮಶಾಸ್ತ್ರ ಎಂದೆಲ್ಲ ಅದನ್ನು ಹೊಗಳುತ್ತಿರುತ್ತಾರೆ. ಪ್ರಾಚೀನ ಭಾರತದ ಚರಿತ್ರೆ- ಸಂಸ್ಕೃತಿಗಳ ಬಗ್ಗೆ ಇವರಿಗೆ ಅಪಾರ ಆಸಕ್ತಿ. ಜರ್ಮನಿಯಲ್ಲಿರುವ ಪ್ರಾಚ್ಯ ವಿಷಯ ವಿಶಾರದ ಪ್ರೊ. ಹೆಲ್ಮಟ್ ಫಾನ್ ಗ್ಲಾಸೆನಾಪ್ ಹಾಗೂ ಲಂಡನ್ನಿನ ಪ್ರೊ. ಜಿ. ಡಿ. ಎಂ. ಡೆರೆಟ್ ಅವರ ಶಿಷ್ಯತ್ವವಹಿಸಿ ತಮ್ಮ ಭಾರತ ವಿಷಯಕ ಜ್ಞಾನವನ್ನು ಹೆಚ್ಚಿಸಿ ಕೊಂಡಿದ್ದಾರೆ. ಹೈಡೆಲ್‌ಬರ್ಗ್‌ದಲ್ಲಿಯ ಆಗ್ನೇಯೇಶಿಯಾ ಸಂಸ್ಥೆಯ ಸಂಪರ್ಕ ಇವರಿಗೆ ಉಂಟಾದದ್ದು ೧೯೬೨ ರಲ್ಲಿ. ಈಗ ಇವರು-ಡಾಕ್ಟರೇಟ್ ಪಡೆದಿದ್ದರು. ಪೂರ್ವ ಪಶ್ಚಿಮ ರಾಷ್ಟ್ರಗಳಲ್ಲಿಯ ವಿದ್ವಾಂಸರ ವಿಚಾರವಿನಿಮಯಕ್ಕಾಗಿ ಸ್ಥಾಪಿತವಾಗಿರುವ ಕೇಂದ್ರವೇ ಆಗ್ನೇಯೇಶಿಯಾ ಸಂಸ್ಥೆ.

ಡಾ. ಗುಂಥರ್ ಜರ್ಮನಿಯಲ್ಲಿದ್ದಾಗ ಸ್ಟಟ್‌ಗಾರ್ಟ್‌ನಲ್ಲಿ ಭಾರತೀಯ ವಿದ್ಯಾರ್ಥಿ ಸಂಘ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅದು ಯಶಸ್ವಿಯಾಗಿ ನಡೆದಿದೆ. ಆ ಸಂಘದ ಮುಖಾಂತರವಾಗಿ ಡಾ. ಗುಂಥರರಿಗೆ ಅನೇಕ ಭಾರತೀಯ ವಿದ್ವಾಂಸರ ಪರಿಚಯವಾಯಿತು. ಭಾರತದ ಬಗೆಗೆ ಗೌರವಾದರಗಳನ್ನು ತಳೆದವರ ಸಂಖ್ಯೆ ಜರ್ಮನಿಯಲ್ಲಿ ವಿಪುಲವಾಗಿದೆ ಎಂದು ಹೇಳುವ ಡಾ. ಗುಂಥರರಿಗೆ ಭಾರತ ನೀಡಿರುವ ಸ್ಫೂರ್ತಿ ವಿಶಿಷ್ಟವಾದುದಾಗಿದೆ. ಕಳೆದ ಇಪ್ಪತ್ತು ವರ್ಷಗಳಿಂದ ಅವರು ಭಾರತದ ಪ್ರಭಾವದಲ್ಲಿಯೆ ಬಾಳುತ್ತಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಭಾರತದಲ್ಲಿ ಸಾಕಷ್ಟು ಮಾರ್ಪಾಡುಗಳು ಕಂಡು ಬಂದಿರುವುವಾದರೂ ಇಲ್ಲಿಯ ಗ್ರಾಮೀಣ ಜೀವನದಲ್ಲಿ ನಿಸರ್ಗ ದೇವತೆಗಳನ್ನು ಆರಾಧಿಸುವವರು ಇನ್ನೂ ಇದ್ದಾರೆ. ಇಲ್ಲಿಯ ಜಾನಪದ ಸಂಸ್ಕೃತಿ- ಸಂಪ್ರದಾಯಗಳು ಅರ್ಥವತ್ತಾಗಿವೆ, ಸಾಹಿತ್ಯ ಸಮೃದ್ಧವಾಗಿದೆ; ರಾಮಾಯಣ-ಮಹಾಭಾರತಗಳ ಪ್ರಭಾವ ಅವರ ಜೀವನದ ಮೇಲೆ ವಿಶೇಷವಾಗಿ ಆಗಿದ್ದು ಆ ಬಗ್ಗೆ ಕೂಲಂಕಷ ಅಧ್ಯಯನ ನಡೆಯಬೇಕಾದುದು ಅತ್ಯಗತ್ಯವಾಗಿದೆ ಎಂದು ಡಾ.

ಗುಂಥರ್ ಅಭಿಪ್ರಾಯ ಪಡುತ್ತಿದ್ದಾರೆ.

ದಿಲ್ಲಿಯಲ್ಲಿಯ ಆಗ್ನೇಯೇಶಿಯಾ ಸಂಸ್ಥೆಯ ವರಿಷ್ಠರಾಗಿರುವ ಡಾ. ಗುಂಥರ್ ಜರ್ಮನಿಯ ಹೈಡಲ್‌ಬರ್ಗ್‌ದಲ್ಲಿರುವ ಇದೇ ಸಂಸ್ಥೆಯ ಪರವಾಗಿ ಭಾರತಕ್ಕೆ ಸಂಶೋಧನೆಯ ಉದ್ದೇಶದಿಂದ ಬರುವ ಜರ್ಮನ್ ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ ಮಾರ್ಗದರ್ಶನ ನೀಡುತ್ತಿದ್ದಾರೆ. ಈ ಕೆಲಸ ಹೀಗೆ ಮುಂದುವರಿಯಬೇಕಾದುದು ಅಗತ್ಯ ಎನ್ನುತ್ತಾರೆ ಅವರು. ತನ್ನನ್ನು ಕೇವಲ 'ಸತ್ತವರ ಸಂಗದಲ್ಲಿ' ದಿನಗಳೆವ ವಿದ್ವಾಂಸ ಎಂದು ಜನ ಭಾವಿಸಬಾರದೆಂದು ಡಾ. ಗುಂಥರ್ ಆಗಾಗ ವಿದ್ವಾಂಸರ ಚರ್ಚಾಗೋಷ್ಠಿಗಳನ್ನು ಏರ್ಪಡಿಸುತ್ತಾರೆ. ಪ್ರಾದೇಶಿಕ ಭಾಷೆಗಳಲ್ಲಿಯ ಆಧುನಿಕ ಸಾಹಿತಿಗಳ ಪುಸ್ತಕಗಳನ್ನು ಅನುವಾದ ಮಾಡಿಸಿ ಆಗ್ನೇಯೇಶಿಯಾ ಸಂಸ್ಥೆಯ ಪರವಾಗಿ ಪ್ರಕಟಿಸಿದ್ದಾರೆ.

ಡಾ. ಗುಂಥರ್ ಈಗ ಹೈಡಲ್‌ಬರ್ಗ್‌ದಲ್ಲಿಯ ಆಗ್ನೇಯೇಶಿಯಾ ಸಂಸ್ಥೆಯಲ್ಲಿ ಧರ್ಮಶಾಸ್ತ್ರ ವಿಭಾಗದ ಪರಿಷ್ಠಾಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಶೀಘ್ರದಲ್ಲಿಯೆ ಅಲ್ಲಿಗೆ ತೆರಳಲಿದ್ದಾರೆ. ಆದರೂ ಅವರ ತಲೆಯಲ್ಲಿರುವದು ಈಗ ಒಂದೇ ಯೋಚನೆ- ಯಾವಾಗ ಭಾರತಕ್ಕೆ ಹಿಂತಿರುಗುವೆನೊ ಎಂಬುದೇ ಅದು.

ಭಾರತದ ಬೀಡಿ ಅವರನ್ನು ಬಹುವಾಗಿ ಆಕರ್ಷಿಸಿದೆ. ಅವರು ಸಿಗರೇಟು ಸೇದುವದಿಲ್ಲ; ಬೀಡಿ ಎಳೆಯುವದನ್ನು ಬಿಟ್ಟಿಲ್ಲ! ✡

ಕ್ರಾಂತಿಕಾರಿ ರಾಮಪ್ರಸಾದ ಬಿಸ್ಮಿಲ್ಲರು ಭೂಗತರಾಗಿದ್ದಾಗ ಅವರು ರೈಲನ್ನೇರುವುದು ಪೋಲೀಸರಿಗೆ ಹೇಗೋ ತಿಳಿಯಿತು. ಮುಖಪರಿಚಯವಿಲ್ಲದಿದ್ದರೂ ಅವರೆಲ್ಲರೂ ಆ ನಿಲ್ದಾಣಕ್ಕೆ ಮುತ್ತಿಗೆ ಹಾಕಿದರು.


ಗಾಡಿ ಬಂದಿತು. ಸೂಟು ಬೂಟುಗಳನ್ನು ಧರಿಸಿದ ಯುವಕನೊಬ್ಬ ಕೈಲಿ ಹಂಟರ್ ಹಿಡಿದುಕೊಂಡು ಠೀವಿಯಿಂದ ಮೊದಲ ದರ್ಜೆಯ ಟಿಕೇಟು ತೆಗೆದುಕೊಂಡ. ಅನಂತರ ತನ್ನ ಸೂಟ್‌ಕೇಸನ್ನು ಪೋರ್ಟರನಿಗೆ ಕೊಟ್ಟು ರೈಲು ಗಾಡಿಯತ್ತ ನಡೆದ. ಪೋರ್ಟರ್ ಅವನನ್ನು ಹಿಂಬಾಲಿಸುವಾಗ ಕಲ್ಲಿಗೆ ಎಡವಿ ಕೆಳಗೆ ಬಿದ್ದುದರಿಂದ ಅವನ ತಲೆಯಿಂದ ಸೂಟ್‌ಕೇಸು ಕೆಳಗುರುಳಿ ಒಳಗಿದ್ದ ರಿವಾಲ್ವರ್ ಹೊರಬಿತ್ತು.

ಆಗ ಇದನ್ನು ನೋಡಿ ಪೋಲೀಸ್ ಅಧಿಕಾರಿ ಅಲ್ಲಿಗೆ ಧಾವಿಸಿದ. ಆದರೆ ಆ ಯುವಕ ಧೈರ್ಯಗುಂದಲಿಲ್ಲ. ಬದಲು, ಹಂಟರಿನಿಂದ ಪೋರ್ಟರನನ್ನು ಹೊಡೆಯುತ್ತಾ, "ಸ್ಕೌಂಡ್ರೆಲ್, ನನ್ನ ಮೌಜರ್ ಮುರಿದಿದ್ದರೆ ಅದನ್ನು ನಿನ್ನಪ್ಪ ಕೊಡುತ್ತಿದ್ದನೆ?" ಎಂದು ಇಂಗ್ಲೀಷಿನಲ್ಲಿ ಅಬ್ಬರಿಸಿದ.

ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡಕಿದೆಯೆಂದು ಆ ಅಧಿಕಾರಿಗೆ ಅನ್ನಿಸಲೇ ಇಲ್ಲ. ಆತ ಗೌರವದಿಂದ ಆ ರಿವಾಲ್ವರನ್ನು ಸೂಟ್‌ಕೇಸಿನಲ್ಲಿಟ್ಟು ತನ್ನ ಜವಾನನ ಮೂಲಕ ಅದನ್ನು ರೈಲಿನ ಮೊದಲ ದರ್ಜೆಯಲ್ಲಿರಿಸಿದ. ಆ ಯುವಕ ಕೃತಜ್ಞತಾಪೂರ್ವಕವಾಗಿ ಅವನ ಕೈ ಕುಲುಕಿದ.

ಮುಂದೆ ಎರಡು ದಿನಗಳ ನಂತರ ಆ ಯುವಕನೇ ರಾಮಪ್ರಸಾದ ಬಿಸ್ಮಿಲ್ಲನೆಂದು ಗೊತ್ತಾದಾಗ ಪೋಲೀಸ್ ಅಧಿಕಾರಿ ಇಂಗು ತಿಂದ ಮಂಗನಂತಾದ.

—ಹ. ರಾ. ವ. ಕೃಷ್ಣಶಾಸ್ತ್ರಿ



ಜ್ಞಾನಪೀಠ ಪ್ರಶಸ್ತಿ ಕಾದಂಬರಿ

ಯಯಾತಿ

ದ. ಲ. ಕೆ.

ಪದ್ಮಭೂಷಣ ವಿಷ್ಣು ಸಖಾರಾಮ ಖಾಂಡೇಕರ ಮರಾಠಿ ಸಾಹಿತ್ಯದಲ್ಲಿ ಸುವಿಖ್ಯಾತ ಹೆಸರು. ಕಳೆದ ಅರ್ಧ ಶತಮಾನಕ್ಕಿಂತಲೂ ಹೆಚ್ಚು ಕಾಲ ಅವರು ಮರಾಠಿ ಸಾಹಿತ್ಯಾಕಾಶದಲ್ಲಿ ರಾರಾಜಿಸುತ್ತಿದ್ದಾರೆ. ಕಥೆ, ಚಿತ್ರಪಟಕಥೆ, ಪ್ರಬಂಧ, ವಿಮರ್ಶೆ, ಕಾದಂಬರಿ ಪ್ರಪಂಚದಲ್ಲಿ ಶ್ರೀ ಖಾಂಡೇಕರರು ಸಲ್ಲಿಸಿರುವ ಸೇವೆ ಅಮೋಘ. ಕನ್ನಡ ಸಾಹಿತಿಗಳಲ್ಲಿ ಅವರನ್ನು ಹೋಲಿಸಬಹುದಾದರೆ ಡಾ. ಶಿವರಾಮ ಕಾರಂತರೊಬ್ಬರೊಡನೆ ಮಾತ್ರ. ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಡಾ. ಶಿವರಾಮ ಕಾರಂತರದೇ ಒಂದು ದಾರಿಯಾಗಿರುವಂತೆ ಮರಾಠಿ ಸಾಹಿತ್ಯದಲ್ಲಿ ಶ್ರೀ ವಿ. ಸ. ಖಾಂಡೇಕರರದೇ ಒಂದು ದಾರಿ ಅಂದರೆ ತಪ್ಪಾಗಲಿಕ್ಕಿಲ್ಲ. ಇಂಥ ವೈಶಿಷ್ಟ್ಯಪೂರ್ಣ ಸಾಹಿತಿಗಳಾದ ಶ್ರೀ ಖಾಂಡೇಕರರಿಗೆ ಈ ಸಲ ಜ್ಞಾನಪೀಠ ಪ್ರಶಸ್ತಿ ದೊರೆತಿರುವದು ಅತ್ಯಂತ ಉಚಿತವಾಗಿದೆ. ಜ್ಞಾನಪೀಠದವರು ಅವರ ಈ 'ಯಯಾತಿ' ಕಾದಂಬರಿಗೆ ಈ ಪ್ರಶಸ್ತಿ ನೀಡಿರುವದಾಗಿ ಸಾರಿದ್ದಾರೆ. ಅವರ ಈ 'ಯಯಾತಿ' ಕಾದಂಬರಿ ಬಹಳ ಸುದೈವಿ ಎಂದು ಹೇಳಬೇಕಾಗುತ್ತದೆ. ಯಾಕೆಂದರೆ ಶ್ರೀ ಖಾಂಡೇಕರರಿಗೆ ಮಹಾರಾಷ್ಟ್ರ ರಾಜ್ಯಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡಮಿ ಪುರಸ್ಕಾರ ಮತ್ತು ಈಗ ಈ ಜ್ಞಾನಪೀಠ ಪ್ರಶಸ್ತಿ ದೊರೆತದ್ದು ಈ 'ಯಯಾತಿ' ಕಾದಂಬರಿಯಿಂದಾಗಿ. ಒಬ್ಬ ಲೇಖಕನ ಒಂದೇ ಕೃತಿಗೆ ಹೀಗೆ ಮೂರು ಪುರಸ್ಕಾರಗಳು ದೊರೆತದ್ದು ವಿರಳ. 'ಯಯಾತಿ' ಪೌರಾಣಿಕ ಕಾದಂಬರಿಯಾಗಿದೆ.

ಶ್ರೀ ಖಾಂಡೇಕರರು ಅಂಥ ಶ್ರೀಮಂತ ಕುಟುಂಬದವರೇನಲ್ಲ. ಮನೆತನದ ಆರ್ಥಿಕ ದುಃಸ್ಥಿತಿಯಿಂದಾಗಿ ಕಾಲೇಜ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ, ಆಗಿನ ಸಾವಂತವಾಡಿ ಸಂಸ್ಥಾನದ ಶಿರೋಡೆ ಗ್ರಾಮದಲ್ಲಿ ಮಾಧ್ಯಮಿಕ ಶಾಲೆಯ ಕೆಲಸಕ್ಕೆ ಸೇರಬೇಕಾಗಿ ಬಂದಿತು. ಹದಿನೆಂಟು ವರ್ಷಕಾಲ ಅವರು ಅಲ್ಲಿ ಶಿಕ್ಷಕರಾಗಿದ್ದು ಮುಖ್ಯೋಪಾಧ್ಯಾಯರೂ ಆದರು. ಅವರ ಲೇಖನ ಕಾರ್ಯ ಪ್ರಾರಂಭವಾದದ್ದು ಅಲ್ಲಿಯೆ. ಮೊದಲು ಕಥೆಗಳನ್ನು ಬರೆಯಲು ಪ್ರಾರಂಭಿಸಿದರು. ಕಾದಂಬರಿ ಪ್ರಪಂಚವನ್ನು ಪ್ರವೇಶಿಸಿದರು. ಶಿರೋಡೆಯ ಪರಿಸರದಲ್ಲಿ ನಡೆದ ರಾಷ್ಟ್ರೀಯ ಜಾಗ್ರುತಿ, ಪ್ರತ್ಯಕ್ಷ ಶಿರೋಡೆಯಲ್ಲಿಯೆ ನಡೆದ ಉಪ್ಪಿನ ಸತ್ಯಾಗ್ರಹ ಶ್ರೀ ಖಾಂಡೇಕರರಿಗೆ ಅಪಾರ ಸ್ಫೂರ್ತಿಯನ್ನೂ ಅಪೂರ್ವ ಅನುಭವವನ್ನೂ ದಯಪಾಲಿಸಿದವು. ಅವರ ಕೃತಿಗಳು ಸತ್ವಪೂರ್ಣವಾಗಿರುವದಕ್ಕೆ ಈ ಅನುಭವವೇ ಕಾರಣವಾಗಿದೆ. ಜನಜೀವನವನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಅವರ ದೃಷ್ಟಿ, ದೀನದಲಿತರ ಬಗೆಗೆ ಅವರಲ್ಲಿರುವ ಅನುಕಂಪ, ಭಾರತಮಾತೆಯ ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವದಿಂದ ಅವರಲ್ಲಿ ಜಾಗ್ರತ

ವಾದ ರಾಷ್ಟ್ರೀಯ ಪ್ರಜ್ಞೆ ಇವೆಲ್ಲ ಅವರ ಬಾಳನ್ನು ರೂಪಿಸಿದ್ದರಿಂದ ಅವರ ಕೃತಿಗಳು ಸ್ವಾಭಾವಿಕವಾಗಿಯೆ ಸತ್ವಪೂರ್ಣಗಳಾದವು. ರನ್ನಕ್ಕೆ ಚಿನ್ನದ ಕುಂದಣವಿಟ್ಟಂತೆ ಇವರ ಜೀವಂತ ಶೈಲಿ ಇವರ ಕೃತಿಗಳನ್ನು ಇನ್ನಷ್ಟು ಆಕರ್ಷಕವಾಗಿಸಿದೆ.

ಶಿರೋಡೆಯಿಂದ ಶ್ರೀ ಖಾಂಡೇಕರರು ಕೊಲ್ಹಾಪುರಕ್ಕೆ ಬಂದದ್ದು ಮರಾಠಿ ಚಿತ್ರ ನಿರ್ಮಾಪಕರ ಆಗ್ರಹದಿಂದಾಗಿ, ಅವರಿಗೆ ಕಥೆಗಳನ್ನು ಬರೆದು ಒದಗಿಸುವದಕ್ಕಾಗಿ. ಅಂದಿನಿಂದ ಕಳೆದ ೩೦–೩೫ ವರ್ಷಕಾಲ ಅವರು ಕೊಲ್ಹಾಪುರದಲ್ಲಿಯೇ ನೆಲಸಿದ್ದಾರೆ. ಇವರ ಚಿತ್ರಪಟ ಕಥೆಗಳೂ ಜನ ಜಾಗೃತಿಯ ದೃಷ್ಟಿಯಿಂದಲೇ ರೂಪುಗೊಂಡಿದ್ದವು.

ಇವರ ಕೃತಿಗಳು ಪಲವಾರು ಭಾಷೆಗಳಲ್ಲಿ ಅನುವಾದಿತವಾಗಿರುವಂತೆ ಕನ್ನಡದಲ್ಲಿಯೂ ಬಂದಿವೆ, ಬರುತ್ತಿವೆ. ಇವರ ಯಯಾತಿ ಕಾದಂಬರಿಗೆ ಮಹಾರಾಷ್ಟ್ರ ರಾಜ್ಯ ಪ್ರಶಸ್ತಿ ದೊರೆತದ್ದು ೧೯೬೧ರಷ್ಟು ಹಿಂದೆಯೆ. ಹದಿನಾಲ್ಕು ವರ್ಷಗಳ ನಂತರ ಅದೇ ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ವಾಚಕರ ದೃಷ್ಟಿಯಿಂದಲೂ ಈ 'ಯಯಾತಿ' ಅತ್ಯಂತ ಜನಪ್ರಿಯವಾಗಿದೆ. ದೇವಯಾನಿ– ಯಯಾತಿ– ಶರ್ಮಿಷ್ಠಾ ಈ ತ್ರಿಕೋಣದ ಪೌರಾಣಿಕಕಥೆಯನ್ನೇ ಶ್ರೀ ಖಾಂಡೇಕರರು ಇಂದಿನ ಪರಿಸ್ಥಿತಿಗೂ ಅನ್ವಯಿಸುವ ರೀತಿಯಲ್ಲಿ ನಿರೂಪಿಸಿರುವದನ್ನು ಕಂಡಾಗ ಅವರ ಅದ್ಭುತ ಕಥನ ಕೌಶಲದ ಪರಿಚಯವಾಗದೆ ಇರದು.

'ಯಯಾತಿ'ಯ ಕಥೆ

ಯಯಾತಿ ನಹುಷನ ಮಗ. ಇಂದ್ರನನ್ನೇ ಸೋಲಿಸಿ, ಇಂದ್ರಾಣಿಯ ಮೇಲಿನ ಮೋಹದಿಂದ ನಹುಷ ಋಷಿಗಳು ಹೊತ್ತ ಪಲ್ಲಕ್ಕಿಯಲ್ಲಿ ಆಕೆಯ ಭೆಟ್ಟಿಗೆ ಹೊರಟಾಗ, ಮಂದಗಮನದಿಂದ ಸಾಗಿದ ಋಷಿ ಅಗಸ್ತ್ಯನನ್ನು ಒದೆದುದಕ್ಕಾಗಿ ಶಾಪಗ್ರಸ್ತನಾಗುತ್ತಾನೆ. 'ನೀನೂ ನಿನ್ನ ಮಕ್ಕಳೂ ಸುಖಪಡೆಯದೆ ಹೋಗಲಿ' ಎಂಬುದೇ ಆ ಶಾಪ. ನಹುಷ ಆ ಶಾಪವನ್ನು ಕಡೆಗಣಿಸಿ ತನ್ನ ಮಗ ಯಯಾತಿಯನ್ನು ಬೆಳೆಸುತ್ತಾನೆ. ರಾಜಕುಮಾರ ಯಯಾತಿ ಧೀರೋದಾತ್ತನಾಯಕನಾಗಿ ಬೆಳೆಯುತ್ತಾನೆ. ಸಕಲ ವಿದ್ಯಾ ನಿಪುಣನಾಗಿ ಯುವರಾಜ ಪದವನ್ನು ಅಂಗೀಕರಿಸುತ್ತಾನೆ.

ದೈತ್ಯಗುರು ಶುಕ್ರಾಚಾರ್ಯನು ಭಗವಾನ್ ಶಂಕರರನ್ನು ಆರಾಧಿಸಿ ಸಂಜೀವಿನಿ ವಿದ್ಯೆಯನ್ನು ಪಡೆದುಕೊಂಡು ಬಂದದ್ದರಿಂದ ದೈತ್ಯರಾಜ ವೃಷಪರ್ವನು ದೇವತೆಗಳ ವಿರುದ್ಧ ಯುದ್ಧ ಸಾರಬೇಕೆನ್ನುತ್ತಾನೆ. ಶುಕ್ರಾಚಾರ್ಯರ ಸಂಜೀವಿನಿ ವಿದ್ಯೆಯಿಂದಾಗಿ ದೈತ್ಯರಾರೂ ಸಾಯುವದಿಲ್ಲವೆಂದಾದ್ದರಿಂದ ಅವರಿಗೇ ಜಯ ಕಟ್ಟಿಟ್ಟದ್ದು ಎಂಬ ಭಾವನೆ ಉಂಟಾಗುತ್ತದೆ. ಈ ಯುದ್ಧ ತಡೆಗಟ್ಟಬೇಕು ಎಂದು ಅಂಗಿರಸ ಋಷಿಯು ನಡೆಸುವ ಶಾಂತಿ ಯಜ್ಞದ ರಕ್ಷಣೆಗೆ ಯುವರಾಜ ಯಯಾತಿ ಅಂಗಿರಸ ಋಷಿಯ ಆಶ್ರಮಕ್ಕೆ ಆಗಮಿಸುತ್ತಾನೆ. ಏತತ್ಪೂರ್ವದಲ್ಲಿ ಯಯಾತಿಯು ನಹುಷರಾಜನ ಅಶ್ವಮೇಧ ಯಾಗದ ಕುದುರೆಯೊಡನೆ ಆರ್ಯಾವರ್ತವನ್ನೆಲ್ಲ ಸಂಚರಿಸಿ ದಿಗ್ವಿಜಯಿಯಾಗಿ ಬಂದಿರುತ್ತಾನೆ. ಆ ಕಾಲದಲ್ಲಿ ಪೂರ್ವ ಆರ್ಯಾವರ್ತದಲ್ಲಿ ಯಯಾತಿಗೆ ತನ್ನ ಅಣ್ಣ ಯತಿಯ ಭೆಟ್ಟಿಯಾಗಿರುತ್ತದೆ. ನಹುಷನ ಮಕ್ಕಳಿಗೆ ಸುಖವಿಲ್ಲ ಎಂಬ ಶಾಪದಿಂದ ತ್ರಸ್ತನಾದ ಯತಿ ನಿಜಸುಖಾನ್ವೇಷಣೆಗಾಗಿ ಸಂನ್ಯಾಸಿಯಾಗಿರುತ್ತಾನೆ. ಯಯಾತಿ ಆತನನ್ನು ಹಸ್ತಿನಾಪುರಕ್ಕೆ ಕರೆದುಕೊಂಡು ಬರಲು ಯತ್ನಿಸಿ ವಿಫಲನಾಗಿರುತ್ತಾನೆ.

ಈಗ ತನ್ನ ಪಾಲಿಗೆ ಬಂದ ಯಜ್ಞ ರಕ್ಷಣೆಯ ಕಾರ್ಯ ಅಧಿಕ ಗೌರವದ್ದೆಂದು ಯಯಾತಿ ಭಾವಿಸುತ್ತಾನೆ. ಈ ಯಜ್ಞದ ಮುಖ್ಯ ಋತ್ವಿಜ ಕಚನು ದೇವಗುರು ಬೃಹಸ್ಪತ್ಯಾಚಾರ್ಯರ ಮಗನಾಗಿದ್ದು ಯಯಾತಿಯ ಸಮವಯಸ್ಕನಾಗಿರುತ್ತಾನೆ. ಕಚನದು ಸಾತ್ವಿಕ ಜೀವನ, ಯಯಾತಿಯದು

ರಾಜಸ ಜೀವನ. ಈ ಯಜ್ಞ ಕಾಲದಲ್ಲಿ ಕಚನು ಯಯಾತಿಯ ಜೀವನಕ್ಕೆ ಸಂಯಮ ತಂದು ಕೊಡಲು ಪರಿಶ್ರಮಿಸುತ್ತಾನೆ. ಈ ಯಜ್ಞ ಮುಕ್ಕಾಲು ಭಾಗ ಪೂರ್ತಿಗೊಂಡಾಗ ನಹುಷರಾಜನಿಗೆ ಅಸ್ವಸ್ಥತೆ ತಲೆದೋರಿ ಯಯಾತಿಯು ರಾಜಧಾನಿಗೆ ಹಿಂತಿರುಗಬೇಕಾಗುತ್ತದೆ.

ಯಯಾತಿ ರಾಜಧಾನಿಗೆ ಹಿಂತಿರುಗಿ ತೀವ್ರ ರೋಗಗ್ರಸ್ತನಾದ ನಹುಷನನ್ನು ಕಂಡು ಕಂಗಾಲಾಗುತ್ತಾನೆ. ಯುವರಾಜ ಹೀಗೆ ಖಿನ್ನನಾದುದನ್ನು ಕಂಡು ಮಹಾರಾಣಿಯು ಆತನಿಗೆ ಅಶೋಕ ವನದಲ್ಲಿ ವಿಶ್ರಾಂತಿ ಪಡೆಯಲು ಹೇಳುತ್ತಾಳೆ. ರಾಜಧಾನಿಗೆ ಬರುವ ಋಷಿ ಮುನಿಗಳ ಆತಿಥ್ಯಕ್ಕಾಗಿ ಇರುವ ಅಶೋಕ ವನದಲ್ಲಿ ಯಯಾತಿ ಇದ್ದುಕೊಂಡು ತಂದೆ ನಹುಷನನ್ನು ದಿನಕ್ಕೊಮ್ಮೆ ಭೆಟ್ಟಿಯಾಗಿ ಬರುತ್ತಿರುತ್ತಾನೆ. ಇಂಥ ವ್ಯಗ್ರ ಮನಸ್ಥಿತಿಯಲ್ಲಿ ಯಯಾತಿ ಮುಕುಲಿಕೆ ಎಂಬ ದಾಸಿಯ ಆಕರ್ಷಣೆಗೊಳಗಾಗಿ ಆಕೆಯ ಅಂಗಸುಖ ಲೋಲುಪನಾಗುತ್ತಾನೆ. ನಹುಷ ತನ್ನ ಕಾಯಿಲೆಯಿಂದ ಮೃತನಾದ ನಂತರ ಯಯಾತಿ ಪಟ್ಟಕ್ಕೆ ಬರುತ್ತಾನೆ.

ಆಂಗಿರಸ ಋಷಿಯ ಶಾಂತಿಯಜ್ಞ ಪೂರ್ತಿಯಾದರೂ ದೇವ–ದಾನವರ ಯುದ್ಧ ಪ್ರಾರಂಭವಾಗುತ್ತದೆ. ಕಚ . ತನ್ನವರ ಉದ್ಧಾರಕ್ಕಾಗಿ ದೈತ್ಯಗುರು ಶುಕ್ರಾಚಾರ್ಯರಲ್ಲಿಗೆ ಹೋಗಿ ವಿಶ್ವಪ್ರಯತ್ನದಿಂದ ಅವರನ್ನು ಒಲಿಸಿ ಸಂಜೀವಿನಿ ವಿದ್ಯೆ ಪಡೆದು ಮರಳುತ್ತಾನೆ. ಶುಕ್ರಾಚಾರ್ಯರ ಕನ್ಯೆ ದೇವಯಾನಿ ಈ ಕಚನನ್ನು ಮೋಹಿಸಿ ವಿವಾಹವಾಗಲು ಯತ್ನಿಸುತ್ತಾಳೆ. ಆದರೆ ಆತ ಒಪ್ಪುವದಿಲ್ಲ. ದೇವಯಾನಿಗೆ ಮುಖಭಂಗವಾದಂತಾಗುತ್ತದೆ, ಕಚನನ್ನು ಆರಾಧಿಸುತ್ತಿದ್ದ ರಾಜಪುತ್ರಿ ಶರ್ಮಿಷ್ಠೆಗೆ ಆತ ಉದಾತ್ತ ಪ್ರೇಮದ ಸಂದೇಶ ನೀಡಿ ಆಕೆಯ ಗೌರವ ಪಾತ್ರನಾಗುತ್ತಾನೆ. ಕಚ ಸಂಜೀವಿನಿ ವಿದ್ಯೆ ಸಹಿತ ದೇವ ಲೋಕಕ್ಕೆ ಹಿಂತಿರುಗಿದ ನಂತರ ದೈತ್ಯರಾಜ ವೃಷಪರ್ವ ಯುದ್ಧ ನಿಲ್ಲಿಸಿಬಿಡುತ್ತಾನೆ. ಶುಕ್ರಾಚಾರ್ಯನು ಮತ್ತೆ ತಪಸ್ಸನ್ನು ಆಚರಿಸಿ ಬೇರೊಂದು ಸಿದ್ಧಿ ಪಡೆಯಲು ತವಕಿಸುತ್ತಿರುತ್ತಾನೆ.

ಒಂದಿನ ದೇವಯಾನಿ, ಶರ್ಮಿಷ್ಠೆಯರ ಸಖಿಯರ ಸಹಿತ ಜಲ ಕ್ರೀಡೆಗೆಂದು ಹೋಗಿದ್ದಾಗ, ದಾಸಿಯ ಅಚಾತುರ್ಯದಿಂದ ದೇವಯಾನಿಯ ಸೀರೆ ಶರ್ಮಿಷ್ಠೆಯ ಕೈಗೆ ಬರುತ್ತದೆ. ಅದನ್ನು ಸೆಳೆದುಕೊಳ್ಳಲು ದೇವಯಾನಿ ಪ್ರಯತ್ನಿಸಿದಾಗ ನಡೆದ ಓಡಾಟದಲ್ಲಿ ದೇವಯಾನಿ ಸಮೀಪದ ಬಾವಿಯೊಂದಕ್ಕೆ ಬೀಳುತ್ತಾಳೆ. ಕಚ ತನಗೆ–ಉಡುಗೊರೆಯಾಗಿ ಕೊಟ್ಟ ದೇವ ಲೋಕದ ಸೀರೆ ಅದೆಂದು ದೇವಯಾನಿಗೆ ಅಷ್ಟೊಂದು ಮೋಹ ಆ ಸೀರೆಯ ಬಗ್ಗೆ. ಅದು ತನ್ನದೇ ಸೀರೆ ಎಂದು ಶರ್ಮಿಷ್ಠೆ ಆಗ್ರಹ. ಈ ಹಟದಲ್ಲಿ ಆಚಾತುರ್ಯ ನಡೆದು ಹೋಯಿತು.

ಬಾವಿಯಲ್ಲಿ ಬಿದ್ದ ದೇವಯಾನಿ ಸಹಾಯಕ್ಕಾಗಿ ಕೂಗಿಕೊಳ್ಳುತ್ತಿದ್ದಾಗ ಬೇಟೆಗೆಂದು ಬಂದಿದ್ದ ಯಯಾತಿ ಆ ಆರ್ತನಾದ ಕೇಳಿ, ಅಲ್ಲಿಗೆ ಧಾವಿಸಿ, ತನ್ನ ಶರ ಚಮತ್ಕಾರದಿಂದ ಆಕೆಯನ್ನು ಬಾವಿಯಿಂದ ಮೇಲೆತ್ತುತ್ತಾನೆ. ಕೈನೀಡಿ ಉದ್ಧರಿಸಿದ ಆತನನ್ನು ದೇವಯಾನಿ ತನ್ನ ಪತಿ ಎಂದು ಸ್ವೀಕರಿಸುತ್ತಾಳೆ. ರಾಜಧಾನಿಗೆ ಬಂದು ತನ್ನ ತಂದೆ ಶುಕ್ರಾಚಾರ್ಯನಿಗೆ ನಡೆದ ಎಲ್ಲ ಸಂಗತಿ ತಿಳಿಸಿದಾಗ ಆತ ವೃಷಪರ್ವನನ್ನು ಕರೆಸಿ ಶರ್ಮಿಷ್ಠೆಯ ಅಪರಾಧವನ್ನು ತಿಳಿಸಿ, ದೇವಯಾನಿಯ ಅಪೇಕ್ಷೆಯಂತೆ ಅವಳು ದೇವಯಾನಿಯ ದಾಸಿಯಾಗಿ ಹಸ್ತಿನಾಪುರಕ್ಕೆ ತೆರಳಬೇಕು ಎಂದು ಹೇಳುತ್ತಾನೆ. ಶುಕ್ರಾಚಾರ್ಯನ ಆಣತಿ ಮನ್ನಿಸದಿದ್ದರೆ ಮುಂಗೋಪಿಯಾದ ಆತ ಕ್ರೋಧದಿಂದ ರಾಕ್ಷಸ ಕುಲವನ್ನೇ ಸಂಹರಿಸಿ ಬಿಟ್ಟಾನು ಎಂಬ ಭಯದಿಂದ ಶರ್ಮಿಷ್ಠೆ ದಾಸಿಯಾಗಿ ಹಸ್ತಿನಾಪುರಕ್ಕೆ ದೇವಯಾನಿಯ ಜೊತೆಯಲ್ಲಿ ಹೊರಡುತ್ತಾಳೆ.

ದೇವಯಾನಿಯನ್ನು ಪಟ್ಟ ಮಹಿಷಿಯಾಗಿಟ್ಟುಕೊಂಡು ಯಯಾತಿ ಪಟ್ಟಾಭಿಷೇಕ ಮಾಡಿಸಿಕೊಳ್ಳುತ್ತಾನೆ. ಅಂದು ಅಕಸ್ಮಾತ್ತಾಗಿ

ರಾಜಧಾನಿಗೆ ಬಂದ ಯಯಾತಿಯು ಅಣ್ಣ ಯತಿ ಪಟ್ಟಾಭಿಷೇಕ ಸಮಯದಲ್ಲಿ ಅರಮನೆಗೆ ನುಗ್ಗಿ ಸಮಾರಂಭದಲ್ಲಿಯೇ ಶರ್ಮಿಷ್ಠೆಯನ್ನು ತನಗೆ ಹೆಂಡತಿಯಾಗಿ ಕೊಡು ಎಂದು ಕೇಳುತ್ತಾನೆ. ಸಾಧಕನಾಗಿದ್ದ ಆತ ಉನ್ಮತ್ತಾವಸ್ಥೆಯಲ್ಲಿರುತ್ತಾನೆ. ಆತನ ಸಂರಕ್ಷಕನಾಗಿದ್ದ ಕಚ ಆತನನ್ನು ರಮಿಸಿ ಕರೆದೊಯ್ಯುತ್ತಾನೆ.

ತಾನು ಮಹಾರಾಣಿ ಆದುದನ್ನು ಕಚ ನೋಡಬೇಕಾಗಿತ್ತು ಎನಿಸುತ್ತದೆ ದೇವಯಾನಿಗೆ. ತಂದೆಯ ಮುದ್ದಿನ ಮಗಳಾದ ಆಕೆಗೆ ಯಯಾತಿಯನ್ನು ಒಲಿಸಿಕೊಳ್ಳಲು ಆಗುವದೇ ಇಲ್ಲ. ಪ್ರಥಮ ರಾತ್ರಿಯಲ್ಲಿಯೆ ಆತ ಮದ್ಯಪಾನ ಮಾಡಿರುವನೆಂದು ತಿಳಿದು ದೇವಯಾನಿ ಆತನ ಸಂಗಮಾಡುವದಿಲ್ಲ. ಯಯಾತಿ ದಾಸಿಯಾದ ಶರ್ಮಿಷ್ಠೆಯತ್ತ ಒಲಿಯುತ್ತಾನೆ. ಆಕೆ ತನ್ನ ದಾಸೀ ಧರ್ಮದ ಮರ್ಯಾದೆ ಮೀರುವದಿಲ್ಲ. ಒಂದಿನ ವಿಧಿ ವಿಲಾಸದಿಂದ ದೇವಯಾನಿಯ ಕೃತಿಯ ಪರಿಣಾಮವಾಗಿಯೆ ಯಯಾತಿ–ಶರ್ಮಿಷ್ಠೆಯರ ಮಿಲನವಾಗುತ್ತದೆ. ಯಯಾತಿಯಿಂದ ದೇವಯಾನಿಗೆ ಯದು ಎಂಬ ಮಗನಾದಂತೆ ಶರ್ಮಿಷ್ಠೆಗೆ ಪುರು ಎಂಬ ಮಗ ಜನಿಸುತ್ತಾನೆ. ಸವತಿ ಮತ್ಸರದಿಂದ ಶರ್ಮಿಷ್ಠೆಯನ್ನು ದೇವಯಾನಿ ಕೊಲ್ಲಿಸಬೇಕೆಂದಾಗ ಯಯಾತಿಯೇ ಆಕೆಯನ್ನು ಉಳಿಸಿ ದೂರದ ಅರಣ್ಯಕ್ಕೆ ಕಳಿಸುತ್ತಾನೆ.

"ದೈವೋ ರಕ್ಷತಿ ರಕ್ಷಿತಃ" ಎಂಬಂತೆ ಶರ್ಮಿಷ್ಠೆಗೆ ಕಾಡಿನಲ್ಲಿ ಯತಿಯು ಭೆಟ್ಟಿಯಾಗಿ ಆಕೆಯನ್ನೂ ಆಕೆಯ ಮಗ ಪುರುವನ್ನೂ ತನ್ನ ಸ್ನೇಹಿತನಾದ ಅರಣ್ಯರಾಜನ ಹತ್ತಿರಕ್ಕೆ ಕಳಿಸುತ್ತಾನೆ. ಪುರು ಅಲ್ಲಿಯೇ ಬೆಳೆದು ಸಮರ್ಥ ರಾಜಪುತ್ರನಂತೆ ಸಕಲ ವಿದ್ಯಾ ಸಂಪನ್ನನಾಗುತ್ತಾನೆ. ತಾಯಿಗೆ ವನವಾಸದಲ್ಲಿಯೇ ಸುಖವನ್ನುಂಟು ಮಾಡುತ್ತಾನೆ.

ದೇವಯಾನಿಯ ಉಪೇಕ್ಷೆಗೀಡಾದ ಯಯಾತಿ ದುಸ್ಸಂಗಕ್ಕೆ ಬಿದ್ದು ಸ್ತ್ರೀ ಲಂಪಟನಾಗುತ್ತಾನೆ. ಹಿಂದಿನ ದಾಸಿ ಮುಕುಲಿಕೆಯೇ ಆತನ ಅಧಃಪತನಕ್ಕೆ ದಾರಿ ತೋರಿಸುತ್ತಾಳೆ. ಮುಕುಲಿಕೆಯ ಸಹಾಯದಿಂದ ದಿನಕ್ಕೊಂದು ಹೆಣ್ಣು ಸಂಪಾದಿಸಿ ಯಯಾತಿ ವಿಷಯ ನಿಮಗ್ನನಾಗಿ ತನ್ನ ದುಃಖ ಮರೆಯಲು ಪ್ರಯತ್ನಿಸುತ್ತಿರುತ್ತಾನೆ. ದೇವಯಾನಿಗೆ ಗಂಡನ ಮೇಲೆ ಸೇಡು ತೀರಿಸಿಕೊಳ್ಳುವ ಬಯಕೆ ಮೂಡುತ್ತದೆ. ತಪಶ್ಚರ್ಯಕ್ಕೆ ಹೋಗಿದ್ದ ತಂದೆ ಶುಕ್ರಾಚಾರ್ಯ ಹಿಂತಿರುಗುವ ದಾರಿ ಕಾಯುತ್ತಿರುತ್ತಾಳೆ.

ಯಯಾತಿಯ ಭೋಗ ಜೀವನ ಲಂಗು ಲಗಾಮಿಲ್ಲದೆ ಸಾಗಿರುತ್ತದೆ. ಕವಿಮಿತ್ರನ ವಾಗ್ದತ್ತ ವಧು, ಆತನ ಅಣ್ಣನ ಮಗಳು ಹೀಗೆ ಯಾವ ವಿವೇಕ ವಿಚಾರವಿಲ್ಲದೆ ಹೆಣ್ಣುಗಳ ಜೀವನ ಹಾಳು ಮಾಡುತ್ತ ನಡೆಯುತ್ತಾನೆ. ವರುಷಗಳು ಉರುಳಿದಂತೆಲ್ಲ ಯಯಾತಿಯ ಆರೋಗ್ಯ ಕ್ಷೀಣಿಸುತ್ತದೆ. ದೇವಯಾನಿ ತನ್ನ ಮಗನ ಸಂಭ್ರಮದಲ್ಲಿ ಗಂಡನ ಯಾವ ಚಿಂತೆಯನ್ನೂ ತಲೆಗೆ ಹಚ್ಚಿಕೊಳ್ಳುವದಿಲ್ಲ.

ಹೀಗೆ ಕಾಲ ಉರುಳುತ್ತದೆ. ಉತ್ತರದ ಗುಡ್ಡಗಾಡು ಜನ ದಂಗೆ ಏಳುತ್ತಾರೆ. ದೇವಯಾನಿಯ ಮಗ ಯುವರಾಜ ಯದು ಅವರ ದಮನಕ್ಕಾಗಿ ಹೊರಟು, ಸೋತು ಅವರ ಕೈಸೆರೆಯಾಗುತ್ತಾನೆ. ಹಸ್ತಿನಾಪುರದಿಂದ ದೀರ್ಘಕಾಲ ಯಾವ ಸುದ್ದಿ ಇಲ್ಲದೆ ಕೊರಗುತ್ತಿದ್ದ ಶರ್ಮಿಷ್ಠೆ ತನ್ನ ಮಗ ಪುರುವಿನೊಂದಿಗೆ ಹಸ್ತಿನಾಪುರದತ್ತ ಸಾಗಿದಾಗ ಯದು ಕೈಸೆರೆಯಾದ ವಾರ್ತೆ ತಿಳಿಯುತ್ತದೆ. ಪುರು ಆತನ ಸಹಾಯಕ್ಕಾಗಿ ಧಾವಿಸುತ್ತಾನೆ.

ಯದು ಕೈಸೆರೆಯಾದ ವಾರ್ತೆಯನ್ನು ದೇವಯಾನಿ ಯಯಾತಿಗೆ ತಿಳಿಸಿ ಸಹಾಯ ಯಾಚಿಸಿದರೂ ಯಯಾತಿ ತನ್ನ ರಂಗಮಹಲಿನಿಂದ ಹೊರಬರುವದೇ ಇಲ್ಲ. ದೇವಯಾನಿ ತಪ್ತಳಾಗಿ ಕುದಿಯುತ್ತಿದ್ದಾಗಲೇ ಶುಕ್ರಾಚಾರ್ಯ ಅಪೂರ್ವಸಿದ್ಧಿ ವಶಪಡಿಸಿಕೊಂಡು ಮಗಳ ದರ್ಶನಕ್ಕಾಗಿ ಬರುತ್ತಿರುವ ಸುದ್ದಿ ಬರುತ್ತದೆ. ಅದರ ಬೆನ್ನ ಹಿಂದೇ, ಪರಾಕ್ರಮಿ ತೇಜಸ್ವಿ ಯುವಕನೊಬ್ಬ ಯದುವನ್ನು ಬಿಡಿಸಿಕೊಂಡು ರಾಜಧಾನಿಯತ್ತ ಬರುತ್ತಿರುವ ವಾರ್ತೆಯೂ ಬರುತ್ತದೆ.

ಹಸ್ತಿನಾಪುರಕ್ಕೆ ಬಂದ ಶುಕ್ರಾಚಾರ್ಯನನ್ನು ದೇವಯಾನಿ ಕರೆದುಕೊಂಡು ಯಯಾತಿಗೆ ಛೀಮಾರಿ ಹಾಕಿಸುವದಕ್ಕಾಗಿ ಆತನಿದ್ದ ಅಶೋಕವನಕ್ಕೆ ಬಂದಾಗ, ಆತ ತನ್ನ ಗುಂಗಿನಲ್ಲಿ ಶುಕ್ರಾಚಾರ್ಯನನ್ನು ಉಪೇಕ್ಷಿಸಿದ್ದರಿಂದ ಯಯಾತಿಗೆ ಅಕಾಲವಾರ್ಧಕ್ಯದ ಶಾಪ ನೀಡಿ ಹೊರಟುಹೋಗುತ್ತಾನೆ ಶುಕ್ರಾ-ಚಾರ್ಯ. ಇವರ ಭೆಟ್ಟಿಗಾಗಿ ಅಲ್ಲಿಗೆ ಆಗಮಿಸುತ್ತಾರೆ ಯದು-ಪುರು. ಆಗ ಅಲ್ಲಿ ಆತನಿಗೆ ಹೇಗೂ ದೇವಯಾನಿಗೆ ತಮ್ಮ ಯದುವನ್ನು ಬಿಡಿಸಿ ಹಂದವ ಬೇರೆ ಯಾರೂ ಆಗಿರದೆ ಶರ್ಮಿಷ್ಠೆಯ ಮಗ ಪುರು ಎಂದು ಗೊತ್ತಾಗುತ್ತದೆ. ಯಯಾತಿ ಇನ್ನೂ ಭೋಗಾಪೇಕ್ಷೆಯಿಂದ ತನ್ನ ಮುಪ್ಪನ್ನು ತೆಗೆದುಕೊಂಡು ತಾರುಣ್ಯ ನೀಡಲು ರಾಜಪುತ್ರರನ್ನು ಕೇಳಿಕೊಳ್ಳುತ್ತಾನೆ. ಆಗ ಯದು ಒಪ್ಪುವದಿಲ್ಲ; ಪುರು ತಂದೆಯ ವಾರ್ಧಕ್ಯವನ್ನು ಸ್ವೀಕರಿಸುತ್ತಾನೆ. ಅಷ್ಟರಲ್ಲಿ ಶರ್ಮಿಷ್ಠೆ ಬಂದು, ತನ್ನ ಮಗನಿಗೆ ಬಂದ ಸ್ಥಿತಿಗಾಗಿ ಗೋಳೋ ಎಂದು ಶೋಕಿಸುತ್ತಾಳೆ. ಯಯಾತಿ ತನ್ನ ಪ್ರೀತಿಯ ರಾಣಿ ಶರ್ಮಿಷ್ಠೆಯ ಗೋಳಿಗೆ ಮನ ಕರಗಿ ಪುರುವಿಗೆ ಆತನ ತಾರುಣ್ಯ ಹಿಂತಿರುಗಿಸಲಪೇಕ್ಷಿಸುತ್ತಾನೆ. ಆದರೆ ಅದಕ್ಕಾಗಿ ಯಯಾತಿ ಸಾಯಬೇಕು. ಅದಕ್ಕೂ ಸಿದ್ಧನಾಗಿ ಮಂತ್ರ ಪಠಿಸಹತ್ತುತ್ತಾನೆ. ಅಷ್ಟರಲ್ಲಿ ಕಚ ಧಾವಿಸಿ ಆತನನ್ನು ತಡೆದು ಪುರುವಿಗೆ ಪೂರ್ವವತ್ ತಾರುಣ್ಯ ನೀಡಿ ಯಯಾತಿಯನ್ನು ಉಳಿಸಿಕೊಳ್ಳುತ್ತಾನೆ. ಜನತೆಯ ಅಪೇಕ್ಷೆಯಂತೆ ಪುರು ಯಯಾತಿಯ ಉತ್ತರಾಧಿಕಾರಿಯಾಗಿ ಚಕ್ರವರ್ತಿಯಾಗುತ್ತಾನೆ. ಯಯಾತಿ ದೇವಯಾನಿ ಶರ್ಮಿಷ್ಠೆಯರೊಂದಿಗೆ ವಾನಪ್ರಸ್ಥಾಶ್ರಮ ಸ್ವೀಕರಿಸಿ ಅರಣ್ಯಕ್ಕೆ ತೆರಳುತ್ತಾನೆ.

ಜೀವಂತ ಪಾತ್ರಗಳು

ಯಯಾತಿ ಕಾದಂಬರಿಯಲ್ಲಿ ಚಕ್ರವರ್ತಿ ಯಯಾತಿ, ದೇವಯಾನಿ, ಶರ್ಮಿಷ್ಠೆ ಇವು ಮೂರೇ ಮುಖ್ಯ ಪಾತ್ರಗಳಾದರೂ ಶುಕ್ರಾಚಾರ್ಯ, ಅಂಗಿರಸ, ಕಚ, ರಾಜಮಾತೆ, ವೃಷಪರ್ವ, ಯತಿ, ಮುಕುಲಿಕೆ ಮುಂತಾದ ಪಾತ್ರಗಳು ಕಾದಂಬರಿಯ ಬೆಳವಣಿಗೆಗೆ ತಮ್ಮ ಕೊಡುಗೆ ನೀಡಿವೆ. ಯಯಾತಿ-ದೇವಯಾನಿ-ಶರ್ಮಿಷ್ಠೆಯರು ತಂತಮ್ಮ ಅನುಭವ ಹೇಳುವ ರೀತಿಯಲ್ಲಿ ಈ ಕಾದಂಬರಿ ಬೆಳೆದುಕೊಂಡು ಬಂದಿದೆ. ಈ ವಿಶಿಷ್ಟ ತಂತ್ರದಲ್ಲಿಯೂ ಶ್ರೀ ಖಾಂಡೇಕರರು ಪಾತ್ರ ಪರಿಪೋಷಣೆಗೆ ತುಂಬ ಗಮನ ಹರಿಸಿದ್ದಾರೆ. ಒಂದೊಂದು ಪಾತ್ರವೂ ಸ್ಫುಟವಾಗಿ ಪ್ರೇಕ್ಷಕರ ಚಿತ್ತ ಭಿತ್ತಿಯ ಮೇಲೆ ಮೂಡುತ್ತದೆ. ಚಕ್ರವರ್ತಿ ಯಯಾತಿಯ ಮಾನವ ಸಹಜ ಗುಣ ದೋಷಪೂರ್ಣ ಸ್ವಭಾವ, ಬ್ರಾಹ್ಮಣ ಕನ್ಯೆಯಾದ ದೇವಯಾನಿಯ ಉದ್ಧತವೃತ್ತಿ, ರಾಜಪುತ್ರಿ ಶರ್ಮಿಷ್ಠೆಯ ಶಾಲೀನತೆ-ಉದಾರ ಮನೋಭಾವ, ಶುಕ್ರಾಚಾರ್ಯನ ಮುಂಗೋಪಿತನ, ಕಚನ ಆದರ್ಶ ಜೀವನ ಈ ಕಾದಂಬರಿಗೆ ಉಜ್ವಲತೆಯನ್ನು ತಂದು ಕೊಟ್ಟಿವೆ. ಸನ್ನಿವೇಶಗಳನ್ನು ಕುತೂಹಲಕಾರಿಯಾಗಿ ಹಣೆಯುವಲ್ಲಿ ಶ್ರೀ ಖಾಂಡೇಕರರು ತಮ್ಮ ಅಪಾರ ಪ್ರತಿಭೆ ಪ್ರದರ್ಶಿಸಿದ್ದಾರೆ. ಅಲ್ಲದೆ ಈ ಕಾದಂಬರಿ ಒಂದು ದೃಷ್ಟಿಯಿಂದ ಸಾಂಕೇತಿಕವಾಗಿದೆ ಎಂದೂ ಹೇಳಬಹುದು. ಇಂದಿನ ಮಾನವ ಯಯಾತಿಯಂತೆ ಉಚ್ಛೃಂಖಲ ಜೀವನಕ್ಕಿಳಿದಿದ್ದಾನೆ. ಆತನಿಗೆ ಅಡ್ಡದಾರಿ ಹಿಡಿಸಲು ದೇವಯಾನಿಯಂಥ ಮುಂಗೋಪಿತನದ ಆಮಿಷಗಳು ಬೇಕಾದಷ್ಟಿವೆ. ಶರ್ಮಿಷ್ಠೆಯಂಥ ವ್ರತಸ್ಥ ಜೀವನ ಆತ ಕಡೆಗಣಿಸಿದ್ದಾನೆ. ಕೊನೆಗೂ ಉದ್ಧಾರವಾಗುವದು ಕಚನಂಥ ಆದರ್ಶ ಜೀವಿಯ ಕೈವಾಡದಿಂದಲೇ ಎಂದು ಅರ್ಥೈಸಿದಾಗ ಈ ಕಾದಂಬರಿಯ ಸಾಂಕೇತಿಕತೆ ಹೊಳೆಯಬಲ್ಲದು.

ಕಾದಂಬರಿಯ ಹಿನ್ನೆಲೆ

ಯಯಾತಿ ಕಾದಂಬರಿಯು ಶ್ರೀ ಖಾಂಡೇಕರರಿಗೆ ಮೂರು ಪ್ರಶಸ್ತಿಗಳನ್ನು ತಂದು ಕೊಟ್ಟಿತು. ಇದೊಂದು ಪೌರಾಣಿಕ ಕಾದಂಬರಿ. ಅದೂ ಭಾರತ ಸ್ವತಂತ್ರವಾಗಿ

ಹತ್ತು ಹದಿನೈದು ವರ್ಷಗಳ ನಂತರ ರಚಿತವಾಯಿತು. ರಾಷ್ಟ್ರೀಯ ಮನೋವೃತ್ತಿಯುವರಾದ ಶ್ರೀ ಖಾಂಡೇಕರರು ಸ್ವತಂತ್ರ ಭಾರತದ ನವನಿರ್ಮಾಣದ ಮಹಾ ಗಾಥೆಯನ್ನು ಬರೆಯುವದನ್ನು ಬಿಟ್ಟು ಈ ಪೌರಾಣಿಕ ವಿಷಯವನ್ನು ತಮ್ಮ ಮಹಾ ಕಾದಂಬರಿಗೆ ಆಯ್ದುಕೊಂಡಿದ್ದೇಕೆ? ಎಂಬ ಒಂದು ಮಾತು ಬರುತ್ತದೆ. ಅದಕ್ಕೆ ಅವರೇ ತಮ್ಮ ಈ ಕಾದಂಬರಿಯ ಹಿನ್ನುಡಿಯಲ್ಲಿ ಹೇಳಿರುವ ಅಭಿಪ್ರಾಯವನ್ನು ಗಮನಿಸಬೇಕಾಗುತ್ತದೆ.

"ಸ್ವಾತಂತ್ರ್ಯ ಸಮರದ ಕಾಲದಲ್ಲಿ ಈ ದೇಶದ ಜನತೆ, ಸ್ವಾತಂತ್ರ್ಯ ಪ್ರಾಪ್ತಿಯ ಉದಾತ್ತ ಧ್ಯೇಯದಿಂದ ಪ್ರೇರಿತರಾಗಿ, ಅದಕ್ಕಾಗಿ ತ್ಯಾಗ ಬಲಿದಾನಗಳಿಗೆ ಸಿದ್ಧರಾದರು. ಕಷ್ಟ ನಷ್ಟಗಳನ್ನು ಅಪೂರ್ವ ಧೈರ್ಯದಿಂದ ಎದುರಿಸಿದರು. ಧಾರಾತೀರ್ಥದಲ್ಲಿ ನಿಃಶಸ್ತ್ರಯೋಧರಾಗಿ ಶತ್ರುಗಳಾದ ಆಳರಸರನ್ನು ಎದುರಿಸಿ ಪ್ರಾಣಾಹುತಿಯನ್ನೂ ನೀಡಿದರು. ಅಂಥ ವೀರರ ಶೂರರ ಧೀರರ ಕೀರ್ತಿಗಾನಕ್ಕಾಗಿ ಲೇಖಕರು ತಮ್ಮ ಪ್ರತಿಭೆ ಮುಡಿಪಿಟ್ಟಿದ್ದರಲ್ಲಿ ಯಾವ ಅಚ್ಚರಿಯೂ ಇಲ್ಲ. ಆದರೆ ಸ್ವಾತಂತ್ರ್ಯಾನಂತರದ ಕಾಲದಲ್ಲಿ ಭಾರತೀಯರಲ್ಲಿ ಆ ಸದ್ಗುಣಗಳೆಲ್ಲ ಲುಪ್ತವಾಗಿ ಕೇವಲ ಸ್ವಾರ್ಥವೇ ವಿರಾಟ್ ಸ್ವರೂಪದಲ್ಲಿ ಕಾಣಹತ್ತಿರುವಾಗ ಇವರ ಕುರಿತು ಬರೆಯಬೇಕಾದುದು ಏನಿದೆ? ಅಂತೇ ನಾನು ಪುರಾಣ ಕಾಲದಲ್ಲಿಯ ಉಜ್ವಲ ಕಥಾನಕಗಳತ್ತ ಧಾವಿಸಬೇಕಾಯಿತು. ಯಯಾತಿಯ ಕಥೆ ಇಂದಿನ ಜೀವನಕ್ಕೆ ನಿಕಟವರ್ತಿಯಾಗಿದೆ ಎಂದೂ ಅನಿಸಿತು. ಅಂತೇ ಯಯಾತಿಯನ್ನು ನಾನು ಆಯ್ದುಕೊಂಡೆ. ಇದರಲ್ಲಿಯೂ ಶರ್ಮಿಷ್ಠೆ ನನ್ನ ಮನಸ್ಸನ್ನು ನನ್ನ ಕಾಲೇಜ ಜೀವನದಲ್ಲಿಯೆ ಆಕರ್ಷಿಸಿದ ಸಾಧ್ವಿ. ಆಕೆಯ ಜೀವನದ ಜಾಡನ್ನು ಹಿಡಿದು ಹೊರಟ ನನಗೆ ಯಯಾತಿಯ ದರ್ಶನವಾಯಿತು. ಸದ್ಯ ವಾನಪ್ರಸ್ಥಾಶ್ರಮದಲ್ಲಿರುವ ಶರ್ಮಿಷ್ಠೆ ಪುನಃ ನನಗೆಲ್ಲಿಯಾದರೂ ಗೋಚರಿಸಿದರೆ ಆ ಕಥೆಯನ್ನು ಮತ್ತೆ ಹೇಳುತ್ತೇನೆ" ಎಂದಿದ್ದಾರೆ ಶ್ರೀ ಖಾಂಡೇಕರ.

ಯಯಾತಿ ಕಥೆ ಪೌರಾಣಿಕವಾದರೂ ಶ್ರೀ ಖಾಂಡೇಕರರು ಸಾಕಷ್ಟು ಸ್ವಾತಂತ್ರ್ಯ ವಹಿಸಿ ಅದರಲ್ಲಿ ಮಾರ್ಪಾಟು ಮಾಡಿದ್ದಾರೆ. ಮಹಾಭಾರತದಲ್ಲಿ ಬರುವ ಕಥೆಯಲ್ಲಿ ದೇವಯಾನಿಗೆ ಇಬ್ಬರು, ಶರ್ಮಿಷ್ಠೆಗೆ ಮೂವರು ಪುತ್ರರೆಂದಿದೆ. ಇಲ್ಲಿ ಶ್ರೀ ಖಾಂಡೇಕರರು ಇಬ್ಬರಿಗೂ ಒಬ್ಬೊಬ್ಬ ಪುತ್ರನನ್ನೇ ದಯಪಾಲಿಸಿದ್ದಾರೆ. ಶುಕ್ರಾಚಾರ್ಯರು ಕಚನಿಗೆ ಸಂಜೀವಿನಿ ವಿದ್ಯೆ ನೀಡಿದ ನಂತರ ಮತ್ತೆ ತಪಶ್ಚರ್ಯ ಮಾಡಿ ಪಡೆದ ಸಿದ್ಧಿ ಎಂದರೆ ಅಕಾಲ ವಾರ್ಧಕ್ಯ ಶಾಪ ನೀಡುವ ಸಿದ್ಧಿ. ಅದನ್ನು ಎದುರಿಸಲು ಕಚನು ಶುಕ್ರಾಚಾರ್ಯರ ಶಾಪದಿಂದ ಅಕಾಲವಾರ್ಧಕ್ಯಕ್ಕೆ ಈಡಾದವರಿಗೆ ಪುನಃ ತಾರುಣ್ಯ ನೀಡುವ ಸಿದ್ಧಿ ಪಡೆದ ಎಂದು ಹೇಳುವಲ್ಲಿ ಶ್ರೀ ಖಾಂಡೇಕರರು ತಮ್ಮ ಕಲ್ಪನಾ ಶಕ್ತಿಯನ್ನು ಓಡಿಸಿದ್ದಾರೆ ಅನಿಸುತ್ತದೆ.

ಐನೂರು ಪುಟಗಳಿಗೂ ಮಿಕ್ಕಿದ ಈ ಕಾದಂಬರಿ ಒಂದು ಪುಟದಲ್ಲಿಯೂ ರಸಹೀನವಾಗಿಲ್ಲ. ಸೃಷ್ಟಿಯ ಸನ್ನಿವೇಶಗಳನ್ನೇ ಬಣ್ಣಿಸುತ್ತಿರಲಿ ವ್ಯಕ್ತಿಯ ಮನೋವ್ಯಾಪಾರಗಳನ್ನೇ ಚಿತ್ರಿಸುತ್ತಿರಲಿ, ಅರಮನೆಯ ರಾಜಕಾರಣವನ್ನೇ ನಿರೂಪಿಸುತ್ತಿರಲಿ, ಆಶ್ರಮಗಳ ಯಾಗ ಧೂಮ ಧೂಸರಿತ ಪವಿತ್ರ ವಾತಾವರಣವನ್ನೇ ಚಿತ್ರಿಸುತ್ತಿರಲಿ ಶ್ರೀ ಖಾಂಡೇಕರರು ತಮ್ಮ ಪ್ರತಿಭೆ ಪ್ರದರ್ಶಿಸದೆ ಬಿಟ್ಟಿಲ್ಲ. ಇಂಥ ಯಯಾತಿ ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿರುವದು ಯಥಾರ್ಥವೆಂದೇ ಹೇಳಬೇಕು. ಈ ಶ್ರೇಷ್ಠ ಕಾದಂಬರಿ ಯಯಾತಿಯ ಬಗ್ಗೆ ಇಷ್ಟು ಹೇಳಿದರೂ ಕನ್ನಡಿಯಲ್ಲಿ ಕನಕಾಚಲವನ್ನು ತೋರಿಸಿದಂತೆ ಆಗಿದೆ ಅಷ್ಟೆ! ಕನಕಾಚಲದ ದರ್ಶನವಾಗಬೇಕಾದರೆ ಅಲ್ಲಿಗೆ ಹೋಗಬೇಕಲ್ಲವೆ? ✡

ತೊಲಗಲಿದೆ ಈ ಶಾಪ

ಶ್ರೀಕಾಂತ

ಕುಳ್ಳರಿಗಿಲ್ಲ ಇನ್ನು ಭಯ!

ಕೆಲ ಜನರು ಕುಳ್ಳರಾಗಿರುವುದೇಕೆ? ಪೌಷ್ಟಿಕ ಆಹಾರದ ಅಭಾವ, ಚಿಕ್ಕಂದಿನಲ್ಲೆ ಎಲವುಗಳ ರೋಗಗಳು ತಗುಲಿಕೊಳ್ಳುವುದು ಆನುವಂಶಿಕತೆ ಮುಂತಾದವುಗಳು ಕುಬ್ಜ-ತನಕ್ಕೆ ಕಾರಣವಾಗಿರಬಹುದಾದರೂ ಅಂತಃ ಸ್ರಾವಿಗಳು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸದಿರುವುದರಿಂದ ಕುಳ್ಳರಾಗಿರುವವರ ಸಂಖ್ಯೆಯೇ ಹೆಚ್ಚು.

ಇನ್ನು ರಕ್ತಸಂಬಂಧಿಗಳಲ್ಲಿಯೆ ಮದುವೆಯಾಗುವ ಸಂಪ್ರದಾಯವಿರುವ ಸಮಾಜಗಳಲ್ಲಿಯೂ ಕುಳ್ಳರ ಸಂಖ್ಯೆ ಹೆಚ್ಚೆಂಬುದು ಡಾ. ವಿಕ್ಟರ್ ಮ್ಯಾಕ್‌ಉಮ್‌ಸಿಕ್ ಅವರ ಪರಿಶೀಲನೆಯಿಂದ ಸಿದ್ಧವಾಗಿದೆ. ವಿಚಿತ್ರವೆಂದರೆ ಇವರೆಲ್ಲರೂ ಅಂತಃಸ್ರಾವಿಗಳು ಸರಿಯಾದ ಪ್ರಮಾಣದಲ್ಲಿ ಹಾರ್ಮೋನನ್ನು ಸ್ರವಿಸದಿರುವುದರಿಂದಲೇ ಕುಬ್ಜರಾದವರು.

ಸಮಾಜದಲ್ಲಿ ಕುಳ್ಳರಿಗಾಗುವ ತೊಂದರೆ ಅಷ್ಟಿಷ್ಟಲ್ಲ. ಎಲ್ಲರೂ ಅವರನ್ನು ನಗಚಾಟಿಕೆಯ ದೃಷ್ಟಿಯಿಂದ ನೋಡುತ್ತಾರೆ. ಸಾಕಷ್ಟು ಶಿಕ್ಷಣವನ್ನು ಪಡೆದಿದ್ದರೂ ಸರಿಯಾದ ನೌಕರಿ ಅವರಿಗೆ ದೊರೆಯುವುದಿಲ್ಲ. ಗದ್ದಲದಲ್ಲಂತೂ ದೇವರೆ ಅವರನ್ನು ಕಾಪಾಡಬೇಕು. ರೈಲ-ನ್ನಾಗಲಿ ಬಸ್ಸನ್ನಾಗಲಿ ಏರುವಾಗ ಅವರು ಭಗೀರಥ ಪ್ರಯತ್ನವನ್ನೇ ಮಾಡಬೇಕಾಗುತ್ತದೆ. ಇನ್ನು ಕುಳ್ಳರ ಮದುವೆಯಾಗುವುದಂತೂ ಅದಕ್ಕಿಂತ ಪ್ರಯಾಸಕರ. ಸಾಕಷ್ಟು ರೂಪವಂತನಾಗಿದ್ದು ಒಳ್ಳೆ ಶಿಕ್ಷಣ ಪಡದಿದ್ದರೂ ಕುಳ್ಳನನ್ನು ಮದುವೆಯಾಗಲು ನೀಳಕಾಯದ ಯಾವ ಸುಂದರಿ ತಾನೆ ಒಪ್ಪಿ-ಯಾಳು? ಕುಳ್ಳನನ್ನು ಇನ್ನೊಬ್ಬ ಕುಬ್ಜಳೇ ಮದುವೆಯಾಗಬೇಕು. ಆದರೆ ಅಂತಹ ಜೋಡಿ ದೊರೆಯುವುದು ಅಷ್ಟು ಸುಲಭವೆ?

ಆದರೆ ಕುಳ್ಳರು ಇನ್ನು ಕುಳ್ಳತನಕ್ಕೆ ಭಯಪಡಬೇಕಾಗಿಲ್ಲ. ಮಿದುಳಿನ ಹಿಂಭಾಗದಲ್ಲಿ ಅವರೆ ಕಾಳಿನ ಆಕಾರದ ಪಿಚ್ಯುಟರಿ ಗ್ರಂಥಿಯಿಂದಲೇ ಇಷ್ಟೆಲ್ಲ ಅವಾಂತರವಾಗಿದೆಂಬುದನ್ನು ಈಗಾಗಲೆ ಕಂಡುಹಿಡಿಯಲಾಗಿದೆ. ಈ ಗ್ರಂಥಿಯು ಒಟ್ಟು ಎಂಟು ಹಾರ್ಮೋನುಗಳನ್ನು ಸ್ರವಿಸುತ್ತಿದ್ದು ಅವು

ಗಳಲ್ಲಿ HCH ಎಂಬುದು ಶರೀರದ ಬೆಳವಣಿಗೆಯನ್ನು ಪ್ರಚೋದಿಸುತ್ತದೆ. ಈ ಹಾರ್ಮೋನನ್ನು ಮೃತ ವ್ಯಕ್ತಿಗಳಿಂದ ಸಂಗ್ರಹಿಸಿ ಚುಚ್ಚುಮದ್ದಿನ ರೂಪದಲ್ಲಿ ಕುಬ್ಜ ಮಕ್ಕಳಿಗೆ ಕೊಟ್ಟಾಗ ಕುಂಠಿತಗೊಂಡ ಅವರ ಬೆಳವಣಿಗೆ ತೀವ್ರಗೊಂಡಿತು. ಪ್ರಬುದ್ಧರಲ್ಲಿ ಅಸ್ಥಿಕಣಗಳು ಒಂದಕ್ಕೊಂದು ತಗಲಿಕೊಂಡು ಏಕೀಭವಿಸಿರುವುದರಿಂದ ಈ ಉಪಾಯ ಫಲಿಸಲಾರದು.

ಅನೇಕ ಜನರು ಕಣ್ಣು, ಕಿವಿ, ಮೂತ್ರಪಿಂಡ, ಹೃದಯಗಳಂತಹ ಅಂಗಾಂಗಗಳನ್ನು ತಮ್ಮ ಮರಣಾನಂತರ ವೈದ್ಯಕೀಯ ಸಂಸ್ಥೆಗಳಿಗೆ ದಾನಮಾಡುವಂತೆ ಪಿಚ್ಯುಟರಿ ಗ್ರಂಥಿಗಳನ್ನು ದಾನಮಾಡಬೇಕು ಎಂದು ಅಮೇರಿಕದಲ್ಲಿಂದು ಅನೇಕ ಜೀವದಯಾ ಸಂಸ್ಥೆಗಳು ಪ್ರಚಾರಮಾಡುತ್ತವೆ. ಇವರ ಕಡೆಗೆ ಓಗೊಟ್ಟು ಪಿಚ್ಯುಟರಿ ಗ್ರಂಥಿಗಳನ್ನು ದಾನಮಾಡುವವರಿಂದ HCH ಅನ್ನು ಸಂಗ್ರಹಿಸಿ ಕುಬ್ಜ ಮಕ್ಕಳಿಗೆ ಚುಚ್ಚುಮದ್ದಿನ ರೂಪದಲ್ಲಿ ಕೊಡಲು ಅನೇಕ ಸಂಸ್ಥೆಗಳು ಇಂದು ಅಲ್ಲಿ ತಲೆಯೆತ್ತಿ ನಿಂತಿವೆ. ಆದರೆ ಬೇಡಿಕೆಗೆ ತಕ್ಕ ಪ್ರಮಾಣದಲ್ಲಿ ಈ ಹಾರ್ಮೋನು ಲಭ್ಯವಾಗುತ್ತಿಲ್ಲ.

ಈ ತೊಂದರೆಯನ್ನು ನಿವಾರಿಸಲು ಡಾ. ಲೀ ಎಂಬ ವಿಜ್ಞಾನಿಗಳು ಹತ್ತಾರು ವರ್ಷಗಳವರೆಗೆ ಪರಿಶ್ರಮಿಸಿ ೧೮೮ ಅಮಿನೋ ಆಮ್ಲಗಳ ಸಂಯೋಜನೆಯಿಂದ HCH ಅನ್ನು ಹೋಲುವ ಪದಾರ್ಥವೊಂದನ್ನು ತಯಾರಿಸಿದ್ದಾರೆ. ಹೀಗೆಂದಾಕ್ಷಣ ಕುಳ್ಳರಿಗಿಲ್ಲ ಇನ್ನು ಭಯ ಎಂದು ಮಾತ್ರ ಭಾವಿಸಬಾರದು. ಇದು ಪಿಚ್ಯುಟರಿಯಿಂದ ಹೊರಡುವ ಆ ಹಾರ್ಮೋನನ್ನೇ ಹೋಲುತ್ತಿದ್ದರೂ ಶೇಕಡಾ ಹತ್ತರಷ್ಟು ಮಾತ್ರ ಪರಿಣಾಮಕರವಾಗಿದೆ. ಕೃತಕವಾಗಿ ತಯಾರಿಸಿದ ಈ ಹಾರ್ಮೋನನ್ನೇ ಇನ್ನಷ್ಟು ಉತ್ತಮಪಡಿಸಿ ಅದು ಮೂಲ ಹಾರ್ಮೋನಿನ ಶೇಕಡಾ ಐವತ್ತರಷ್ಟು ಪರಿಣಾಮಕರವಾಗುವಂತೆ ಮಾಡಬಹುದೆಂದು ಡಾ. ಲೀ ಅವರು ಹೇಳುತ್ತಾರೆ. ಬಳಿಕ ಇದನ್ನೇ ಹೆಚ್ಚು ಪ್ರಮಾಣದಲ್ಲಿ ಕೊಟ್ಟು ಚಿಕಿತ್ಸೆ ಫಲಕಾರಿಯಾಗುವಂತೆ ಮಾಡಬಹುದು ಎಂದವರ ಆಶಯ. ಅದು ಸಾಧ್ಯವಾಗುವವರೆಗೆ ನಾವು ಮೂಲ HCH ಹಾರ್ಮೋನನ್ನು ಅವಲಂಬಿಸಬೇಕಷ್ಟೆ.



"ಗಂಡಸರೆಲ್ಲಾ ಹೀಗೆಯೇ; ಸ್ವಾರ್ಥಿಗಳು. ರಾಜೇಶಖನ್ನಾ ಕೂಡಾ ಮಗುವನ್ನು ನೋಡಿಕೊಳ್ಳಲು ಹೆಂಡತಿಗೆ ಸಹಾಯ ಮಾಡೋಲ್ವಂತೆ."

ಅಂತಃಸ್ರಾವಿಗಳ ವಿಷಯದಲ್ಲಿ ತಜ್ಞರಾದವರು ನಮ್ಮ ದೇಶದಲ್ಲಿಯೂ ಸಾಕಷ್ಟಿದ್ದು ಅವರೆಲ್ಲ ಒಟ್ಟಾಗಿ HCH ಅನ್ನು ಸಂಗ್ರಹಿಸಿ ಕುಬ್ಜ ಮಕ್ಕಳಿಗೆ ಚುಚ್ಚುವ ಕಾರ್ಯ ಕೈಕೊಂಡರೆ ಅಮೇರಿಕದಂತೆ ಇಲ್ಲಿನ ಮಕ್ಕಳಿಗೂ ತುಂಬ ಉಪಕಾರವಾದೀತು. ✡



ಉದಯಾನಂದ ಭಂಡಾರಿ

ಜೊಯ್ಯೋ ಎಂದು ಸುರಿಯುತ್ತಿದ್ದ ಮಳೆ ನಿಧಾನವಾಗತೊಡಗಿತ್ತು. ಆದರೂ ಅಂಗಳದಲ್ಲಿ ಮಳೆಯ ತಟ—ಪಟ ನಿಂತಿರಲಿಲ್ಲ. ಇನ್ನೊಮ್ಮೆ ಜೋರಾಗಿ ಬೀಸಿದ ಗಾಳಿ ತುಂತುರಿಗೆ ತಾಳಹಾಕತೊಡಗಿದಾಗ ಮತ್ತೊಮ್ಮೆ ಮಳೆಯ ಸುಯ್ಲು. ಗುಡು... ಗುಡು... ಗಟಕ್ ಸದ್ದಿನೊಂದಿಗೆ ಮಿಂಚಿದ ಮಿಂಚು ಕಣ್ಣುಮುಚ್ಚಿಸಿತು. ಒಂದು ಗಳಿಗೆ.

'ಚಳಿ ಆಗುತ್ತಾ, ಚಾದರ ಹೊದಿಸಬೇಕೇ?' ಎಂದಳು ಅವಳು.

"... ... ..."

''ನಿದ್ದೆ ಬಂದಿರಬೇಕು, ಎಬ್ಬಿಸಬೇಕೆ'' ಎಂದೆನಿಸಿರಬೇಕು ಅವಳಿಗೆ. ಒಂದು ಗಳಿಗೆ ಸುಮ್ಮನಿದ್ದಳು. ಅನಂತರ ಏನೆನ್ನಿಸಿತೋ, ನಿಧಾನವಾಗಿ ಎದ್ದು ಬಂದಳು ನಾನು ಮಲಗಿದ್ದೆಡೆಗೆ. ಎಚ್ಚರವಾಗಬಾರದೆಂದು ಕಾಲಿನ ಬುಡದಲ್ಲಿದ್ದ ಚಾದರನ್ನು ಮೆಲ್ಲಗೇ ತೆಗೆದು ಹೊದಿಸಿದಳು. ತಟ್ಟನೇ ಯಾಂತ್ರಿಕತೆಯಿಂದ ಎಚ್ಚೆತ್ತಿರಬೇಕು. ಮೂಗಿನ ಬಳಿ ಕೈ ತೆಗೆದುಕೊಂಡು ಹೋದಳು. ಎದೆ ಬಡಿತ ಜೋರಾಗಿರಬೇಕು. ಕ್ಷಣಕಾಲ ನನ್ನ ಎದೆಯತ ನೋಡಿದಳು. ತಟ್ಟನೇ ಚೀತ್ಕರಿಸಿ ದೇಹದ ಮೇಲೆ ಬಿದ್ದಳು.

ಹೌದು. ಅವಳು ನನ್ನ ಮಗಳು. ಅವಳಿಂದ ಎಷ್ಟು ಚಾಕರಿ ಮಾಡಿಸಿಕೊಳ್ಳಬಹುದೋ ಅಷ್ಟನ್ನು ಮಾಡಿಸಿಕೊಂಡಿದ್ದೆ. ಅವಳಿಗೂ ತೃಪ್ತಿ ಇದ್ದಿರಬೇಕು— ಹೆತ್ತಬ್ಬೆಯ ಋಣ ತೀರಿಸಿದೆ ಎಂದು.

ಬೈಲಿನಲ್ಲಿದ್ದ ತಮ್ಮನಿಗೂ ಅಂಗಡಿಯಲ್ಲಿದ್ದ ಮಗನಿಗೂ ಹೇಗೆ ಸುದ್ದಿ ತಿಳಿಯಿತೋ ಯಾವ ಮಾಯಕದಲ್ಲಿ ಅಷ್ಟು ಬೇಗ ಬಂದರೋ ನನಗೇ ಗೊತ್ತಾಗಲಿಲ್ಲ. ನರಸತ್ತು ಸುಕ್ಕುಗಟ್ಟಿದ್ದ ನನ್ನ ಮುಖ ಮಗನಿಗೆ 'ಇದು ಅಮ್ಮನೇ' ಎಂದು ಶಂಕೆ ಹುಟ್ಟಿಸಿರಬೇಕು. ಹತ್ತಿರಬಂದು ಒಂದು ಗಳಿಗೆ ನನ್ನನ್ನೇ

ದಿಟ್ಟಿಸಿ ನೋಡಿದ. ಆತನ ಮುಖದಲ್ಲಿಯ ಏರಿಳಿತದ ಅರ್ಥ ತಾಯಿಗರುಳಿಗಲ್ಲದೆ ಇನ್ನಾರಿಗೆ ಅರ್ಥವಾದೀತು? ಅಲ್ಲೇ ಕೂತು 'ಅಮ್ಮಾ...' ಅಂದ. ಧ್ವನಿ ಹೊರಡಲಿಲ್ಲ, ಅಂತರಾಳದ ಕರೆ ಅದು. ಕಣ್ಣೀರು ಉಕ್ಕುತ್ತಿತ್ತು. ಎಷ್ಟು ತಡೆಯಲೆತ್ನಿಸಿದರೂ ನಿಲ್ಲಲೊಲ್ಲದೆ ಕೆನ್ನೆಯ ಮೇಲೆ ಕಾಲುವೆ ಹರಿಯತೊಡಗಿತು. 'ಯಾಕೆ ಅಳುತ್ತೀ ಸಚ್ಚೂ? ನಾನಿಲ್ವೇ, ನಿನ್ನ ಕಣ್ಣೆದುರಿನಲ್ಲೇ ಇದ್ದೇನೆ' ಎಂದು ಹೇಳಬೇಕೆನಿಸುತ್ತದೆ. ಆದರೆ ಯಾಕೋ ನನ್ನ ಅಸ್ತಿತ್ವ ಯಾರ ಗಮನಕ್ಕೂ ಬರುವುದಿಲ್ಲವಲ್ಲ ಎಂದು ವ್ಯಥಿಸುತ್ತೇನೆ. ನನ್ನ ಧ್ವನಿ ಯಾರಿಗೂ ಕೇಳಿಸುವುದಿಲ್ಲವಲ್ಲಾ ಎಂದು ದುಃಖಿಸುತ್ತೇನೆ.

ಪಾಪ, ಶೀನ ಒಮ್ಮೆ ಕಣ್ತುಂಬಿ ನೋಡಿದ. ನೆನಪು ಕಡಿದಾಗ ದೂರಹೋಗಿ ಸುಮ್ಮನೇ ಕೂತ.

ಪಡಸಾಲೆಯಲ್ಲಿ ಗಲಾಟೆ ಕೇಳಿಸುತ್ತದೆ. ಒಳಗೆ ಹೋಗಿ ನೋಡಬೇಕೆನಿಸುತ್ತದೆ. ಆದರೆ ಕೋಣೆಯಿಡೀ ಜನರು. ಬಾಗಿಲಿನಲ್ಲಿ ಜಾಗವೇ ಇಲ್ಲ. ನುಗ್ಗುತ್ತೇನೆ. ಬಿಚ್ಚಿದ ಕೂದಲಿನ ಸರೋಜ ಗೋಡೆಗೆ ತಲೆ ಬಡಿಯುತ್ತಿದ್ದಾಳೆ. 'ಅಮ್ಮ ಹೋದಮೇಲೆ ನಾನ್ಯಾಕೆ ಇನ್ನೂ ಬದುಕಬೇಕು' ಎಂದು ಮತ್ತೊಮ್ಮೆ ತಲೆ ಗೋಡೆಗೆ ಬಡಿದಳು. ಗೋಡೆ ಅನುರಣಿಸಿತು. 'ಹೋದವಳು ಹೇಗೂ ಹೋದಳು, ಈಗ ನೀನು ಎಷ್ಟು ಅತ್ತರೇನು ಹೋದವಳು ಹಿಂದಿರುಗಬಲ್ಲಳೇ? ಇಂದು ಅವಳ ಸರದಿ, ನಾಳೆ ನಮ್ಮದು. ಕೆಲವರಿಗೆ ಬೇಗ, ಮತ್ತೆ ಕೆಲವರಿಗೆ ತಡ, ಅಷ್ಟೇ. ಬೇನೆ ತಿನ್ನದೆ ಎರಡು-ದಿನದ ಜ್ವರದಲ್ಲೇ ಅಗಲಿ ಹೋದಳು. ನಿಜ-ವಾಗಿಯೂ ಅವಳೇ ಭಾಗ್ಯಶಾಲಿ'— ಸುತ್ತ ನಿಂತ ಹೆಂಗಳೆಯರ ಸಮಾಧಾನ. ಸರೂಳ ಎದುರಿಗೆ ಹೋಗಿನಿಲ್ಲುತ್ತೇನೆ. ಅತ್ತು ಕಣ್ಣು ಕೆಂಪಗಾಗಿದೆ. ಲವಲವಿಕೆಯ ಬದಲು ಮುಖದಲ್ಲಿ ಪ್ರೇತಕಳೆ. ಉನ್ಮಾದಿನಿಯಂತೆ ತೋರುತ್ತಿದ್ದಾಳೆ.

"ಇ ಕಣೆ, ನಾನೆಲ್ಲಿಗೂ ಹೋಗೋದಿಲ್ಲ. ಇಲ್ಲೇ ನಿನ್ನ ಬಳಿಯಲ್ಲೇ ಇರ್ತೀನಿ" ಹೆಗಲು ತಟ್ಟಿ ಮುಖಕ್ಕೆ ಮುಖಕೊಟ್ಟು ಇಲ್ಲವೇ ಕಿವಿಯಲ್ಲಾದರೂ ಉಸುರಬೇಕೆಂದು ಬಗ್ಗುತ್ತೇನೆ. ಆದರೆ ಗಾಳಿಯೇ ಇಲ್ಲವಾದಂತೆ. ಎತ್ತೆತ್ತಲೂ ಶೂನ್ಯವೇ ಆವರಿಸಿದಂತೆ. ನಿಸರ್ಗವೇ ನನಗೆ ಮೌನ ತಂದು ಕೊಟ್ಟಂತೆ.

'ತುಳಸಿ ನೀರು ಬಿಡಮ್ಮ, ಬಾ ಸರೋಜ' ಎಂದು ಯಾರೋ ಹೊರಗಿನಿಂದ ಕರೆಯುವುದು ಕೇಳಿಸಿತು. ಹೆಂಗಸರು ಕೈಕೊಟ್ಟು ಎಬ್ಬಿಸಿ, ಸರೂ ಬಂದಳು ನನ್ನ ಚಾಪೆಯ ಬಳಿಗೆ.

ನೆರೆಮನೆಯ ಸುಶೀಲಮ್ಮ ಬಾಯಿ ತೆರೆಯಲು ಪ್ರಯತ್ನಪಟ್ಟರು. ಆದರೆ ತುಟಿ ಮಾತ್ರ ಸರಿಯಿತು. ಹಲ್ಲುಗಳು ಅಂಟಿಕೊಂಡಿದ್ದವು. ತುಳಸಿಕೊಡಿಯಿಂದ ಬಿಟ್ಟ ನೀರು ಹಲ್ಲುಗಳ ಎಡೆಯಿಂದ ಬಾಯಿತುಂಬ ತೊಡಗಿತು.

ಹೌದು, ಅದು ಆ ಬಾಯಿಗೆ ಹಾಕುವ ಕೊನೆಯ ನೀರು. ಇನ್ನು ಅವರಾಗಿ ಹಾಕುವುದೂ ಇಲ್ಲ, ನಾನಾಗಿ ತೆಗೆದುಕೊಳ್ಳುವುದೂ ಇಲ್ಲ.

ಅಲ್ಲಿರುವವರೆಲ್ಲ ನೀರುಬಿಟ್ಟಾದ ಮೇಲೆ ಅಲ್ಲಿಲ್ಲದವರ ಹೆಸರು ಹೇಳಿಬಾಯಿಗೆ ಬಿಡತೊಡಗಿದರು. ಮೊದಲಿಗೇ 'ರಾಜ'ನ ಹೆಸರು ಹೇಳಿ ನೀರು ಬಿಟ್ಟಾಗ ಮನಸ್ಸಿಗೇಕೋ ಕಸಿವಿಸಿಯಾದ ಹಾಗೆ.

"ರಾಜ ಯಾವಾಗ ಬರ್ತಾನೋ?" ನಿನ್ನೆ ಸಚ್ಚು ಬಳಿ ಕೇಳಿದ್ದೆ.

"ನಾಡದು ಜಾತ್ರೆಗೆ ಬರ್ತೇನೆ ಅಂತ ಬರೆದಿದ್ದ ಅಲ್ವ" ಅಂದ ಆತ. ಹ್ಞಾಂ, ಈಗ ನೆನಪಾಯಿತು. ಮೊನ್ನೆ ಸರೋಜ ಓದಿ ಹೇಳಿದ್ದಳು. ಸ್ವಲ್ಪ ಬೇಗ ಬರಬಾರದಿತ್ತೇ ಎಂದು ಮನಸ್ಸು ಹೇಳಿತ್ತು. ಅವನನ್ನು ನೋಡೋಕೆ ಕಣ್ಣು ಬಯಸಿತ್ತು. ಆದರೆ ಬಾಯಿಗೆ ಬೀಗಹಾಕಿದ್ದೆ. "ಆತನಿಗೇಕೆ ತೊಂದರೆ, ಹೇಗೂ ಬರುತ್ತಾನಲ್ಲ," ಎಂದು ನೆನೆಸಿದ್ದೆ. ಅದರೂ ಸಚ್ಚು ನಿನ್ನೆ ತಾರ್ ಕೊಟ್ಟಿದ್ದರೆ ತಾಯಿಯನ್ನು ನೋಡಲಿಕ್ಕಾದರೂ

ಬರುತ್ತಿದ್ದನೋ ಏನೋ? ಅಂತೂ ದೂರದ ಆಶೆ ಕೊನೆಗೂ ಬತ್ತಿತ್ತು....

ತೆಂಗಿನಕಾಯಿಯೊಂದನ್ನು ಒಡೆದು ಅದರ ಗಡಿಗಳಲ್ಲಿ ಬತ್ತಿ ಉರಿಸಿದರು. ಅಕ್ಕಿ ಬತ್ತ ತಲೆ ಮೇಲೂ ಕಾಲ ಕೆಳಗೂ ಹಾಕಿ ಅದರ ಮೇಲೆ ಗಡಿಯಲ್ಲಿ ಉರಿಸಿದ ಬತ್ತಿ ಇಟ್ಟರು. ಇದು ಸಂಪ್ರದಾಯ; ನಡೆದುಕೊಂಡು ಬಂದ ಪದ್ಧತಿ. ತಪ್ಪಿಯಾಕೆ ತಪ್ಪಿತಸ್ಥರಾಗಬೇಕು ಎಂಬ ಅಳುಕು ಅವರಲ್ಲಿರಬೇಕು.

"ಆದಷ್ಟು ಬೇಗ ಮುಂದಿನ ಕೆಲಸ ಪೂರೈಸೋಣ. ದೇಹವನ್ನು ಜಾಸ್ತಿ ಹೊತ್ತು ಮನೆಯಲ್ಲಿಟ್ಟುಕೊಳ್ಳಕೂಡದು'' ಜಗಲಿಯ ತುದಿಯ ಪತ್ತಾಸಿನಲ್ಲಿ ಕುಕ್ಕರಗಾಲಿನಲ್ಲಿ ಕೂತು ಅನ್ಯಮನಸ್ಕನೆಂಬಂತೆ ಶೀನ ಅನ್ನುತ್ತಿದ್ದ. ಅವನಿಗೆ ಯಾವಾಗಲೂ ಹಾಗೆಯೇ. ದೇಹ ಕಾಣಲುಬಂದ ನೆರೆಮನೆಯವರ ಆರ್ತತೆ, ಮನೆಯವರ ಸಂಕಟವೆಲ್ಲವನ್ನೂ ಜಾಸ್ತಿ ಹೊತ್ತು ನೋಡಲಾಗುವುದಿಲ್ಲ. ಅದಕ್ಕೇ ಆದಷ್ಟು ಬೇಗ ಕೆಲಸ ಮುಗಿದರೆ ನಂತರ ಹೇಗೂ ಇದ್ದದ್ದೇ ತಾನೇ?

ಆಸುಪಾಸಿನವರ ಮೇಲ್ತನಿಖೆ, ಮನೆಯವರ ಯಾಂತ್ರಿಕ ಓಡಾಟ ಆರಂಭವಾಗತೊಡಗಿತು. ಹೊಸ ಮಣ್ಣಿನ ಪಾತ್ರೆ ತರಲು ಪೇಟೆಗೆ ಹೊರಟ ಶಾಡಣ್ಣ. ತಮ್ಮ ಮಗನನ್ನು ಕರೆದು, "ಒಂದು ಲೋಟೆ ತೊಳೆದುಕೊಂಡು ಬಾ,'' ಎಂದ. ದೇವು ಲೋಟೆ ಹಿಡಿದು ಅಪ್ಪನನ್ನು ಹಿಂಬಾಲಿಸಿದ. ಶೀನ ಎದ್ದು ಜವುಳಿ ಮಳಿಗೆಗೆ ನಡೆದ, 'ಕೋರಾ' ಬಟ್ಟೆ, ಪಾಣಿ ಪಂಜೆ ತರಲು.

ಕೊಟ್ಟಿಗೆಯ ಅಟ್ಟದಲ್ಲಿದ್ದ ಬಿದಿರು ಎಳೆದು ಚಟ್ಟ ಕಟ್ಟತೊಡಗಿದ ಬಚ್ಚಣ್ಣ. ತೋಟಕ್ಕೆ ಹೋಗಿ ಒಂದು ಇಡೀ ಬಾಳೆಎಲೆ ಕಡಿದು ತಂದು ಹೆಬ್ಬಾಗಿಲಿನಲ್ಲಿರಿಸಿದ ನಾರಾಯಣ.

ಸಚ್ಚು ಅಂಗಳದಲ್ಲಿಯೇ ಮೂರುಕಲ್ಲು ನೆಟ್ಟು ಒಲೆ ತಯಾರು ಮಾಡಿದ. ಅಷ್ಟರಲ್ಲಿಯೇ ಹೊಲೆಯರಿಗೆ ಯಾರೋ ಸುದ್ದಿ ಮುಟ್ಟಿಸಿರಬೇಕು. ಅವರು ಗದ್ದೆಯ ಅಂಚಿನಲ್ಲೇ ಇದ್ದ ಮಾವಿನಮರವನ್ನು ಕಡಿಯುತ್ತಿದ್ದರು—ಕಾಷ್ಠಕ್ಕೆ. ಮಚ್ಚಿನ ಪೆಟ್ಟಿಗೆ ಸುತ್ತ ಬಿದ್ದಿದ್ದ ಚಕ್ಕೆ ಚೂರುಗಳನ್ನು ಆಯ್ದು ತಂದು ಅದರಿಂದಲೇ ಒಲೆ ಉರಿಸಿದ. ಕುತ್ತಟ್ಟದ ಮೇಲಿದ ಅರೆ ಕರಿಹಿಡಿದ ಹಲಗೆಯೊಂದನ್ನು ತಂದು ತೊಳೆದು ಶುದ್ಧ ಮಾಡಿ ಅಂಗಳದ ಮಧ್ಯದಲ್ಲಿರಿಸಿದ ಸಚ್ಚು.

'ರಾಜ ನಾಡದು 'ಧೂಳಪ' ಅಥವಾ ಶುದ್ಧದಂದು ಬರಬಹುದು. ಸುಮ್ಮನೇ ಇನ್ನೇಕೆ ತಡಮಾಡುವುದು'—ಯಾರೋ ಹೇಳಿದರು. ನನಗೇಕೋ ಮತ್ತೊಮ್ಮೆ ತಣ್ಣನೆ ಆದ ಅನುಭವ, ನೋವಿನ ಕೀರಲು ಧ್ವನಿ ಕೇಳಿಕೆ. ಹೌದು, ನಾನು ಅರ್ಧ ಶತಮಾನದಷ್ಟು ಕಾಲ ಹೊತ್ತು ತಿರುಗಿದ, ಬೆಳೆಸಿದ ದೇಹ ಇಂದು ಅಗ್ನಿಗೆ ಆಹುತಿಯಾಗಲಿದೆ. ಹೊಸತೊಂದರ ನಾಂದಿಗಾಗಿ ಆ ಬದುಕಿಗೆ ಇತಿಶ್ರೀ ಹಾಡಿಯಾಯಿತು. ಇನ್ನು ತಡಮಾಡಬಾರದು. ಆದರೆ ಮಾಡುವುದೇನು? ಅದು ಶೇಷ ಪ್ರಶ್ನೆ. ಬಂಧನ ಮುಗಿದಿಲ್ಲ, ಕರ್ಮ ತೀರಿಲ್ಲ.

'ಸತ್ತ ಗಳಿಗೆ ಹೇಗಿಽ?' ಯಾರದೋ ಧ್ವನಿ ಕೇಳಿಸಿತು. 'ಒಳ್ಳೇ ಗಳಿಗೆ. ಕಾಳೆ ಹದಿನೈದನೇ ದಿನಕ್ಕೆ ಹೋಗುತ್ತದಂತೆ' ಅಂದ ಬಟ್ಟೆ ತಂದ ಶೀನ. ಮಳಿಗೆಗೆ ಹೋದವ ಅಲ್ಲಿಯೇ ಭಟ್ಟರಲ್ಲಿಗೂ ಹೋಗಿ ಗಳಿಗೆ ಕೇಳಿ ಬಂದಿರಬೇಕು.

ಸುಮಾರು ನಾಲ್ಕುವರುಷದ ಹಿಂದೊಂದು ದಿನ ತಟ್ಟನೆ ಅವರು ತೀರಿಕೊಂಡಿದ್ದರು. ಕಾಯಿಲೆಕಸಾಲೆಯೇನೂ ಇರಲಿಲ್ಲ. ಎಲ್ಲ ಅಂದರು ಭೂತದ ಉಪದ್ರವ. ನಾನು ಒಪ್ಪಲಿಲ್ಲ. ಆದರೆ ನಿಮ್ಮ ಮಾತು ಸಟೆಯೆಂದು ಸಾಧಿಸಿತೋರಿಸಲೂ ಹೋಗಲಿಲ್ಲ. ನನಗೇಕೋ ಸಂಕಟವೆನಿಸಿತ್ತು. ಏಕಾಂಗಿ ಬಾಧೆ ಕಾಡಿಸಿತ್ತು. ಆದರೆ ಅವರೇ ಒಮ್ಮೆ ಅಂದಿದ್ದರು: "ನೋಡೇ ಕೆಸುವಿನೆಲೆಯ ಮೇಲಿನ ನೀರ ಹನಿಯಂತೆ ಈ ಜಗತ್ತಿನಲ್ಲಿ ಬಾಳಬೇಕು ಕಣೆ.''

ಹೌದು, ಆ ನೀರ ಹನಿ ಅಂದು ಕೆಸುವಿನೆಲೆಯಿಂದ ಜಾರಿ ಪ್ರಕೃತಿಯ ಮಡಿಲನ್ನು ಸೇರಿತ್ತು. ಇಂದು ನಾನು ತಾಯಿಯ ಮಡಿ

ಲನ್ನು ಸೇರಿದೆ. ಅವರು ಬೇಗ, ನಾನು ತಡವಾಗಿ. ಹಣೆ ತುಂಬ ಅರಸಿನ, ಕುಂಕುಮ ಲೇಪಿಸಿಕೊಂಡು ಮಸಣದ ಯಾತ್ರೆಗೈವ ಭಾಗ್ಯ ನನ್ನದಾಗಲಿಲ್ಲ. ಅದರ ಬಗ್ಗೆ ವ್ಯರ್ಥ ಯೋಚನೆ. ಸತ್ತ ಗಳಿಗೆ ಕೆಟ್ಟದಾಗಿದ್ದರೆ ಕೆಲವೊಮ್ಮೆ ಕಾಳೆ ಬಲಿ ಬಯಸುತ್ತದಂತೆ. ಅಂದು ಅವರ ಕಾಳೆ ಹೋಗುವಂದು ಚಂಗನೆ ನೆಗೆನೆಗೆಯುತ್ತಾ ಓಡುತ್ತಿದ್ದ ಕಾವೇರಿಯ ಕರು ಕೊಟ್ಟಿಗೆಯಲ್ಲಿ ಗೂಟಕ್ಕೆ ಕಟ್ಟಿದ್ದಂತೆಯೇ ತಟ್ಟನೆ ಬಿದ್ದು ಕೈಕಾಲುಬಡಿಯುತೊಡಗಿ ನೊರೆ ಕಾರಿ ಪ್ರಾಣಬಿಟ್ಟಿತ್ತು. ನೆತ್ತರು ಹೀರಿಕೊಂಡು ಕಾಳೆ ಹೋಯಿತು ಅಂದರು ಕೆಲವರು. ಯಾಕೋ ಏನೋ ಕಾವೇರಿ ಎಂದರೆ ಪಂಚ ಪ್ರಾಣ ಅವರಿಗೆ. ನನಗಂತೂ ಅವರೇ ಹೋದ ಮೇಲೆ ಕಾವೇರಿಯ ಕರು ಏನು ಮಹಾ? ಎಲೆ ಅಡಿಕೆಯ ಅಭ್ಯಾಸದ ಮಾವ ತೀರಿ ಹೋಗಿ ಕೆಲವು ದಿನಗಳಾಗಿರಬೇಕು, ನಡು ಹಗಲಿನಲ್ಲೇ, ಮಟಮಟ ಮಧ್ಯಾಹ್ನವೇ. ತೋಟದ ನಡುವಿನಲ್ಲೇ ಇದ್ದ ತುಂಬು ಗೊನೆ ಇಳಿಬಿಟ್ಟ ಅಡಿಕೆ ಮರ ನಡು ತುಂಡಾಗಿ ಮುರಿದು ಬಿದ್ದಾಗಲೂ ಅಣ್ಣ ಸತ್ತಾಗ ಹಲಸಿನ ಮರದ ದೊಡ್ಡದೊಂದು ಗೆಲ್ಲು ತುಂಡಾಗಿ ಬಿದ್ದಾಗಲೂ ಎಲ್ಲಾ ಅಂದದ್ದೇನು? ಕಾಳೆ ಹೋದದ್ದು ಎಂದಲ್ಲವೇ? ಆದರೆ ಇಂದು ನನ್ನದು ಒಳ್ಳೇ ಗಳಿಗೆಯಂತೆ. ಹ್ಞಾ... ಕಾಳೆ ಹೋಗುವ ವರೆಗಾದರೂ ಇಲ್ಲೇ ಕೊಳೆಯಬೇಕಲ್ಲಾ...!

'ಒಣಗಿದ ಸೌದೆ ಬೇಕು' ಎಂದ ಕಾಷ್ಠ ತಯಾರು ಮಾಡುತ್ತಿದ್ದ ಗುರುವ. "ಅಲ್ಲೇ ತೊಂಡೆಕಾಯಿ ಚಪ್ಪರದ ಬೇಲಿಯಿಂದ ಬೇಕಷ್ಟು ತೆಗೆಯಿರಿ " ಎಂದ ಸಚ್ಚು.

ಅಂಗಳ ಮಧ್ಯದಲ್ಲಿ ಸಚ್ಚು ತೊಳೆದಿಟ್ಟದ್ದ ಹಲಗೆಯಲ್ಲಿ ದೇಹವನ್ನು ಎತ್ತಿ ತಂದು ಇರಿಸಿದರು. ಅರಸಿನ, ಸೀಗೆ ಪೂಸಿ ಮೀಯಿಸುವ ಕೊನೆಯ ಸ್ನಾನ. 'ಬುಸ್...ಬುಸ್...' ಎಂದು ಹೊರಬಂದು ಒಳ ನುಸುಳುವ ಅಳು ಎಲ್ಲರನ್ನೂ ಮೆಟ್ಟಿನಿಂತು ತನ್ನದೇ

ಆದರೂ ಕೆಲವರಿಗೆ ಉಮ್ಮಳ ತಡೆದುಕೊಳ್ಳಲಾರದಷ್ಟು ತೀವ್ರವಾಗಿತ್ತು. ಅತ್ತ ಗೋಡೆ, ಇತ್ತ ಅಡ್ಡವಾಗಿ ಹಿಡಿದ ಸೀರೆ, ನಡುವಿನಲ್ಲಿ ನನ್ನ ಅಭ್ಯಂಜನ.

ಎಲ್ಲರಿಂದಲೂ ಮೀಯಿಸಿಕೊಂಡೆ. ಚಿಕ್ಕಂದಿನಲ್ಲಿ ಅಮ್ಮನಿಂದ ಪೆಟ್ಟುತಿಂದು ಮೀಯಿಸಿಕೊಂಡದ್ದುಂಟು. ಮತ್ತು ತೆಂಗಿನ ಮರದಡಿ ಕೂತು ನೀರು ಹೊಯ್ಸಿಕೊಂಡದ್ದೂ ಉಂಟು. ಕೊನೆಗೆ ಬಾಣಂತಿಯಾಗಿ ಸೂಲಗಿತ್ತಿಯರಿಂದ ತಲೆಗೆ ಬಿಸಿನೀರು ಎರೆದುಕೊಂಡದ್ದಿದೆ. ಅಷ್ಟೆ, ನೆನಪು. ಆದರೆ ಹೀಗೆ ಮೈಯಿಡೀ ಬತ್ತಲಾಗಿಸಿಕೊಂಡು...ಗಳಿಗೆ, ಸೋಲಲೇ ಬೇಕು. ಸಾಬೂನು ಬದಲಿಗೆ ಸೀಗೆ. ಕೆಲವರು ಯಾಂತ್ರಿಕವಾಗಿ ಮುಖಕ್ಕೆ, ಕಾಲಿಗೆ ಪೂಸಿ ನೀರೆರೆದರು. ಇಡೀ ದೇಹದ ಮೇಲೆ ಹರಿದಾಡಿದ ಚೆಂಬಿನ ನೀರು ಪಾವಿತ್ರ್ಯವನ್ನು ಅಪ್ಪಿಕೊಂಡು, ಕಪ್ಪು ಹಲಗೆಯನ್ನು ಮೂಸಿ, ಮಣ್ಣಿನೊಂದಿಗೆ ಒಂದಾಯಿತು.

ಮತ್ತೊಮ್ಮೆ ಚಾವಡಿಗೆ ತಂದು ಮಲಗಿಸಿದರು. ಸಚ್ಚು ಪಾದದ ಅಡಿಯಲ್ಲೊಂದು ಬಟ್ಟಲಿಟ್ಟು ಪಾದ ತೊಳೆದು ನೀರು ಕುಡಿದ. ಮಾತೃದೇವೋಭವ, ಕೊನೆಯ ತಾಯಿಯ ದೇಹ ಸ್ಪರ್ಶ ನೀರು ಎನಿಸಿರಬೇಕು. ಕಾಲಿಗೆ ತಲೆಯಾನಿಸಿದ. ಆಶೀರ್ವದಿಸಬೇಕು ಎಂದು ಎಣಿಸಿದೆ. ಆದರೆ ಕೈ ಜಡವಾಗಿತ್ತು. ಅವನ ಮನಸ್ಸಿನಲ್ಲೇ ನನ್ನ ಅನಿಸಿಕೆಗಳು ಪ್ರತಿಧ್ವನಿಸಿರಬೇಕು. ಮತ್ತೊಮ್ಮೆ ಉಕ್ಕಿತು ಕಣ್ಣ ಕೊನೆಯಿಂದ. ಸರೋಜಳಂತೂ ಪುಣ್ಯೋದಕವನ್ನು ಕುಡಿದು, ತಲೆಯನ್ನು ಪಾದಕ್ಕಾನಿಸಿದ್ದಳೋ ಇಲ್ಲವೋ, ಕೈಯಿಂದ ಗಟ್ಟಿಯಾಗಿ ಪಾದ ಹಿಡಿದು ಕುಸಿದುಬಿದ್ದಳು. ಕೆಂಪಾದ ಕಣ್ಣಿಂದ ಅಷ್ಟರವರೆಗೂ ಕಟ್ಟಿಹಾಕಿದ್ದ ನೀರು ಧುಮುಗುಡತೊಡಗಿತು. ಹೆಂಗಸರೇ ಎತ್ತಿ ಒಳಗೆ ಸಾಗಿಸಬೇಕಾಯಿತು.

'ಕೋರಾ ಬಟ್ಟೆಯ ಚೂರು ಹರಿದು ಕಾಲಿಗೆ ಉಂಗುಟಗಳೆರಡಕ್ಕೂ ಕೈಯ ತೋರು ಬೆರಳುಗೆರಡಕ್ಕೂ ಬಿಗಿದು ಕಟ್ಟಿದ ಶೀನ,

ಚೂರೊಂದನ್ನು ತುಟಿ ಬಿಡಿಸಿ ಒಳಗೆಹಾಕಿದ. ಅವರ ಮನೆಯ ಹೊಸಲು ತುಳಿದಂದೇ ಅವರು ಕಲಿಸಿಕೊಟ್ಟ ಪಾಠ. ಕೊನೆಗೆ ನನ್ನ ಬದುಕಿನಲ್ಲಿ ಚೇತನ ಸಂಜೀವಿನಿಯಂತೆ ಉಪ-ಯೋಗಿಸುತ್ತಿದ್ದ ಎಲೆ ಅಡಿಕೆ ಕೊನೆ ನಿಮಿಷ ದಲ್ಲೂ ಬಾಯಿ ತುಂಬಾ.

ಕೋರಾ ಬಟ್ಟೆ ಮೈತುಂಬಾ ಹಾಸಿದರು.

ಇನ್ನೂ ಬರೇ ಸ್ವಲ್ಪಹೊತ್ತು.. ಚಾವಡಿಯ ಬದಿಯ ಕಂಬದ ಬುಡದಲ್ಲಿಂದ ಸುತ್ತಲೂ ದೃಷ್ಟಿ ಹಾಯಿಸಿದೆ. ಹೆಂಗಸರ ಮುಖದಲ್ಲಿ ಲಾಸ್ಯವಾಡುವ ಶೋಕವೀಣೆ, ಮಿಡಿಯುತ್ತಿದ್ದ ಕಣ್ಣೀರು, ಏರಿಳಿಯುತ್ತಿದ್ದ ಮೂಗಿನ ಹೊಳ್ಳೆ, ಜಗಲಿಯ ಮತ್ತೊಂದು ಬದಿಯಲ್ಲಿ ಹಾಸಿದ ಚಾಪೆಯ ಮೇಲೆ ಶೀನ ಯಾಂತ್ರಿಕವಾಗಿ ವೀಳ್ಯದೆಲೆಗೆ ಸುಣ್ಣ ಸವರುತ್ತಿದ್ದ. ಎದುರಿನಲ್ಲಿ ಕೂತ ಬಚ್ಚಣ್ಣ ಮತ್ತು ತೌಡಣ್ಣ ಬಾಯಿ ತುಂಬಾ ಜಗಿಯುತ್ತಿದ್ದರು. ಏನೋ ಹೇಳುತ್ತಿದ್ದಾರೆ, ಶೀನ ತಲೆ ಹರಿದಾಡಿಸುತ್ತಾನೆ.

"ಅಗೋ ಅಲ್ಲಿ ಬಂದರು" ಎಂದ ಶೀನ. ಒಂದಿಗೇ ಬಂದ "ಡುಂ...ಡಕ...ಡಕ..." ಸದ್ದು ಕೊರವರು ಬಂದ ಸೂಚನೆ ನೀಡಿತು.

ಸಚ್ಚು ಕಾಲ ಬಳಿ ಹಿಡಿದ, ಶೀನ ತಲೆ ಬದಿ, ಬಚ್ಚಣ್ಣ ಮತ್ತು ತೌಡಣ್ಣ ಆಚೀಚೆ ಹಿಡಿದು ತಂದರು ಅಂಗಳ ಮಧ್ಯದಲ್ಲಿರಿಸಿದ ಚಟ್ಟಕ್ಕೆ. ಮಲಗಿಸಿದರು ಚಟ್ಟದ ಮೇಲೆ ಹಾಸಿದ್ದ ಬಾಳೆಯೆಲೆಯಲ್ಲಿ.

'ಡಂ...ಡಂ...ಡಕ್...' ಶೋಕಗೀತೆ ಹೊರಟಿತು ಕೊರವರ ವೃಂದದಿಂದ. ಬಹುದೂರಕ್ಕೂ ಪ್ರತಿಧ್ವನಿಸತೊಡಗಿರಬೇಕು ಅದರ ಸದ್ದು.

ಗದ್ದೆಯ ಅಂಚಿನಲ್ಲಿ ಸಾಗುವಾಗ ಜಾರಿ ಬೀಳದಿರಲಿ ಎಂದು ಚಟ್ಟಕ್ಕೆ ದೇಹವನ್ನು ಬಿಗಿದು ಕಟ್ಟಿದರು.

"ದೇವು, ತೀರ್ಥ ಎಲ್ಲಿಟ್ಟೆ?" ಎಂದ ಶೀನ, 'ಅಲ್ಲೇ ತುಳಸಿಕಟ್ಟೆಯಲ್ಲಿಟ್ಟಿದ್ದೇನೆ," ಎಂದ ದೇವು ತಂದು ಆತನ ಕೈಗಿತ್ತ.

ಹೊಸ ಮಡಿಕೆಯಲ್ಲಿ ಅಭ್ಯಂಜನ ಮಾಡಿಸಲು ಉರಿಸಿದ್ದ ಮಾವಿನ ಚಕ್ಕೆಯ ಕೆಂಡ ತುಂಬಿದ ತೌಡಣ್ಣ, ಮೂರು ಕೋಲನ್ನು ತ್ರಿಕೋನಾಕಾರದಲ್ಲಿ ಕಟ್ಟಿ ಅದರ ಮೇಲೆ ಅಗ್ನಿ ತುಂಬಿದ ಮಡಕೆ ಇಟ್ಟ.


ಒಂದೇ ಗಳಿಗೆ. ದೇಹ ಹೆಗಲಿಗೇರುವುದು. ಹೊಸಲಿನ ಮರೆಯಲ್ಲಿ ನಿಂತ ಸರೋಜ ನೋಡುತ್ತಿರುತ್ತಾಳೆ. ಸರೋಜಮ್ಮ, ಕಮ-ಲಮ್ಮ,...ಸೆರಗಿನಿಂದ ಕಣ್ಣೊರೆಸುತ್ತಿದ್ದಾರೆ. ಸುತ್ತಮುತ್ತಲೂ ಬಿಕ್ಕಳಿಕೆ. ನನಗೂ ಆ ಹೊತ್ತು ಸುಮ್ಮನಿರಲಾಗಲಿಲ್ಲ. ಅತ್ತೆ, ಚೆನ್ನಾಗಿ ಅತ್ತೆ, ಬೊಬ್ಬೆ ಹಾಕಿದೆ, ಬೇಡ, ಬೇಡ ಅಂದೆ. ಆದರೆ ಯಾರೂ ಗಮನಿಸಲೇ ಇಲ್ಲ. ಧ್ವನಿ ಹೊರಡಲಿಲ್ಲ, ಕಣ್ಣು ತುಂಬಲಿಲ್ಲ. ಕಣ್ಣೀರು ಇಳಿಯಲಿಲ್ಲ, ಹೆಗಲಿಗೇರಿತು ದೇಹ..

"ಗೋವಿಂದಾ...ಗೋವಿಂದಾ...ಹೊರಟವು" ಸ್ವರಗಳು. ಅನುಕರಿಸಿದುವು ಮತ್ತೆ ಹಲವು. ಹೆಬ್ಬಾಗಿಲಿನಿಂದ ಹೊರ ಹೊರಟಿತು ಯಾತ್ರೆ.

ಮುಂದಿನಿಂದ ಡಂ...ಡಂ...ಡೋಲು, ಡಕ...ಡಕ...ಚಂಡೆ, ಚಂಕ್ಲಜೈಲ್...ಚಂಕ್ಲ ಜೈಲ್...ತಾಳ, ಹಿಂದಿನಿಂದ ಕೊಳಲು–ಶೋಕಗೀತೆಯನ್ನು ಹಾಡುತ್ತಾ...

ಅಗ್ನಿ ಹಿಡಿದ ದೇವು ಹಿಂಬಾಲಿಸಿದ, ತೀರ್ಥ ಹಿಡಿದುಕೊಂಡ ನಾರಾಯಣ ಅವನನ್ನು ಅನುಸರಿಸಿದ. ನಂತರ ಹೊರಟರು ಗಂಡಸರು;. ಹಿಂದಿನಿಂದ ಚಟ್ಟ.

ಹೆಬ್ಬಾಗಿಲಿನಲ್ಲೇ ನಿಂತ ಹೆಂಗಳೆಯರು, ಎಲ್ಲರ ಸೆರಗೂ ಕಣ್ಣಿನ ಬದಿಯಲ್ಲೇ. ನನಗೂ ಹೊರಗೆ ಹೋಗಬೇಕೆಂದೇನೂ ಅನಿಸಲಿಲ್ಲ, ಅಲ್ಲೇ ನಿಂತೆ. ಬಿಕೋ ಅನ್ನುತ್ತಿದ್ದ ಮನೆ, ಸ್ಮಶಾನ ಮೌನ...ಡಂ...ಡಂ...ಡಕ...ಡಕ... ಜೈಲ್‌ಜಕ್ಲ ಜೈಲ್...ಗೋಡೆಗೇನೋ ಬಡಿದ ಸದ್ದು...ಕ್ಷೀಣವಾಗಿ, ನಿಧಾನವಾಗಿ ಕೇಳಿಸತೊಡಗಿತು "ಗೋವಿಂದಾ..ಗೋವಿಂದಾ.."✡



ಸೌಂದರ್ಯ: ಪ್ರಕೃತಿಯೋ ವಿಕೃತಿಯೋ?

ಗೌರೀಶ ಕಾಯ್ಕಿಣಿ

ರಮಣೀಯತೆ, ಕಮನೀಯತೆ, ಲಾವಣ್ಯ, ಸೌಂದರ್ಯ ಚೆಲುವು–ಇವೆಲ್ಲ ಹೆಸರುಗಳಿಂದ ಅರ್ಥೈಸಲಾಗುವ ಆ ಒಂದು ತತ್ವದ ಮರ್ಮವೇನು? ಇಲ್ಲಿ ನಾನು ಹೊರಟಿದ್ದು ಸೌಂದರ್ಯ ಮೀಮಾಂಸೆಗೆ ಅಲ್ಲ. ಆ ಕುರಿತು ಡಿ. ವಿ. ಜಿ. ಅವರಿಂದ ಡಾ. ಭೈರಪ್ಪರವರೆಗೂ ಅನೇಕ ದಿಗ್ಗಜರು ತಮ್ಮ ಸುಂಡಿಲು ವ್ಯಾಪಕವಾಗಿ ಗಹನವಾಗಿ ಆಡಿಸಿದ್ದಾರೆ. ನನ್ನ ಮಾತಿನ ಮರ್ಮವೇ ಬೇರೆ.

ರಮಿಸುವ, ಮೆಚ್ಚಿಸುವ ಗುಣ. ಅದಕ್ಕೂ ಮೊದಲು ಕಾಮನೆ, ಬಯಕೆ ಹುಟ್ಟಿಸುವ ಗುಣ. ಆ ಮೇಲೆ 'ಲವಣ'ದಂಥ ಹೊಳಪು, ಕಾಂತಿ, ಆಕರ್ಷಕತೆ, ಕೊನೆಯದಾಗಿ ನಮ್ಮ ಮನಸ್ಸನ್ನು ಆರ್ದ್ರಗೊಳಿಸುವ ಕರಗಿಸುವ ಗುಣ (ಉಂದ್–ಕೇದನೇ ಇವರಿಂದ ಸುಂದರ ಸಿದ್ಧವಾಗಿದೆಯಂತೆ.) ಇದೆಲ್ಲ ಗುಣಾವತಾರ ಚೆಲುವಿನದು.

ಸರಿ. ಆದರೆ ಇದೆಲ್ಲಕ್ಕೂ ಒಟ್ಟಾಗಿ ಒಳಪಟ್ಟ ಒಂದು ಲಕ್ಷಣವಿದೆ. ಅದರಿಂದ ಈ ಅನೇಕ ಗುಣಗಳು ಕಾಣಿಸಿಕೊಳ್ಳುತ್ತವೆ. ಆ ಗುಣ ಲಕ್ಷಣವೆಂದರೆ ಸೌಂದರ್ಯಕ್ಕೆ ಹಂದರವಾದ ಸೌಕುಮಾರ್ಯ, ಕೋಮಲತೆ. ಸಾಮಾನ್ಯವಾಗಿ ಗುಣಕ್ಕೂ ಪರಿಮಾಣಕ್ಕೂ ಜಾತಿ ವೈರ. ಪರಿಮಾಣ (quantity) ಬಲಿತಂತೆ ಗುಣ (quality) ಕ್ಷಯಿಸುತ್ತದೆ. ಸ್ಥೂಲದಿಂದ ಸೂಕ್ಷ್ಮಕ್ಕೆ ಹೋದಂತೆ ನಾವು ಪರೆಪರೆಯಾಗಿ ಚೆಲುವಿನ ಆವರಣಗಳನ್ನು ಕಳಚುತ್ತ ಅದರ ಮೂಲ ಬಿಂಬವನ್ನು ನಿಲುಕುತ್ತವೆ.

ಒಂದು ಟೊಂಗೆ, ಒಂದು ಎಲೆ, ಒಂದು ಹೂವು ಇವುಗಳನ್ನು ನೋಡಿದರೆ ಈ ಸೂಕ್ಷ್ಮೀಕರಣದ ಪವಾಡ ವ್ಯಕ್ತವಾಗುತ್ತದೆ. ಋಷಿಯ ಆಶ್ರಮ, ಪರಿಸರದಲ್ಲಿ ಶಕುಂತಲೆಯಂತೆ ಮರದ ಕಾಂಡ, ಟೊಂಗಿ, ಎಲೆಗಳ ಜಡ ರಾಶಿಯಲ್ಲಿ ಹೂವೆಂಬ ದಿವ್ಯಸಪ್ನ ಅರಳುತ್ತದೆ. ಅದರ ವೈಶಿಷ್ಟವೇ ಅದರ ಕೋಮಲತೆ ಸುಕುಮಾರತೆ. ಅದು ಟೊಂಗೆಯಂತೆ, ಕಾಂಡದಂತೆ-ಮರದಂತೆ ದೀರ್ಘಾಯುವಲ್ಲ. ಅದರ ಬಾಳು ನೀರಗುಳ್ಳೆಯಂತೆ. ನೀರಗುಳ್ಳೆಯ ಬಾಳೂ ಹೂವಿನಂತೆಯೇ. ಅಲ್ಪಕಾಲಿಕ.

ಸೌಂದರ್ಯಕ್ಕೆ ಈ ಭಂಗುರತೆಯ, ಈ ನಶ್ವರತೆಯ ಶಾಪವೇಕೆ? ಬಲ ಭಾರ, ಜಡತ್ವ ಇವುಗಳಿಂದ ಉಂಟಾಗುವ ಭದ್ರತೆಯ ಬೆಲೆಯನ್ನು ತೆತ್ತೇ ಚೆಲುವಿನ ನಾಣ್ಯವನ್ನು ಕಾಣಿಕೆಯನ್ನು ಆನಂದವನ್ನು ಕೊಳ್ಳಬೇಕೇ? ಬೂದಿಗಿಂತ ಕಿಡಿ ಚೆಂದ. ನೆಲಕ್ಕಿಂತ ನೀರು ಚೆಂದ. ನೀರಿಗಿಂತ ಬಾನು ಚೆಂದ ಒಂದಕ್ಕಿಂತ ಒಂದು ಹೆಚ್ಚು ತರಲ–ವಿರಲ.

ಅಂದರೆ ಸೌಂದರ್ಯದ ತಿರುಳು ಸುಕುಮಾರ್ಯ. ಸುಕೋಮಲತೆ, ಅದು ದೌರ್ಬಲ್ಯದ, ಅಶಕ್ತತೆಯ ಇನ್ನೊಂದು ರೂಪ. ಮಾನವೀಯ ಸೌಂದರ್ಯದಲ್ಲಿ ಈ ಮಾತು ಹೆಚ್ಚು ಸ್ಪಷ್ಟ. ಗಂಡಿಗಿಂತ ಹೆಣ್ಣು ಚೆಂದ. ಬೆಳೆದ ಆಳಿಗಿಂತ ಕೂಸು ಚೆಂದ. ಒಂದಕ್ಕಿಂತ

ಒಂದು ಹೆಚ್ಚು ದುರ್ಬಲ. ಅಶಕ್ತ ಕೋಮಲ. ಈ ಕೋಮಲತೆ, ಮಾರ್ದವತೆ ಹೃಷ್ಟಪುಷ್ಟ ಬಲಿಷ್ಟ ಶಾರೀರಿಕ ಸ್ವಾಸ್ಥದ ದ್ಯೋತಕವೇ? ಇಂಥ ದಿವ್ಯ ಸೌಂದರ್ಯಶಾಲಿ ವ್ಯಕ್ತಿಗಳು ದೀರ್ಘ ಕಾಲ ಬದುಕಿದ್ದುಂಟೇ? ಬದುಕಿದಾಗಲೂ ತಮ್ಮ ಮೂಲದ ಸೌಂದರ್ಯವನ್ನು ಅಚ್ಚಳಿಯದೆ ಕಾಪಾಡಿಕೊಂಡಿದ್ದುದುಂಟೇ?

ಆರಂಭದಲ್ಲಿ ಒರಟು ಒರಟಾಗಿ ಬೆಳೆದವರು. ಮುಂದೆ ಕೋಮಲ, ಸುಂದರವಾಗಿ ಕಾಣುತ್ತಾರೆ, ಬಾತುಕೋಳಿಯಂತೆ ಇದ್ದು ಹಂಸವಾಗಿ ಬೆಳೆದಂತೆ. ಇದಕ್ಕೆ ವಿರುದ್ಧವಾಗಿ ಮೊದಲಿಗೆ ಬಾಲ್ಯದಲ್ಲಿ ಹೊಸ ಹರಯದಲ್ಲಿ ತುಂಬ ಚೆಲುವಿನಿಂದ ಕಳಕಳಿಸುವ ಸುಂದರಾಂಗ ವ್ಯಕ್ತಿಗಳು ಮುಂದೆ ಒರಟಾಗಿ ಅಕಾಲ ವೃದ್ಧರಂತೆ ಹೇಗೋ ಹೇಗೋ ಕಾಣತೊಡಗುತ್ತಾರೆ. ಇವೆಲ್ಲ ಹೀಗೇಕೆ? Is beauty Consumptive?

ಹೋಮಿಯೋಪಥಿಯಲ್ಲಿ ಮಾನವನ ಪ್ರಕೃತಿಯನ್ನು ಮೂಲ ಮಾದರಿಯಾಗಿ ವಿಂಗಡಿಸುವದುಂಟು. ಆ ತಜ್ಞರು ವರ್ಣಿಸುವ "ಟ್ಯುಬರ ಕ್ಯೂಲರ್" ಪ್ರಕೃತಿ ಗಮನಾರ್ಹವಾಗಿದೆ. ಅವರ ಮತದಂತೆ "ಟ್ಯುಬರ ಕ್ಯೂಲರ್" ರೋಗ (ಕ್ಷಯ ರೋಗ) ಬೇರೆ, "ಟ್ಯುಬರಕ್ಯೂಲರ್ ಕಾನ್‌ಸ್ಟಿಟ್ಯೂಶನ್" ಬೇರೆ. Tuber cular Constitution ಇದ್ದ ವ್ಯಕ್ತಿಗೆ ಸಾಯುವ ವರೆಗೂ ಕ್ಷಯ ರೋಗ ತಗಲದೇ ಹೋಗಬಹುದು. ಆ ವ್ಯಕ್ತಿ ದೃಢಕಾಯವಾಗಿ ಆರೋಗ್ಯಶಾಲಿಯಾಗಿ ಬದುಕಬಹುದು. ಆದರೆ ಕ್ಷಯದ ಬಾಧೆ ಆಗುವ ಸಂದರ್ಭದಲ್ಲಿ ಆ ವ್ಯಕ್ತಿ ರೋಗಕ್ಕೆ ಬಲಿ ಬೀಳುವ ಭಯ ಹೆಚ್ಚು.

ಸೌಂದರ್ಯ ವಿಚಾರದಲ್ಲಿ ಈ ಹೋಮಿಯೋಪಥಿಯು ಅವಾಂತರವೇಕೆ? ಈ ಪ್ರಶ್ನೆಗೆ ಉತ್ತರವಿಷ್ಟೇ, ಈ ಕ್ಷಯಕ್ಕೆ ಆಶ್ರಯವೀಯಬಲ್ಲ ಶರೀರ ಪ್ರಕೃತಿಯ ವರ್ಣನೆ ಓದಿದರೆ ನಮಗೆ ಮಾನವೀಯ ಶಾರೀರಿಕ ಸೌಂದರ್ಯದ ಘಟಕಗಳೆಲ್ಲ ಅಲ್ಲಿ ಕಂಡುಬರುತ್ತವೆ. ಮೈಯ ಮಾಟ, ನಯ ನಾಜೂಕು, ಅಂಗದ ಉಜ್ವಲ ಕಾಂತಿ. ಸೌಕುಮಾರ್ಯ, ಕಣ್ಣ ಹೊಳಪು, ಕಳಕಳಿಸುವ ಮುಖಚರ್ಯೆ–ಸುಂದರಾಂಗನ ಎಲ್ಲ ಲಕ್ಷಣಗಳೂ ಈ ಕ್ಷಯ ರೋಗಾನುಕೂಲ ದೇಹ ದೌರ್ಬಲ್ಯದ ಲಕ್ಷಣಗಳೂ ಆಗಿವೆ!

ಅಂದರೇನು? Beauty is tuber cular? ದೇಹ ಸೌಂದರ್ಯ ಕ್ಷಯ ವಿಕಾರಿಯೇ? "ಬೆಳಕು ತಮದ ವಿಕಾರ?" ಎಂದು ಗೋಪಾಲಕೃಷ್ಣ ಅಡಿಗರು ಒಂದು ಪ್ರಸಿದ್ಧ ಕವನದಲ್ಲಿ ಹೇಳುತ್ತಾರೆ. ಅದೇ ಸಮಯ ಈ ಸೌಂದರ್ಯಕ್ಕೂ ಸಲ್ಲುವದೇ? ಸಾಮಾನ್ಯವಾಗಿಯೇ ಚೆಲುವು ಅದರೊಡನೆ ನಯ ನಾಜೂಕು ಅಂಗಾಂಗ ಕೋಮಲತೆ. ದಾರ್ಢ್ಯದ ಮಟ್ಟಿಗೆ ದೌರ್ಬಲ್ಯ. ಸೂಕ್ಷ್ಮತೆ ಆ:ಮೂಲಕ ಅನಿವಾರ್ಯವಾಗುವ ನಶ್ವರತೆ–ಇವೆಲ್ಲ ಬಂದೇ ಬಂದವು.

ಅವುಗಳೊಂದಿಗೆ ಮಾನವೀಯ ಸೌಂದರ್ಯದ ಹೂವಿನಲ್ಲಿ ಕ್ಷಯ ರೋಗದ ಕೀಟವೂ ಆಳದಲ್ಲಿ ಅವಿತುಕೊಂಡಿದೆಯೇ? ದೈಹಿಕ ಸೌಂದರ್ಯ ಕ್ಷಯಕ್ಕೆ ಅನುಗೊಡುವ ಒಂದು ವಿಕಾರವೇ? ಇದೊಂದು ಕಂಗೊಳಿಸುವ ದೃಶ್ಯ ಆದರೆ ಸೌಂದರ್ಯದ ನಶ್ವರತೆಯನ್ನು ನೋಡಿದಾಗ ಅದರ ನಿರ್ಬಲ ನಿತ್ರಾಣ ಅಸಹಾಯತೆಯನ್ನು ಗಮನಿಸಿದಾಗ ಈ ಕಟುಸತ್ಯವನ್ನು ನಂಬದಿರುವದು ಕಷ್ಟ!

ಒಟ್ಟಾರೆ ಸೌಂದರ್ಯ, ಶರೀರಸೌಂದರ್ಯ ಪ್ರಕೃತಿಯೋ ವಿಕೃತಿಯೋ? ಜೀವಿತವೇ ಒಂದು ವಿಕೃತಿ ಮರಣವೇ ಪ್ರಕೃತಿ ಎಂದು ಕಾಲಿದಾಸ ಎಂದೋ ಹೇಳಿ ಎಂಥಾ ನವ್ಯ ಕವಿಯನ್ನೂ ತನಗಿಂತ ಹಳಬನಾಗಿ ಮಾಡಿದ್ದಾನೆ. ಅಂದಾಗ ಈ ದೃಷ್ಟಿಯಲ್ಲಿ ಸೌಂದರ್ಯವೂ ಒಂದು ಯ ವಿಕಾರವೇಕೆ ಆಗಬಾರದು? ಕೊನೆಗೂ ಪರಮ ಸುಂದರಿ ಇಂದುಮತಿಯನ್ನು ಕೊಲ್ಲಲು ಒಂದು ಹೂವಿನ ಹಾರ ಸಾಕಾಯಿತು. ಈ ಸುಂದರ ರೋಮಾಂಚಕ ಮರಣ ಚೆಲುವಿನ ಭಂಗುರತೆಗೆ ಅಮರ ಸ್ಮಾರಕವೆನಿಸದೇ ಇರಲಾರದು. ✡



ಎಸ್. ಆರ್. ಗುಂಜಾಳ

ನನ್ನ ಸ್ವಂತ ಗ್ರಂಥಾಲಯ

ಗ್ರಂಥಾಲಯುಗಳಲ್ಲಿ ಅನೇಕ ವಿಧ: ಶೈಕ್ಷಣಿಕ ಗ್ರಂಥಾಲಯು, ಸಾರ್ವಜನಿಕ ಗ್ರಂಥಾಲಯು, ವಿಶಿಷ್ಟ ಗ್ರಂಥಾಲಯ ಇತ್ಯಾದಿ ವಿಭಾಗಗಳನ್ನು ಮಾಡಬಹುದು. ಪ್ರತಿಯೊಂದು ವಿಭಾಗದಲ್ಲಿ ಮತ್ತೆ ವಿಭಜಿಸಬಹುದು ಉದಾ: ಶೈಕ್ಷಣಿಕ ಗ್ರಂಥಾಲಯ ವಿಭಾಗದಲ್ಲಿ— ವಿಶ್ವವಿದ್ಯಾಲಯ ಗ್ರಂಥಾಲಯು, ಕಾಲೇಜು ಗ್ರಂಥಾಲಯು, ಪ್ರಿಯುನಿವ್ಹರ್ಸಿಟಿ ಗ್ರಂಥಾಲಯು ಹೈಸ್ಕೂಲು ಗ್ರಂಥಾಲಯ ಪ್ರಾಥಮಿಕ ಶಾಲಾ ಗ್ರಂಥಾಲಯು– ಹೀಗೆ ಅನೇಕ ಉಪ ವಿಭಾಗಗಳನ್ನು ಮಾಡಬಹುದು. ಇಂತು ಹುಟ್ಟಿದ ಎಲ್ಲ ಗ್ರಂಥಾಲಯುಗಳು ಒಂದಿಲ್ಲೊಂದು ಸಂಸೆಗೆ ಇಲ್ಲವೆ ಆಡಳಿತಕ್ಕೆ ಒಳಪಟ್ಟಿರುತವೆ. ಒಂದ ಸಂಸ್ಥೆಯು ಆಡಳಿತಕ್ಕೆ ಹೊಂದಿಕೊಂಡು ಗ್ರಂಥಾಲಯವು ಹುಟ್ಟಿಕೊಂಡ ಗಳಿಗೆಯಿಂದಲೇ ಅದರಲ್ಲಿ ಗ್ರಂಥಗಳ ಉಪಯೋಗಕ್ಕೆ ಅನೇಕ ನೀತಿ–ನಿಯಮಾವಳಿಗಳೂ ಹುಟ್ಟಿಕೊಳ್ಳುತ್ತವೆ. ಜೊತೆಗೆ ಕಾಯಿದೆ–ಕಾನೂನುಗಳೂ ರಚಿಸಲ್ಪಡುತ್ತವೆ. ಓದುವುದಕ್ಕಾಗಿ ಗ್ರಂಥಗಳು (Books are for use) ಎಂಬ ಗ್ರಂಥಾಲಯ ವಿಜ್ಞಾನದ ಮೊದಲ ಸೂತ್ರಕ್ಕೆ ಕೊಡಲಿ ಪೆಟ್ಟು ಬೀಳಲು ಪ್ರಾರಂಭವಾಗುತ್ತದೆ.

ಆದೇ 'ನಮ್ಮ ಸ್ವಂತ ಗ್ರಂಥಾಲಯು' ಇದ್ದರೆ? ನಾವು ಮನ ಬಂದಷ್ಟು, ಬೇಸರ ಬರುವಷ್ಟು ಸಮಯದ ವರೆಗೆ ಓದಬಹುದು. ಆಲ್ಲಿ ನಮಗೆ ಯಾವ ನಿಯಮವೂ ಅಡ್ಡಿ

ಬರುವದಿಲ್ಲ. ಇತರ ಗ್ರಂಥಾಲಯಗಳಲ್ಲಾದರೋ ಅವು ಓದುಗರಿಗಾಗಿ ಬಾಗಿಲು ತೆರೆದ ಅವಧಿಯಲ್ಲಿ ಮಾತ್ರ ನಾವು ಪ್ರವೇಶಿಸಬಹುದು. ಅದೂ ಅಲ್ಲಿದ್ದ ಖುರ್ಚಿಯಲ್ಲಿ ನೀಟಾಗಿ ಕುಳಿತುಕೊಳ್ಳಬೇಕು. ಅಲ್ಲಿ ನಮ್ಮಂತೆ ಅನೇಕ ಓದುಗರು ಬರುವದರಿಂದ ನಮಗೆ ಬೇಕಾದ ಗ್ರಂಥವನ್ನು ಅವರು ಅವರು ತೆಗೆದುಕೊಳ್ಳುವ ಸಂಭವವೂ ಹೆಚ್ಚು. ನಾವು ಓದಬೇಕೆಂಬ ಗ್ರಂಥ ಆ ಸಮಯದಲ್ಲಿ ಸಿಗದಿದ್ದರೆ ಅದೆಷ್ಟು ನಿರಾಶೆಯುಂಟಾಗುವದೆಂಬುದನ್ನು ಎಲ್ಲರೂ ಬಲ್ಲರು.

ಒಂದು ವೇಳೆ ನಮ್ಮದೇ ಸ್ವಂತ ಗ್ರಂಥಾಲಯವಿದ್ದಿದ್ದರೆ? ನಾವು ಆರಾಮ ಖುರ್ಚಿಯಲ್ಲಿ ಕುಳಿತು ಓದಬಹುದು, ಬೇಸರವಾದರೆ, ಪಲ್ಲಂಗದ ಮೇಲೆ ಹಾಯಾಗಿ ಮಲಗಿ ಓದಬಹುದು; ಬೆನ್ನು ಮೇಲೆ ಮಾಡಿ ನಾಗರ ಹಾವಿನಂತೆ ತಲೆಯನ್ನೆತ್ತಿ ಕಾಲುಗಳನ್ನು ಬಾಲದಂತೆ ಆನಂದದಿಂದ ಅಲುಗಾಡಿಸುತ್ತ ಗ್ರಂಥಾವಲೋಕನ ಮಾಡಬಹುದು. ಅಲ್ಲಿ 'ಯಾರೂ ಗದ್ದಲ ಮಾಡಕೂಡದು' ಎಂಬ ಸೂಚನಾ ಫಲಕವನ್ನು ನೇತು ಹಾಕುವ ಕಾರಣವಿಲ್ಲ. 'ಗುನು ಗುನು' ಗುಂಜಾರವ ಮಾಡುತ್ತ ಓದಬಹುದು. ಷಟ್ಪದಿ, ಕಂದ, ವೃತ್ತಗಳಲ್ಲಿ ಬರೆಯಲ್ಪಟ್ಟ ಕಾವ್ಯ ಗ್ರಂಥವಾಗಿದ್ದರೆ ಎತ್ತರ ಧ್ವನಿ ತೆಗೆದು ಹಾಡುತ್ತ ಓದಿದರೂ ಯಾರೂ ಆಕ್ಷೇಪಿಸುವದಿಲ್ಲ. ಇತ್ತೀಚಿನ 'ಆಧುನಿಕ ಭಾವಗೀತೆಗಳ'ನ್ನೊಳಗೊಂಡ ಗ್ರಂಥವಾಗಿದ್ದರಂತೂ ನಮ್ಮ ಮನಬಂದಂತೆ ಯಾವ ಧ್ವನಿಯಲ್ಲಾದರೂ, ಅಥವಾ ಯಾವ ಧಾಟಿಯಲ್ಲಾದರೂ ಹಾಡಬಹುದು. ಈ ಬಗೆಯ ಅನುಕೂಲತೆಗಳು 'ಇತರ ಗ್ರಂಥಾಲಯಗಳ'ಲ್ಲಿ ಇರುವದಿಲ್ಲ.

'ಇತರ ಗ್ರಂಥಾಲಯಗಳ'ಲ್ಲಿ 'ಪಿಸುಗುಟ್ಟಿ' ಓದುವುದಕ್ಕೆ ನಮಗೆ ಸ್ವಾತಂತ್ರ್ಯವಿರುವದಿಲ್ಲ. ನಾವಲ್ಲಿ ಬಾಯಿ ಇದ್ದೂ ಮೂಕರು. ಕಿವಿಯಿದ್ದರೂ ಕಿವುಡರು. ಚಿತ್ರದ ಗೊಂಬೆಯಂತೆ ಬಿಮ್ಮನೆ ಕುಳಿತು ಓದಬೇಕು. ತಪ್ಪಿದಲ್ಲಿ ಗ್ರಂಥಪಾಲನೋ, ಅವನ ಸಿಬ್ಬಂದಿಯವರೋ ತಕ್ಷಣ ನಮ್ಮತ್ತ ಧಾವಿಸುವರು. ಕಳ್ಳರೊಡನೆ ವ್ಯವಹರಿಸಿದಂತೆ ನಮ್ಮನ್ನು ಸಂಶಯದ ಕಣ್ಣುಗಳಿಂದ ಈಕ್ಷಿಸುವರು. ಪೋಲೀಸಿನವರಂತೆ ಸನ್ನೆ ಮಾಡಿಯೋ, ಬಾಯಿಂದಲೋ ನಮ್ಮನ್ನು ಗದರಿಸುವರು. 'ನಮ್ಮ ಸ್ವಂತ ಗ್ರಂಥಾಲಯ'ವಿದ್ದರೆ? ಇಂತಹ ಕೀಳು ದಾಸ್ಯ ಪ್ರವೃತ್ತಿಗೆ ಸ್ವಂತ ಗ್ರಂಥಾಲಯದಲ್ಲಿ ಎಳ್ಳಷ್ಟೂ ಎಡೆಯಿಲ್ಲ. ನಾನು ನನ್ನ ಸ್ವಂತಕ್ಕಾಗಿ ಒಂದು ಪುಟ್ಟ ಗ್ರಂಥಾಲಯವನ್ನು ನನ್ನ ಕೋಣೆಯ ಕಪಾಟಿನಲ್ಲಿ ತೆರೆದಿರುವೆನಾದ್ದರಿಂದ ಆ ಸ್ವಾನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ.

'ನನ್ನ ಗ್ರಂಥಾಲಯದಲ್ಲಿ ಕೇವಲ ಐನೂರು (ಸದ್ಯಕ್ಕೆ) ಗ್ರಂಥಗಳಿರುವದರಿಂದ ಪ್ರತಿಯೊಂದು ಗ್ರಂಥದ ಹೆಸರು, ಗ್ರಂಥಕರ್ತನ ಹೆಸರು, ಗ್ರಂಥದ ಎತ್ತರ, ದಪ್ಪ, ಕವರು, ಕವರಿನ ಬಣ್ಣ—ಇತ್ಯಾದಿಗಳೆಲ್ಲ ನನ್ನ ನೆನಪಿನಲ್ಲಿವೆ. ಆ ಗ್ರಂಥವಿದ್ದ ಸ್ಥಾನವೂ ನನಗೆ ಗೊತ್ತು. ನನ್ನ ಮನಸ್ಸು ಮುದುಡಿಕೊಂಡಾಗ ಇಲ್ಲವೆ ಪ್ರಸನ್ನವಾದಾಗ ಆ ಆ ಸಂದರ್ಭಕ್ಕೆ ತಕ್ಕ ಗ್ರಂಥವನ್ನು ಕೈಗೆತ್ತಿಕೊಂಡು, ಸರಿ ಕಂಡ ರೀತಿಯಲ್ಲಿ ಕುಳಿತೋ, ನಿಂತೋ, ಓದತೊಡಗುತ್ತೇನೆ. ಆಗಿನ ನನ್ನ ಮನಸ್ಸಿಗೆ ನಾಟಿದ ವಾಕ್ಯವನ್ನು, ವಾಕ್ಯವೃಂದವನ್ನು ಪುನಃ ಪುನಃ ಓದಿ ಮನನ ಮಾಡುತ್ತೇನೆ. ಯಾವಾಗಾದರೂ ಮತ್ತೊಮ್ಮೆ ಆ ಮಹತ್ವದ ವಾಕ್ಯ ಪುಂಜವು ಕಣ್ಣೆ ಒಡೆದು ಕಾಣುವಂತೆ ನನ್ನ ಕೆಂಪು ಮಸಿಯ ಪೆನ್ನಿನಿಂದ ಆ ಎಲ್ಲ ಸಾಲುಗಳ ಬುಡದಲ್ಲಿ ಗೆರೆ ಎಳೆಯುತ್ತೇನೆ. ಮೇಲೆ, ಬದಿಗೆ ಮತ್ತು ಅತ್ಯಂತ ಮಹತ್ವದ ಶಬ್ದ ಪುಂಜಕ್ಕೆ ದುಂಡ ಗೆರೆ ಹಾಕುತ್ತೇನೆ. ಕೆಲವು ಅವತರಣಿಕೆಗಳು ನನ್ನ ವಿಚಾರಕ್ಕೆ ಪೂರಕವಾಗಿದ್ದರೆ, ಒಂದು ಬಗೆಯಲ್ಲಿಯೂ ವಿಚಾರಸರಣಿಗೆ ವಿರೋಧವಾಗಿದ್ದರೆ ಮತ್ತೊಂದು ಬಗೆಯಲ್ಲಿಯೂ ಮಾರ್ಜಿನ್ನುಗಳಲ್ಲಿ ಪೆನ್ನಿನಿಂದ ಬರೆಯುತ್ತೇನೆ. ಲೇಖಕನೊಂದಿಗೆ ಹೀಗೆ ವಿಚಾರ ವಿನಿಮಯ ಮಾಡಿ ಸಂತೋಷ ಪಡುತ್ತೇನೆ. ಗ್ರಂಥಕರ್ತನು

ಜಗತ್ಪ್ರಸಿದ್ಧನಾಗಿದ್ದರಂತೂ ಆತನ ಗ್ರಂಥದಲ್ಲಿ ಮುದ್ರಣವಾಗದೆ ಇದ್ದ ಮಾರ್ಜಿನ್ ಸ್ಥಳದಲ್ಲೆಲ್ಲ ಬರೆಯುವದೆಂದರೆ ನನಗೆ ಬಲು ಹಿಗ್ಗು; ಎಲ್ಲಿಲ್ಲದ ಹೆಮ್ಮೆ. ಆದರೆ ನಾವು ಸಾರ್ವಜನಿಕ ಗ್ರಂಥಾಲಯದಲ್ಲಿಯ, ಅಥವಾ ನಮ್ಮ ಶಾಲೆ-ಕಾಲೇಜು ಗ್ರಂಥಾಲಯಗಳಲ್ಲಿಯ ಗ್ರಂಥಗಳಲ್ಲಿ ಮಸಿಯಿಂದ ಹೀಗೆ ಗೆರೆಯೆಳೆಯುವದಕ್ಕೆ, ಬರೆಯುವದಕ್ಕೆ ಸಾಧ್ಯವಿದೆಯೇ? ನಾವು ಕದ್ದು ಹೀಗೆ ಮಾಡಬಹುದು. ಆಗ ನಮ್ಮ ಕಳವು ಗೊತ್ತಾದರೆ ಗ್ರಂಥಪಾಲರಿಂದ ಶಿಕ್ಷಿಸಲ್ಪಡುತ್ತೇವೆ. ಆಗ ನಮ್ಮ ಮಾನ ಇತರ ಓದುಗರೆದುರು 'ಕಾಸಿಗೆ ಪಂಥೇರು' ಆಗುತ್ತದೆ. ಒಂದು ವೇಳೆ ನಮ್ಮ ಸ್ವಂತ ಗ್ರಂಥವಿದ್ದರೆ ಯಾರ ಹೆದರಿಕೆಯೇನು? ಯಾರ ಬೆದರಿಕೆಯೇನು?

ಹೊರಗಿನ ಗ್ರಂಥಾಲಯಕ್ಕೆ ಹೋಗಬೇಕಾದರೆ ನಮ್ಮ ವೇಷಭೂಷಣಗಳು ಆಕರ್ಷಕವಾಗಿರಬೇಕಾಗುತ್ತದೆ; ಅಚ್ಚುಕಟ್ಟಾಗಿರಬೇಕಾಗಿರುತ್ತದೆ: ಕೂದಲು ಒಕ್ಕಿಕೊಂಡು ಮುಖಕಾಂತಿ ಪ್ರಜ್ವಲಿಸಲು ಸ್ನೋ-ಪಾವಡರಗಳ ಲೇಪನಮಾಡಿಕೊಂಡು ಪಾಲಿಸ್ ಮಾಡಿದ ಬೂಟ-ಚಪ್ಪಲಿಗಳನ್ನು ಮೆಟ್ಟಿಕೊಂಡು ಓರಣವಾಗಿ ಹೋಗಬೇಕಾಗುತ್ತದೆ. ಇದಕ್ಕೆ ಅಧಿಕ ವೇಳೆ, ಹೆಚ್ಚು ಶ್ರಮ ಬೇಕಾಗುತ್ತದೆ. ನಾವು ಬಳಸುವ ಅಲಂಕಾರದ ವಸ್ತುಗಳಿಗಂತೂ ವಿಪರೀತ ಹಣ ಖರ್ಚುಮಾಡಬೇಕಾಗುತ್ತದೆ. ಇಂತಹ ಆಡಂಬರದ ಓದು ಬೇಡವೆಂದು ಬಗೆದು ನಾನು ನನ್ನ ಸ್ವಂತ ಗ್ರಂಥಾಲಯದಲ್ಲಿ ವೇಳೆ, ಶ್ರಮ, ಹಣಗಳ ಅಧಿಕ ಉಳಿತಾಯಮಾಡಿ ಗ್ರಂಥವಾಚನ ಮಾಡುತ್ತೇನೆ: 'ಹನಿ ಹನಿ ಕೂಡಿದರೆ ಹಳ್ಳ' ಎಂಬ ಗಾದೆಯಂತೆ ನನ್ನ ನಿರಾಡಂಬರ ಜೀವನದಿಂದಾದ ಉಳಿತಾಯದಿಂದ ಸ್ವಂತ ಗ್ರಂಥಾಲಯವನ್ನು ಕ್ರಮೇಣ ವೃದ್ಧಿಪಡಿಸುತ್ತಿದ್ದೇನೆ. ನಾನು ವೃದ್ಧಾವಸ್ಥೆ ತಲುಪುವಷ್ಟೊತ್ತಿಗೆ ಅದು ಬೃಹದಾಕಾರವಾಗಿ ಬೆಳೆಯುವದರಲ್ಲಿ ಸಂದೇಹವಿಲ್ಲ. ನನಗೆ ಅದೊಂದು 'ಜೀವವಿಮೆ' ಇದ್ದಂತೆ.

ನನಗೆ ಪುಸ್ತಕಗಳ ಮೇಲೆ ಎಷ್ಟು ಪ್ರೀತಿಯೋ, ಅಷ್ಟೇ ಪ್ರೀತಿ-ಅದೇಕೆ, ಹೆಚ್ಚು ಪ್ರೀತಿ-ನಾನು ಸಾಕಿದ ನಾಯಿಕುನ್ನಿ 'ಮೋತಿಯ' ಮೇಲೆ, ಬೆಕ್ಕಿನ ಮರಿ 'ಚಿನ್ನಿ'ಯ ಮೇಲೆ ಇದೆ. ಅವು ಸಹ ಒಡೆಯನಾದ ನನ್ನ ತೊಡೆಯ ಮೇಲೆ ಕುಳಿತು ಸಂತೋಷಪಡುತ್ತವೆ. ನನ್ನೊಂದಿಗೆ ನಾನು ಹೋದಲ್ಲಿಗೆ ಹೋಗಲೆತ್ನಿಸುತ್ತವೆ. ಇಂತಹ ಪ್ರೀತಿಯ ಪ್ರಾಣಿಗಳೊಂದಿಗೆ ಪ್ರವೇಶಕ್ಕೆ 'ಇತರ ಗ್ರಂಥಾಲಯಗಳಲ್ಲಿ' ನಿರ್ಬಂಧವಿದೆ. ಅಲ್ಲಿ ನಾನು ಪ್ರಾಣಿಗಳೊಂದಿಗೆ ಗ್ರಂಥಾಲಯದ ಅಂಗಳದಲ್ಲಿ ನಿಲ್ಲಬೇಕು; ಇಲ್ಲವೆ ಕೇವಲ ಪುಸ್ತಕಗಳೊಂದಿಗೆ ಗ್ರಂಥಾಲಯದ ಒಳಗೆ ಇರಬೇಕು. ಆದರೆ ಎರಡೂ ಕಾರ್ಯಗಳನ್ನು ಒಟ್ಟಿಗೆ ನೆರವೇರಿಸಲು ಅಲ್ಲಿ ಸಾಧ್ಯವಿಲ್ಲ. 'ನನ್ನ ಸ್ವಂತ ಗ್ರಂಥಾಲಯ'ದಲ್ಲಿ ಇದಾವುದಕ್ಕೂ ನಿರ್ಬಂಧವಿಲ್ಲ. ನಾನು ಹಾಯಾಗಿ, ಆರಾಮ ಖುರ್ಚಿಯ ಮೇಲೆ ಕುಳಿತುಕೊಂಡು ಎಡಗೈಯಿಂದ 'ಡಿವಿಜಿ' ಅವರ 'ಮಂಕುತಿಮ್ಮನ ಕಗ್ಗ'ವನ್ನಾಗಲಿ, 'ಸರ್ವಜ್ಞ ವಚನ' ಗ್ರಂಥವನ್ನಾಗಲಿ ಹಿಡಿದುಕೊಂಡು ಓದಲು ಪ್ರಾರಂಭಿಸುವುದೊಂದೇ ತಡ ನನ್ನ ಬೆಕ್ಕಿನ ಮರಿ 'ಚಿನ್ನಿ' ಬಂದು ತೊಡೆಯನ್ನೇರಿ ಕುಳಿತುಕೊಳ್ಳುತ್ತದೆ. 'ಮೋತಿ' ಬಾಲವನ್ನಾಡಿಸುತ್ತ ನನ್ನ ಪದತಲದಲ್ಲಿ ನಿಷ್ಠಾವಂತ ಸೇವಕನಂತೆ ಕೂಡುತ್ತದೆ. ಚಿನ್ನಿಯ ಬೆನ್ನಮೇಲೆ ಬಲಗೈಯಿಂದ ನೇವರಿಸುತ್ತ ಓದುವದೆಂದರೆ ನನಗೆ ಅಮಿತಾನಂದ, ಗಾಂಜಾ ಸೇದಿದವರಿಗೆ, ವ್ಹಾಯಿಟ್‌ಹಾರ್ಸ ವಿಸ್ಕಿ ಕುಡಿದವರಿಗೆ, ನನಗಾಗುವ ಅಮಿತಾನಂದ ಆಗುತ್ತದೆಯೋ ಇಲ್ಲವೋ ನಾನರಿಯೆ. ಸ್ವಂತ ಗ್ರಂಥಾಲಯದ ಪ್ರೀತಿಯ ಗ್ರಂಥವನ್ನೆತ್ತಿಕೊಂಡು ಸಾಕು ಪ್ರಾಣಿಗಳ ಸಮ್ಮುಖದಲ್ಲಿ ಕುಳಿತು ಓದುವಾಗಲೆಲ್ಲ ನನ್ನ ನಖ-ಶಿಖಾಂತ ಒಂದು ಬಗೆಯ ಮಿಂಚು ಸಂಚರಿಸಿದಂತೆ ಅನುಭವವಾಗುತ್ತದೆ. ಆ ಅನುಭವನನ್ನೇ ಬಹುಶ; ಶರಣರು 'ಶಿವಾನುಭವ' ಲಿಂಗಾಂಗ ಸಾಮರಸ,' 'ನಾನನೆ, ನೀನನೆ -ಎಂದು ಮುಂತಾಗಿ

ತನ್ನು ವಚನಗಳಲ್ಲಿ ವರ್ಣಿಸಿರಬಹುದೆಂದು ನನ್ನ ಎಣಿಕೆ. ಇದನ್ನೇ ಬೇರೆ ಶಬ್ದಗಳಲ್ಲಿ 'ಸ್ವರ್ಗಸುಖ' 'ಬ್ರಹ್ಮಾನಂದ' 'ಆತ್ಮತೃಪ್ತಿ' 'ತುರ್ಯಾವಸ್ಥೆ—ಎಂದೂ ಅನ್ನಬಹುದು. ನನ್ನಂತೆ ಸ್ವಂತ ಗ್ರಂಥಾಲಯವಿದ್ದವರಿಗೆ ಇಂಥ ಅನುಭವ ವೇದ್ಯವಾಗಿರಲು ಸಾಕು. ಆದರೆ ಸ್ವಂತ ಗ್ರಂಥಾಲಯವಿಲ್ಲದವರು ಈ ದಿಶೆಯಲ್ಲಿ ಪ್ರಯತ್ನಿಸಿ ನೋಡಬೇಕು. ಪ್ರಯತ್ನಕ್ಕೆ ಫಲ ಸಿಕ್ಕೇ ಸಿಗುತ್ತದೆ:

ಇತರ ಎಲ್ಲ ಗ್ರಂಥಾಲಯಗಳಲ್ಲಿ ಗ್ರಂಥಗಳನ್ನು ಎರವಲು ತೆಗೆದುಕೊಂಡು ಹೋಗುವದಕ್ಕೆ ಅನೇಕ ನಿಯಮಗಳಿವೆ. ಆ ಎಲ್ಲ ನಿಯಮಗಳನ್ನು ಸೂಕ್ಷ್ಮವಾಗಿ ಒರೆ ಹಚ್ಚಿ ಅವಲೋಕಿಸಿದರೆ ಅವು ಒಂದಕ್ಕೊಂದು ವಿರೋಧವಾಗಿದ್ದು ಒಬ್ಬರಿಗೊಂದು ಇನ್ನೊಬ್ಬರಿಗೆ ಇನ್ನೊಂದು ಇವೆ.–ಎಂಬುದು ದೃಷ್ಟಿಗೋಚರವಾಗುತ್ತದೆ. ಉದಾ :–ವಿದ್ಯಾರ್ಥಿ ಒಮ್ಮೆ ಓದಲು ಒಂದೇ ಪುಸ್ತಕ ಎರವಲಾಗಿ ಒಯ್ಯಬಹುದು; ಒಂದೇ ದಿನ ಮನೆಯಲ್ಲಿಟ್ಟುಕೊಳ್ಳಬಹುದು. ಅದೇ ಪ್ರಾಧ್ಯಾಪಕನಾದರೆ ಒಮ್ಮೆಲೇ ಹತ್ತು ಪುಸ್ತಕ ಒಯ್ಯಬಹುದು; ಮೂವತ್ತು ದಿವಸ ಇಟ್ಟುಕೊಳ್ಳಬಹುದು. ಇದೆಂಥ ನ್ಯಾಯ? ನಿಜವಾಗಿ ಜ್ಞಾನದ ಹಸಿವೆಯಿಂದ–ಜ್ಞಾನಾಪೇಕ್ಷೆಯಿಂದ ಬಂದವನು ವಿದ್ಯಾರ್ಥಿ. ಅವನಿಗೆ ಪುಸ್ತಕ ಓದುವದು ಆವಶ್ಯವಿರುತ್ತದೆ. ಆದರೆ ಪ್ರಾಧ್ಯಾಪಕನು ಸ್ವಂತ ಓದುವದಕ್ಕಿಂತ ವಿದ್ಯಾರ್ಥಿಗೆ ಹೇಳುವದು ಹೆಚ್ಚಿರುತ್ತದೆ. ಅಂತೆಯೇ ಅವನಿಗೆ 'ಬೋಧಕ' 'ಉಪದೇಶಕ' ಎಂದು ಕರೆಯುವದು. ಉಪದೇಶಕ–ಬೋಧಕನಿಗೆ ಹೆಚ್ಚು ಓದುವದು ಅನಾವಶ್ಯಕ, ಇದನ್ನು ವಿದ್ಯಾರ್ಥಿಗಳೆಲ್ಲರೂ ಬಲ್ಲರು. ಗ್ರಂಥವಾಚನ ಅಗತ್ಯವಿಲ್ಲದವರಿಗೆ ಹೆಚ್ಚು ಸಂಖ್ಯೆಯಲ್ಲಿ ಗ್ರಂಥಗಳನ್ನು ಎರವಲು ಕೊಡುವದೂ, ಗ್ರಂಥಗಳನ್ನು (ಕಂಠಪಾಠ ಮಾಡಿ) ಪರೀಕ್ಷೆಯಲ್ಲಿ ಪಾಸಾಗಲೇಬೇಕೆಂದಿರುವ ವಿದ್ಯಾರ್ಥಿಗೆ ಕೇವಲ ಒಂದೇ ಒಂದು ಗ್ರಂಥವನ್ನು ಎರವಲು ಕೊಡುವದೂ ಯಾವ ನ್ಯಾಯ? ಮಕ್ಕಳಿಗೆ ಒಂದು, ಮುದುಕರಿಗೆ ಮತ್ತೊಂದು ಮಹಿಳೆಯರಿಗೆ ಇನ್ನೊಂದು, ಗ್ರಂಥಪಾಲನಿಗೆ ಮಗದೊಂದು, ಗ್ರಂಥಪಾಲನ ಗೆಳೆಯರಿಗೆ– ನೆಂಟರಿಷ್ಟರಿಗೆ ಬೇರೊಂದು ನಿಯಮಗಳುಳ್ಳ 'ಇತರ ಗ್ರಂಥಾಲಯಗಳಲ್ಲಿ' ಪ್ರವೇಶ ಮಾಡಲು ಅದೇಕೋ ನನ್ನ ಮನಸ್ಸು ಒಪ್ಪುವದಿಲ್ಲ. ಜ್ಞಾನನಿಧಿಯ ಅಧಿದೇವತೆಯಾದ ಸರಸ್ವತಿ ಎದುರು ಈ ಬಗೆಯ ಭಿನ್ನಭಾವನೆಗೆ ಎಡೆ ಇರುವದು ಪರಮ ಅನ್ಯಾಯವೇ ಸರಿ. ನಮ್ಮ ಭರತ ದೇಶದ ಸಂವಿಧಾನವು ಹೇಳುವಂತೆ ಜ್ಞಾನಾರ್ಜನೆಯ (ಗ್ರಂಥಗಳ ಮೂಲಕ) ಹಕ್ಕು ಪ್ರತಿಯೊಬ್ಬ ಭಾರತೀಯನಿಗೆ ಕೊಡಲ್ಪಟ್ಟಿದೆ. ಆದರೆ 'ಇತರ ಗ್ರಂಥಾಲಯಗಳಲ್ಲಿ' ವ್ಯಕ್ತಿಯ ಈ ಅಮೂಲ್ಯ ಹಕ್ಕಿಗೆ ಚ್ಯುತಿಯುಂಟಾಗಿದೆಂದು ಅವುಗಳ ನಿಯಮಾವಳಿಗಳನ್ನು ನೋಡಿದರೆ ಥಟ್ಟನೆ ಹೊಳೆಯುತ್ತದೆ. ವೈವಿಧ್ಯ ವೈಷಮ್ಯದಿಂದ ಕೂಡಿರುವ ಈ ನಿಯಮಾವಳಿಯ ಗೋಡವೆಯೇ ಬೇಡವೆಂದು ನಾನು ನನ್ನ ಸ್ವಂತ ಗ್ರಂಥಗಳುಳ್ಳ ಗ್ರಂಥಾಲಯವನ್ನೇ ನಿರ್ಮಿಸಿಕೊಂಡಿದ್ದೇನೆ. ನಿಯಮಗಳ ಉಲ್ಲಂಘನೆಯ ಅಥವಾ ಪರಿಪಾಲನೆಯ ಒಣ ಚಿಂತೆಯಿಂದ ದೂರವಾಗಿದ್ದೇನೆ; ಸ್ವಂತ ಗ್ರಂಥಾಲಯದ ಆನಂದ ಸಾಗರದಲ್ಲಿ ಓಲಾಡುತ್ತಿದ್ದೇನೆ. ಏಕೆಂದರೆ ಚಿಂತೆಯೇ ಮುಪ್ಪು ತರುತ್ತದೆ. ಆದುದರಿಂದ 'ಆನಂದವೇ ಯೌವನ' ಎಂಬ ಗಾದೆಯ ಮಾತು ನನ್ನ ವಿಷಯದಲ್ಲಿ ಸತ್ಯವಾಗಿದೆ.

ಚಿರಂತನ ಕಾಲ ಯೌವನಸ್ಥರಾಗಿದ್ದು, ಸದಾ ಆನಂದದಲ್ಲಿ ಜೀವಿಸಬೇಕೆಂಬುವವರೆಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಸ್ವಂತ ಗ್ರಂಥಾಲಯವೊಂದನ್ನು ಹೊಂದಿರುವದರ ಅಗತ್ಯವನ್ನು ಬೇರೆ ಹೇಳಬೇಕಾಗಿಲ್ಲ. ✡

ಇದು ವಸತಿ ಸಮಸ್ಯೆಗೆ ಪರಿಹಾರವನ್ನೊದಗಿಸಬಹುದೆ?

ಬರುತ್ತಿದೆ ಹೊಸ ಬಗೆಯ ಕಾಂಕ್ರೀಟು !

ಎಂ. ಜಿ. ಶ್ರೀನಿವಾಸನ್

ಕಾಂಕ್ರೀಟಿನ ಪರಿಚಯ ಯಾರಿಗಿಲ್ಲ! ಈಗಿನ ಕಾಲದ ಎಳೆಯರಿಗೆ ಪ್ರೈಮರಿ ಸ್ಕೂಲಿನಲ್ಲೇ ಅದರ ಬಗ್ಗೆ ಹೇಳಿಕೊಡಲಾಗುತ್ತದೆ. ಅದು ಅಷ್ಟೊಂದು ಜನಪ್ರಿಯವಾಗಿದೆ. ಇದಕ್ಕೆ ಕಾರಣ ಅದು ಬಹಳ ಸಾಮರ್ಥ್ಯವುಳ್ಳದ್ದಾಗಿರುವುದು ಮತ್ತು ನಮ್ಮ ಸುತ್ತಮುತ್ತ ದೊರೆಯುವ ಕಚ್ಚಾ ಸಾಮಗ್ರಿಗಳನ್ನುಪಯೋಗಿಸಿ ಸುಲಭವಾಗಿ ತಯಾರಿಸಲು ಸಾಧ್ಯವಾಗುವುದು ಹಾಗೂ ನಮಗೆ ಎಲ್ಲಿ ಬೇಕೋ ಅಲ್ಲಿ ಬೇಕಾದ ಆಕೃತಿಯ ಪದಾರ್ಥಗಳನ್ನೂ ಕಟ್ಟಡಗಳನ್ನೂ ನಿರ್ಮಿಸಲು ಸಾಧ್ಯವಾಗುವುದು. ಅದರ ಬಳಕೆಯು ಮನೆಗೆ ಹಾಗೂ ತೋಟಗಳಿಗೆ ಬೇಕಾದ ಸಣ್ಣ ಪುಟ್ಟ ಸಾಮಗ್ರಿಗಳಿಂದ ಹಿಡಿದು ಬೃಹತ್ ನಿರ್ಮಾಣಕಾರ್ಯಗಳಿಗೂ ಅಲ್ಲದೆ ಯಂತ್ರ ಹಾಗೂ ನಾವೆಗಳ ನಿರ್ಮಾಣ ಕಾರ್ಯಗಳ ವರೆಗೂ ವ್ಯಾಪಿಸಿದೆ. ಅದರ ಉಪಯೋಗಕ್ಕೆ ಮಿತಿ, ಮಾನವನ ಕಲ್ಪನಾ ಶಕ್ತಿಯ ಮಿತಿ ಮಾತ್ರ. "ಕಾಂಕ್ರೀಟು" ಎಂಬ ಪದ ಆಡು ಭಾಷೆಯಲ್ಲೂ ಸೇರಿಹೋಗಿಬಿಟ್ಟಿದೆ. ನಿಮ್ಮ ಮನೆಯಲ್ಲಿ ಬಿಸಿಬೇಳೆಭಾತು ಮಾಡಿ ನಿಮ್ಮ ಸ್ನೇಹಿತರನ್ನು ಕರೆಯಿರಿ. ಮತ್ತೆ, "ಓಹೋ, ಕಾಂಕ್ರೀಟ್ ಮಾಡಿದಿರೋ, ಪರವಾಗಿಲ್ಲ, ಎರಡು ದಿವಸ ಊಟ ಮಾಡೋ ತಾಪತ್ರಯವಿಲ್ಲ," ಅಂತ ಹೇಳಿಯೆ ಬಿಡುತ್ತಾರೆ.

"ಕಾಂಕ್ರೀಟು" ಎಂದು ನಾವು ಬಹು ಸಾಮಾನ್ಯವಾಗಿ ಕರೆಯುವ ವಸ್ತುವನ್ನು ಜಲ್ಲಿ ಕಲ್ಲು, ಮರಳು ಮತ್ತು ಸಿಮೆಂಟನ್ನು ನಿರ್ದಿಷ್ಟ ಪ್ರಮಾಣದಲ್ಲಿ ನೀರಿನಲ್ಲಿ ಕಲಸಿ ತಯಾರಿಸುವರು. ಇದರಲ್ಲಿಯ ಜಲ್ಲಿ, ಕಲ್ಲು ಮತ್ತು ಮರಳನ್ನು "ಸಮಷ್ಟಿ" ಎಂದು ಕರೆಯುತ್ತಾರೆ. ಕೆಲವು ವಿಶೇಷ ಕೆಲಸಗಳಿಗೆ ವಿಶಿಷ್ಟವಾದ ಸಮಷ್ಟಿಗಳನ್ನುಪಯೋಗಿಸುವರು. ಈ ಸಮಷ್ಟಿಗಳನ್ನು ಒಂದುಗೂಡಿಸಿ ಒಂದು ದೃಢವಾದ ಹಾಗೂ ಬಲವಾದ ಘನವಸ್ತುವನ್ನುಂಟುಮಾಡುವುದು ಸಿಮೆಂಟಿನ ಕೆಲಸ.

ಕಾಂಕ್ರೀಟಿನ ಜನಪ್ರಿಯತೆಗೆ ಕಾರಣವಾದ ಒಂದು ಮುಖ್ಯ ಗುಣ ಅದರ ಅತೀವವಾದ [illegible]

(Compressive Strength). ಇದು ಕಾಂಕ್ರೀಟಿನ ಇತರ ಮುಖ್ಯ ಗುಣಗಳಾದ ಬಾಳಿಕೆ ಹಾಗೂ ವ್ಯಾಪ್ಯತೆ (permeability)ಯ ಸೂಚಿಯೆಂದು ಪರಿಗಣಿಸಲಾಗಿದೆ. ಆಡುಭಾಷೆಯಲ್ಲಿ ಇದನ್ನು 'ಬಲ' ಎಂದೂ ಕರೆಯುತ್ತಾರೆ. ಈ ಸಾಮರ್ಥ್ಯವು ಅದರಲ್ಲಿ ಉಪಯೋಗಿಸಿರುವ ಸಮಷ್ಟಿ ಹಾಗೂ ಸಿಮೆಂಟಿನ ಗುಣ, ಸಿಮೆಂಟು, ಸಮಷ್ಟಿ ಹಾಗೂ ನೀರಿನ ಸಾಪೇಕ್ಷ ಪರಿಮಾಣಗಳು, ಸಮಷ್ಟಿಗಳ ಶ್ರೇಣೀಕರಣ (Gradation), ಇವುಗಳನ್ನೂ ಕಲಸಣೆ, ಅಡಕಣೆ (Compaction) ಮತ್ತು ಸಂಸ್ಕರಣ (Curing) ಗಳನ್ನೂ ಅವಲಂಬಿಸಿದೆ.

[illegible]

ಸೆಂಟಿಮೀಟರಿಗೆ ಇಂತಿಷ್ಟು ಕಿಲೋ ಗ್ರಾಂ. ಎಂದು ಹೇಳುತ್ತಾರೆ. ಇದನ್ನು ಪ್ರಯೋಗ ಶಾಲೆಗಳಲ್ಲಿ ೧೫ ಸೆಂಟಿಮೀಟರಿನ ಅಳತೆಯ ಪರೀಕ್ಷಾ ಘನ (test cubes) ಗಳನ್ನು ಸಂಚಲನಗೊಳಿಸಿ ತಿಳಿಯುತ್ತಾರೆ. ಈ ಘನ ಗಳನ್ನು ತಯಾರಿಸುವ ಹಾಗೂ ಪರೀಕ್ಷಿಸುವ ವಿಧಾನಗಳನ್ನು ಭಾರತೀಯ ಮಾನಕ ಸಂಸ್ಥೆ (Indian Standards Institution) ಯು ಭಾರತೀಯ ಮಾನಕ ವಿವರಣೆ (Indian Standards Specification) ೫೧೬–೧೯೫೯ ರಲ್ಲಿ ವಿವರಿಸುತ್ತವೆ. ಕಾಂಕ್ರೀಟಿನಲ್ಲಿ ಉಪಯೋಗಿಸಬೇಕಾದ ಒಂದೊಂದು ವಸ್ತು ವಿನ ಗುಣ ಹೇಗಿರಬೇಕು, ಅದನ್ನು ಹೇಗೆ ಪರೀಕ್ಷಿಸಬೇಕು, ಕಾಂಕ್ರೀಟನ್ನು ಹೇಗೆ ತಯಾ ರಿಸಿ ಇರಿಸಬೇಕು, ಎಂಬುದೆಲ್ಲವನ್ನೂ ತಿಳಿಯು ಪಡಿಸಲು ಈ ಸಂಸ್ಥೆಯು ವಿವಿಧ ಮಾನಕ ವಿವರಣೆಗಳನ್ನು ಹೊರತಂದಿದೆ. ಇವುಗಳನ್ನು ಅನುಸರಿಸಿ, ಉತ್ತಮ ಗುಣಮಟ್ಟದ ಕಾಂಕ್ರೀ-ಟನ್ನು ತಯಾರಿಸಿ, ಕಟ್ಟಡಗಳನ್ನು ನಿರ್ಮಿಸಿ ದರೆ ಹಾಳತವನ್ನೂ ಬಾಳಿಕೆಯನ್ನೂ ಪಡೆಯ ಬಹುದು. ಹೀಗೆಯೇ ವಿವಿಧ ದೇಶಗಳವರು ಅವರವರ ಸನ್ನಿವೇಶ ಸಂಪತ್ತುಗಳಿಗನುಸಾರ ವಾಗಿ ಮಾನಕ ವಿವರಣೆಗಳನ್ನು ರಚಿಸಿ ಅಳವಡಿ ಸುತ್ತಿದ್ದಾರೆ.

ಕಾಂಕ್ರೀಟಿನ ಸಾಮರ್ಥ್ಯವು ಎಷ್ಟಿರ-ಬೇಕೆಂಬುದೊಂದು ಪ್ರಶ್ನೆ. ಹಿಂದೆ ಎಲ್ಲಾ ವಿಧದ ಕೆಲಸಗಳಿಗೂ ಒಂದೇ ಸಾಮರ್ಥ್ಯದ ವಸ್ತುವನ್ನೇ ಉಪಯೋಗಿಸುತ್ತಿದ್ದರು, "ಬಲ ವಾಗಿ ಕಟ್ಟಿಹಾಕಿದ್ದರೆ ಬಿದ್ದಿರುತ್ತೆ, ನಮ್ಮ ನಂತರದವರೆಲ್ಲ ಅನುಭವಿಸಲಿ," ಎಂಬ ಅಭಿ-ಪ್ರಾಯವಿತ್ತು. ಆಗ ಹಾಳತದ ತಾಪತ್ರಯ ವಿರಲಿಲ್ಲ. ಆದರೆ ಈಗ ಪರಿಸ್ಥಿತಿ ಹಾಗಿಲ್ಲ-ಅದೂ ನಿರ್ಮಾಣ ಸಾಮಗ್ರಿಗಳು ದೊರೆಯು ವುದು ಕಷ್ಟವಾಗುತ್ತಿರುವಾಗ. ಆಯಾ ನಿರ್ಮಾಣಗಳು ನಿರ್ವಹಿಸಬೇಕಾದ ಕರ್ತವ್ಯ, ಅವುಗಳ ಬಳಕೆ ಮತ್ತು ಬಾಳಿಕೆಯನ್ನು ಅನು ಸರಿಸಿ, ಅನುಭವ ಮತ್ತು ಪ್ರಯೋಗಗಳಿಂದ ಮಾಡುತ್ತಾರೆ.

ಈಗ ಉಪಯೋಗದಲ್ಲಿರುವ ಕಾಂಕ್ರೀಟನ್ನು, ಅದರ ಸಾಮರ್ಥ್ಯವನ್ನಾಧರಿಸಿ, ಕೃಶ್ ಕಾಂಕ್ರೀಟು, ಸಾಧಾರಣಬಲ ಕಾಂಕ್ರೀಟು, ಅತಿ ಬಲ ಕಾಂಕ್ರೀಟು ಎಂದು ವಿಂಗಡಿಸ ಬಹುದು.

೫೦ ರಿಂದ ೧೦೦ ಕಿ. ಗ್ರಾ./ಚ. ಸೆಂ. ವರೆಗಿನ ಧಾರಣಸಾಮರ್ಥ್ಯ ಕಾಂಕ್ರಿಟನ್ನು ಕೃಶ್ ಕಾಂಕ್ರೀಟೆಂದು ಕರೆಯಬಹುದು. ಇದನ್ನು ನೆಲಗಟ್ಟು, ಕೆಲವು ಅಡಿಪಾಯಗಳು, ಆಸರೆ ಗೋಡೆಗಳು, ಮುಂತಾದವುಗಳಿಗೆ ಉಪ ಯೋಗಿಸುವರು.

೧೫೦ ರಿಂದ ೩೦೦ ಕಿ. ಗ್ರಾಂ./ ಚ. ಸೆಂ. ವರೆಗಿನ ಧಾರಣ ಸಾಮರ್ಥ್ಯದ ಕಾಂಕ್ರಿಟನ್ನು ಸಾಧಾರಣ ಬಲ ಕಾಂಕ್ರೀಟೆಂದು ಕರೆಯ ಬಹುದು. ಇದನ್ನು ಪ್ರಬಲಿತ ಕಾಂಕ್ರೀ ಟಿನ (Reinforced concrete) ಕಟ್ಟಡ ಗಳಿಗೂ, ಉದ್ದ ಚಾಚಿನ (Long span) ತೊಲೆಗಳಿಗೂ ಹಾಗೂ ಕಮಾನುಗಳಿಗೂ, ಅತಿಯಾಗಿ ಭಾರ ಹೊರಬೇಕಾದ ಕಂಬಗಳಿಗೂ ಉಪಯೋಗಿಸುತ್ತಾರೆ. ದಿನ ನಿತ್ಯದ ಬಳಕೆಯ ಪ್ರಬಲಿತ ಕಾಂಕ್ರೀಟಿಗೆ ಅವಶ್ಯಕವಾದುದು ೧೫೦ ಮತ್ತು ೨೧೦ಕಿ. ಗ್ರಾ. / ಚ. ಸೆಂ. ಕಾಂಕ್ರೀಟು. ಈ ಸಾಮರ್ಥ್ಯವನ್ನು ಕ್ರಮವಾಗಿ ೧: ೨: ೪: ಮತ್ತು ೧: ೧. ೫: ೩ ಮಿಶ್ರಣಗಳಿಂದ ಪಡೆಯಬಹುದು.

೩೫೦ರಿಂದ ೧೦೦೦ ಕಿ. ಗ್ರಾ. / ಚ. ಸೆಂ. ವರೆಗಿನ ಧಾರಣ ಸಾಮರ್ಥ್ಯದ ಕಾಂಕ್ರೀಟನ್ನು ಅತಿ ಬಲ ಕಾಂಕ್ರೀಟೆಂದು ಕರೆಯಬಹುದು. ಇದರತಯಾರಿಕೆಗೆ ಕಟ್ಟುನಿಟ್ಟಾದ ಗುಣ ನಿಯಂತ್ರಣ (Quality conrtol) ಅತ್ಯ ವಶ್ಯಕ. ೩೫೦ರಿಂದ ೬೦೦ ಕಿ. ಗ್ರಾ./ಚ. ಸೆಂ. ವರೆಗಿನ ಧಾರಣಸಾಮರ್ಥ್ಯದ ಕಾಂಕ್ರೀಟು ಪೂರ್ವ ಪ್ರತಿಬಲಿತ (Prestressed) ಕಾಂಕ್ರೀಟು. ಇದನ್ನು ವಿಶೇಷ ನಿರ್ಮಾಣ ಗಳಿಗೆ ಉಪಯೋಗಿಸುತ್ತಾರೆ. ಈ ಶತಕದ ಕೊನೆಯ ವೇಳೆಗೆ ಈಗ ನಾವು ಅಳವಡಿಸುತ್ತಿ

ಗೊಳಿಸುವುದರಿಂದ ೧೦೦೦ ಕಿ. ಗ್ರಾ./ಚ. ಸೆಂ. ನ ಮಿತಿಯನ್ನು ಮುಟ್ಟುವ ದೃಢವಾದ ನಂಬಿಕೆಯಿದೆ. ಮತ್ತು ಅದನ್ನು ಕಾರ್ಯಗತ ಗೊಳಿಸಲು ವಿಧಾನಗಳು ಹೊರಬರುತ್ತಿವೆ.

ಈಗ ನಮ್ಮ ಉತ್ಸಾಹವನ್ನು ಕೆರಳಿಸುತ್ತಿರುವುದು ೧೦೦೦ ಕಿ. ಗ್ರಾ./ ಚ. ಸೆಂ. ಗೂ ಇದನ್ನು ಮೀರಿದ ಧಾರಣ ಸಾಮರ್ಥವುಳ್ಳ ಕಾಂಕ್ರೀಟು ಇದನ್ನು "ಭೀಮಬಲ" ಕಾಂಕ್ರೀಟು. ಎಂದು ಕರೆಯಬಹುದು. ಇದೊಂದು ಕಲ್ಪನಾಲೋಕದ, ಕೈಗೆಟುಕದ ಕಾಂಕ್ರೀಟೆಂದು ತಿಳಿಯಬೇಡಿ. ಈಗಾಗಲೇ ೩೦೦೦ ಕಿ. ಗ್ರಾಂ./ ಚ. ಸೆಂ. ಗೂ. ಮಿಕ್ಕಿದ ಧಾರಣ ಸಾಮರ್ಥ್ಯದ ಕಾಂಕ್ರೀಟನ್ನು ತಯಾರಿಸಬಹುದೆಂದು ಪ್ರಯೋಗ ಶಾಲೆಗಳಲ್ಲಿ ಸಿದ್ಧವಾಗಿದೆ. ಈ ಜಾತಿಯ ಕಾಂಕ್ರೀಟನ್ನು ಹಾಳತವಾಗಿ ತಯಾರಿಸುವ ವಿಧಾನಗಳನ್ನು ಕಂಡುಹಿಡಿಯಲೂ ಅವುಗಳ ಗುಣಗಳನ್ನು ನಿಖರವಾಗಿ ಅರಿಯಲೂ ಮುಂದುವರಿದ ದೇಶಗಳಲ್ಲಿ ಸಂಶೋಧನೆಗಳು ಭರದಿಂದ ಸಾಗುತ್ತಿದ್ದು ಬೆಟ್ಟದಷ್ಟು ದಾಖಲೆಗಳು ಸಿದ್ಧವಾಗಿವೆ ಮತ್ತು ಆಗುತ್ತಿವೆ.

ಭೀಮಬಲ ಕಾಂಕ್ರೀಟನ್ನು ತಯಾರಿಸಲು ಹಲವು ವಿಧಾನಗಳನ್ನು ಸೂಚಿಸಲಾಗಿದೆ. ಅವು— ೧) ಸುಧಾರಿತ ಅಡಕಣೆಯ ವಿಧಾನಗಳು ೨) ಅಡಕಣೆಯೊಂದಿಗೆ ಒತ್ತಡವನ್ನೂ, ಶಾಖವನ್ನೂ ಬಳಸುವುದು ೩) ಬಂಧನ (bond) ವನ್ನು ವೃದ್ಧಿಸುವುದು, ೪) ತ್ರಿಯಕ್ಷ ಪ್ರತಿಬಲ (Triaxial stress) ವನ್ನುಂಟುಮಾಡುವುದು ಮತ್ತು ೫) ತಂತು (fibre) ಪ್ರಬಲನಗಳನ್ನು ಬಳಸುವುದು. ಇವುಗಳಲ್ಲಿ ಮೂರನೆಯ ವಿಧಾನವು ಆಶಾದಾಯಕವಾಗಿದೆ. ಈ ವಿಧಾನದಲ್ಲಿ ಸಮಷ್ಟಿಗಳ ನಡುವಣ ಬಂಧನವನ್ನು ಬಲಪಡಿಸಬೇಕು. ಇದಕ್ಕಾಗಿ, ಅಮೆರಿಕದ ಸಂಯುಕ್ತ ಸಂಸ್ಥಾನದ ಕ್ಲೀಗರನು ಸಿಮೆಂಟಿನ ಕಿಟ್ಟವನ್ನು (Cement clinker) ಸಮಷ್ಟಿಯನ್ನಾಗಿ ಬಳಸಿ, ೧೨೦೦ ಕಿ. ಗ್ರಾ. /ಚ. ಸೆಂ. ಪಡೆದಿದ್ದಾನೆ, ಇಂಗ್ಲೆಂಡಿನ ರಾಬ್ ಸನ್ ಎಂಬ ತಜ್ಞನು Cement fondu ವಿನಿಂದ ತಯಾರಿಸಿದ ಸಮಷ್ಟಿಯನ್ನು ಬಳಸಿ ೧೩೦೦ ಕಿ. ಗ್ರಾಂ/ ಚ. ಸೆಂ./ ಪಡೆದಿದ್ದಾನೆ. ಮೂರ್ ಹೆಡ್ ಎಂಬ ಇನ್ನೊಬ್ಬ ತಜ್ಞನು ಸಿಲಿಕಾ ಮತ್ತು ಸುಣ್ಣಗಳ ಮಿಶ್ರಣವನ್ನುಬಳಸಿ ೨೦೦೦ ಕಿ. ಗ್ರಾಂ. / ಚ. ಸೆಂ. ಪಡೆದಿದ್ದಾನೆ.

ಆದರೆ ನಮಗೆ ಆಶಾದಾಯಕವಾದುದು ಪಾಲಿಮರ್ ಗಳನ್ನೊಳಗೊಂಡ ಕಾಂಕ್ರೀಂಟು. ಪಾಲಿಮರ್ ಒಂದು ಸಂಯೋಜಿತ ವಸ್ತು. ಮನೋಮರ್ (Monomar) ಎಂಬ ದ್ರವೀಯ ರಾಸಾಯನಿಕದ ಅಣುಗಳು ಒಂದರೊಡನೊಂದು ಸಂಯೋಗಗೊಂಡು ಭಾರೀ ಗಾತ್ರದ ಅಣುಗಳುಳ್ಳ ಪಾಲಿಮರ್ ಉಂಟಾಗುತ್ತದೆ. ರಾಸಾಯನಿಕ ತ್ವರಕಗಳು, ಶಾಖ ಅಥವಾ ಗಾಮಾ ಕಿರಣಗಳನ್ನು ಬಳಸಿ ಈ ಕ್ರಿಯೆಯನ್ನು ಸಾಧಿಸಬಹುದು.

ಪಾಲಿಮರುಗಳನ್ನೊಳಗೊಂಡ ಕ್ರಾಂಕೀಟನ್ನುಮೂರು ವಿಧಗಳಾಗಿ ವಿಂಗಡಿಸಬಹುದು: ೧) ಪಾಲಿಮರ್ ಕಾಂಕ್ರೀಟು ೨) ಪಾಲಿಮರ್ ತೂರಿಸಿದ ಕಾಂಕ್ರೀಟು ೩) ಪಾಲಿಮರ್ ಸಿಮೆಂಟ್ ಕಾಂಕ್ರೀಟು.

ಪಾಲಿಮರ್ ಕಾಂಕ್ರೀಟನ್ನು ಪಡೆಯಲು ಸಮಷ್ಟಿಗಳನ್ನು ಒಂದು ಆಯ್ದ ಮಾನೋಮರಿನೊಂದಿಗೆ ಕಲಸಿ, ಇರಿಸಿ, ಪಾಲಿಮರಿಸಬೇಕು. ಶೇಕಡಾ ೬ರಿಂದ ೮ರಷ್ಟು ಮಾನೋಮರನ್ನು ಬಳಸಿ ೧೩೦೦ರಿಂದ ೧೪೦೦ ಕಿ. ಗ್ರಾ./ ಚ. ಸೆಂ. ಸಾಮರ್ಥ್ಯವನ್ನು ಪಡೆಯಬಹುದೆಂದು ತಿಳಿದುಬಂದಿದೆ. ಈ ಕ್ರಾಂಕೀಟು ನೀರನ್ನು ಹೀರಿಕೊಳ್ಳುವ ಪ್ರಮಾಣ ಕಡಮೆ, ಕರ್ಷಕ ಸಾಮರ್ಥ್ಯ (Tencile strenghth) ವು ಹೆಚ್ಚು ವಿನಾಶಕಾರಿ ರಾಸಾಯನಿಕ ಕ್ರಿಯೆಯನ್ನು ಇದು ನಿರೋಧಿಸುತ್ತದೆ.

ಪಾಲಿಮರ್ ತೂರಿಸಿದ ಕಾಂಕ್ರೀಟನ್ನು ಪಡೆಯಲು, ಪೂರ್ವನಿರ್ಮಿತ ಕಾಂಕ್ರೀಟಿನ ಘಟಕಗಳಲ್ಲಿ ಮಾನೋಮರನ್ನು ಬೆರೆಸಿ, ಅದನ್ನು ಪಾಲಿಮರಿಸಬೇಕು. ಮಾನೋಮರನ್ನು ತೂರಿಸುವುದಕ್ಕೆ ಮುಂಚೆ ಪೂರ್ವ

ನಿರ್ಮಿತ ಕಾಂಕ್ರೀಟಿನ ಘಟಕಗಳಲ್ಲಿರುವ ನೀರಿನಂಶವನ್ನು ತೆಗೆದು, ಕಾಂಕ್ರೀಟಿನೊಳಗಿರುವ ರಿಕ್ತತೆಗಳನ್ನು ನಿರ್ವಾತಗೊಳಿಸಿ, ಮಾನೋಮರನ್ನು ರಿಕ್ತತೆಗಳಲ್ಲಿ ಸಂಪೂರ್ಣವಾಗಿ ತುಂಬಿಸಬೇಕು. ಇದನ್ನು ನಂತರ ಪಾಲಿಮರಿಸಬೇಕು. ಈ ವಿಧಾನದಿಂದ ಸಾಧಾರಣ ಕಾಂಕ್ರಿಟಿನ ಸಾಮರ್ಥ್ಯವು ಸುಮಾರು ನಾಲ್ಕುಪಟ್ಟು ಹೆಚ್ಚುತ್ತದೆ. ಅಂದರೆ, ೩೫೦ ಕಿ. ಗ್ರಾ / ಚ. ಸೆಂ. ನ ಸಾಧಾರಣ ಕಾಂಕ್ರೀಟಿನ ಸಾಮರ್ಥ್ಯವು ಸುಮಾರು ೧೪೦೦ ಕಿ. ಗ್ರಾ. / ಚ. ಸೆಂಗೆ ಏರುತ್ತದೆ. ಕರ್ಷಕ ಸಾಮರ್ಥ್ಯವು ಅಷ್ಟೇ ಪಟ್ಟು ಹೆಚ್ಚುವುದಲ್ಲದೆ ಹೀರಿಕೆ ಶೇಕಡಾ ೦.೫ ಇಳಿಯುತ್ತದೆ.

ಪಾಲಿಮರ್ ಸಿಮೆಂಟ್ ಕಾಂಕ್ರೀಟನ್ನು ಪಡೆಯಲು ಸಮುಷ್ಟಿ, ಸಿಮೆಂಟು, ನೀರು ಮತ್ತು ಆಯ್ದ ಮಾನೋಮರನ್ನು ಕಲಸಿ, ನಂತರ ಪಾಲಿಮರಿಸಬೇಕು, ಈ ವಿಧಾನವು ಮುಂಚಿನ ಎರಡರಷ್ಟು ಕ್ಲಿಷ್ಟವಾಗಿರದೆ ಬಹಳ ಸರಳವಾಗಿದ್ದು ಹೊರಾಂಗಣ ಕಾರ್ಯಕ್ಷೇತ್ರದಲ್ಲಿ ಅಳವಡಿಸಲು ಅನುಕೂಲವಾಗಿದೆ, ಆದರೆ ಈ ವಿಧಾನದಿಂದ ಈಗ ಸದ್ಯದಲ್ಲಿ ಸಾಮರ್ಥ್ಯದ ಹೆಚ್ಚಳವು ಅಷ್ಟಾಗಿ ಕಂಡುಬಂದಿಲ್ಲ. ಸುಮಾರು ಶೇ. ೫೦ ರಷ್ಟು ಮಾತ್ರ. ಆದ್ದರಿಂದ ಇದರ ಬಗ್ಗೆ ಸಂಶೋಧನೆಗಳು ಹೆಚ್ಚು ತೀವ್ರವಾಗಿ ನಡೆಯುತ್ತಿವೆ.

ಇಷ್ಟು ಕಷ್ಟಪಟ್ಟು ತಯಾರಿಸಿದ ಭೀಮಬಲ ಕಾಂಕ್ರೀಟಿನ ಉಪಯೋಗವೆಲ್ಲಿ? ಎಂದು ಕೇಳಬಹುದು. ಹೊಸ ಹೊಸ ವಿಧಾನಗಳು, ವಸ್ತುಗಳು ಕಂಡುಬಂದರೆ ಅವುಗಳನ್ನು ಅಳವಡಿಸಲು ಮೊದ ಮೊದಲು ಹಿಂಜರಿಯುತ್ತೇವೆ. ಆದರೆ ಅದರ ಉಪಯುಕ್ತತೆಯ ಬಗ್ಗೆ ಶಂಕೆ ನಿವಾರಣೆಯಾದಾಗ ಅವು ಸಂಪೂರ್ಣವಾಗಿ ನಮ್ಮದಾಗಿಬಿಡುತ್ತವೆ. ೨೦೦ ಕಿ. ಗ್ರಾಂ./ ಚ. ಸೆಂ. ಗೂ ಮೀರಿದ ಕಾಂಕ್ರೀಟಿನ ತಯಾರಿಕೆ ಸಾಧ್ಯವೆಂದು ಕಂಡು ಬಂದಾಗ ಹೀಗೇ ಆಯಿತು. ಆದರೆ ಹಿಂದೆಯೇ

ಬಂದು ಕಾಂಕ್ರೀಟಿನ ನಿರ್ಮಾಣ ಕ್ಷೇತ್ರದಲ್ಲಿ ಒಂದು ಆಂದೋಲನವೇ ಎದ್ದಿತು.

ಈಗ ಭೀಮಬಲ ಕಾಂಕ್ರೀಟಿಗೂ ಅದೇ ಪರಿಸ್ಥಿತಿ ಒದಗಿದೆ. ಈಗ ಸದ್ಯಕ್ಕೆ ಕೆಳಕಂಡ ಕ್ಷೇತ್ರಗಳಲ್ಲಿ ಅಳವಡಿಸಲು ಪ್ರಯತ್ನಗಳು ನಡೆಯುತ್ತಿವೆ.

೧) ತೆಳುವಾದ ಪೈಪುಗಳು, ೨) ಸುರಂಗಗಳ ಒಳಹೊದಿಕೆ (lining), ೩) ಕ್ಷಾರ ನಿರ್ಮೂಲನ ಸಾಧನ (desalination plant)ಗಳು, ೪) ಸೇತುವೆಗಳ ಓಟದ ಮೇಲ್ಮೈ (bridge deck)ಯ ರಿಪೇರಿ ಹಾಗೂ ನಿರ್ಮಾಣ, ೫) ಸಮುದ್ರ ತೀರದ ಹಾಗೂ ಸಮುದ್ರದೊಳಗಿನ ನಿರ್ಮಾಣಗಳು;

ಇವೆಲ್ಲವೂ ತೃಪ್ತಿಕರವಾಗಿ ಕಾರ್ಯಗತವಾಗಬೇಕಾದರೆ ಒಂದೆರಡು ದಶಕಗಳು ಬೇಕಾಗಬಹುದು.

ಭೀಮಬಲ ಕಾಂಕ್ರೀಟಿನ ಸಂಪೂರ್ಣ ಉಪಯೋಗ ಪಡೆಯಲು ಪ್ರಾಯಶಃ ೨೧ನೇ ಶತಮಾನವು ಬರಬೇಕು. ಆ ಶತಮಾನದಲ್ಲಿ ಜನತೆ ಎದುರಿಸಬೇಕಾದ ಸಮಸ್ಯೆಗಳು ಬಹಳ. ಅವುಗಳಲ್ಲಿ ಅತಿ ಮುಖ್ಯವಾದುವು ವಸತಿ ಮತ್ತು ಸಾರಿಗೆ ಸಂಪರ್ಕ.

ಜನಸಂಖ್ಯೆಯು ಈಗ ಏರುತ್ತಿರುವ ವೇಗದಲ್ಲಿ ಮುಂದುವರಿದರೆ ಮುಂದೆ ವಸತಿಗಳನ್ನು ನಿರ್ಮಿಸಲು ಸ್ಥಳವೇ ದೊರೆಯದೆ ಹೋಗಬಹುದು. ಏಕೆಂದರೆ, ಈಗಾಗಲೇ ನಗರಗಳ ಅಭಿವೃದ್ಧಿಯಿಂದ ಕೃಷಿ ಯೋಗ್ಯವಾದ ಭೂಮಿಯನ್ನು ನುಂಗಿ ಹಾಕುತ್ತಿದ್ದೇವೆ. ಕೈಗಾರಿಕೆಗಳ ಬೆಳವಣಿಗೆಯೂ ಇದಕ್ಕೆ ಸಹಕರಿಸುತ್ತಿದೆ. ಇದೇ ರೀತಿ ಮುಂದುವರಿದರೆ ಸಾಗುವಳಿಗೆ ಭೂಮಿಯಿಲ್ಲದೇ ಹೋಗಬಹುದು. ಇದನ್ನು ತಡೆಯಲು ಆಗ ಬೇರೆ ದಾರಿಗಾಣದೆ ಆಕಾಶದತ್ತ ಗಮನ ಹರಿಸಬೇಕಾಗುತ್ತದೆ. ಮಿತವಾದ ನಿವೇಶನದಲ್ಲಿ ನೂರಾರು ಅಂತಸ್ತುಗಳ ಮನೆಗಳನ್ನು ಕಟ್ಟಬೇಕಾಗುತ್ತದೆ. ಆಗ ಭೀಮಬಲ ಕಾಂಕ್ರೀಟಿಲ್ಲದೇ ಬೇರಾವ ವಸ್ತು ನಮ್ಮ ನೆರವಿಗೆ

ಜನಸಂಖ್ಯೆ ಏರಿದಷ್ಟೂ ಸಾರಿಗೆ ಪ್ರಶ್ನೆ ಕ್ಲಿಷ್ಟವಾಗುತ್ತದೆ. ಭೂ ಮಟ್ಟದಲ್ಲಿ ಎಷ್ಟು ವಾಹನಗಳಿಗೆ ಸ್ಥಳ ಮಾಡಿಕೊಡಲಾದೀತು? ಇದಕ್ಕೆ ಅಂತಸ್ತಿನ ರಸ್ತೆಗಳೇ ಪರಿಹಾರ. ಅದೂ ಅಲ್ಲದೆ ನೂರಾರು ಅಂತಸ್ತಿನ ಮನೆಯಲ್ಲಿರುವವರು ಒಂದೊಂದು ಬಾರಿಯೂ ಭೂ ಮಟ್ಟಕ್ಕೆ ಬರಲಾದೀತೇ? ಅವರು ಬರಲೂ ಆಗುವುದಿಲ್ಲ. ವಾಹನಗಳು ಓಡಾಡುವುದಕ್ಕೂ ನಿಲ್ಲುವುದಕ್ಕೂ ಸೌಲಭ್ಯಗಳನ್ನು ಒದಗಿಸುವುದೂ ಸಾಧ್ಯವಿಲ್ಲ. ಅಂದರೆ ರಸ್ತೆಗಳು ಎರಡು ಮೂರು ಅಂತಸ್ತಿನಲ್ಲಿದ್ದರೆ ನಿವಾಸಿಗರಿಗೆ ಸುಲಭವಾಗುತ್ತದೆ, ಈ ಅಂತಸ್ತಿನ ರಸ್ತೆಗಳನ್ನು ಹೊರಲು ಬೇಕಾದ ಆಧಾರ ಸ್ತಂಭಗಳು ಸ್ಥಳಾಭಾವದಿಂದ ಆದಷ್ಟೂ ದೂರ ದೂರವಿರಬೇಕಾಗುತ್ತದೆ. ಅಂದಮೇಲೆ ಉದ್ದ ಚಾಚಿನ ತೊಲೆಗಳು ರಸ್ತೆಗಳನ್ನು ಹೊರಬೇಕು. ಈ ಉದ್ದ ಚಾಚಿನ ತೊಲೆಗಳೂ ಎತ್ತರದ ಆಧಾರ ಸ್ತಂಭಗಳೂ ಮಟ್ಟಸವಾಗಿರಬೇಕಾದರೆ ಭೀಮಬಲ ಕಾಂಕ್ರೀಟಿಗೇ ಶರಣು ಹೋಗಬೇಕು!

ಕೈಗಾರಿಕೆಯು ವಿಸ್ತಾರಗೊಂಡಷ್ಟೂ ವಾತಾವರಣದ ನೈರ್ಮಲ್ಯಕ್ಕೆ ಕೊಡಲಿ ಪೆಟ್ಟು ಬಿದ್ದು, ಉಸಿರಾಡುವುದಕ್ಕೇ ಯೋಗ್ಯವಾದ ಗಾಳಿಯೂ ಸಿಗುವುದಿಲ್ಲ. ಪರಮಾಣು ಸ್ಫೋಟದಿಂದಾಗುವ ವಿಕಿರಣಗಳ ಹಾವಳಿ ಹೆಚ್ಚಿ ಮಾನವನ ಉಳಿವಿಗೇ ಕಷ್ಟವಾಗುತ್ತದೆ. ಆ ಪರಿಸ್ಥಿತಿಯಲ್ಲಿ ಸಂಪೂರ್ಣವಾಗಿ ಕವಿದ (Totally enclosed) ನಗರಗಳ ಅವಶ್ಯಕತೆ ಏರ್ಪಡುತ್ತದೆ. ನಗರಗಳನ್ನು ಭಾರಿ ಭಾರೀ ಶಲ್ಕಗಳಿಂದ ಹೊದೆಯಬೇಕಾಗುತ್ತದೆ. ಇದಕ್ಕೆ ಭೀಮಬಲ ಕಾಂಕ್ರೀಟೇ ಪರಿಹಾರ.

ಇನ್ನು ವಿಮಾನ ನಿಲ್ದಾಣಗಳ ಪರಿಸ್ಥಿತಿ ಏನು? ಈಗಿರುವ ಭಾರೀ ವಿಮಾನಗಳನ್ನು ಇಳಿಸಿಕೊಳ್ಳುವುದು, ಹಾರಿಸುವುದು ಅಪಾಯವಿಲ್ಲದೇ ಆಗಬೇಕಾದರೆ ನಿಲ್ದಾಣವು ಊರ ಹೊರಗೆ ಎಷ್ಟೋ ಕಿಲೋ ಮೀಟರುಗಳಾಚೆ ಇರಬೇಕಾಗಿದೆ, ಅಲ್ಲದೇ ಭಾರೀ ವಿಮಾನಗಳು ಇಳಿಯುವಾಗ ಉಂಟಾಗುವ 'ಸೋನಿಕ್ ಬೂಮ್'ನಿಂದ ಜನರಿಗೂ ತೊಂದರೆಯುಂಟಾಗುತ್ತಿದೆ. ಮುಂದೆ ಇನ್ನೂ ಬೃಹದ್ಗಾತ್ರದ ವಿಮಾನಗಳು ಹಾರಾಡಬೇಕಾದಾಗ ಜನರ ಗತಿಯೇನು? ಅವುಗಳಿಗೆ ಸ್ಥಳಾವಕಾಶವೆಲ್ಲಿ? ಸುದೈವದಿಂದ ಲಂಬವಾಗಿ ನೆಗೆಯುವ ವಿಮಾನಗಳ ರಚನೆಯ ಬಗ್ಗೆ ಗಮನ ಕೊಡಲಾಗುತ್ತಿದೆ. ಅವು ಮುಂದಿನ ಶತಮಾನದಲ್ಲಿ ಬಳಕೆಯಲ್ಲಿ ಬರಬಹುದು. ಆಗ ನಗರ ಮಧ್ಯದಲ್ಲಿ, ಎಲ್ಲ ಮನೆಗಳಿಗೂ ಮೇಲೆ, ವಿಮಾನ ನಿಲ್ದಾಣಗಳನ್ನು ಕಟ್ಟಬೇಕಾಗುತ್ತದೆ. ಆಗ ಅಂತಸ್ತಿನ ರಸ್ತೆಗಳು ಬಹಳ ಪ್ರಯೋಜನಕರವಾಗುತ್ತವೆ. ಇವುಗಳೂ ಭೀಮಬಲ ಕಾಂಕ್ರೀಟಿನಿಂದ ತಾನೇ ಸಾಧ್ಯ!

ಇವಲ್ಲದೆ ಭಾರೀ ಹಡಗುಗಳ ನಿರ್ಮಾಣ, ಅತಿ ಎತ್ತರದ ಹೊಗೆಗೊಳವೆಗಳು ಇತ್ಯಾದಿಯಾದ ಅವಶ್ಯಕತೆಗಳೆಷ್ಟೋ! ಅವೆಲ್ಲವುಗಳಿಗೂ ಸಂಜೀವಿನಿ ಭೀಮಬಲ ಕಾಂಕ್ರೀಟು.

ಭಾರತದಲ್ಲಿ ಜನಸಂಖ್ಯೆಯೇರುತ್ತಿದೆ. ಕೈಗಾರಿಕಾಭಿವೃದ್ಧಿಯೂ ಭರದಿಂದ ಸಾಗುತ್ತಿದೆ. ಮೇಲೆ ಹೇಳಿದ ಸಮಸ್ಯೆಗಳನ್ನೆಲ್ಲಾ ನಾವು ಎದುರಿಸಲೇಬೇಕಾಗುವುದು. ಇವುಗಳ ಪರಿಹಾರಕ್ಕೆ ನಮ್ಮ "ಭೀಮ"ನನ್ನು ಒಲಿಸಿಕೊಳ್ಳದೇಬೇರೆ ದಾರಿಯೇ ಇಲ್ಲ.

ಈಚೆಗೆ ಬಂದ ವರದಿಯ ಪ್ರಕಾರ, ಮದ್ರಾಸಿನ Structural Engineering Research Centre ನಲ್ಲಿ ಪಾಲಿಮರ್ ಕಾಂಕ್ರೀಟಿನ ಪ್ರಯೋಗಾಲಯವನ್ನು ಇಷ್ಟರಲ್ಲೇ ಸ್ಥಾಪಿಸುವವರಿದ್ದಾರೆ. ಇದು ಒಂದು ಶುಭಸೂಚಕವಲ್ಲವೇ?

✡

ಕವನತ್ರಯ

ದ್ರೌಪದಿ

ಸೂರ್ಯನಿತ್ತ ಅಕ್ಷಯ ಪಾತ್ರೆಯ
ಕೊನೆಯ ತುತ್ತನ್ನು ತಿಂದು
ಕೂತಿದ್ದಾಳೆ
ದ್ರೌಪದಿ
ಹೊರಗೆ ಮರದ ನೆರಳಲ್ಲಿ
ಮನದಲ್ಲಿ ಮಕ್ಕಳೈವರ ನೆರಳು
ತಲೆಯೆತ್ತಿ ನೋಡುತ್ತಾಳೆ,
ಎಣಿಸಿದಂತೆ ಹಣ್ಣುಗಳೈದು
ಮುಗುಳ್ನಕ್ಕು
ಯೋಚಿಸುತ್ತಾಳೆ
ಮಧ್ಯಾಹ್ನ
ಒಬ್ಬ ಗಂಡನೂ ಬಳಿಯಲ್ಲಿಲ್ಲ
ಐದನೆಯ ಮಗುವಿನ
ಕೈಯಲ್ಲಿ ಆರು ಬೆರಳು.
ರಾತ್ರಿ, ಸಹದೇವನೊಡಬಂದ
ಕಳ್ಳನೆನಪು.
ಕರ್ಣ
ಭೀಮ ಬಲಭೀಮ
ಅರ್ಜುನ ಲೋಕೈಕ ವೀರ
ವೀರಾಂಗ
ನೆ ನಾನೆಂದಿದ್ದೆ
ಹೀನಸಮಾನ ಕಲಿಯಂತೆ
ಕಂಡಾಗೊಮ್ಮೆ ಕೋರೈಸಿ
ಐವರಲ್ಲರಸುವಂತೆ ಮಾಡಿದ್ದೆ
ಐದು ಹಣ್ಣು ರುಚಿ
ಕಳೆತ ಮತ್ತೊಂದು ?
ಕರ್ಣ,
ಕಪ್ಪುವಾಗರದಂಥ ಕೂದಲಲಿ
ಬಿಳಿ ಕೂದಲಂತೆ
ಆಳವಾಗುತ್ತಿದ್ದೀ ನೀನು
ಕಿತ್ತು ಹಾಕಿದರೆ
ಮೇಲೇಳಬಹುದು
ಬಯಕೆ ಸಂತಾನ
ನಾನು ಸತಿ,
ಕರ್ಣ,
ಪತಿಯಾಗು
ಒಮ್ಮೆ ?
ಎಂದು ಬಯಸುತ್ತಾಳೆ ದ್ರೌಪದಿ,
ಪತಿವ್ರತೆ,
ಮಧ್ಯಾಹ್ನ.

—ಎನ್. ವಿ. ಭಾಗ್ಯಲಕ್ಷ್ಮಿ

ಪ್ರೇಮ ಹಾಗೂ ಕೌರವರು

ಸುಖಿ-
ಪ್ರೇಮ
ಧೃತರಾಷ್ಟ್ರನ ಹಾಗೆ ಕುರುಡು
ಎಂದೆನ್ನುತ್ತೀಯಾ ?
ಹಾಗಾದರೆ,
ಕೇಳು, ನಾನು ಹೇಳುತ್ತೇನೆ,
ಪ್ರೇಮ
ಧೃತರಾಷ್ಟ್ರನಾದರೆ
ಅದಕ್ಕೊದಗುವ
ನೂರೊಂದು ಕಷ್ಟಗಳು
ಕೌರವರು.

—ಗೋಪಾಲ ವಾಜಪೇಯಿ

ಅಂತರ

ಆಗ-
ಎದೆ ಅಪ್ಪಿ, ಮೊಲೆ ಕಚ್ಚಿ
ಸೆರಗೆಳೆದು, ಜಡೆ ಎಳೆದು
ಕಾಡಿಸಿ, ಪೀಡಿಸಿ ಕೇಕೆ ಹಾಕಿದ್ದೆ !
ತುಟಿಯ ಕೆನ್ನೆಗೆ ಒತ್ತಿ,
ಎಲ್ಲರಿಂದಲೂ ಬೆನ್ನ ತಟ್ಟಿಸಿಕೊಂಡಿದ್ದೆ !
ಮತ್ತೆ-
ಕೊಟ್ಟಿದ್ದರ ಮೂರು ಪಟ್ಟು ಬಡ್ಡಿ
ಪಡೆದಿದ್ದೆ ರಾಜಾರೋಷಾಗಿ
ಈಗ-
ಅದೇ ಹಾಡ ಹಾಡ ಹೊರಟರೂ
ಎಷ್ಟೊಂದು ಅಂತರ...?...?...

—ವಿ. ಮಾ. ಜಗದೀಶ್

ಇತಿಹಾಸದ ಮರೆತು

ಕಂಪನಿ ಸ

ಆಕೆ ತನ್ನ ಕಾಲದಲ್ಲಿಯೆ ಪ್ರಸಿದ್ಧ ಕಳ್ಳಿ. ಕಳ್ಳಸಾಗಾಟದಿಂದ ಆಕೆಯಷ್ಟು ಸಂಪತ್ತನ್ನು ಕೂಡಿ ಹಾಕಿದವರು ಬೇರೆ ಯಾರಾದರೂ ಇದ್ದಾರೆನ್ನುವುದು ಸಂಶಯ. ಅವಳನ್ನು 'ಈಸ್ಟ್ ಇಂಡಿಯಾ ಕಂಪನಿಯ ತಾಯಿ' ಯೆಂದೂ ಕರೆಯಲಾಗುತ್ತಿತ್ತು. ಅವಳು ಮತ್ತಾರೂ ಅಲ್ಲ, ಮೀರ ಜಾಫರನ ಪತ್ನಿಯಾದ ಮುನ್ನಿ ಬೇಗಮ್.

ಆಕೆ ಸತ್ತ ಕೂಡಲೆ ಅವಳ ಆಸ್ತಿಯನ್ನು ಅಳೆಯಲು ಬ್ರಿಟಿಶ್ ಸರಕಾರ ಒಬ್ಬ ತಜ್ಞ ವಕೀಲರನ್ನು ಭಾರತಕ್ಕೆ ಕಳಿಸಿಕೊಟ್ಟಿತು. ಆದರೆ ಆತ ಇಲ್ಲಿಗೆ ಬರುವ ವೇಳೆಗೆ ಕಾಲ ಮಿಂಚಿಹೋಗಿತ್ತು, ಈಸ್ಟ್ ಇಂಡಿಯಾ ಕಂಪನಿಯ ಭ್ರಷ್ಟ ಅಧಿಕಾರಿಗಳು ಮುನ್ನೀ ಬೇಗಮ್ ಆಸ್ತಿಯ ಮೇಲೆ ರಣಹದ್ದುಗಳಂತೆ ಎರಗಿ ಅದನ್ನು ಹರಿದುಹಂಚಿಕೊಂಡು ಬಿಟ್ಟಿದ್ದರು. ವಕೀಲ ಉಪಾಯಗಾಣದೆ ಅಳಿದುಳಿದ ಆಸ್ತಿಯ ವಿವರಗಳನ್ನು ಪಟ್ಟಿ ಮಾಡಿದ. ತುಲನಾತ್ಮಕವಾಗಿ ಆ ವೇಳೆಗೆ ಬೇಗಮ್‌ಳ ಆಸ್ತಿಯ ಬಹುಪಾಲು ಕರಗಿ ಹೋಗಿತ್ತಾದರೂ ಉಳಿದ ಆಸ್ತಿಯ ವಿವರ ಎಂತೆಂತಹವರನ್ನೂ ದಂಗು ಬಡಿಸುವಂತಿವೆ. (೧) ಬೆಳ್ಳಿ, ಬಂಗಾರ ಹಾಗೂ ಮತ್ತಿತರ ಲೋಹಗಳಿಂದ ಮಾಡಿದ ನಾಣ್ಯಗಳ ಮೊತ್ತ ಸುಮಾರು ಐದು ಲಕ್ಷ ಅರುವತ್ತಾರು ಸಾವಿರ ಐನೂರಾ ಒಂದು ರೂಪಾಯಿಗಳಷ್ಟು. (೨) ಮುತ್ತು, ಹವಳ, ರತ್ನಾದಿಗಳ ಮೌಲ್ಯ ಸುಮಾರು ಆರು ಲಕ್ಷದಷ್ಟು. (೩) ಬೆಳ್ಳಿ ಬಂಗಾರದಿಂದ ಮಾಡಿದ ಪಾತ್ರೆಗಳ ಮೌಲ್ಯ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳಷ್ಟು (೪) ಸೇಠ ನಂದ ಕುಮಾರ ಹಾಗೂ ಶೇಠ ಗುರುದಾಸರೆಂಬ ದೇಶಿ ಬ್ಯಾಂಕರುಗಳ ಬಳಿ ಅವಳ ಹೆಸರಿನಲ್ಲಿ ಇದ್ದ ಮೊತ್ತ ನಾಲ್ಕು ಕೋಟಿ ರೂಪಾಯಿಗಳಷ್ಟು. (೫) ರೇಶಿಮೆ ಹಾಗೂ ಬನಾರಸಿ ಸೀರೆಗಳು, ಬೆಳ್ಳಿ ಬಂಗಾರಗಳ ಎಳೆಗಳಿಂದ ಹೆಣೆಯಲ್ಪಟ್ಟ ವಸ್ತ್ರಗಳು, ಶಾಲು ಪರದೆಗಳು, ಡಾಕಾದ ಮಲ್‌ಮಲ್, ಚಾದರುಗಳು, ಫರ್ನಿಚರ್ ಹಾಗೂ ಗೃಹೋಪಯೋಗಿ ಉಪಕರಣಗಳ. ಅಂದಾಜು ಮೌಲ್ಯ ಇಪ್ಪತ್ತು ಲಕ್ಷ ರೂಪಾಯಿಗಳಷ್ಟು.

(೬) ಅನೇಕ ಹಳ್ಳಿಗಳು ಮುರ್ಶಿದಾಬಾದ್–ಕಲಕತ್ತೆಗಳಲ್ಲಿನ ಮನೆಗಳಿಂದ ಭಾಡಿಗೆಯ ರೂಪದಲ್ಲಿ ಬರುವ ಆಯ ಹಾಗೂ ಬೇಗಮಳ ಹೆಸರಿನಲ್ಲಿದ್ದ ತೋಟಗಳಿಂದ ಪ್ರತಿತಿಂಗಳು ಬರುವ ಸರಾಸರಿ ಉತ್ಪನ್ನ ಸುಮಾರು ಹತ್ತು ಸಾವಿರ ರೂಪಾಯಿಗಳಷ್ಟು.

(೭) ಅರಮನೆಯ ಅಕ್ಕಪಕ್ಕದಲ್ಲಿರುವ ಅಂಗಡಿಗಳಿಂದಲೂ ಮಾರುಕಟ್ಟೆಯ ಚೌಕಿನಲ್ಲಿನ ಅಂಗಡಿಗಳಿಂದಲೂ ಪ್ರತಿತಿಂಗಳೂ ಅವಳ ಹೆಸರಿಗೆ ಸಂದಾಯವಾಗುವ ಹಣ ಸುಮಾರು ಒಂದು ಸಾವಿರ ರೂಪಾಯಿಗಳಷ್ಟು.

ಯಾರು ಈ ಮುನ್ನಿ ಬೇಗಮ್?

ಸುಮನ್ ಅಲೀಖಾನ್ ಎಂಬ ಹೆಸರಿನ ಒಬ್ಬ ನವಾಬನಿದ್ದ. ಆತ ಬಿಸ್ಸೂ ಎಂಬಾಕೆಯನ್ನು ಇಟ್ಟುಕೊಟ್ಟಿದ್ದ. ಮುನ್ನಿಯ ತಾಯಿ ಒಬ್ಬ ವಿಧವೆ; ಮಗುವಿನ ಹೊಟ್ಟೆಗೆ ಹಾಕಲೂ ಗತಿಯಿಲ್ಲದ ವಿಧವೆ. ಆಕೆ ಬಡತನದಿಂದಾಗಿ ಉಪಾಯಗಾಣದೆ ಮುನ್ನಿಯನ್ನು ಬಿಸ್ಸುವಿಗೆ ಮಾರಿಬಿಟ್ಟಿದ್ದಳು. ಬಿಸ್ಸುವು ಮುನ್ನಿಯನ್ನು ದಿಲ್ಲಿಗೆ ಕರೆದುಕೊಂಡು

ಕಾರದ ತಾಯಿ

ಜಹೀರ ನಿಯಾಜಿ

ಹೋಗಿ ಅಲ್ಲಿ ಅವಳಿಗೆ ನೃತ್ಯದ ಶಿಕ್ಷಣವನ್ನು ಕೊಡಿಸಿ ಅವಳನ್ನು ಬಹು ಪ್ರಖ್ಯಾತಳಾದ ನರ್ತಕಿಯನ್ನಾಗಿ ಮಾಡಿದಳು. ಈ ದಿನಗಳಲ್ಲಿ ಒಂದು ಸಾವಿರವೆಂದರೆ ದೊಡ್ಡ ಮೊತ್ತ. ಅಂತಹುದರಲ್ಲಿ ತುಟಾಗ್ರತೆಯಿರದ ಆ ಕಾಲದಲ್ಲಿ ಅದು ಬಹು ದೊಡ್ಡ ಮೊತ್ತವಾಗಿತ್ತೆಂಬುದನ್ನು ಹೇಳುವುದೇ ಬೇಡ. ಆದರೆ ನೃತ್ಯ ಸೇವೆಗಾಗಿ ಮುನ್ನಿ ವಿಧಿಸುತ್ತಿದ್ದ ಶುಲ್ಕ ಇದಕ್ಕೂ ದೊಡ್ಡದಾಗಿತ್ತು. ಕೇವಲ ಒಂದು ರಾತ್ರಿಯ 'ಸೇವೆ'ಗಾಗಿ ಹತ್ತು ಸಾವಿರದ ವಾಗ್ದಾನ ಪಡೆದು ಒಮ್ಮೆ ಆಕೆ ದೆಹಲಿಯಿಂದ ಮುರ್ಶಿದಾಬಾದಿನ ಅರಮನೆಗೆ ಹೋದಳು. ಅವಳ ಭಾಗ್ಯದ ಬಾಗಿಲು ತೆರೆದಿದ್ದು ಇಲ್ಲಿಯೆ. ಬಹು ಧನವಂತರುಳ್ಳ ಮುರ್ಶಿದಾಬಾದದಿಂದ ಆಕರ್ಷಿತಳಾದ ಅವಳು ತಿರುಗಿ ದಿಲ್ಲಿಗೆ ಮರಳಲೇ ಇಲ್ಲ. ಅವಳಿಗೊಮ್ಮೆ ಮೀರ ಜಾಫರನ ಭೇಟಿಯಾಯಿತು. ಅವಳೇ ಅವನ ಭೇಟಿಗೆ ಹೋದಳೋ, ಅವನೇ ಇವಳ ಭೇಟಿಗಾಗಿ ಕಾಯುತ್ತ ಕೊಂಡು ಕುಳಿತಿದ್ದನೋ ಎನ್ನುವುದು ಸಂದಿಗ್ಧವಾಗಿಯೆ ಇದೆಯಾದರೂ ಅವರಿಬ್ಬರ ಭೇಟಿಯ ದಿನ ಮುನ್ನಿಯ ಪಾಲಿಗೆ ಸ್ವರ್ಣಿಮ ದಿನವಾಗಿತ್ತೆಂದೆ ಹೇಳಬೇಕು. ಅದು ಅವರಿಬ್ಬರ ಪ್ರೇಮ ಜೀವನಕ್ಕೆ ನಾಂದಿಹಾಕಿತು.

ಮುಂದೆ ಕೆಲವೇ ದಿನಗಳಲ್ಲಿ ಮುನ್ನಿ ಮೀರ ಜಾಫರನ ಬೇಗಮಳಾಗಿ ಅರಮನೆ ಸೇರಿದಳು. ೧೭೬೫ರಲ್ಲಿ ಮೀರ ಜಾಫರನು ಸಾಯುವ ವೇಳೆಗೆ ಅವನ ಎಲ್ಲ ಆಸ್ತಿಯೂ ಅವಳ ಕೈಯಲ್ಲಿ ಬರುವಷ್ಟು ಮುನ್ನಿಯ ಪ್ರಭಾವ ವಲಯ ಅರಮನೆಯ ಸುತ್ತ ವಿಸ್ತರಿಸಿತ್ತು.

ಮೀರ ಜಾಫರನು ಸತ್ತಕೂಡಲೇ ಅವಳು ಲಾರ್ಡ್ ಕ್ಲೈವನಿಗೆ ಐದು ಲಕ್ಷ ರೂಪಾಯಿಗಳ ಲಂಚ ಕೊಟ್ಟು ಆತ ತನ್ನ ಮಗನಾದ ನಜಮುದ್ದೌಲನನ್ನು ಬಂಗಾಲದ ನವಾಬನೆಂದು ಘೋಷಿಸುವಂತೆ ಮಾಡಿದಳು. ಈ ಸುದ್ದಿ ಲಂಡನ್ನಿನಲ್ಲಿ ಪ್ರಕಟವಾದಾಗ ಈ ಬಗ್ಗೆ ಅಲ್ಲಿ ಕೋಲಾಹಲವೇ ಎದ್ದಿತು. ಅದನ್ನು ಶಾಂತಪಡಿಸಲು ಲಾರ್ಡ್ ಕ್ಲೈವನು ಬೇಗಮಳಿಂದ ಕೊಡಿಸಿದ ಒಂದು ಹೇಳಿಕೆ ೧೭೬೭ರ ಜನವರಿ ೧೨ರ 'ಲಂಡನ್ ಟೈಮ್ಸ್' ನಲ್ಲಿ ಈ ರೀತಿಯಾಗಿ ಪ್ರಕಟವಾಯಿತು: "ತಾವು ಸತ್ತ ನಂತರ ಮೂರುವರೆ ಲಕ್ಷ ರೂಪಾಯಿಗಳನ್ನು ನಗದಾಗಿಯೂ ಎರಡೂವರೆ ಲಕ್ಷ ರೂಪಾಯಿಗಳನ್ನು ಮುತ್ತು ರತ್ನಾದಿಗಳ ರೂಪದಲ್ಲಿಯೂ ಕೊಡಬೇಕೆಂದು ನವಾಬ ಮೀರ ಜಾಫರರು ತಮ್ಮ ಜೀವಿತ ಕಾಲದಲ್ಲಿ ಮೇಲಿಂದ ಮೇಲೆ ಹೇಳುತ್ತಿದ್ದುದರಿಂದ ಅವರ ಮರಣಾ ನಂತರ ನಾನು ಅವರ ಇಚ್ಛೆಯನ್ನು ಮನ್ನಿಸಿದ್ದೇನೆ. ನವಾಬರ ಎಲ್ಲ ಆಸ್ತಿಗೂ ನಾನೊಬ್ಬಳೇ ಹಕ್ಕುದಾರಳಾಗಿರುವುದರಿಂದಲೂ ಒತ್ತಾಯದಿಂದ ಲಾರ್ಡ್ ಕ್ಲೈವರಿಗೆ ಈ ಹಣವನ್ನು ಕೊಡಲಾಗಿದೆಂಬ ಭ್ರಾಂತಿ ಜನರಲ್ಲುಂಟಾಗಬಹುದಾದ್ದರಿಂದಲೂ ನಾನು ಈ ಹೇಳಿಕೆಯನ್ನು ಹೊರಡಿಸಿದ್ದೇನೆ."

ಲಾರ್ಡ್ ಕ್ಲೈವನ ಹಾಗೆಯೇ ಅವನ ನಂತರ ಬಂದ ಲಾರ್ಡ್ ವಾರೆನ್ ಹೇಸ್ಟಿಂಗ್ಸನೊಡನೆಯೂ ಬೇಗಮಳ ಸಂಬಂಧ ಮಧುರವಾಗಿತ್ತೆನ್ನುವುದಕ್ಕೆ ಅವಳು ಹಸ್ತಿದಂತದಿಂದ ಮಾಡಿದ ಆಸನವೊಂದನ್ನು ಅವನ ಹೆಂಡತಿಗೆ ಕಾಣಿಕೆಯಾಗಿ ಕೊಟ್ಟಿದ್ದೇ ಸಾಕ್ಷಿ. ಅದಿನ್ನೂ ಲಂಡನ್ನಿನ ಆಲ್ಬರ್ಟ್ ಮ್ಯೂಜಿಯಮ್ಮಿನಲ್ಲಿ ಸುರಕ್ಷಿತವಾಗಿದೆ. ಅದರ ಮೌಲ್ಯ ಆ ಕಾಲದಲ್ಲಿಯೇ ಹತ್ತು ಸಾವಿರ ಪೌಂಡುಗಳಷ್ಟಿತ್ತು.

ಇದರ ಉಪಕಾರವನ್ನು ಹೇಸ್ಟಿಂಗ್ಸ್ ತೀರಿಸದಿರಲಿಲ್ಲ. ಅವನು ಬೇಗಮಳಿಗೆ ಒಂದು ಲಕ್ಷ ನಾಲ್ವತ್ತು ಸಾವಿರ ರೂಪಾಯಿಗಳ ವಾರ್ಷಿಕ ಗೌರವ ಧನವನ್ನು ಗೊತ್ತುಪಡಿಸಿದನಲ್ಲದೆ ಒಂದು ಫರ್ಮಾನನ್ನು ಹೊರಡಿಸಿ, ನವಾಬನ ಎಲ್ಲ ಸಂಪತ್ತಿಗೂ ಬೇಗಮಳೇ ವಾರಸುದಾರಳಾಗಿರುವುದರಿಂದಲೂ ನವಾಬನ ಪಟ್ಟಕ್ಕೆ ಬಂದಾತ ಇನ್ನೂ ಪ್ರಾಯಕ್ಕೆ ಬಾರದಿರುವುದರಿಂದಲೂ ನಜಮುದ್ದೌಲನನ್ನೊಳಗೊಂಡು ಸಮಸ್ತ ರಾಜ ಪರಿವಾರವು ಅವಳ ಸೇವಾತತ್ಪರವಾಗಿರಬೇಕೆಂದು ವಿಧಿಸಿದ. ಮುನ್ನಿ ಬೇಗಮಳಿಗೆ ಈಗ ಸ್ವರ್ಗಕ್ಕೆ ಒಂದೇ ಗೇಣು ಉಳಿದಂತಾಯಿತು.

ಗೌರವಸ್ಥರಾದ ನಮ್ಮಂತಹ ರಾಜಮನೆತನದ ಸದಸ್ಯರಿಗೆ ಈ ಆಜ್ಞೆ ಅವಮಾನಕರವಷ್ಟೇ ಅಲ್ಲ, ಅಮಾನುಷವೂ ಆಗಿದೆ. ಸಾಮಾನ್ಯ ಬೇಗಮಳ ಎದುರು ತಲೆ ತಗ್ಗಿಸುವಂತೆ ಗವ್ಹರ್ನರ್ ಜನರಲ್ಲರು ನೀಡಿದ ಆಜ್ಞೆ ನಿಜಕ್ಕೂ ಅಸಹನೀಯ ಎಂದು ಮೀರ ಜಾಫರನ ಇಬ್ಬರು ಹಿರಿಯ ರಾಣಿಯರು ಬ್ರಿಟಿಶ್ ಸರಕಾರಕ್ಕೆ ತಕರಾರು ಸಲ್ಲಿಸಿದರು.

ಲಂಡನ್ನಿನಲ್ಲಿ ಮತ್ತೆ ಗೊಂದಲವುಂಟಾಯಿತು. ತಾವು ಕೈಕೊಂಡ ಈ ಕ್ರಮದ ಬಗೆಗೆ ಸಮಜಾಯಿಸಿ ಕೊಡುವಂತೆ ಬ್ರಿಟಿಶ್ ಸರಕಾರ[illegible] ಲಾರ್ಡ್ ವಾರೆನ್ ಹೇಸ್ಟಿಂಗ್ಸನನ್ನು ಕೇಳಿದಾಗ ಆತ ಹೀಗೆ ಬರೆದ: "ನಾನು ಯಾವ ತಪ್ಪು ಮಾಡಿದ್ದೇನೆಂಬುದು ನನಗೇ ಅರ್ಥವಾಗುತ್ತಿಲ್ಲ. ನಮ್ಮ ಎಲ್ಲ ಸದಸ್ಯರೂ ಮುನ್ನಿ ಬೇಗಮಳ ಪರವಾಗಿದ್ದರು; ಈಗಲೂ ಇದ್ದಾರೆ. ನನ್ನ ಆಜ್ಞೆಯನ್ನು ಪ್ರಶ್ನಿಸಿ ತಕರಾರು ನೀಡಿದ ರಾಣಿಯರಿಗೆ ಹೊರಜಗತ್ತಿನ ಸಂಪರ್ಕವೇ ಇಲ್ಲ. ಅವರು ಕೇವಲ ಪರದೆಯಲ್ಲಿರುವ ಹೆಂಗಸರು. ಅವರಿಂದ ಕಂಪನಿ ಸರಕಾರಕ್ಕೆ ಯಾವ ಪ್ರಯೋಜನವೂ ಇಲ್ಲ, ತದ್ವಿರುದ್ಧವಾಗಿ ಮುನ್ನಿ ಬೇಗಮಳು ಕಂಪನಿಯ ಹಿತರಕ್ಷಕಳಾಗಿದ್ದಾಳಲ್ಲದೆ ತೀಕ್ಷ್ಣಮತಿಯೂ ಆಗಿದ್ದಾಳೆ. ಅವಳಂತಹ ಪ್ರಾಮಾಣಿಕರು ನಮಗೆ ದೊರೆಯುವುದು ತೀರಾ ಕಠಿಣ. ಅಲ್ಲದೆ ಕಂಪನಿ ಸರಕಾರಕ್ಕೆ ಅವಳಿಂದ ಯಾವ ಬಗೆಯ ಅಪಾಯವೂ ಒದಗಲಾರದೆಂಬುದನ್ನು ನಾವು ಅಲಕ್ಷಿಸಲಾರೆವು."

ಮುನ್ನಿ ಬೇಗಮಳು ತನ್ನ ಮುಖಾಂತರ ವಾರೆನ್ ಹೇಸ್ಟಿಂಗ್ಸನಿಗೆ ಎರಡೂವರೆ ಲಕ್ಷ ರೂಪಾಯಿಗಳ ನಗದು ಹಣವನ್ನು ಬಹುಮಾನವಾಗಿ ನೀಡಿದ್ದಾಳೆಂದು ಸೇಠ ನಂದಕುಮಾರನು ಇದೇ ವೇಳೆಗೆ ಲಂಡನ್ನಿನ ರಾಜಸಭೆಗೆ ತಕರಾರು ಸಲ್ಲಿಸಿದ.

ಇಂಥ ಭಾರಿ ಭಾರಿ ಮೊತ್ತದ ಬಹುಮಾನಗಳನ್ನು ತಾನೊಬ್ಬನೇ ಗಿಟ್ಟಿಸುತ್ತಿದ್ದಾನಲ್ಲ ಎಂಬ ಮತ್ಸರ ಹೊಗೆ ಲಂಡನ್ನಿನ ದರಬಾರದಲ್ಲಿ ಆಡತೊಡಗಿತು. ಫಲವಾಗಿ ಲಾರ್ಡ್ ಹೇಸ್ಟಿಂಗ್ಸನ ವಿರುದ್ಧ ಅನೇಕ ಆರೋಪಗಳು ಕೇಳಿಬರತೊಡಗಿದವು. ಹೀಗಾಗಿ ೧೭೮೩ ರ ನವಂಬರ್ ೩ ರಂದು ಲಾರ್ಡ್ ವಾರೆನ್ ಹೇಸ್ಟಿಂಗ್ಸ್ ಪದಚ್ಯುತನಾದ. ಆದರೆ ಬೇಗಮಳು ಮಾಡಿದ ಉಪಕಾರವನ್ನಾತ ಮರೆಯಲಿಲ್ಲ. ಇಂಗ್ಲೆಂಡಿಗೆ ಮರಳುವ ಮುನ್ನ ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕ ಮಂಡಳಿಗೆ ಈ ರೀತಿಯಾಗಿ ಪತ್ರ ಬರೆದ: "ನನ್ನ ಹಾಗೆಯೆ ಕಂಪನಿಯ ತಪ್ಪು ಧೋರಣೆಗೆ ಅವಳೂ ಬಲಿಯಾದಳು. ಕಂಪನಿಯು ಹದ್ದುಮೀರಿ ಅವಳ ಮೇಲೆ ಅನ್ಯಾಯವೆಸಗಿದ್ದಲ್ಲದೇ ಬೇಗಮಳನ್ನು ಅಮಾನುಷವಾಗಿಯೂ ನಡೆಸಿಕೊಂಡಿತು. ಆದರೂ ಆಕೆ ಕಂಪನಿಯ ಹಿತಾಸಕ್ತಿಗಳಿಗೆ ಚ್ಯುತಿಯಾಗದಂತೆ ನೋಡಿಕೊಂಡಳು. ಈ ಮೊದಲು ಅವಳಿಗೆ ಕೊಡಲ್ಪಟ್ಟ ಸೌಲಭ್ಯಗಳೆಲ್ಲವೂ ಅವಳಿಗೆ ಮರಳಿ ದೊರೆಯುವಂತಾಗಬೇಕೆಂದು ನಾನು ಈ ಮೂಲಕ ಒತ್ತಾಯಪೂರ್ವಕವಾಗಿ ಮತ್ತೊಮ್ಮೆ ಶಿಫಾರಸು ಮಾಡುತ್ತೇನೆ."

ಕಳ್ಳ ಸಾಗಾಟದ ಆರೋಪ

ಲಾರ್ಡ್ ಹೇಸ್ಟಿಂಗ್ಸನ ಕುರಿತು 'ಹೌಸ್ ಆಫ್ ಕಾಮನ್ಸ್' ಮುಂದೆ ವಿಚಾರಣೆ ಪ್ರಾರಂಭವಾದಾಗ ಎಡ್ಮಂಡ್ ಬರ್ಕನು ಹೊಸದೊಂದು ಅಂಶವನ್ನೇ ಹೊರಗೆಡವಿದ.

ಅವನ ಪ್ರಕಾರ, 'ಮುನ್ನಿ ಬೇಗಮಳು ಮದ್ಯ ಮಾದಕಗಳ ಕಳ್ಳಸಾಗಾಟಗಾರಳಾಗಿದ್ದಳೆಂಬುದನ್ನು ಲಭ್ಯವಿದ್ದ ಎಲ್ಲ ದಾಖಲೆಗಳೂ ಸ್ಪಷ್ಟಪಡಿಸುತ್ತಿದ್ದವು. ಕಳ್ಳ ಸಾಗಾಟವೆಂದರೆ ಕಳ್ಳ ಸಾಗಾಟವೆ; ಅದಕ್ಕಾಗಿ ಆಕೆ ಒಂದು ಪೈಯಷ್ಟು ಕರವನ್ನು ತೆರುತ್ತಿರಲಿಲ್ಲ. ಸ್ವತಃ ಗವ್ವರ್ನರ ಜನರಲ್ಲನೆ ಈ ವ್ಯಾಪಾರದಲ್ಲಿ ಪಾಲುಗಾರನಾದ್ದರಿಂದ ಈ ದುರ್ವ್ಯಾಪಾರವನ್ನು ಲಂಗು ಲಗಾಮಿಲ್ಲದೆ ನಡೆಸುವುದು ಬೇಗಮಳಿಗೆ ಸಾಧ್ಯವಾಗಿತ್ತು. ಈ ವ್ಯಾಪಾರದ ಪೋಣಿಯನ್ನು ಹೊತ್ತವರಲ್ಲಿ ಸೇಠ ನಂದಕುಮಾರನ ಹೆಸರೂ ಸೇರಬೇಕು. ಸರಾಯಿ, ಅಫೀಮುಗಳಂತಹ ದೇಶಿ ವಸ್ತುಗಳ ಜೊತೆಗೆ ಬಹುಮೂಲ್ಯವಾದ ಯುರೋಪಿಯನ್ ಮದ್ಯಗಳ ವ್ಯಾಪಾರದ ಸ್ವಾಮ್ಯವೂ ಅವಳಿಗೆ ದೊರೆತದ್ದು ಗವ್ವರ್ನರ್ ಜನರಲ್ಲನ ಕೃಪೆಯಿಂದಲೆ."

ಈಗ ಮುನ್ನಿ ಬೇಗಮಳು ಅವಯಸ್ಕನಾದ ನವಾಬನ ಸಂರಕ್ಷಕಳಾಗಿ ಉಳಿಯಲಿಲ್ಲ. ಆದರೆ ಲಾರ್ಡ್ ಮಿಂಟೋನು ಗವ್ವರ್ನರ್ ಜನರಲ್ಲನಾಗಿ ಬಂದ ಕೂಡಲೆ ಬೇಗಮಳು ಅವನ ಕಾಲ ಬಳಿ ತನ್ನ ಸಂಪತ್ತಿನ ಹೊಳೆಯನ್ನು ಹರಿಸಿದಳು. ಇದರ ಫಲ ಅವಳಿಗೆ ದೊರೆಯದಿರಲಿಲ್ಲ. ಅವನು ಬೇಗಮಳ ಉಪಕಾರಕ್ಕೆ ಪ್ರತಿಯಾಗಿ ಅವಳಿಗೆ ವರ್ಷಕ್ಕೆ ಹನ್ನೆರಡು ಸಾವಿರ ರೂಪಾಯಿಗಳ ಗೌರವ ಧನವನ್ನು ಮಂಜೂರುಮಾಡಿದ. ಅಲ್ಲದೆ ಲಾರ್ಡ್ ಹೇಸ್ಟಿಂಗ್ಸನ ಕಾಲದಲ್ಲಿ ದೊರೆತ ಎಲ್ಲ ಸೌಲಭ್ಯಗಳನ್ನು ಆತ ಅವಳಿಗೆ ಮರಳಿ ದೊರಕಿಸಿಕೊಟ್ಟ.

ಕಂಪನಿಯ ತಾಯಿ

೧೮೧೦ ರ ಎಪ್ರಿಲ್ ೨೮ ರಂದು ನವಾಬ ಬಾಬರ ಅಲೀಖಾನನು ತೀರಿಕೊಂಡಾಗ ಮುನ್ನಿ ಬೇಗಮಳು ಆ ಸ್ಥಾನಕ್ಕೆ ತನಗೆ ಬೇಕಾದವನೊಬ್ಬನ ಹೆಸರನ್ನು ಸೂಚಿಸಿದಳಾದರೂ ಬ್ರಿಟಿಶ್ ಸರಕಾರ ಅದನ್ನು ಒಪ್ಪಿಕೊಳ್ಳಲಿಲ್ಲ. "ನನ್ನ ಪತಿಯಾದ ಮೀರ ಜಾಫರನು ನಿಧನನಾದಾಗ ಲಾರ್ಡ್ ಕ್ಲೈವನು ನನ್ನ ಬಳಿಗೆ ಬಂದು, 'ಮೀರ ಜಾಫರನನ್ನು ಮರಳಿ ಪಡೆಯುವುದಂತೂ ಸಾಧ್ಯವಿಲ್ಲ. ಆದರೇನಾಯಿತು ? ನಾವಿದ್ದೇವಲ್ಲ, ಇಷ್ಟು ಜನ ಕಂಪನಿಯವರು ! ಮಕ್ಕಳು ತಾಯಿಯೊಂದಿಗೆ ವ್ಯವಹರಿಸುವ ರೀತಿಯಲ್ಲಿಯೆ ನಾವು ನಿಮ್ಮೊಂದಿಗೆ ನಡೆದುಕೊಳ್ಳುತ್ತೇವೆ. ನಾವು ನಿಮ್ಮ ಇಚ್ಛೆಗೆ ವಿರುದ್ಧವಾಗಿ ಎಂದಿಗೂ ನಡೆಯುವುದಿಲ್ಲ," ಎಂದು ಸಾಂತ್ವನಪೂರ್ವಕವಾಗಿ ಕೊಟ್ಟ ಭರವಸೆಯನ್ನು ನೆನಪಿಸಿ ೧೮೧೦ ರ ಮೇ ೧೭ ರಂದು ಲಾರ್ಡ್ ಮಿಂಟೋನಿಗೆ ಒಂದು ಪತ್ರವನ್ನು ಬರೆದಳು. ಈಸ್ಟ್ ಇಂಡಿಯಾ ಕಂಪನಿಯವರು ಆಕೆಯೊಡನೆ ಹೇಗೇ ನಡೆದುಕೊಂಡಿರಲಿ, ಅವಳು ಮಾತ್ರ ಕಂಪನಿಯವರನ್ನು ತಾಯಿಯಂತೆಯೆ ಅಕ್ಕರೆಯಿಂದ ನೋಡಿಕೊಂಡಳೆನ್ನುವುದರಲ್ಲಿ ಸಂಶಯವಿಲ್ಲ.

ಆಕೆಯ ವ್ಯಕ್ತಿತ್ವ ಹೇಗಿತ್ತು ? ಅದನ್ನು ಕಣ್ಣಾರೆ ಕಂಡ ಬ್ರಿಟಿಶ್ ಮಂತ್ರಿಯೊಬ್ಬನ ಬಾಯಿಂದಲೆ ಅದನ್ನು ಕೇಳಿ: "ಎರಡೂವರೆ ಎಕರೆಗಳಷ್ಟು ವಿಶಾಲವಾದ ಉದ್ಯಾನದ ನಡುವೆ ಬೇಗಮಳ ಅರಮನೆಯನ್ನು ಕಟ್ಟಲಾಗಿದೆ. ಮೀರ ಜಾಫರನು ಸತ್ತು ಇಂದಿಗೆ ಸುಮಾರು ನಾಲ್ವತ್ತು ವರ್ಷಗಳಾಗಿ ಹೋದವು. ಈ ಸುದೀರ್ಘವಾದ ಅವಧಿಯಲ್ಲಿ ಒಮ್ಮೆಯಾದರೂ ಅವಳು ಅರಮನೆಯನ್ನು ಬಿಟ್ಟು ಹೊರಬಿದ್ದಿಲ್ಲ. ನಾನು ಅವಳನ್ನು ಭೇಟಿಯಾಗಲು ಹೋದಾಗ ನನ್ನನ್ನು ಒಂದು ವಿಶಾಲವಾದ ಕೋಣೆಗೆ ಕರೆದೊಯ್ಯಲಾಯಿತು. ಅಲ್ಲಿ ಎರಡು ಸ್ತಂಭಗಳ ನಡುವೆ ಕೆಂಪು ರೇಶಿಮೆಯ ಪರದೆಯನ್ನು ಕಟ್ಟಲಾಗಿತ್ತು. ಬೇಗಮಳು ನನಗೆ ಪ್ರತ್ಯಕ್ಷ ದರ್ಶನವನ್ನೀಯದೆ ಪರದೆಯ ಹಿಂದೆ ಕುಳಿತು ಸಂಭಾಷಿಸಿದಳು. ಗಾಯನವನ್ನು ಅಭ್ಯಸಿಸಿದವರಂತೆ ಅವಳ ಧ್ವನಿ ಎತ್ತರವಾಗಿದೆ, ಗಡುಸಾಗಿಯೂ ಇದೆ. ವೃದ್ಧಾಪ್ಯದಿಂದಾಗಿ ಅವಳು ಆಗಾಗ ತೊದಲುತ್ತಾಳೆ. ಬೇಗಮಳನ್ನು ಕಣ್ಣಾರೆ ಕಂಡ ಮಿಸೆಸ್

ಪ್ರಿಸ್ಟಲ್, ಆಕೆ ಸ್ವಲ್ಪ ಹಠಮಾರಿಯಾಗಿದ್ದಾಳಲ್ಲದೆ ಅವಳ ಶರೀರ ತುಂಬಾ ಕೊಳಕಾಗಿದೆಯೆಂದು ನನಗೆ ಹೇಳಿದಳು. ಆಕೆ ದಪ್ಪವಾಗಿದ್ದು ನೋಡಲು ಕುರೂಪಿಯಾಗಿದ್ದಾಳಂತೆ. ತಾರುಣ್ಯದಲ್ಲಿ ಅವಳು ಸುಂದರಿಯಾಗಿದ್ದು ಕಾಲರಾಯನ ಕುಟಿಲತನದಿಂದಾಗಿ ಅದು ಈಗ ಮಾಯವಾಗಿರಲೂಬಹುದು. ಯಾರಿಗೆ ಗೊತ್ತು? ಮಾತು ಮಾತಿಗೆ ಸಿಟ್ಟಿಗೇಳುವ ಸ್ವಭಾವದವಳಾದರೂ ಆಕೆ ತುಂಬಾ ತಿಳುವಳಿಕೆಯುಳ್ಳವಳು. ಈ ಕಾಲದಲ್ಲಿ ಅವಳಷ್ಟು ಶ್ರೀಮಂತಳಾದ ಹೆಣ್ಣು ಹಿಂದುಸ್ತಾನದಲ್ಲಷ್ಟೇ ಏಕೆ, ಇಡಿ ಜಗತ್ತಿನಲ್ಲಿಯೆ ದೊರೆಯಲಾರಳು. ಯಾರಾದರೂ ಆಕೆಯ ಮರಣದ ಬಗೆಗೆ ಪ್ರಸ್ತಾಪವೆತ್ತಿದರೆ ಕೋಪದಿಂದ ಕೆಂಡವಾಗುತ್ತಾಳೆ. ಆದ್ದರಿಂದ ಅವಳು ಇಲ್ಲಿಯವರೆಗೂ ಮೃತ್ಯು ಪತ್ರವನ್ನು ಬರೆಸಿಲ್ಲ. ಹೀಗಾಗಿ ಬೇಗಮಳ ಮರಣಾನಂತರ ಅವಳ ಈ ಅಪಾರ ಸಂಪತ್ತು ಹೇಗೆ ಹಂಚಿಹೋಗುವುದೆಂಬುದು ದೇವರಿಗೇ ಗೊತ್ತು."

ಮರಣವೆಂದರೆ ಅವಳಿಗಾಗುತ್ತಿರಲಿಲ್ಲವೆಂದು ಕಾಲರಾಯ ಕೊನೆಯ ವರೆಗೂ ಅವಳಿಂದ ದೂರ ಉಳಿಯಬಹುದೆ? ಕೊನೆಗೂ ಆ ಕಾಲ ಬಂದೇ ಬಿಟ್ಟಿತು. ೧೮೧೩ ರ ಜನವರಿ ೧೦ ರಂದು ಆಕೆ ಮೃತ್ಯುವಶಳಾಗುವುದರೊಂದಿಗೆ ಬಂಗಾಲದ ರಾಜಕಾರಣದ ಆಕಾಶದಲ್ಲಿ ಸತತ ಐವತ್ತು ವರ್ಷಗಳ ವರೆಗೆ ಪ್ರಕಾಶಿಸಿದ ತಾರೆಯೊಂದು ಅಸ್ತಂಗತವಾಯಿತು.

ಶವಯಾತ್ರೆ

ಆಕೆ ಅಪಾರ ಸಂಪತ್ತಿನ ಒಡತಿಯಷ್ಟೆ ಅಲ್ಲ, ಈಸ್ಟ್ ಇಂಡಿಯಾ ಕಂಪನಿಗೆ ಮಾತೃಸ್ವರೂಪಿಣಿಯೂ ಆಗಿದ್ದಳೆಂದಮೇಲೆ ಕೇಳಬೇಕೆ? ಅವಳ ಶವಯಾತ್ರೆ ಬಲು ಅದ್ಧೂರಿಯಿಂದಲೆ ಹೊರಟಿತು. ಆದರೂ ಒಂದು ಸಣ್ಣ ಪ್ರಮಾದ ಪ್ರಸಂಗವಶಾತ್ ಘಟಿಸಿದ್ದರಿಂದಾಗಿ ಬಂಗಾಲದ ಮಂತ್ರಿಯು ಬ್ರಿಟಿಶ್ ಸರಕಾರಕ್ಕೆ ಸ್ಪಷ್ಟೀಕರಣವನ್ನು ಕಳಿಸಬೇಕಾಯಿತು: "ಮುನ್ನಿ ಬೇಗಮರ ನಿಧನ ತೀರಾ ಅಕಸ್ಮಾತ್ತಾಗಿ ಘಟಿಸಿದ್ದು. ಮರಣ ಸಂಭವಿಸುವ ಹಿಂದಿನ ರಾತ್ರಿ ಅವರು ಮೊಹರಮ್ ಹಬ್ಬಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಕ್ರಮಗಳ ಉಸ್ತುವಾರಿಯನ್ನು ಒಳ್ಳೆ ಉತ್ಸಾಹದಿಂದ ನೋಡಿಕೊಳ್ಳುತ್ತಿದ್ದರು. ಬೆಳಗಿನ ಜಾವದಲ್ಲಿಯೂ ಅವರು ಸಾಕಷ್ಟು ಉತ್ಸಾಹಿತರಾಗಿಯೆ ಇದ್ದರು. ಆದರೆ ಹತ್ತು ಹನ್ನೊಂದು ಗಂಟೆಯ ಸುಮಾರಿಗೆ ಸ್ವಲ್ಪ ವಿಶ್ರಾಂತಿ ಪಡೆಯಲು ಮಂಚದ ಮೇಲೊರಗಿದಾಗ ಪ್ರಾಣಪಕ್ಷಿ ಹಾರಿಹೋಯಿತು. ಆದಷ್ಟು ಬೇಗನೆ ಶವಯಾತ್ರೆಯನ್ನು ನಡೆಸಬೇಕೆಂದು ರಾಜಮನೆತನದವರು ಒತ್ತಾಯಪಡಿಸತೊಡಗಿದ್ದರಿಂದ ಬ್ರಿಟಿಶ್ ಸೈನ್ಯಕ್ಕೂ ಕಂಪನಿಯ ಆಫೀಸರರಿಗೂ ಅದರಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ."

ಆದರೂ ಈಸ್ಟ್ ಇಂಡಿಯಾ ಕಂಪನಿಯು ಮುನ್ನಿಬೇಗಮಳಿಗೆ ರಾಜೋಚಿತವಾದ ಗೌರವವನ್ನು ಸಲ್ಲಿಸುವ ಮೂಲಕ ತನ್ನ ಕರ್ತವ್ಯವನ್ನು ನಿರ್ವಹಿಸಲು ಮರೆಯಲಿಲ್ಲ. ಆಕೆ ಸತ್ತ ನಾಲ್ಕನೆಯ ದಿನ ಫೋರ್ಟ್ ವಿಲಿಯಮ್ಮಿನ ಉನ್ನತ ಗೋಡೆಗಳ ಮೇಲಿನಿಂದ ೬೦ ತೋಪುಗಳನ್ನು ಹಾರಿಸಿ ಬೇಗಮಳಿಗೆ ಮರಣೋತ್ತರವಾಗಿ ಗೌರವವನ್ನು ಸೂಚಿಸಲಾಯಿತು. ಅಂದು ಮುರ್ಶಿದಾ-ಬಾದ್, ಕಲಕತ್ತ ಹಾಗೂ ಲಂಡನ್ನಿನಲ್ಲಿಯ ಈಸ್ಟ್ ಇಂಡಿಯಾ ಕಂಪನಿಯ ಕಾರ್ಯಾಲಯಗಳಲ್ಲಿ ಅವಳ ಆತ್ಮಕ್ಕೆ ಶಾಂತಿಯನ್ನು ಕೋರಿ ಎರಡು ನಿಮಿಷಗಳ ಮೌನವನ್ನಾಚರಿಸಲಾಯಿತಲ್ಲದೆ ಬ್ರಿಟಿಶ್ ರಾಷ್ಟ್ರಧ್ವಜವನ್ನು ಅರ್ಧಕ್ಕಿಳಿಸಲಾಯಿತು.

ಇದುವೆ ಜೀವ ಇದು ಜೀವನ

ಕಳುವಿನ ದುಡ್ಡು

ದಕ್ಷಿಣ ಕನ್ನಡದ ಭಾಷೆಯೇ ಸ್ವಲ್ಪ ವಿಚಿತ್ರ. ಹೀಗೆಂಗೆ ಒಮ್ಮೆ ಅಲ್ಲಿಗೆ ಹೋದಾಗ ಒಂದು ಹೊಳೆ ದಾಟಬೇಕಾಗಿ ಬಂತು. ದೋಣಿ ಹತ್ತಲು ಹೊರಟದ್ದೆ, ಪಕ್ಕದ ಗುಡಿಸಲಿನವನು 'ಹ್ವಾಯ್ ಮಾರಾಯ್ರೇ, ಕಳುವಿನ ದುಡ್ಡು ಇಲ್ಲಿ ಕೊಟ್ಟು ಹೋಗಿನಿ' ಎಂದು ಕೂಗಿಕೊಂಡ. ನಾನು ಕಕ್ಕಾಬಿಕ್ಕಿಯಾದೆ. ನಾನಾದರೊ ಪಿಡಬ್ಲ್ಯೂಡಿ ಮನುಷ್ಯ. ಅನ್ಯಾಯದ ದುಡ್ಡು ಕೊಡು ಎಂದರೆ ಕೊಡಬಹುದಿತ್ತೇನೋ. ಕಳುವಿನ ದುಡ್ಡನ್ನೆಲ್ಲಿಂದ ತರಲಿ?

'ಕಳುವಿನ ದುಡ್ಡು' ಎಂದರೆ 'ಹೊಳೆ ದಾಟಲು ಕೊಡಬೇಕಾದ ಹಾಸಲು ಎಂದು 'ಹಿಂದಾಗಡೆ' ಗೊತ್ತಾಯಿತು.

—ರತ್ನಾಕರ ಮಯ್ಯ

ಬೇಸ್ತು ಬಿದ್ದ

ಕೆಲವು ಸಂದರ್ಭಗಳಲ್ಲಿ ತಮ್ಮ ಅಕ್ಕಪಕ್ಕದಲ್ಲಿದ್ದವರನ್ನು ಗಮನಿಸದೆ ಬೇರೆಯವರ ವಿಚಾರದಲ್ಲಿ ಬಹಳ ಹಗುರವಾಗಿ ಮಾತನಾಡಿ ಪೇಚಿಗೆ ಸಿಕ್ಕಿಹಾಕಿಕೊಂಡವರನ್ನು ನೋಡಿ ನಾವು ಎಚ್ಚರಗೊಂಡಿದ್ದೇವೆ. ಅಂತಹದೆ ಒಂದು ಸಂದರ್ಭ. ನಾವು ಮೂರು ಜನ ಗೆಳೆಯರು ಒಂದು ಖಾನಾವಳಿಗೆ ಊಟಕ್ಕೆ ಹೋಗಿದ್ದೆವು. ಗೆಳೆಯರ ಪೈಕಿ ಒಬ್ಬನು ಅದೇ ತಾನೆ ನೌಕರಿಗೆ ಹೊಸದಾಗಿ ಸೇರಿದ್ದ. ಆತ ಸ್ವಲ್ಪ ಚೂಟಿಯಾಗಿಯೂ ಬಾಯಿಬಡಕನಾಗಿಯೂ ಪುಸ್ತಕಲು ಆಸಾಮಿಯೂ ಆಗಿದ್ದ: ಆವೇಶದಲ್ಲಿ ಮಾತನ್ನೇನೊ ಆಡಿಬಿಡುತ್ತಿದ್ದ. ಪರಿಣಾಮ ಗೊತ್ತಾಗುತ್ತಿರಲಿಲ್ಲ. ಆತನ ಮೇಲಧಿಕಾರಿ ಸಹ ಹೊಸದಾಗಿ ಬಂದು ಒಂದೆರಡು ದಿನವಾಗಿತ್ತು. ಅವರು ಇನ್ನೂ ಮನೆಮಾಡಿರಲಿಲ್ಲ. ನಮ್ಮ ಗೆಳೆಯನ ಯಾವುದೋ ತಪ್ಪಿಗೆ ಅವರು ಆಫೀಸಿನಲ್ಲಿ ತರಾಟೆಗೆ ತೆಗೆದುಕೊಂಡಿದ್ದರು. ಈತ ಸ್ವಲ್ಪ ಬೇಜಾರಿನಲ್ಲಿದ್ದ. ರಾತ್ರಿ ನಾವು ಮಾಮೂಲಿನಂತೆ ಖಾನಾವಳಿಗೆ ಊಟಕ್ಕೆ ಹೋದೆವು. ನಾವು ಊಟಕ್ಕೆ ಕುಳಿದಾಗ ನಮ್ಮ ಗೆಳೆಯ ತನಗೆ ತನ್ನ ಸಾಹೇಬರು ಗದರಿಸಿದ ವಿಚಾರ ತೆಗೆದ. ಆಗ ನಮ್ಮ ಪಕ್ಕದಲ್ಲಿ ಕೆಲವರು ಊಟಕ್ಕೆ ಕುಳಿತಿದ್ದರು. ಸ್ವಲ್ಪ ದೂರದಲ್ಲಿ ಒಬ್ಬರು ತಲೆಬಗ್ಗಿಸಿಕೊಂಡು ಊಟ ಮಾಡುತ್ತಿದ್ದರು. ಚಳಿಗಾಲವಾದ್ದರಿಂದ ಅವರು ಒಂದು ಶಲ್ಯವನ್ನು ಹೊದ್ದುಕೊಂಡಿದ್ದರು. ಅವರ್ಯಾರೆಂಬುದನ್ನು ನಾವು ಹೆಚ್ಚಾಗಿ ಗಮನಿಸಿರಲಿಲ್ಲ.

ನಮ್ಮ ಗೆಳೆಯ ಒಂದೇ ಸಮನೆ ಬಡಬಡಾಯಿಸುತ್ತಿದ್ದ. "ಏನ್ರೀ ನಮಗೆ ಒಬ್ಬ ಸಾಹೇಬ ಬಂದಾನ್ರಿ. ಅವನಿಗೆ ಬಹಳ ದಿಮಾಕ್ ಇದ್ದ ಹಾಗೆ ಕಾಣುತ್ತದೆ. ತನ್ನ ಬಿಟ್ರೆಲ್ಲ ಅನ್ನೋ ಅಹಂಕಾರ ಅವನ ತಲೀಲಿ ತುಂಬಿಹೋಗಿದೆ. ಅದೂ ನಮ್ಮಂತಹ ಬಿಸಿ ರಕ್ತದ ಹುಡುಗರ ಹತ್ತಿರ ಅವನು ತನ್ನ ಹುಣಸಿಹಣ್ಣು ತೋರಿಸುತ್ತಾನಲ್ರಿ. ನಾನು ಈ ಡಿಪಾರ್ಟ್‌ಮೆಂಟ್ ಅಲ್ಲದಿದ್ರೆ ಇನ್ನೊಂದು ಡಿಪಾರ್ಟ್‌ಮೆಂಟಿಗೆ ಹೋಗ್ತೀನಿ... ನಾನ್ಯಾಕೆ ಆ ಮುದಿಯನ ಮಾತು ಕೇಳ್ಲಿ. ಎದ್ದು ಹೋಗು ಅಂದ್ರೆ ಒದ್ದು ಹೋಗ್ತೀನಿ... ಅವನು ಈ ಊರಲ್ಲಿ ಹೆಚ್ಚಿಗೆ ದಿವ್ಸ ಇರಾಲ್ಲರ್ರೀ..." ಇತ್ಯಾದಿ" ಒಂದೇಸಮನೆ ಎಲ್ಲರೂ ಕೇಳುವಂತೆ ಆವೇಶದಲ್ಲಿ ಕೂಗಾಡುತ್ತಿದ್ದ. ನಾನು ಇನ್ನೊಬ್ಬ ಗೆಳೆಯ ಊಟವಾದ ನಂತರ ನಲ್ಲಿಯ ಹತ್ತಿರಕ್ಕೆ ತೊಳೆಯಲು ಹೋದೆವು.

ಆಗ ನಮ್ಮ ಪಕ್ಕದಲ್ಲಿ ಶಲ್ಯ ಹೊದ್ದು

ಕೊಂಡು ಕುಳಿತ ವ್ಯಕ್ತಿ ಸಹ ನಮ್ಮನ್ನು ಅನುಸರಿಸಿಕೊಂಡು ಬಂದು, 'ರೀ ಮಿಸ್ಟರ್ ನಿಮ್ಮ ಸ್ನೇಹಿತನೇನ್ರಿ ಆತ, ಇನ್ನೂ ಎಳೆ ನಿಂಬೆಕಾಯಿ, ಬುದ್ಧಿ ಇಲ್ಲ. ಹುಡುಗ ಮುಂಡೇದು, ಇನ್ನೂ ಬಹಳ ರಾಗಿ ಬೀಸ ಬೇಕು ಕಣ್ರಿ ಈ ಡಿಪಾರ್ಟ್‌ಮೆಂಟನಲ್ಲಿ. ನೀವಾದ್ರು ಚೆನ್ನಾಗಿ ತಿಳುವಳಿಕೆ ಕೊಡಿ, ಬೇರೆಯುವರ ವಿಚಾರದಲ್ಲಿ ಸಾರ್ವಜನಿಕ ಸ್ಥಳ ದಲ್ಲಿ ನಿಂದೆ ಮಾಡಬಾರದ್ದೂ ಅಂತ." ಇನ್ನೂ ಏನೋ ಹೇಳಲಿಕ್ಕೆ ಹೋದ್ರು, ಅಷ್ಟರಲ್ಲಿ ನನ್ನ ಸ್ನೇಹಿತನ ಸವಾರಿಯೂ ಕೈ ತೊಳೆ ಯುಲು ಬಂತು, ಬಂದವನೇ ನಮ್ಮ ಹತ್ತಿರ ಮಾತನಾಡುತ್ತಿದ್ದ ವ್ಯಕ್ತಿಯುನ್ನು ನೋಡಿ ಕಂಗಾಲಾಗಿ ಅವರನ್ನೇ ಪೆಚ್ಚು ಪೆಚ್ಚಾಗಿ ನೋಡುತ್ತಿದ್ದ. ಕಾರಣ, ಅವರೇ ಆತನ ಸಾಹೇಬರು! —ಎಂ. ಎಸ್. ಚಂದ್ರ

ಸಿಹೀನೇ ಇಲ್ಲ

ನಮ್ಮ ತಾತನವರಿಗೆ ತೊಂಬತ್ತು ವರುಷ ವಯುಸ್ಸು. ದಿನೇ ದಿನೇ ದೇಹಸ್ಥಿತಿ ಕುಂದು ತ್ತಿತ್ತು. ಅವರಿಗೆ ದಿನಾ ಔಷಧಿ ಕೊಡುವಾಗ ನನ್ನ ಹೆಂಡತಿ ಪ್ರೇಮಾ ಚಾಕಲೇಟನ್ನೋ ಇಲ್ಲ ಪೆಪ್ಪರ್‌ಮೆಂಟನ್ನೋ ಅರ್ಧ ಚೂರು ಅಡಿಕೆ ಕತ್ತರಿಸುವ ಕತ್ತರಿಯುಲ್ಲಿ ಕತ್ತರಿಸಿ ಕೊಡುತ್ತಿದ್ದದ್ದು ವಾಡಿಕೆಯಾಗಿತ್ತು. ಒಂದು ದಿನ ನನ್ನವಳು ಅವಳ ಗೆಳತಿಯು ಮನೆಗೆ ಹೋಗಿದ್ದಳು. ಜೋರಾಗಿ ಮಳೆ ಬಂದುದರಿಂದ ನಮ್ಮ ಅಜ್ಜನವರಿಗೆ ಔಷಧಿ ಕೊಡುವ ವೇಳೆಗೆ ಅವಳು ಬರಲಿಲ್ಲ. ಸರಿ ನಮ್ಮ ಅಜ್ಜಿಯುವರೇ ಔಷಧಿ ಕೊಟ್ಟರು. ನಂತರ ನಮ್ಮ ಅಜ್ಜ ಚಾಕಲೇಟು ಬೇಕೆಂದರು ಅಜ್ಜಿ ಒಂದು ಇಡೀ ಚಾಕ ಲೇಟನ್ನೇ ಕೊಟ್ಟಳು. ಅಜ್ಜ ಹಾಗೇ ಬಾಯಿಗೆಸೆದುಕೊಂಡು ಬಾಯಾಡಿಸಿದರು. ಸಿಹಿ ಅವರ ಬಾಯಿಗೇ ಹತ್ತಲಿಲ್ಲ, ಹಾಗೇ ದವಡೆಯುಲ್ಲಿಟ್ಟುಕೊಂಡಿದ್ದು ಒಂದೆರಡು ನಿಮಿಷವಾದ ಮೇಲೆ, "ಏನು ಚಾಕ ಲೇಟೋ ಏನೋ ಸಿಹೀನೇ ಇಲ್ಲ. ಎಲ್ಲೆಲ್ಲೂ ಮೋಸ, ಕಾಲ ಕೆಡ್ತು ಕೆಡ್ತು..." ಎಂದು ಉದ್ಗಾರ ಎಳೆದರು, ನಾನು, "ಏನಜ್ಜ, ಬೇರೆ ಏನಾದರೂ ತಿಂದಿರಾ? ಬಾಯಿ ತೆಗೀರಿ ನೋಡೋಣ" ಎಂದೆ. ಅವರು ಬಾಯಿಂದ ಚಾಕಲೇಟನ್ನೇ ಕೈ ಬೆರಳಿನಲ್ಲಿ ತೆಗೆದು ತೋರಿಸಿದರು. ನನಗೆ ನಗು ತಡೆಯು ಲಾಗಲಿಲ್ಲ. ಏಕೆಂದರೆ ನಮ್ಮಜ್ಜ ಇಡೀ ಚಾಕಲೇಟನ್ನೇ ಕಾಗದದ (ಜಿನ್ನಾರೀ) ಸಮೇತ ಬಾಯಿಗೆ ಹಾಕಿಕೊಂಡಿದ್ದರು!

— ಎಚ್. ಎಂ. ಸೂರ್ಯನಾರಾಯಣ

ರಾಣಿಯುಲ್ಲ ಪತ್ನಿ

ಒಂದು ದಿನ ವಿಕ್ಟೋರಿಯಾ ರಾಣಿ ತನ್ನ ತಾಳ್ಮೆಯುನ್ನು ಕಳೆದುಕೊಂಡು ಕೋಪದ ವಶವರ್ತಿಯಾಗಿದ್ದಳು. ಅದೇ ಸಮಯಕ್ಕೆ ಅಲ್ಲಿಗೆ ಬಂದ ಅವಳ ಪತಿ ಆಲ್ಬರ್ಟ್ ಯಾವ ಮಾತನ್ನೂ ಆಡದೆ ತಮ್ಮ ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡರು. ಇದರಿಂದ ಮತ್ತಷ್ಟು ಕೆರಳಿದ ರಾಣಿ, 'ನಾನು ಈ ಬಾಗಿಲನ್ನು ತೆಗೆಯುಲು ನಿನಗೆ ಆಜ್ಞೆ ಮಾಡುತ್ತಿದ್ದೇನೆ' ಎಂದಳು. ಒಳಗಿನಿಂದ ಯಾವ ಉತ್ತರವೂ ಇಲ್ಲ. ಪುನಃ ಅವಳು ಸಿಡಿಗುಟ್ಟುತ್ತಾ ಅದೇ ಮಾತನ್ನು ಹೇಳಿ ದಾಗ, ರೂಮಿನೊಳಗಿನಿಂದ ಅವಳ ಆಜ್ಞೆಗೆ ಮಾರುತ್ತರದಂತೆ ಬಂದಿತು ಅವಳ ಪತಿಯು ಪ್ರಶ್ನೆ. 'ಅಲ್ಲಿರುವವರು ಯಾರು?' ಎಂದು. 'ವಿಕ್ಟೋರಿಯಾ ರಾಣಿ' ಎಂಬ ಉತ್ತರವನ್ನು ಆಲಿಸಿದ ಆಲ್ಬರ್ಟ್ ಪುನಃ ಬಾಗಿಲನ್ನು ಭದ್ರಪಡಿಸಿದರು. ಬಾಗಿಲನ್ನು ಪುನಃ ಪುನಃ ಬಡಿದಾಗಲೂ ತೆರೆಯುದಿದ್ದಾಗ, ಒಂದು ಕ್ಷಣ ಸುಮ್ಮನಿದ್ದ ರಾಣಿ ಶಾಂತವಾದ ಹಾಗೂ ಒಲವಿನ ಧ್ವನಿಯುಲ್ಲಿ, 'ಇಲ್ಲಿರು ವವಳು ನಿನ್ನ ಪತ್ನಿ, ಆಲ್ಬರ್ಟ್, ಎನ್ನು ವುದೇ ತಡ, ತೆರೆದ ಬಾಗಿಲಿನಿಂದ ಮುಗು ಳ್ನಗುತ್ತಾ ಹೊರಬಂದರು ಆಲ್ಬರ್ಟ್.

—ಡಿ. ಎಸ್. ಪ್ರಭ

ಅಂತಿಂಥ ಹೆಣ್ಣಲ್ಲ ನೀ ದೇವಕನ್ನಿಕೆ

ಸ. ರಘುನಾಥ ರಾ. ವಿಜಯರಾಘವ

ಸುಂದರಿಯಾದ ಹೆಣ್ಣ ಮೇಲೆ ನೂರೆಂಟು ಕಣ್ಣು. ದೃಷ್ಟಿಘಾತಕ್ಕೆ ಸಿಕ್ಕಿ ಸಾಯುವವರು ಹಲವರು. ಚಾತುರ್ಯದಿಂದ ಪಾರಾಗುವವರು ಕೆಲವರು, ಇಂಥ ವಸ್ತುಗಳ ಮೇಲಿನ ಜನಪದ ಸಾಹಿತ್ಯ ವಿಪುಲ. ಗಂಪಾಣಿ ಗೌಡನ ಸೊಸೆಯುದೂ ಇಂಥದರಲ್ಲಿ ಒಂದು :

ಮೂಡಣದಲ್ಲಿ ಮುಂಜಾವಿನ ಅರಸ ಇನ್ನೂ ಉದಯಿಸುವ ಸನ್ನಾಹದಲ್ಲೆ ಇದ್ದ. ಆಗಲೇ—

ಗಂಪಾಣಿ ಗೌಡನ ಹಿರಿಸೊಸಿ ಗಯ್ಯಾಳಿ
ಹರದರ್ಶಿಯಾಗೇ ಹೊಂಟಾಳೋ ದೂರಕ್ಕ
ನಡುರಾತ್ರಿನಾಗೇ ಹೊಂಟಾಳೋ—

ಎಂದು ರಾಜಭಟರು ಬೀದಿಬೀದಿಗಳಲ್ಲೆಲ್ಲ ಸಾರಿದ್ದೇ ಸಾರಿದ್ದು. ಊರಜನಕ್ಕೆಲ್ಲ ಅಚ್ಚರಿ! ದೇವರಂಥ ಗಂಪಾಣಿ ಗೌಡನ ಸೊಸಿ ವ್ಯಾಲೇಕಿಂತ ಅಪವಾದ ಬಂತಪ್ಪಾ! ಅರ್ಥವಾಗಲಿಲ್ಲ. ಕುತೂಹಲ ಹೆಚ್ಚಿದಾಗ ಜನ ರಾಜಭಟರನ್ನ ಕೇಳಿದರು—

ಯಾಕಪ್ಪ ಭಟರಾಜ ಏನಂಥ ಸಂಗತಿ
ಗಂಪಾಣಿ ಗೌಡನ ಹಿರಿಸೊಸಿ ಮಲ್ಲಕ್ಕ
ಹರಿದರ್ಶಿಯಾಗೇ ಹೊಂಟದ್ದು - ?

ಅದೂ ನಡುರಾತ್ರಿಯಾಗೇ—ಎಂದು. ಭಟರಿಗೇನು ಗೊತ್ತು? ರಾಜಾಜ್ಞೆಯಾದದ್ದು ಅಷ್ಟು. ಮಿಕ್ಕವಿಷಯ ಅವರಿಗೆ ಯಾರು ಹೇಳಬೇಕು ? "ಗೊತ್ತಿಲ್ಲ", ಎಂದು ಬಿಟ್ಟರು.

ಗೌಡನ ಮಗನಾಗ ಸೂಳೆಯಮನೆಯಲ್ಲಿ. ಅವಳ ತೆಕ್ಕೆಯ ಕಾವಲ್ಲಿ ಅವ ಮೇಣ.

ಲಿಂಬೀಯ ಹಣ್ಣಂತ ಸಿಂಗಾರಿ ನಿನಬಿಟ್ಟು
ಕಣ್ಣುಕುರುಡು ಹೆಣ್ಣ ಕಟ್ಯಾನೊ ನಮ್ಮಪ್ಪ
ಕೊರಳೀಗೆ ವೇಣ ಬಿಗಿದಾನೊ—

ಎಂದು ಒದರುತ್ತಿದ್ದ ಬಿಸಿಯೇರಿದ ದೇಹದಿಂದ ಮಾತು ಹೊರಬರುತ್ತಿದ್ದಾಗಲೆ ಅವನಿಗೆ ಡಂಗೂರ ಕೇಳಿಸಿದ್ದು. ಕೇಳಿದಾಕ್ಷಣ ಕಕಮಕ ಆಯಿತು. ಅರ್ಥವಾಗಲಿಲ್ಲ. ಸೂಳೆಯನ್ನೆ ಕೇಳಿದ— 'ಯಾಕೇಲೆ ನನ ಸಲ್ಲೆ ಅಂಗವ್ರು ಸಾರೂದು...? ಅಂತ. ಎಷ್ಟಾದರೂ ಸೂಳೆ! ಮಿಂಡನ ಹೆಂಡಿರ ಮಾತು ಅವಳಿಗೆ ರುಚಿಸಲಿಲ್ಲ. 'ನಂಗೇನು ಗೊತ್ತುಂಟಾ ಕೇಳೋಗು ಅವರನ್ನೆ' ಅಂದುಬಿಟ್ಟಳು. ಕೇಳೋಣವೆಂದು ಬಿರಬಿರನೆ ಪಕ್ಕಡ ಏರಿಸಿ ಬೀದಿಗಿಳಿದ. ಅಲ್ಲಿಯೂ ಸ್ಪಷ್ಟವಾಗಲಿಲ್ಲ. ಕುತೂಹಲ ಕೆರಳಿತು. ಬೀದಿಗೆ ಹೆಂಡಿರ ಹೆಸರುಬಂದಿದ್ದರಿಂದ ಅಪಮಾನವಾಗಿ ಗಂಡಸ್ತನ ಕೆರಳಿತು. ಹೆಂಡತಿ ಹರಿದರಿವೆಯಲ್ಲಿ ಹೊರಟಿದ್ದೆಲ್ಲಿಗೆ ? ಎಲ್ಲಿಂದ ? ಯಾಕೆ ? ಅದೂ ನಡುರಾತ್ರೀಲಿ?

ಕಾಲು ಮನೆಯತ್ತ ತಿರುಗಿತು. ಸರಸರ ನಡೆದ. ಹೆಂಡತಿ ದೂರಕ್ಕೆಲ್ಲೂ ಹೋಗಿರಲಿಲ್ಲ, ಮನೇಲೇ ಇದ್ದಳು. ರೋಷ ಮಡದಿಯನ್ನು ಕಂಡಾಕ್ಷಣ ನೆತ್ತಿಗೇರಿತು.

ಮುಂದೆಲೆ ಹಿಡಿದಾನೊ ಹೊಡೆದಾನೊ
ಬಡಿದಾನೊ

ಮಂಡಿಯು ಮೂಳೆ ಮುರಿವಂಗೆ
ಹೆಣ್ಣವಳ
ಕಣ್ಣಿಂದ ನೀರು ಬಿರಿವಂಗೆ

ಮಲ್ಲವ್ವನಿಗೆ ಗಂಡ ಏಕೆ ಹೀಗೆ ಹೊಡೆಯುವುದು ಎಂಬುದು ಅರ್ಥವಾಗಿತ್ತು. ಆದರೇನು ಮಾಡುವಂತಿದೆ? 'ಶಿವನಂಥ ಪತಿರಾಯ ಹೊಡೆದಾರೆ ಹೊಡೆಯಲಿ' ಬೇರಾರಿಗುಂಟು ಆ ಅಧಿಕಾರ ?" ಎಂದು ಸುಮ್ಮನಾದಳು. ಹೊಡೆದು ಬಳಲಿದ ಪತಿರಾಯ ಹೊರ ನಡೆದ.

ಹೊರಗೆ ಹೋಗಿದ್ದು ವಾಪಸಾದ ಗೌಡನಿಗೆ ಸೊಸೆಯ ಅವಸ್ಥೆ ಕರುಳು ಕಿವುಚಿತು. ಸ್ವಂತ ಮಗಳಂತೆಯೇ ಸೊಸೆಯನ್ನು ನೋಡಿಕೊಂಡಿದ್ದವನು. ಗೋಳೋ ಎಂದು ಅತ್ತುಬಿಟ್ಟ.

'ಕಣ್ಣಿಲ್ದ ಬಾಲೇಂತ....'

ಗಂಪಾಣಿಗೌಡ ಊರಿಗೆಲ್ಲ ಬೇಕಾದಂಥ ವ್ಯಕ್ತಿ. ಸದ್ಗುಣಸ್ಥ. ಮಗನನ್ನು ತಾಯಿಲ್ಲದ ಕೊಸೆಂದು ಮುದ್ದಾಗಿ ಬೆಳಸಿದ. ಆದರೆ ಆ ಮಗ? ಮೂರು ಹೊತ್ತೂ ಸೂಳೆಮನೆ. ಪೋಲಿ ಸಹವಾಸ. ತಲೆತುಂಬ ಗೌಡನಿಗೆ ಮಗನದೇ ಚಿಂತೆ, 'ಮದುವೆಂತ ಮಾಡಿದ್ರೆ ದಾರಿಗೆ ಬಂದಾನು' ಅಂದುಕೊಂಡು ಹೆಣ್ಣು ಹುಡುಕಲಾರಂಭಿಸಿದ. ಯಾವುದೇ ಹೆಣ್ಣಿನ ಭಾವಚಿತ್ರ ತಂದು ತೋರಿಸಿದರೂ ಮಗ ಒಪ್ಪಬೇಕಲ್ಲ! ಇದರಲ್ಲಿ ಒಂದು ಒಳಗುಟ್ಟು. ಏನಂದರೆ, ಗೌಡನ ಮಗ ಅಪ್ಪತಂದ ಭಾವಚಿತ್ರಗಳನ್ನೆಲ್ಲ ತನ್ನ ಸೂಳೆಗೆ ತೋರಿಸಿ ಅಭಿಪ್ರಾಯ ಕೇಳುವುದಿತ್ತು. ಅವಳು ಏನಾದರೊಂದು ಹುಳುಕು ಎತ್ತಿಹೇಳುವುದಿತ್ತು. ಹೀಗಾಗಿ ಗೌಡ ಮಗನಿಗೆ ಹುಡುಕಿ ಹುಡುಕಿ ಸುಸ್ತಾದ, ಬೇಸತ್ತ. ಕಡೆಗೊಂದು ದಿನ ಗೌಡನ ಕಣ್ಣಿಗೆ ಹೆಣ್ಣುಬಿದ್ದಳು. ಅದೂ ಎಂಥ ಹೆಣ್ಣು! ಅವಳನ್ನು ಕಂಡಾಕ್ಷಣ—

ತಿಕ್ಕ್ಯಾಳಿ ಮೈಬಣ್ಣ ತಾವರೆ ಕಣ್ಣುಳ್ಳ
ಹೀಳಿಗ ಬಳ್ಳಿ ನಡಿಗೆಯು ಉಳ್ಳಂಥ
ಈ ಹೆಣ್ಣೆ ಮಗನೆ ನಿನಜೋಡಿ—

ಎಂದು ತಿರ್ಮಾನಿಸಿಬಿಟ್ಟ. ಏನಾದರಾಗಲಿ ಇವಳನ್ನೆ ಸೊಸೆಯಾಗಿ ಮಾಡಿಕೊಳ್ಳಬೇಕು, ಆತ ಏನಾರ ಅನ್ನಲಿ ಎಂದು ಗಟ್ಟಿಮನಸ್ಸು ಮಾಡಿದ. ಇರಲಿ ಎಂದು ಅವಳ ಭಾವಚಿತ್ರ ತಂದು ಮಗನಿಗೆ ಕೊಟ್ಟ. ಅವನೇನು ನೋಡಿದನೆ? ಮಾಮೂಲಿನಂತೆ ಸೂಳೆಗೆ ತೋರಿಸಲು ನಡದ.

ಕಣ್ಣು ನಂಬದಾದಳು ಸೂಳೆ. ಇಂಥ ಚೆಂದೊಳ್ಳೆ ಹೆಣ್ಣು ಸಿಕ್ಕಿರುವಾಗ ಇವನು ನನ್ನ ಬಳಿ ಬರುವುದುಂಟೇ? ಏನಾದರೂ ಉಪಾಯ ಹೂಡಬೇಕು. ಈ ಮದುವೆಗೆ ಕಲ್ಲುಹಾಕಬೇಕು. ಅದಕ್ಕಾಗಿ– 'ನನರಾಜ ನಿನ್ನೆಂಡ್ತಿ ಮಹಾರಾಣಿ ಇರಬೇಕು' ಎಂದು ಗಿಲಿಟು ಮಾಡಿದಳು. ಅವನಲ್ಲಿ ಇರದ ಸಮಯ ಸಾಧಿಸಿ ಎಡಗಣ್ಣಿನ ಮಧ್ಯಕ್ಕೆ ಸುಣ್ಣದ ಚಿಕ್ಕೆಯಿಕ್ಕಿದಳು. ಹೇಗಂತಿರಿ?...

ತಾವರಿ ಕಣ್ಣಿಗೆ ಸುಣ್ಣದ ಚಿಕ್ಕೀನ
ಅರಳೀಲಿ ಅದ್ದಿ ಮಡಿಗ್ಯಾಳ ಆ ಗರ್ತಿ
ಹೆಣ್ಣಂಥ ಹಸನು ಎಂದಾಳ

ಸೂಳೆ ಮಾಡಿದ ಕಲಾಯಿಯನ್ನು ಆ ಮಂಕು ಮೂದೇವಿ ನಂಬಿದ. ಈ ಮದುವೆ ಒಲ್ಲೇ ಎಂದ. ಕುರುಡು ಹೆಣ್ಣು ಕಟ್ಟಿಕೊಳ್ಳಲು ಅವನೇನು ಹೆಳವನೆ? ಪಟ್ಟುಬಿಡದ ಗೌಡ ಅವನ ಕೈಲಿ ಅವಳಿಗೇ ತಾಳಿ ಕಟ್ಟಿಸಿಬಿಟ್ಟ. ಆದರೇನು ಪ್ರಯೋಜನ? ಗೌಡನ ಮಗ ಹೆಂಡತಿಯನ್ನೊ ಪ್ರಸ್ಥದ ದಿನ ಸಹ 'ಕಣ್ಣಿಲ್ದ ಬಾಲೆಂತ ಕತ್ತೆತ್ತಿ ನೋಡ್ಲಿಲ್ಲ' ಅಂದೇ ಮನೆಬಿಟ್ಟು ಸೂಳೆಮನೆಗೆ ನಡೆದ. ನಡೆದವನು 'ತಿಂಗಾಳು ಕಳೆದಾರು ತಿರಿಗೇನೆ ನೋಡ್ಲಿಲ್ಲ.' 'ಪತಿರಾಯ್ನ ನೆನೆನೆದು ಮನದಾಗೆ ಮರುಗ್ಯಾಳು'– ಗೌಡನ ಸೊಸೆ ಮಲ್ಲವ್ವ. ಮಾಡುವುದಾದರೂ ಏನು? ಹೀಗೇ ಅವಳ ಬರಡು ಬಾಳಲ್ಲಿ ದಿನಗಳು ಇಂಗುತ್ತಿದ್ದವು.

ಒಮ್ಮೆ ಗೌಡ ಮನೆಯಲ್ಲಿರಲಿಲ್ಲ. ಮೇಯಲು ಕಾಡುಸೇರಿದ್ದ ಹಸುವಿನ ಕರು ತಿರುಗಿ ಬಂದಿರಲಿಲ್ಲ...

"ನಾನಿನ್ನು ಬರಲಾ?" ಎನ್ನುತ್ತಿದ್ದ. ತೀರ ಕತ್ತಲಾದರೆ ಹೇಗೆ? ತಾನೇ ಕರುವನ್ನರಸಿ ಹೊರಟಳು. ಪೊದೆಯಲ್ಲಿ ಹುಲ್ಲು ಮೇಯುತ್ತಿದ್ದ ಕರು ಬಡಪೆಟ್ಟಿಗೆ ಹಿಂದೆಬರಲಿಲ್ಲ. ಹಗ್ಗ ಮಗೆತು ಬಂದಾಗಿತ್ತು. ಸೆರಗನ್ನ ಅದರ ಕೊರಳಿಗೆ ಕಟ್ಟಿ ಎಳೆತರುತ್ತಿರುವಾಗ: 'ಬ್ಯಾಟಿಗೆ ಬಂದಿದ್ದ ಮಹರಾಜ' ಕಂಠೀರವ, ಮರದ ಮರೆಯಿಂದ, ಬಾಗಿ ಕರುವನ್ನು ಎಳೆಯುವಾಗ ಅವಳ 'ಸೆರಗಿಲ್ದ ಬಿಗಿ ಮೊಲಿ' ಕಂಡ. 'ಚಂದಿರ ವದನೆಯ ಸುಂದರ' ದೇಹ ನೋಡಿ ತುಟಿಕಚ್ಚಿದ. ಅವನ ಮನ ಅವಳಲ್ಲಿ ನೆಟ್ಟಿತು. ಬಲಾತ್ಕಾರ ಕಷ್ಟವಲ್ಲ. ಮರ್ಯಾದೆ? ರಾಜಮರ್ಯಾದೆಗೆ ಭಂಗ ಬಾರದಂತೆ ಅವಳನ್ನು ವಶಮಾಡಿಕೋಬೇಕಲ್ಲ! ಮಾರ್ಗ ಹೊಳೆಯದೆ ಮರುಗಿ ಕ್ಷೀಣಿಸುತ್ತಿದ್ದ ಅವನಿಗನಿಸುತ್ತಿತ್ತು ಮನದಲ್ಲಿ ಅವಳಿಲ್ಲದರ ಮನೆ ಶೂನ್ಯ. ಚಿತ್ತಾರದ ಕೆಲಸ ಮಾಡಿದ ಕಂಬ ಗೋಡೆ ಎಲ್ಲ ವರ್ಣಹೀನ. ಮನಕ್ಕೆ...

ಲಕ್ಷ್ಮಿಯಕಳೆಯುಂಟು ಗೌಡನ
ಮನಿಯಾಗ
ಅರಮನಿ ಪಳ್ಗೆ ಮಣ್ಣುಂಟ ಮಹಾರಾಣಿ
ಮುಕದಾಗ ಏನ ಕಳೆಯುಂಟ—

ಎಂಬ ಅನಿಸಿಕೆಗಳು. ರಾಜನ ಮಿದುಳಿಗೆ ಒಂದಾಲೋಚನೆ ಮಿಂಚಂತೆ ಹೊಳೆಯಿತು. ಮರುದಿನವೇ ಗೌಡನ್ನ ಅರಮನೆಗೆ ಕರೆಸಿದ. ಗೌಡ. ಅವನಿಗಾಗಿ ಅಲ್ಲಿ ಸತ್ಕಾರ ಕಾದಿತ್ತು. ಅದೂ ಎಂಥ ಸತ್ಕಾರ! ಅರಸನೇ ಸ್ವಯಂ ನಿಂತು—

ಹಾಲ್ಕೀರು ಲಕ್ಷ್ಮೀಗೆ ಎಲೆಕಂಬ ಮಡಗಿಸಿ
ಮುತ್ತಿನ ವಜ್ರಾಗೆ ಕುಳ್ಳಿರಿಸಿ ಕಯ್ಯಿಂದ
ತಾಂಬೂಲ ಗಂಧ ಕೊಟ್ಟಾನೊ.



ಕಲ್ಲುಮ್ಯಾಲೇ ದಂಟು.

ಗೌಡನಿಗೆ ಅಚ್ಚರಿ! ಏಕಿದೆಲ್ಲ ?

ಕುಶಲ ಪ್ರಶ್ನೆಯಾಯಿತು. ರಾಜ ಪ್ರಧಾನ ವಿಷಯಕ್ಕೆ ಬಂದ. ಬಿಚ್ಚು ಮನಸ್ಸಿನಿಂದ ಕೇಳಿದ ಸೊಸೆಯನ್ನು ರಾಣಿಯಾಗಿಸುವಂತೆ. ಗೌಡನಿಗೆ ಸಿಡಿಲು ಬಡಿದಂತಾಯ್ತು. ರೋಷ ಉಕ್ಕಿ ಬಂತು. ಆದರೇನು ಮಾಡಲಿಕ್ಕುಂಟು— ಗಂಟಲಿಗೇರಿದೆ ಬಿಸಿ ತುಪ್ಪ. ಶೂಲಕ್ಕೇರಿದರೂ ನಿಜಾಯ್ತಿ ಬಿಡಬಾರದು ಅಂತ ನಿರ್ಧಾರ ಮಾಡಿದ ಗೌಡ. ಖಚಿತವಾಗಿ ಸಾಧ್ಯವಿಲ್ಲೆಂದ.

ಕೋಪ ಹಿಮಾಲಯಕ್ಕೇರಿದರೂ ದುಡುಕದಿರಲು ರಾಜನ 'ವಿವೇಕ' ಎಚ್ಚರಿಸಿತು. ಚಿಂತಿಸಿದಷ್ಟೂ ದಾರಿ ದುರ್ಗಮವಾಯಿತು. ಕಡೆಗೊಂದು ಉಪಾಯದ ಮಿಂಚು. ಷರತ್ತು ಹಾಕಿದ: ಕಲ್ಲುಮ್ಯಾಲೆ ದಂಟಬೆಳೆದು ತರಬೇಕು. ತಪ್ಪಿದರೆ ಸೊಸೆಯನ್ನು ಅರಸಿಯಾಗಿಸಬೇಕು. ಗೌಡನಿಗೆ ದಿಗ್ಭ್ರಮೆ. ಕಲ್ಲ ಮೇಲೆ ಬೆಳೆ...? ಕಾಲುಹಿಡಿದ ಗೌಡನ ಬೇಡಿಕೆಗೆ ರಾಜ ಕಗ್ಗಲ್ಲು. ಆಗಲೆಂದು ಹೊರಬಂದ ಗೌಡನ ಕೈ ನೆತ್ತಿಗೇರಿತು. ಆಮೂಲಾಗ್ರ ಕೇಳಿದ ಸೊಸೆಗೆ ಪರಿಹಾರೋಪಾಯ ಹೊಳೆಯಿತು. ಮಾವನ ಅಧೈರ್ಯ ಕಂಡವಳು—

ಪುಕ್ಕಲುಮಾವಯ್ಯ ತಕ್ಕೊಳೊ ಧೈರ್ಯಾನ
ದಂಟಲ್ಲ ಎಂಟು ಬೆಳೆದೇನು ಮನೆತನ
ಬೆಳಗುವ ದೀಪ ಆದೇನು— ಎಂದಳು.

ತೆಳುವಾದ ಚಪ್ಪಡಿ ತರಿಸಿ ಮೇಲೆ ಸಣ್ಣ ಮರಳು ಹಾಸಿ ಬೀಜ ಬಿತ್ತಿ ನೀರುಣಿಸಿದಳು. ಕಲ್ಲು ಮೇಲಿನ ಬೆಳೆಯೊಡನೆ ಅರಮನೆ ಸೇರಿದ ಗೌಡ ಅರಸನಿಗೆ ಹೇಳಿದ–

ಹತ್ತೆಂಟು ದಿನಕೆಲ್ಲ ಬೆಳೆದಿವ್ನಿ ದಂಟನ್ನ
ತಕ್ಕಳ್ಳಿ ನನ್ನ ಮಹಾರಾಜ ಕೈಮ್ಯಾಲೆ.
ಬೆಳೆದೀನಿ ಇದನ ಕಲ್ಲುಮ್ಯಾಲೆ.

ಎಲಾ ಇವನ! ಅನ್ನಿಸಿ ಕ್ಷಣ ಪೆಚ್ಚಾದರೂ ರಾಜ ಅವಳನ್ನು ಅನುಭವಿಸುವ ಉತ್ಕಟಾಶೆ ಬಿಡಲಿಲ್ಲ. ಅದಕ್ಕಾಗೇ ಅವನು 'ಗಡಗೀಲಿ ಕುಂಬಳ ಬೆಳಕೊಂಡು ತಾರಯ್ಯ' ಎಂದ.

ತಿರುಗಿ ಗೌಡನಿಗೆ ಚಿಂತೆ. ಆದದ್ದಾಗಲಿ ಎಂದು ಮೂರು ತಿಂಗಳ ಗಡವು ಪಡೆದು ಬಂದ. ಚಾಣಾಕ್ಷಮತಿ ಸೊಸೆಯಲ್ಲಿ ಅದಕ್ಕೂ ಪರಿಹಾರವಿತ್ತು. ಮಿಡಿಕುಂಬಳ ಗಡಿಗೆಗೇರಿಸಿದಳು. ಹಣ್ಣುಗುಂಬಳ ಮೂರು ತಿಂಗಳಿಗೆಲ್ಲ ಗಡಿಗೆ ತುಂಬ. ಹೆಗಲೇರಿಸಿದ ಗೌಡ ರಾಜ ನೆಡೆ ನಡೆದ.

ಕಂಡ ರಾಜ ಮೂಕವಿಸ್ಮಿತನಾದ. ಹೃದಯ ಬಾಯಿಗೆ ಬಂತು. ಅವಳೆಡೆಗೆ ಅವನದು ಅದಮ್ಯ ಕಾಮುಕತೆ. ಪಡೆಯಲೇಬೇಕೆಂಬ ತವಕ, ಹಠ. ಅದರಲ್ಲಿ ಅವನಿಗೆ ಹೊಳೆದದ್ದು ಇನ್ನೊಂದು ಉಪಾಯ. ಗೌಡನಿಗೆ ಆದೇಶ ಬಂತು: ಕೋಣದ ಹಾಲಿಗೆ. ಬಂಡೆ ತಲೆ ಏರಿದಂತಾದರೂ, ಸುತ್ತಮುತ್ತ ಎತ್ತೆಂದರತ್ತ ಕಪ್ಪು ಕತ್ತಲೆ ಮುಸುಕಿದಂತಾದರೂ, ಸೊಸೆಯ ನೆನಪು ಆಶಾಕಿರಣ. ಒಪ್ಪಿಕೊಂಡ. ಮೂರು ದಿನ ಗಡವು. ಭಟರನ್ನು ಆಚೆನಾಡದ್ದಿನಂದು ಮನೆಗೆ ಕಳುಹಿಸಲು ತಿಳಿಸಿ ಮನೆಯತ್ತಹೊರಟ. ಅವನು ರಾಜಭಟರು ಬರುವ ದಿನ—

ಕೆಂಪಾನೆ ಸೀರೆಯ ಉಟುಕೊಂಡು
ಮಾವಯ್ಯ
ಬಾಗಿಲ ಹಿಂದೆ ಕೂರಯ್ಯ ಸುಮ್ಮನೆ
ಚೊಂಬನ್ನ ಪಕ್ಕ ಇಟಕಂಡು

ಎಂಬ ಸೊಸೆಯ ಆದೇಶ ಪಾಲಿಸಿ ಬಾಗಿಲ ಮರೆಯಲ್ಲಿ ಗೌಡ ಕುಳಿತ.

ಗೌಡನ್ನ ಅರಸಿ, ಬಂದ ರಾಜಭಟರಿಗೆ ಅವನು ಹೊರಗಿರುವ ಸುದ್ದಿಯಿಂದ ದಿಗ್ಭ್ರಮೆ. ರಾಜನಿಗೆ ಸುದ್ದಿ ಹೋಯಿತು. ರಾಜನ ಸಿಟ್ಟು ನೆತ್ತಿಗೆ– ಮೂಗು ಬೆರಳಿಗೆ. ಅರಮನೆಗೇ ಕರೆಸಿದ ಗೌಡನ್ನ, ಆತ ಅರಸನಿಗೆ ಸೊಸೆ ಹೇಳಿಕೊಟ್ಟಿದ್ದಂತೆ ಸಮಾಧಾನ ಹೇಳಿದ. ಗಂಡಿಗೆಂಥ ಮುಟ್ಟುಂಟು ಮುಡಿಯುಂಟು ಕೋಣಕ್ಕೆಂಥ ಹಾಲುಂಟು? ರಾಜನಿಗೆ ಮುಖಭಂಗವಾಯಿತು. ಸಂಪೂರ್ಣ ಸೋತ ಅನುಭವ ಅವನಿಗಾದರೂ ಆಶೆಯನ್ನು ಬಿಡದಾದ.

ಏನಾದರಾಗಲಿ ದಕ್ಕಿಸಿಕೊಳ್ಳಬೇಕೆಂದು ಹಂಚಿಕೆ ಹೂಡಿದ. ತಾನು ಮಾಡಿದ್ದು ತಪ್ಪೆಂದು, ಈಗ ಪಶ್ಚಾತ್ತಾಪಪಡುತ್ತಿರುವುದಾಗಿಯೂ, ತಪ್ಪೊಪ್ಪಿಗಾಗಿ ಹುಣ್ಣಿಮೆಯಂದು ರಾತ್ರಿ ಭೋಜನ ಕೂಟ ಏರ್ಪಡಿಸುವುದಾಗಿಯೂ ಮನೆಯವರೆಲ್ಲ ತಪ್ಪದೆ ಬರಬೇಕೆಂದೂ ಹೇಳಿದ.

ಪಟ್ಟೆದ ರಾಣಿ ಮಾಡೇನು

ನಯವಂಚಕನನ್ನ ಗೌಡ ನಂಬಿದ. ಹುಣ್ಣಿಮೆ ಬಂತು. ಊಟ ಕೂಟದಲ್ಲಿ ಮೊದಲು ಗಂಡಸರ ಪಂಕ್ತಿ. ರಾಜನು ಆದೇಶಿಸಿದ್ದಂತೆ ಗೌಡನ ಎಲೆಗೆ ಅಫೀಮು ಬೆರಸಿದ ಊಟ. ತಿಂದ ಗೌಡ ಮತ್ತಿನಲ್ಲಿ, ಮಲಗಲು ಅವನಿಗೊಂದು ಕೋಣೆಗೆ ಸಾಗಿಸಿದರು.

ಹೆಂಗಸರ ಊಟ ಮುಗಿಯಿತು. ಸುಣ್ಣವಿಲ್ಲದ ತಾಂಬೂಲ ಅವಳಿಗಾಗಿ ಇರಿಸಿದ್ದ. ಸುಣ್ಣ ಅರಸಿದವಳಿಗೆ ಅರಸ ಒಳಕೋಣೆ ತೋರಿದ, ಅಲ್ಲಿ ಸುಣ್ಣ ಇರುವುದಾಗಿ ಅತ್ತ ನಡೆದ ಅವಳನ್ನ ಹಿಂಬಾಲಿಸಿ ಬಾಗಿಲು ಭದ್ರಪಡಿಸಿದ.

ಸುಪ್ಪತ್ತಿ ಮ್ಯಾಗಡೆ ಮೆತ್ತಾನೆ ಹಾಸೀಗೆ
ಹಚ್ಚಿದ್ದ ಧೂಪ ಘಮ್ಮಂತ ಸೊಬಗಾಕು
ರಂಗೀನ ಕೋಣೆ ಕಣ್ಣಿಗೆ

ಮತ್ತೇರಿದ್ದ ಅರಸ ಮತ್ತಿಮರದ ಮಂಚಕ್ಕೆ ಅವಳನ್ನ ತಳ್ಳಿದ. ಭಯಭೀತಳಾದ ಹೆಣ್ಣಿ ಸೌಂದರ್ಯ ಇಮ್ಮಡಿಯಾಗಿತ್ತು. ಕಂಡ ರಾಜನ ಸ್ಥಿತಿ ಹುಳಿಮಿಡಿ ಕಂಡ ಕಪಿ. ಹೆಜ್ಜೆಯಿಟ್ಟು ಮುಂದೆ ಬಂದು ಅವಳನ್ನು ಆಲಂಗಿಸಿದ. ಬಿಸಿತಾಕುತ್ತಿದ್ದಂತೆ......

ಬಿಡೆ ನಿನ್ನ ನಸಂರಾಣಿ ಇನ್ನೇದು ಬಾಪಕ್ಕ
ಪಟ್ಟಾದ ರಾಣಿ ಮಾಡೇನಂ ನಾ ನಿನ್ನ
ಪಲ್ಲಂಗ ಬಿಟ್ಟು ಇಳಿಸೇನಂ-

ಎಂದೆಲ್ಲ ಬಡಬಡಿಸುತ್ತಿದ್ದ. ದಿಕ್ಕೇ ತೋರದ ಮಲ್ಲವ್ವ ದೇವರಿಗೆ ಶರಣು ಹೋದಳು, ಕಡೇ ಪ್ರಯತ್ನವೆಂಬಂತೆ.

ಕಾಪಾಡು ಮಾದೇವ ಪಾತಕಿ ಇವನಿಂದ
ಎಳನೀರು ಕೊಬರಿ ಉಣಿಸೇನು ನಾ ನಿನ್ನ
ಪಾದಕ್ಕೆ ಶಿರವ ಚೆಲ್ಲೇನಂ-

ಎಂದು ಮನದಲ್ಲೇ ಮನೆದೇವ ಮಾದೇವನ್ನ ಬೇಡಿದಳು. ಕರುಣಿಸಿದ ದೇವ, ಕಣ್ಣು ತೆರೆದ. ಧ್ಯಾನಕ್ಕೆ ಫಲ ಸಿಕ್ಕಿತ್ತು. ಕ್ಷಣ ಆಲೋಚನೆ ಕೊರಳತ್ತ ಕೈ ಸರಿಯುವಂತೆ ಮಾಡಿತು. ಕರಿಮಣಿ ಸರದ ಮಣಿಗಳು ನೆಲದ ಮೇಲೆ ಉರುಳಾಡಿದವು. ಅರಸ ಆಗಲೆಂದ:

ಅದೇನು ನಿನ್ನ್ಯೋಳಿ ವಸಿತಾಳು ರತಿರಾಯು
ಕಡಿದೋದ ಸರವ ಸರಿಮಾಡಿ ಕೊರಳಿಗೆ
ಏರಿಸಿಕೊಂಡು ಆ ಮ್ಯಾಲೆ-

ಎಂಬ ಅವಳ ಮಾತಿಗೆ. ಬೇಗ ಮುಗಿಯಲೆಂದು ರಾಜನೂ ಕೂತು ಮಣಿಹೆಕ್ಕತೊಡಗಿದ. ಅವನೀಗ ಆನಂದ ಪರ್ವತದ ತುತ್ತತುದಿಯಲ್ಲಿ ಗರಿಗೆದರಿ ಹಾರಾಡುತ್ತಿದ್ದ. ದಾರದ ಒಂದು ತುದಿ ಅವಳು ಹಿಡಿದಳು. ಬೇಗ ಪೋಣಿಸುವನೆಂದು ಹೇಳಿ ರಾಜ ಸರಕ್ಕೆ ಮಣಿ ಪೋಣಿಸುತ್ತಿದ್ದಂತೆ ಅವಳು ಒಂದೊಂದೇ ಮಣಿ ತೆಗೆದುಹಾಕುತ್ತಿದ್ದಳು. ಪೋಣಿಸಿದಷ್ಟೂ ಮುಗಿಯದ್ದೇಕೆಂಬ ಸಂಶಯ ರಾಜನಿಗೆ. ಏನಾದರೂ ಅವನ ಮನಸ್ಸಿನಲ್ಲಿ ಬೇರೂರಿದ್ದ ಕಾಮುಕ ಭಾವ ಅಳಿಯಲಿಲ್ಲ. ಕೋಳಿ ಕೂಗಿತು.

ಮಲ್ಲವ್ವನಿಗೀಗ ಮಾದೇವ ಪಲಾಯನಕ್ಕೆ ನಿಚ್ಚಳ ಹಾದಿತೋರಿಸಿದ. ಜಲಬಾಧೆಗೆ ಹೋಗಬೇಕೆಂದಳು. ಅವಳ ಮೇಲೆ ಅನುಮಾನವಿದ್ದ ರಾಜ ಸೆರಗಂಚು ಹಿಡಿದು, ಹೋಗೆಂದ. ನಸುಬೆಳಕಿನ ವರೆಗೂ ರಾಜ ಸೆರಗು ಹಿಡಿದು ನಿಂತೇ ಇದ್ದ. ಬೆಳಕು !ಮಸಕಾದರೂ ಕಣ್ಣು ಕೆಲಸ ಮಾಡಿ ಬಾಳೆಯ ಬುಡಕ್ಕೆ ಕಟ್ಟಿದ್ದ ಹರಿದ ಸೆರಗನ್ನು ಕಂಡಿತು.

ಕಳೆದುಕೊಂಡಿದ್ದ ವಾಸ್ತವ ಪ್ರಜ್ಞೆಯನ್ನು ಪರಾಭವಗೊಂಡ ಅರಸ ಮರಳಿ ಪಡೆದ. ಅನಂತರವೇ ಅವನು ಡಂಗೂರ ಹೊಡೆಸಿದ್ದು.

ನೀ ದೇವ ಕನ್ನಿಕೆ!

ಮಡದಿಯ ಬಡಿದು ನಡೆದ ಗೌಡನ ಮಗನಿಗೆ ಅನುಮಾನ; ಅವಳಿಗೆ ಕಣ್ಣು ಸರಿಯಿತ್ತಲ್ಲ. ಅಲ್ಲದೆ ದಿಟ್ಟಿಸಿದಾಕ್ಷಣ ಎಂಥ ಚೆಂದೊಳ್ಳೆ ಹೆಣ್ಣು ಅವಳು ಅನಿಸಿತ್ತು. ತಿರುಗಿ ಮನೆಗೆ ನಡೆದ. ಹೆಂಡತಿಯನ್ನ ಸೂಕ್ಷ್ಮವಾಗಿ ಗಮನಿಸಿ ಕಣ್ಣನ್ನೇ ನಂಬದಾದ. ಆಮೂಲಾಗ್ರ ತಂದೆಯಿಂದ ತಿಳಿದಾಗ ಅವನಿಗೆ ಪಶ್ಚಾತ್ತಾಪ. 'ಮಲ್ಲಿಗಿ ಹೂವಂಥ ನಲ್ಲೆಯ' ಹೊಡೆದದ್ದಕ್ಕಾಗಿ ವ್ಯಸನಪಟ್ಟ. 'ಹಾಳಾದ ನನಕೆಯ್ಯ ಬೆಂಕೀಯ ಪುಳ' ಮುಟ್ಟಲಂತ ತನ್ನ ತಾನೇ ಶಪಿಸಿಕೊಂಡ. 'ಮುಸಳಿಯ ತೆರನಿದ್ದ ರಂಡೇಯ' ನಂಬಿ 'ರಂಭೆಯಂತಾ ನಿನ್ನ ಕೈ ಬಿಟ್ಟೆನಲ್ಲಾ' ಎಂದು ಪರಿತಪಿಸಿದ. 'ಆಕಳ ಮೈಯ್ಯಿ ಹುಲಿರಾಯ್ನ ಮನಸುಳ್ಳ' ಸೂಳೆಯ ಸಹವಾಸ ಇನ್ನವಗೆ ಬೇಡ.

ಮಾಡಿದ ತಪ್ಪಿಗೆ ಮರುಗಿದ ರಾಜ. ಸಂಜೆಯ ವೇಳೆಗೆ ಹರಿವಾಣ ತುಂಬ ಮುತ್ತು ರತ್ನ ಬಳುವಳಿ ಕಳಿಸಿದ ಗೌಡನಿಗೆ.

ದಂಪತಿಗಳನ್ನ ಗೌಡ ಹರಸಿದ– ಬಾಳೀರಿ ನನಕಂದ ನೀವ್ನೂರು ವರುಷ'– ಎಂದು.

ಗಂಡ ಹೆಂಡಿರ ಸಲ್ಲಾಪ ಕದ್ದು ಕಾಣುವ ಹಂಬಲ ಕೃಷ್ಣ ಪಕ್ಷದ ಪಾಡ್ಯಮಿಯ ಚಂದಿರನಿಗೆ. ಅವನು ಬಿಳಿಮುಖ ಕಿಟಕಿಯಲ್ಲಿ ತೂರಿಸಿದಾಗ ಕಂಡೇ ಕಂಡ:

**"ಅಂತಿಂಥ ಹೆಣ್ಣಲ್ಲ ನೀದೇವ ಕನ್ನಿಕೆ
ಕೆಟ್ಟೋದೆ ಸೂಳೆ ಮಾತನ್ನ ನಾ ಕೇಳಿ
ಕಣ್ಮುಚ್ಚಿ ಕುಂತು ಹಾಳಾದೆ'**

ಎಂದಾಗ ಕಾಲಿಗೆರಗಿದ ನಲ್ಲೆಯನಲ್ಲೆದೆಗಾನಿಸಿಕೊಂಡು 'ಇರಲಾರೆ ನಿನ ಬಿಟ್ಟು ಅರೆಗಳ್ಗೆ ನನನಲ್ಲೆ' ಎಂದು ಕಂಬನಿದುಂಬಿದ್ದ ಅವಳ ಗಲ್ಲಕ್ಕೆ ತುಟಿ ಬೆರೆಸಿದ ಗೌಡನ ಮಗ.


*

ಗಂಪಾಣಿ ಗೌಡನ ಸೊಸೆಯಂತೆ ಗಂಡಿನ, ದಬ್ಬಾಳಿಕೆಯ ವಿಷವೃತ್ತದಲ್ಲಿ ಸಿಲುಕಿ ನಲುಗುವ ಹೆಣ್ಣಿನ ಅಸಹಾಯ ಸ್ಥಿತಿ ನಾವು ಕಂಡು ಕೇಳರಿಯದ್ದೇನಲ್ಲ. ಇದು ಹಿಂದಿನಿಂದಲೂ ನಡೆದು ಬಂದಿರುವುದು. ಜನಪದ ಸಾಹಿತ್ಯ ಪ್ರಕಾರದಲ್ಲಿಯೂ ಇದು ಮನ ಮಿಡಿಸುವಂತೆ ಅಭಿವ್ಯಕ್ತಗೊಂಡಿದೆ. ಯುಕ್ತಿವಂತರಾದ ಕೆಲವರು ಸ್ತ್ರೀಯರು ನಲುಗುವ ಹಲವರಿಗಿಂತ ಹೇಗೆ ಭಿನ್ನ? ಅವರ ಚಾತುರ್ಯ ಪ್ರದರ್ಶನದ ಬಗೆ ಎಂತು?– ಎಂಬುದನ್ನು ಆಮೂಲಾಗ್ರವಾಗಿ ಬಿಡುವ ಕಥನ ಕವನಗಳು ಈ ಸಾಹಿತ್ಯ ಪ್ರಕಾರದಲ್ಲಿ ಹೇರಳ. ಹೆಣ್ಣು ಆಟಿಕೆಯಲ್ಲ ಎಂಬುದನ್ನು ನಿದರ್ಶಿಸುವ ಕುತೂಹಲಭರಿತ ಸನ್ನಿವೇಶಗಳನ್ನೊಳಗೊಂಡ ಕಥಾನಕಗಳು, ಪಾತಿವ್ರತ್ಯದ ರಕ್ಷಣೆಗಾಗಿ ಹೆಣ್ಣು ಹೆಣಗಾಡುವುದನ್ನು ಮನಮುಟ್ಟುವಂತೆ ಚಿತ್ರಿಸಿವೆ. ವಾಸ್ತವಿಕತೆಯ ದೃಷ್ಟಿಯಿಂದ ವಿವೇಚಿಸಿದಾಗ, ಚಿಂತಿಸಿದಾಗ, ವಿಮರ್ಶಕ ದೃಷ್ಟಿಯಿಂದ ಅವಲೋಕಿಸಿದಾಗ ಅವುಗಳಲ್ಲಿನ ಸನ್ನಿವೇಶ ಕಲ್ಪನೆಗಳು ಅಸಹಜ ಎನ್ನಿಸಬಹುದಾದರೂ ಏನಾದರಷ್ಟನ್ನೂ ಅಂತರಾಳಕ್ಕೇ ತಲುಪಿಸುವ ರಸಾನುದದಲ್ಲಿ ಓದುಗರನ್ನೂ, ಶ್ರೋತೃಗಳನ್ನೂ ಮುಳುಗಿಸಿ ಬಿಡುವ ಅವನ್ನು ಒಮ್ಮೆ ಓದಿ ಅಥವಾ ಕೇಳಿದರೆ ಸಾಕು, ಮೆಲುಕು ಹಾಕುವಷ್ಟು ಮಟ್ಟಿಗೆ ಮನದಲ್ಲೆ ಚಿರಸ್ಥಾಯಿಯಾಗುತ್ತವೆ. ✡



ಒಬ್ಬ ಮನುಷ್ಯ ಎಂಥ ವಿಷಯಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಾನೆಂಬುದರ ಮೇಲಿನಿಂದ ಆತ ಎಷ್ಟು ದೊಡ್ಡ ಮನುಷ್ಯನಾಗಿದ್ದಾನೆಂಬುದನ್ನು ಊಹಿಸಬಹುದು.

— ಅನಾಮಿಕ



ಪವಾಡ

ರಾಘವೇಂದ್ರ ಕುಲಕರ್ಣಿ

ಪುರುಷರು, ಮಹಿಳೆಯರು, ಬಾಲಕರು, ಬಾಲಕಿಯರು, ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು, ಒಟ್ಟು ಸುಮಾರು ಐವತ್ತು ಸಾವಿರದಷ್ಟು ಜನರು ನೆರೆದಿದ್ದರು.

ಲಿಲಾವು ನಡೆಯುತ್ತಿತ್ತು.

ಮೊದಲು ಗರ್ಭಗುಡಿಯ ಬಾಗಿಲಿಗೆ ಹಾಕಿದ ಮಾಲೆಯ ಲಿಲಾವು ನಡೆಯಿತು. ಅದು ಸ್ವಲ್ಪೇ ಹಣಕ್ಕೆ ಹೋಯಿತು. ನಂತರ ಒಂದೊಂದಾಗಿ ಉಳಿದ ಮಾಲೆಗಳ ಲಿಲಾವು ನಡೆಯಿತು. ದೇವಿಯ ಸಮೀಪಕ್ಕೆ ಬಂದ ಹಾಗೆಲ್ಲ ಮಾಲೆಗಳು ಹೆಚ್ಚು ಹೆಚ್ಚು ಹಣಕ್ಕೆ ಹೋಗುತ್ತಿದ್ದವು. ಕೊನೆಗೆ ಅರ್ಚಕರು ಸಾಕ್ಷಾತ್ ದೇವಿಯ ಕೊರಳಿನಲ್ಲಿ ಹಾಕಿದ ಮಾಲೆಯನ್ನು ತೆಗೆದುಕೊಂಡರು. ಅದೇ ಕೊನೆಯ ಮಾಲೆ.

ಮೈಕಿನ ಮುಂದೆ ನಿಂತು ಒದರಿದರು.

"ಇದು ಸಾಕ್ಷಾತ್ ದೇವಿಯ ಕೊರಳಿನಲ್ಲಿಯ ಮಾಲೆ, ಇದನ್ನು ಹೊಂದಿದವರು ದೇವಿಯ ವಿಶೇಷ ಕೃಪೆಗೆ ಪಾತ್ರರಾಗುತ್ತಾರೆ. ಹುಂ ಕೇಳಿರಿ."

"ಒಂದು ಸಾವಿರ."

ಅರ್ಚಕರ ಮುಖ ತಣ್ಣಗಾಯಿತು.

ಸುತ್ತಲೂ ಕೊರಳು ಹೊರಳಿಸಿ ನೋಡಿದರು ಯಾರಾದರೂ ಬೆಲೆಯನ್ನು ಏರಿಸುತ್ತಾರೋ ಎಂದು.

ನಿರಾಶೆ.

"ಒಂದು ಸಾವಿರ, ಸಾಕ್ಷಾತ್ ದೇವಿಯ ಕೊರಳಿನಲ್ಲಿಯ ಮಾಲೆ. ವಿಶೇಷ ಕೃಪೆಗೆ ಪಾತ್ರರಾಗುತ್ತೀರಿ. ಮುಂಬೈಯಿಂದ ಸ್ಪೇಶಲ್ಲಾಗಿ ಮಾಡಿ ತರಿಸಲಾಗಿದೆ. ಒಂದು ಸಾವಿರ... ಒಂದು ಸಾವಿರ,... ಒಂದು ಸಾವಿರ. ವಿಶೇಷ ಮಾಲೆ, ಸಾಕ್ಷಾತ್ ದೇವಿಯ ಕೊರಳಿನಲ್ಲಿಯ ಮಾಲೆ, ಒಂದು ಸಾವಿರ... ಒಂದು ಸಾವಿರ,... ಒಂದು ಸಾವಿರ. ವಿಶೇಷ ಕೃಪೆಗೆ ಪಾತ್ರರಾಗುತ್ತೀರಿ... ಒಂದು ಸಾವಿರ."

ಅರ್ಚಕರ ಧ್ವನಿ ಕುಗ್ಗತೊಡಗಿತು. ಉತ್ಸಾಹ ಇಳಿಯಿತು. ಮತ್ತೊಮ್ಮೆ ಧ್ವನಿ ವರ್ಧಕದ ಮುಂದೆ ನಿಂತು ಕೂಗಿದರು.

"ಈ ಮಾಲೆಯನ್ನು ಹೊಂದಿದವರಿಗೆಲ್ಲ ಪ್ರತಿವರ್ಷ ಒಳ್ಳೆಯದಾಗಿದೆ. ಹೋದ ವರ್ಷ ಬೆಂಗಳೂರಿನ ವರ್ತಕರೊಬ್ಬರು ಈ ಮಾಲೆಯನ್ನು ಪಡೆದರು. ಅವರಿಗೆ ಈ ವರ್ಷ ಹತ್ತು ಲಕ್ಷ ರೂಪಾಯಿಲಾಭವಾಗಿದೆ. ದೇವಿಯ ವಿಶೇಷ ಕೃಪೆಗೆ ಪಾತ್ರರನ್ನಾಗಿ ಮಾಡುವ ಮಾಲೆ. ಬೆಂಗಳೂರಿನ ವರ್ತಕರಿಗೆ ಹತ್ತು ಲಕ್ಷ ರೂ. ಲಾಭವಾಗಿದೆ. ಒಂದು ಸಾ..."

"ಐದು ಸಾವಿರ"

ಅರ್ಚಕರ ಮುಖ ಜಗ್ಗನೆ ಬೆಳಗಿತು. ಬೆಳ್ಳಗೆ ಹೊಳೆಯುವ ಬಿಳಿಯ ಹಲ್ಲುಗಳು ಟ್ಯೂಬ್ ಲೈಟುಗಳ ಪ್ರಕಾಶದಲ್ಲಿ ಮಿಂಚಿದವು. ಎಡಗೈಯಲ್ಲಿ ಮೈಕನ್ನು ಗಟ್ಟಿಯಾಗಿ ಹಿಡಿದು

ಕೂಗಿದರು:

"ಐದು ಸಾವಿರ, ಐದುಸಾವಿರ, ಮಹಾನ್ ಮಹಿಮೆಯ ಮಾಲೆ... ಐದುಸಾವಿರ,... ಭಕ್ತರನ್ನು ಉದ್ಧಾರ ಮಾಡುವ ಸಾಕ್ಷಾತ್ ದೇವಿಯ ಕೊರಳಿನಲ್ಲಿಯ ಮಾಲೆ, ಐದು ಸಾವಿರ,... ಐದುಸಾವಿರ... ಐದು ಸಾವಿರ..."

ಅರ್ಚಕರು ಒಂದು ನಿಮಿಷ ತಡೆದು ಸುತ್ತಲೂ ನೋಡಿದರು. ತಮ್ಮ ಗಂಟಲಿಗೆ ಸ್ವಲ್ಪ ವಿಶ್ರಾಂತಿ ಕೊಟ್ಟರು.

"ಐದು ಸಾವಿರ ಖರ್ಚು ಮಾಡಿದರೆ ದೇವಿಯ ವರಪ್ರಸಾದದಿಂದ ನಿಮಗೆ ಲಕ್ಷಾಂತರ ರೂಪಾಯಿ ಲಾಭವಾಗುತ್ತದೆ; ಐದುಸಾವಿರ, ಐದು ಸಾವಿರ, ಐದು... ಸಾ...ವಿ...ರ.

"ಐದುಸಾವಿರದಾ ಒಂದು ನೂರು"

ಅರ್ಚಕರು ಪುಟಿದೆದ್ದರು.

ಮುಗುಳಂ ನಗೆಯಿಂದ ಮುಖ ಪ್ರಕಾಶ ಮಾನವಾಯಿತು.

"ಐದುಸಾವಿರದಾ ಒಂದು ನೂರು, ಐದು ಸಾವಿರದಾ ಒಂದು ನೂರು, ಐದು ಸಾವಿರದಾ ಒಂದು ನೂರು... ಒಂದು... ಎರಡು...

"ಆರು ಸಾವಿರ"

"ಆ...ಆ... ಆ...ರು ಸಾವಿರ, ಆರು ಸಾವಿರ,... ಆರುಸಾವಿರ,... ಒಂದು...

"ಹತ್ತುಸಾವಿರ"

"ಆ..." ಅರ್ಚಕರು ಹೊರಳಿ ನೋಡಿದರು. ಮೊದಲಂ ಅದನ್ನು ಐದುಸಾವಿರಕ್ಕೆ ಬೇಡಿ ದವರು.

"ಹತ್ತು ಸಾವಿರ,... ಹತ್ತುಸಾವಿರ, ದೇವಿಯ ಮಹಿಮೆಯನ್ನು ತೋರಿಸುವ ಮಾಲೆ. ವಿಶೇಷ ಮಾಲೆ, ಸ್ಪೇಶಲ್ಲಾಗಿ ಮಾಡಿ ತರಿಸಿದ ಮಾಲೆ. ಹತ್ತುಸಾವಿರ, ಹತ್ತು ಸಾವಿರ, ಇದು ಯಾರ ಬಳಿಯಲ್ಲಿ ಇದೆಯೋ ಅವರು ದೇವಿಯ ವಿಶೇಷ ಕೃಪೆಗೆ ಪಾತ್ರ ರಾಗುತ್ತಾರೆ. ಹತ್ತುಸಾವಿರ... ಹತ್ತು ಸಾವಿರ... ಹತ್ತು ಸಾವಿರ... ಭಕ್ತರನ್ನು ಉದ್ಧಾರ ಮಾಡುವ ಸಾಕ್ಷಾತ್ ದೇವಿಯ ಕೊರಳಿನಲ್ಲಿಯ ಮಾಲೆ, ಹತ್ತು ಸಾವಿರ, ಎರಡು, ಹತ್ತುಸಾವಿರ... ಮೂರು"

ಅರ್ಚಕರು ಕೆಳಗೆ ಇಳಿದರು. "ಬರ್ರಿ... ಬರ್ರಿ... ಮುಂದೆ ಬರ್ರಿ," ಎಂದು ಅವರನ್ನು ಮುಂದೆ ಕರೆದರು.

ಅವರು ಜನರ ನಡುವೆ ದಾರಿಮಾಡಿ ಕೊಂಡು ಮುಂದೆಬಂದರು. ಅರ್ಚಕರು ತಮ್ಮ ಕೈಯಲ್ಲಿಯ ಮಾಲೆಯನ್ನು ಅವರ ಕೊರಳಿನಲ್ಲಿ ಹಾಕಿದರು. ಅವರು ಅದನ್ನು ಪುನಃ ತೆಗೆದು ತಮ್ಮ ಕೈಯಲ್ಲಿ ಹಿಡಿದು ಕೊಂಡರು. ಆ ಮಾಲೆಯನ್ನು ತಮ್ಮ ತಲೆಯ ಮೇಲೆ ಇಟ್ಟುಕೊಂಡರು. ಎರಡೂ ಕಣ್ಣುಗಳಿಗೆ ಒತ್ತಿಕೊಂಡರು. ಹಣೆಗೆ ಒತ್ತಿ ಕೊಂಡರು. ಅದನ್ನು ಕೈಯಲ್ಲಿ ಹಿಡಿದು ನೋಡುತ್ತ ನಿಂತರು.

ಅರ್ಚಕರು ಹೇಳಿದರು–

"ನಿಮ್ಮ ಹೆಸರು, ವಿಳಾಸ ಇಷ್ಟು ಕೊಟ್ಟರೆ ಸಾಕು"

"ಬೇಡ, ಹಣವನ್ನು ಈಗಲೇ ಕೊಡು ತ್ತೇನೆ" ನೂರರಕಟ್ಟುಗಳನ್ನು ಅವರು ಅರ್ಚಕರ ಕೈಯಲ್ಲಿ ಹಾಕಿದರು. "ಈ ಹಣ ವನ್ನು ದಯಮಾಡಿ ದೇವಿಯಪಾದದ ಮೇಲೆ ಇಡಿರಿ"

ಅರ್ಚಕರು ಹಾಗೆಯೇ ಮಾಡಿದರು.

ಅವರು ದೇವಿಗೆ ಶಿರಸಾಷ್ಟಾಂಗ ನಮ ಸ್ಕಾರ ಮಾಡಿದರು.

ನಂತರ ಕೆಳಗೆ ಕುಳಿತು ಮಾಲೆಯಲ್ಲಿಯ ಹೂಗಳನ್ನು ಒಂದೊಂದಾಗಿ ಹೊರಗೆ ತೆಗೆ ದರು.

ಅಲ್ಲಿಯೇ ಬದಿಯಲ್ಲಿ ದೇವಿಯ ಮೇಲೆ ಏರಿಸಿದ ಹೂವುಗಳ ರಾಶಿ ಇತ್ತು, ಅದರಲ್ಲಿ ಮಾಲೆಯಲ್ಲಿಯ ಹೂವುಗಳನ್ನು ಸೇರಿಸಿದರು. ಮೇಲೆ ಕೆಳಗೆ ಕೈಯಾಡಿಸಿದರು ಅದನ್ನು ಒಂದೇ ರಾಶಿ ಮಾಡಿದರು. ನಂತರ ಅವರು ಅರ್ಚಕರಿಗೆ ಕೇಳಿಕೊಂಡರು.

"ದಯಮಾಡಿ ಈ ಹೂವುಗಳನ್ನು ಇಲ್ಲಿ ನೆರೆದವರಿಗೆಲ್ಲ ಹಂಚಿಬಿಡಿರಿ. ಎಲ್ಲರೂ ಹತ್ತು ಹತ್ತು ಲಕ್ಷ ಗಳಿಸಲಿ. ಎಲ್ಲರೂ ಶ್ರೀಮಂತ ರಾಗಲಿ..."

ಶಿಶಿರ ಪಾಠಕ


ಪ್ರಾಚೀನ ಭಾರತದಲ್ಲಿ ಶಸ್ತ್ರಚಿಕಿತ್ಸೆ

ವಿದೇಶಗಳಲ್ಲಿ ಶಸ್ತ್ರಚಿಕಿತ್ಸಾ ನಿಪುಣರು ಹೃದಯವನ್ನು ಕಸಿಮಾಡಿದ ಸುದ್ದಿಯನ್ನು ಓದಿದಾಗ ಆ ದೇಶಗಳು ವೈದ್ಯಕೀಯ ವಾಗಿ ಎಷ್ಟು ಮುಂದುವರಿದಿವೆಯೆಂದು ಜನರು ಆಶ್ಚರ್ಯಪಡುವುದು ಸಹಜ. ಆದರೆ ಪ್ರಾಚೀನಕಾಲದಲ್ಲಿ ನಮ್ಮ ದೇಶದಲ್ಲಿಯೇ ಯಕೃತ್ತನ್ನು ಕಸಿಮಾಡಲಾಗುತ್ತಿತ್ತಲ್ಲದೆ ತಲೆ ಬುರುಡೆ, ಕಣ್ಣು, ಕಿವಿ ಮುಂತಾದ ಅಂಗ ಗಳಿಗೆ ಸಂಬಂಧಿಸಿದ ಸಂಕೀರ್ಣವಾದ ಶಸ್ತ್ರ ಚಿಕಿತ್ಸೆಗಳನ್ನೂ ಮಾಡಲಾಗುತ್ತಿತ್ತೆಂದರೆ ಅನೇ ಕರು ನಂಬಲಿಕ್ಕಿಲ್ಲ.

ಪ್ರಾಚೀನ ಕಾಲದಲ್ಲಿ ನಮ್ಮ ದೇಶದ ಶಸ್ತ್ರ ಚಿಕಿತ್ಸಾ ನಿಪುಣರು ಇಂದು ನಾಮಾಂಕಿತರಾದ ಪಾಶ್ಚಾತ್ಯ ತಜ್ಞರಿಗಿಂತಲೂ ಸಿದ್ಧಹಸ್ತರಾಗಿ ದ್ದರು. ಆ ಕಾಲದಲ್ಲಿ ಶಸ್ತ್ರಚಿಕಿತ್ಸಾ ಪದ್ಧತಿ ಯಲ್ಲಿ ನಮ್ಮ ದೇಶ ಎಷ್ಟು ಮುಂದುವರಿ ದಿತ್ತೆಂಬುದನ್ನು ನಮ್ಮ ಪ್ರಾಚೀನ ಗ್ರಂಥ ಗಳು ಚೆನ್ನಾಗಿ ಎತ್ತಿತೋರಿಸುತ್ತವೆ. ಉಳಿ ದೆಲ್ಲ ಚಿಕಿತ್ಸಾ ಪದ್ಧತಿಗಳಿಗಿಂತ ಆಯುರ್ವೇದ ಚಿಕಿತ್ಸಾ ಪದ್ಧತಿಯು ಪ್ರಾಚೀನವಾದುದು. ಈ ಚಿಕಿತ್ಸಾ ಪದ್ಧತಿಯಿಂದಲೇ ಉಳಿದೆಲ್ಲ ಬಗೆಯ ಚಿಕಿತ್ಸಾಪದ್ಧತಿಗಳು ಉದ್ಭವಿಸಿದ ವೆಂದು ಹೇಳುವ ವಿದ್ವಾಂಸರು ಸಾಕಷ್ಟಿ ದ್ದಾರೆ.

ಆಯುರ್ವೇದವು ರೂಪುಗೊಳ್ಳುತ್ತಿದ್ದಾಗ ಶಸ್ತ್ರಚಿಕಿತ್ಸೆಯ ವಿಧಾನಗಳೂ ರೂಪುಗೊಳ್ಳು ತ್ತಿದ್ದುದರಿಂದ ಅದನ್ನೂ ಆಯುರ್ವೇದದ ಒಂದು ಅನಿವಾರ್ಯ ಅಂಗವೆಂದು ಪರಿಗಣಿಸ ಬೇಕು. ಸುರಾಸುರ ಯುದ್ಧಗಳು ಮೇಲಿಂದ ಮೇಲೆ ನಡೆಯುತ್ತಿದ್ದಂತಹ ಸಮಯದಲ್ಲಿ ವೈದ್ಯಶಾಸ್ತ್ರದ ಈ ವಿಭಾಗ ಎಷ್ಟು ಮಹತ್ವ ದ್ದಾಗಿತ್ತೆಂಬುದನ್ನು ಒತ್ತಿಹೇಳಬೇಕಾಗಿಲ್ಲ. ಆದ್ದರಿಂದಲೇ ಆ ಕಾಲದಲ್ಲಿ ಶಸ್ತ್ರಚಿಕಿತ್ಸಾ ಪದ್ಧತಿಯಲ್ಲಿ ಅನೇಕ ಸುಧಾರಣೆಗಳಾದವು. "ಆ ಸಮಯದ ಭಾರತೀಯ ವೈದ್ಯರು ಶರೀರದ ಅನೇಕ ಅಂಗಗಳನ್ನು ಕಸಿಮಾಡುತ್ತಿದ್ದರು. ಕೃತ್ರಿಮ ಅಂಗಗಳನ್ನು ಸಹ ಜೋಡಿಸುವಷ್ಟು ಪ್ರಗತಿ ವೈದ್ಯಶಾಸ್ತ್ರದಲ್ಲಾಗಿತ್ತು," ಎಂದು ಥಾಮರ್ಸ್ ಹಾಗೂ ಕಾಸ್ಟೆಲಾನಿ ಎಂಬ ಬ್ರಿಟಿಶ್ ಇತಿಹಾಸಜ್ಞರು 'ಮ್ಯಾನ್ಯುಅಲ್ ಆಫ್ ಟ್ರಾಪಿಕಲ್ ಮೆಡಿಸಿನ್' ಎಂಬ ತಮ್ಮ ಗ್ರಂಥದಲ್ಲಿ ಬರೆದಿದ್ದಾರೆ.

ಪ್ರಾಚೀನ ಭಾರತದಲ್ಲಿ ಶಸ್ತ್ರಚಿಕಿತ್ಸಾ ಶಾಸ್ತ್ರ ಎಷ್ಟು ಮುಂದುವರಿದಿತ್ತೆಂಬುದಕ್ಕೆ ಪುರಾಣ ದಲ್ಲಿ ಅನೇಕ ಉದಾಹರಣೆಗಳು ದೊರೆಯು ತ್ತವೆ. ಆ ಪ್ರಕಾರ ಅಶ್ವಿನೀಕುಮಾರರು ವಿಷ ಫಲೆಯ ಶರೀರಕ್ಕೆ ಕೃತ್ರಿಮವಾದ ಅಂಗ ವೊಂದನ್ನು ಜೋಡಿಸಿದ್ದರು. ಮಹಾಭಾರ



೧ ವ್ಯಾಘ್ರಮುಖ
೨ ವೃಕಮುಖ
೩ ಸಿಂಹಮುಖ
೪ ವಕ್ಷಮುಖ
೫ ದ್ವೀಪಮುಖ
೬ ಶಗಾಲಯು
೭ ಮಕರಮುಖ
೮ ತರಕೂಮುಖ
೯ ಮಾರ್ಜಾರಮುಖ
೧೦ ಪಮಾಮುಮುಖ
೧೧ ಶಶಘಾತಿಮುಖ
೧೨ ಅವಕಮುಖ
೧೩ ಶಕಮುಖ
೧೪ ಕಂಕಮುಖ
೧೫ ಕುದರಮುಖ
೧೬ ಉಲೂಕ ಮುಖ
೧೭ ಕಾಂಡಮುಖ
೧೮ ಗೃಧ್ರ ಮುಕ
೧೯ ಸೇವಮುಖ
೨೦ ಭೃಂಗರಾಜ ಮುಖ
೨೧ ಆಧುನಿಕ ಸಿಂಹಮುಖ
೨೨ ಭಾಸಮುಖ

ತದ ಯುದ್ಧದಲ್ಲಿ ಕ್ಷತವಿಕ್ಷತನಾದ ಭೀಷ್ಮನು ಶಲ್ಯಚಿಕಿತ್ಸಕರ ಕೌಶಲದಿಂದಾಗಿ ಅನೇಕ ದಿನಗಳ ವರೆಗೆ ಜೀವಹಿಡಿಯುವಂತಾಯಿತು. ಆರ್ಯ ಸೈನಿಕರು ಯುದ್ಧಕ್ಕೆ ಹೊರಡುವಾಗ ತಮ್ಮೊಂದಿಗೆ ಕುಶಲರಾದ ಶಸ್ತ್ರಚಿಕಿತ್ಸಕರನ್ನೂ ಕರೆದುಕೊಂಡು ಹೋಗುತ್ತಿದ್ದರು!

ಉಪಾತಿಷ್ಠನ್ನಥೋ ವೈದ್ಯಾಃ
ಶಲ್ಯೋದ್ಧರಣ ಕೋವಿದಾಃ
ಸರ್ವೋಪಕರಣೈರ್ಯುಕ್ತಾಃ ಕುಶಲೈಃ
ಸಾಧು ಶಿಕ್ಷಿತಾಃ॥
(ಮಹಾಭಾರತ, ಅ. ಪ.)

ಸಾಮ್ರಾಜ್ಯ ವಿಸ್ತರಣೆಗಾಗಿ ಆರ್ಯರು ಆಗ ಮೇಲಿಂದ ಮೇಲೆ ಯುದ್ಧಗಳನ್ನು ಹೂಡಬೇಕಾಗುತ್ತಿತ್ತು. ಹೀಗಾಗಿ ಶಸ್ತ್ರ ಚಿಕಿತ್ಸಕರ ಅವಶ್ಯಕತೆ ಅವರಿಗೆ ಹೆಚ್ಚಾಗಿತ್ತು. ಅಲ್ಲದೆ ಸಮಾಜದಲ್ಲಿಯೂ ಅವರ ಸ್ಥಾನಮಾನ ಹೆಚ್ಚಿನದಿತ್ತು. ಶಲ್ಯಚಿಕಿತ್ಸಕರು ತಮ್ಮ ಕಾರ್ಯದಲ್ಲಿ ಅತ್ಯಂತ ನಿಪುಣರೂ ಆಗಿದ್ದರು. ತೈತ್ತರೀಯ ಸಂಹಿತೆಯಿಂದ ಒಂದು ಉದಾಹರಣೆಯನ್ನು ಇಲ್ಲಿ ಉದಾಹರಿಸಬಹುದು:

‘ಯಜ್ಞಸ್ಯ ಶಿರಚ್ಛಿನ್ನಂ ತೇ ದೇವಾ ಅಶ್ವಿನಾವಬ್ರುವನ್ ಭಿಷಜೌ ವೈಸ್ಥ ಇಂದ್ರ ಯಜ್ಞಸ್ಯ ಶಿರಃ ಪ್ರತಿಹಧತಮಿತಿ ತಾವದ್ ಬ್ರೂತಾಂವರ ವೃಣಾವಹೇ ಗಹ ಏವಂ ನಾವತ್ರಾಪಿ ಗೃಹ್ಯತಾಮಿತಿತಾಭ್ಯಾಮೇತಮಾಶ್ವಿನಮ ಗ್ರಹಣಂ ತತೋ ವೈ ತೋ ಯಜ್ಞಸ್ಯ ಶಿರಃ ಪ್ರತ್ಯಧತ್ತಾಂ’॥

(ತೈತ್ತರೀಯ ಸಂಹಿತೆ ೬, ೪, ೯)

[ಒಮ್ಮೆ ಸುರಾಸುರರ ಯುದ್ಧದಲ್ಲಿ ಇಂದ್ರನು ಯಜ್ಞನ ಶಿರಸ್ಸನ್ನು ಕತ್ತರಿಸಿದಾಗ ದೇವತೆಗಳ ಪ್ರಾರ್ಥನೆಯ ಮೇರೆಗೆ ಅಶ್ವಿನೀದೇವತೆಗಳು ಶಸ್ತ್ರ ಚಿಕಿತ್ಸೆಯಿಂದ ಆ ಯಜ್ಞನ ಶಿರವನ್ನು ಅವನಿಗೆ ಪುನಃ ಜೋಡಿಸಿದರು.]

ಶಸ್ತ್ರ ಚಿಕಿತ್ಸೆಯಲ್ಲಿ ಉಪಯೋಗಿಸಲಾಗುತ್ತಿದ್ದ ಉಪಕರಣಗಳ ವಿಸ್ತೃತ ವಿವರಣೆ ಸುಶ್ರುತ ಸಂಹಿತೆಯಲ್ಲಿ ಬರುತ್ತದೆ. ಶರೀರ–ಮನಗಳಿಗೆ ವೇದನೆಯನ್ನುಂಟು ಮಾಡುವದಕ್ಕೆ ಶಲ್ಯವೆಂದೂ ವೇದನೆಯನು ದೂರಗೊಳಿಸು

ಪಂಕಹವುಗಳಿಗೆ ಯಂತ್ರಗಳೆಂದೂ ಈ ಉಪಕರಣಗಳನ್ನು ವರ್ಗೀಕರಿಸಲಾಗಿದೆ. ಅವಪ್ರಜ್ಞೆಯ ಅಸ್ತಿತ್ವದ ಅರಿವು ಆ ಕಾಲದ ವೈದ್ಯರಿಗೂ ಇತ್ತು. ಶಾರೀರಕ ಶಲ್ಯದಿಂದ ಅವಪ್ರಜ್ಞೆಯೂ ಪೀಡಿತವಾಗುವುದರಿಂದ ಮನಸ್ಸನ್ನೂ ಇದರಲ್ಲಿ ಸಮಾವೇಶಗೊಳಿಸಬೇಕು ಎಂದು ಪ್ರಾಚೀನ ಕಾಲದ ವೈದ್ಯಕೀಯ ತಜ್ಞರು ಶಲ್ಯ-ಯಂತ್ರಗಳ ಬಗೆಗೆ ಪ್ರಥಮ ಅಧ್ಯಾಯದಲ್ಲಿಯೇ ಹೀಗೆ ಬರೆದಿದ್ದಾರೆ.

ಆ ಕಾಲದಲ್ಲಿ ಅನೇಕ ಬಗೆಯ ಯಂತ್ರಗಳನ್ನು ಉಪಯೋಗಿಸಲಾಗುತ್ತಿದ್ದು ಅವುಗಳನ್ನು ಮುಖ್ಯವಾಗಿ ಆಹರಣೋಪಾಯ, ಕ್ರಿಯಾಸೌಕರ್ಯ ಹಾಗೂ ವಿಶೋಧನ ಯಂತ್ರಗಳೆಂದು ಮೂರು ವಿಭಾಗಗಳಲ್ಲಿ ವಿಂಗಡಿಸಲಾಗಿತ್ತು. ಸ್ವಸ್ತಿಕ, ಸಂದಂಶ ಹಾಗೂ ತಾಲಯಂತ್ರಗಳ ವರ್ಣನೆ ಆಹರಣೋಪಾಯದಲ್ಲಿ ಬರುತ್ತದೆ. ರೋಗವನ್ನು ನಿರೀಕ್ಷಿಸುವುದು, ಶಸ್ತ್ರಚಿಕಿತ್ಸಕವಾಗಿ ಪರೀಕ್ಷಿಸುವುದೇ ಮುಂತಾದ ಕಾರ್ಯಗಳನ್ನು ಈ ಯಂತ್ರಗಳ ಸಹಾಯದಿಂದ ಕೈಕೊಳ್ಳಲಾಗುತ್ತಿತ್ತು. ಶಸ್ತ್ರಚಿಕಿತ್ಸೆ ನಡೆಯುತ್ತಿರುವಾಗ ಶರೀರ ಅತ್ತಿತ್ತ ಸರಿದಾಡದಂತೆ ನೋಡಿಕೊಳ್ಳಲು ಕ್ರಿಯಾ ಸೌಕರ್ಯಕ್ಕೆ ಸಂಬಂಧಿಸಿದ ಸಾಧನಗಳನ್ನು ಬಳಸಲಾಗುತ್ತಿತ್ತು. ಯಾವ ಭಾಗ ಶಸ್ತ್ರಕ್ರಿಯೆಗೆ ಒಳಪಡಬೇಕೆಂಬುದನ್ನು ಖಚಿತಪಡಿಸಿಕೊಳ್ಳಲು ಹಾಗೂ ಉಪಕರಣಗಳಿಗೆ ರೋಗಾಣುಗಳು ತಗುಲದಂತೆ ಅವುಗಳನ್ನು ವಿಶುದ್ಧಗೊಳಿಸಲು ವಿಶೋಧನ ಯಂತ್ರಗಳನ್ನು ಉಪಯೋಗಿಸಲಾಗುತ್ತಿತ್ತು.

ಹರಿತವಾದ ೨೪ ಉಪಕರಣಗಳನ್ನೂ ಸಾಧಾರಣ ತೆರನಾದ ೧೦೧ ಉಪಕರಣಗಳನ್ನೂ ಸುಶ್ರುತ ಸಂಹಿತೆಯಲ್ಲಿ ವರ್ಣಿಸಲಾಗಿದೆ. ಆ ಕಾಲದಲ್ಲಿ ಶಸ್ತ್ರಕ್ರಿಯೆಗೆ ಉಪಯೋಗಿಸಲಾಗುತ್ತಿದ್ದ ಉಪಕರಣಗಳಿಗೂ ಇಂದು ಉಪಯೋಗಿಸಲ್ಪಡುವ ಉಪಕರಣಗಳಿಗೂ ಸಾಕಷ್ಟು ಸಾಮ್ಯವಿದೆ. ಆದ್ದರಿಂದಲೇ ಅನೇಕರು ಪ್ರಾಚೀನ ಕಾಲದ ಸಾಧನಗಳನ್ನು ಅನುಕರಿಸಿಯೇ ಇಂದು ಶಸ ಚಿಕಿತ್ಸೆಯಲ್ಲಿ ಉಪಯೋಗಿಸಲ್ಪಡುವ ಸಾಧನಗಳನ್ನು ನಿರ್ಮಿಸಲಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ಸ್ವಸ್ತಿಕ, ನಾಡಿ, ತಾಲ, ಶಲಾಕಾ, ಸಂದಂಶ ಹಾಗೂ ಉಪಯಂತ್ರಗಳೆಂದು ಆರು ವರ್ಗಗಳಲ್ಲಿ ಸಾಮಾನ್ಯತೆರನಾದ ಯಂತ್ರಗಳನ್ನು ವರ್ಗೀಕರಿಸಲಾಗಿದೆ. ಸ್ವಸ್ತಿಕದಲ್ಲಿ ೨೪, ಸಂದಂಶದಲ್ಲಿ ೨, ತಾಲದಲ್ಲಿ, ೨, ನಾಡಿಯಲ್ಲಿ ೮, ಶಲಾಕಾದಲ್ಲಿ ೨೪ ಹಾಗೂ ಉಪಯಂತ್ರದಲ್ಲಿ ೨೫ ಹೀಗೆ ಈ ಸಾಧನಗಳನ್ನು ಸುಶ್ರುತ ಸಂಹಿತೆಯು ಹೆಚ್ಚು ನಿಖರವಾಗಿ ಪುನಃ ವರ್ಗೀಕರಿಸಿದೆ.

ಹರಿತವಾದ ಉಪಕರಣಗಳನ್ನಷ್ಟೇ ಶಸ್ತ್ರಗಳೆಂದು ಆಗ ಕರೆಯಲಾಗುತ್ತಿತ್ತು. ಶಸ್ತ್ರಕ್ರಿಯೆಯಲ್ಲಿ ಶರೀರವನ್ನು ಸೀಳಲು ಒಟ್ಟು ಇಪ್ಪತ್ತು ಬಗೆಯ ಶಸ್ತ್ರಗಳನ್ನು ಉಪಯೋಗಿಸಲಾಗುತ್ತಿತ್ತು. ಅವು ಯಾವವೆಂದರೆ ಮಂಡಲಾಗ್ರ, ಕರಪತ್ರ, ವೃದ್ಧಿಪತ್ರ, ನಖಶಸ್ತ್ರ, ಮುದ್ರಿಕಾ, ಉತ್ಪಲಪತ್ರ, ಅರ್ಧಧಾರ, ಸೂಚಿ, ಕುಜಪತ್ರ, ಆದಿಮುಖ, ಶರಾರಿಮುಖ, ಅಂತರ್ಮುಖ, ತ್ರಿಕೂರ್ಚಕ, ಕುಮಾರಿಕಾ, ಬ್ರಿಹೀಮುಖ, ಆರಾ, ವೇತಸಪತ್ರಕ, ವದ್ರಿಶ, ದಂತಶಕು, ಹಾಗೂ ಎಕ್ಷಿ.

ಅನೇಕ ಬಗೆಯ ಪಶು ಪಕ್ಷಿಗಳ ಮುಖಾಕೃತಿಯನ್ನನುಸರಿಸಿ ಎಲ್ಲ ಬಗೆಯ ಶಸ್ತ್ರಗಳನ್ನೂ ಯಂತ್ರಗಳನ್ನೂ ಆಗ ತಯಾರಿಸಲಾಗುತ್ತಿತ್ತು. ಇವುಗಳಿಂದ ಶಸ್ತ್ರಚಿಕಿತ್ಸೆ ಸರಾಗವಾಗುತ್ತಿತ್ತು. ಈ ಬಗ್ಗೆ 'ಅಷ್ಟಾಂಗ ಹೃದಯ' ದಲ್ಲಿ ವಾಗ್ಭಟನು ಹೀಗೆ ಬರೆದಿದ್ದಾನೆ:

ಸ್ವಸ್ತಿಕ ಯಂತ್ರ ಹದಿನೆಂಟು ಅಂಗುಲದಷ್ಟು ಅಗಲವಾಗಿರುತ್ತವೆ. ಇವು ಸಿಂಹ, ವ್ಯಾಘ್ರ, ತೋಳ, ತಿತ್ತಿರಿ, ಗಿಡುಗ, ನರಿ, ಗರುಡ, ಕ್ರೌಂಚ, ಭೃಂಗರಾಜ ಮುಂತಾದ ಅನೇಕ ಪಶುಪಕ್ಷಿಗಳ ಮುಖಾಕೃತಿಯನ್ನನುಸರಿಸಿ ವಕ್ರವಾಗಿ ತಯಾರಿಸಲಾಗಿದೆ.

ರೋಗಾಣುಗಳಿಂದ ನಂಜಾಗುತ್ತದೆಂಬುದೂ ನಮ್ಮ ಪೂರ್ವಜರಿಗೆ ಗೊತ್ತಿತ್ತು. ಆದ್ದರಿಂದ ಶಸ್ತ್ರೋಪಕರಣಗಳು ಶುದ್ಧವಾಗಿರಲು ಅವರು ಅತ್ಯಂತ ಪರಿಶ್ರಮಪೂರ್ವಕವಾಗಿ ಪ್ರಯತ್ನಿ

ಸುತ್ತಿದ್ದರು. ಶುದ್ಧವಾದ ಬಂಗಾರ ಅಥವಾ ಬೆಳ್ಳಿಗಳನ್ನಲ್ಲದೆ ಇನ್ನಾವ ಧಾತುವಿನಿಂದಲೂ ಶಸ್ತ್ರೋಪಕರಣಗಳನ್ನು ತಯಾರಿಸಬಾರದೆಂಬ ನಿಯಮ ಪ್ರಾಚೀನ ಭಾರತದಲ್ಲಿತ್ತು. ಇವೆರಡರ ಬದಲು ಶುದ್ಧವಾದ ಕಬ್ಬಿಣವನ್ನು ಉಪಯೋಗಿಸಬಹುದೆಂದು ಕಾಲಾಂತರದಲ್ಲಿ ಸುಶ್ರುತನು ಅನುಮತಿಯಿತ್ತ. ಹೀಗಾಗಿ ಪ್ರಾಚೀನ ಕಾಲದಲ್ಲಿ ನಮ್ಮ ದೇಶದ ನಿಪುಣರು ಅತ್ಯಂತ ಶುದ್ಧವಾದ ಕಬ್ಬಿಣವನ್ನು ನಿರ್ಮಿಸಿ ಅವುಗಳಿಂದ ಶಸ್ತ್ರ ಚಿಕಿತ್ಸೆಗೆ ಅಗತ್ಯವಾದ ಉಪಕರಣಗಳನ್ನು ತಯಾರಿಸುತ್ತಿದ್ದರು. ಅಲ್ಲದೆ ಹೀಗೆ ತಯಾರಿಸಿದ ಉಪಕರಣಗಳಿಗೆ ಕ್ಷಾರ, ಜಲ ಹಾಗೂ ತೈಲಗಳ ಲೇಪವನ್ನವರು ಕೊಡುತ್ತಿದ ರು. ಅವುಗಳ ಉಪಯೋಗವೂ ಪ್ರತ್ಯೇಕ ಬಗೆಯ ಶಸ್ತ್ರಚಿಕಿತ್ಸೆಗೆ ಪ್ರತ್ಯೇಕವಾಗಿಯೇ ಇತ್ತು. ಉದಾಹರಣೆಗೆ ಹೇಳುವುದಾದರೆ ಎಲುವನ್ನು ಕತ್ತರಿಸುವಾಗ ಕ್ಷಾರದ ಲೇಪನಕೊಟ್ಟ ಸಾಧನಗಳನ್ನೂ ಮಾಂಸವನ್ನು ಕತ್ತರಿಸುವಾಗ ಜಲ ಲೇಪನವನ್ನೂ ಸ್ನಾಯು ಛೇದನೆಗಾಗಿ ತೈಲದಲೇಪನವಾದ ಉಪಕರಣಗಳನ್ನೂ ನಮ್ಮ ದೇಶದ ತಜ್ಞರು ಬಳಸುತ್ತಿದ್ದರು. ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ನಮ್ಮ ದೇಶದ ಹಳೆಗಾಲದ ಪುಸ್ತಕಗಳನ್ನು ಓದುವಾಗ ನಮ್ಮ ಪೂರ್ವಜರು ವಿದ್ರಧಿಭೇಧನ, ಅಸ್ಥಿಭಂಗ, ಸಂಧಿವಿಶ್ಲೇಷಗಳನ್ನು ತಮ್ಮ ಸಲಕರಣೆಗಳಿಂದ ಪತ್ತೆಹಚ್ಚಿ ಅನೇಕ ವಿಧಾನಗಳನ್ನುಪಯೋಗಿಸಿ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಿದ್ದರೆಂಬುದು ಗೊತ್ತಾಗುವುದು ✡

'ಕಾದಂಬಿನಿ'ಯಿಂದ ಸಾಭಾರ



ನಾನಿನ್ನೂ ಚಿಕ್ಕವನಿದ್ದಾಗ ಒಂದು ದಿನ ಸಂಗಾತಿಯೊಡನೆ ಜಗಳಾಡಿ ಮನೆಗೆ ಬಂದೆ. ಮಾತು ವಿಕೋಪಕ್ಕೆ ಹೋಗಿದ್ದರಿಂದ ನಾನವನನ್ನು ಥಳಿಸಿದ್ದೆ. ಹೊಡೆಸಿಕೊಂಡಾತ ಹಾಗೆಯೆ ಸುಮ್ಮನಿದ್ದಾನೆಯೆ ? ಆತನೂ ನನ್ನನ್ನು ಥಳಿಸಿದ. ಮನೆಗೆ ಬರುವ ಹೊತ್ತಿಗೆ ಮೈತುಂಬಾ ಬಾಸುಂಡೆಗಳು ಎದ್ದಿದ್ದವು. ತಾಯಿ ಅದನ್ನು ನೋಡಿ ಗಾಬರಿಯಿಂದ "ಇದೇನು ಮಗೂ, ಇಷ್ಟೊಂದು ಬಾಸುಂಡೆಗಳು!" ಎಂದು ಕೇಳಿದಳು. ಸಂಗಾತಿಯೊಬ್ಬ ನನ್ನನ್ನು ಥಳಿಸಿದ್ದರಿಂದ ಹೀಗಾಗಿದೆ ಎಂದು ನಾನು ಉತ್ತರಿಸಿದೆ. "ಎರಡೂ ಕೈಗಳು ಕೂಡದೆ ಚಪ್ಪಾಳೆಯಾಗುವುದಿಲ್ಲ ಮಗು," ಎನ್ನುತ್ತಾ ಅವಳು ನನ್ನನ್ನು ಹಿತ್ತಿಲಿಗೆ ಕರೆದುಕೊಂಡು ಹೋದಳು. ಸೂರ್ಯಪ್ರಕಾಶದಲ್ಲಿ ದೂರದ ಗುಡ್ಡಗಳು ಥಳ ಥಳ ಹೊಳೆಯುತ್ತಿದ್ದವು. "ಮಗೂ, ನಿನಗೆ ಹೊಡೆದಾತನನ್ನು ಚೆನ್ನಾಗಿ ಬಯ್ಯು, ನೋಡೋಣ," ತಾಯಿ ಹೇಳಿದಳು. ನಾನು ಆತನನ್ನು ಮನ ಬಂದಂತೆ ಬಯ್ದೆ. ದೂರದ ಗುಡ್ಡಗಳಿಂದ ಧ್ವನಿ ಪ್ರತಿಧ್ವನಿ ಬಯ್ಗಳೆಲ್ಲ ತಿರುಗಿ ನನ್ನ ಕಿವಿಗೇ ಬಂದು ಅಪ್ಪಳಿಸಿದವು. "ಮಗೂ, ದೇವರು ನಿನಗೆ ಒಳ್ಳೆಯದನ್ನು ಮಾಡಲಿ" ಎಂದು ಗಟ್ಟಿಯಾಗಿ ಒಂದು ಸಲ ಹೇಳು ನೋಡೋಣ," ತಾಯಿ ಹೇಳಿದಳು. ನಾನು ಹಾಗೆಯೆ ಮಾಡಿದೆ. ಅದೇ ವಾಕ್ಯ ಪ್ರಶಾಂತ ವಾತಾವರಣದಲ್ಲಿ ಪ್ರತಿಧ್ವನಿಯ ರೂಪದಲ್ಲಿ ಅಲೆಅಲೆಯಾಗಿ ಪಸರಿಸಿ ತಿರುಗಿ ನನ್ನ ಕಿವಿಗೇ ಅಪ್ಪಳಿಸಿತು. ಈ ಘಟನೆ ನಡೆದು ಹೋಗಿ ವರ್ಷಗಳೇ ಸರಿದುಹೋಗಿದ್ದರೂ ಅದರಿಂದ ಕಲಿತ ಪಾಠವನ್ನು ನಾನು ಮರೆತಿಲ್ಲ.

—ಎಲ್. ಬಿ ಮೇಯರ್

ನಗೆಮಲ್ಲಿಗೆ

ವರ್ಗಾವಣೆ

ಬೆಳಗಿನ ಜಾವ ಎರಡು ಗಂಟೆಗೆ ಫೋನ್ ಬಾರಿಸಿಕೊಳ್ಳಲಾರಂಭಿಸಿತು. ರೋಗದಿಂದ ನರಳುತ್ತಿದ್ದ, ಪ್ರೈವೇಟಾಗಿ ಟ್ರೀಟ್‌ಮೆಂಟ್ ತೆಗೆದುಕೊಳ್ಳುತ್ತಿದ್ದ ರೋಗಿ ಫೋನ್ ಮಾಡುತ್ತಿದ್ದ. ಆತ ತುಂಬಾ ಕ್ಷೋಭೆಗೊಂಡಂತೆ ಕಾಣುತ್ತಿತ್ತು.

"ನಿಮಗೆ ಬಿಲ್ ಪಾವತಿ ಮಾಡಬೇಕಾಗಿತ್ತಲ್ಲ. ಡಾಕ್ಟರ್. ಅದರ ಬಗ್ಗೆ ಹೇಳುತ್ತಿದ್ದೇನೆ. ಆ ಹಣವನ್ನು ನಾನು ಕೊಡಲಾರೆ. ಈ ವಿಷಯದ ಬಗೆಗೆ ನನಗೆ ನಿದ್ದೆ ಬರದಷ್ಟು ತುಂಬಾ ಯೋಚನೆಯಾಗಿತ್ತು. ಆದುದರಿಂದ ತಮಗೆ ಫೋನ್ ಮಾಡಿ ತಿಳಿಸಿದೆ."

"ಅದು ಸರಿ; ಅದನ್ನು ನೀವು ಯಾಕ್ರೀ ನನಗೆ ತಿಳಿಸಬೇಕಾಗಿತ್ತು, ಈ ಸರಿ ಹೊತ್ತಿನಲ್ಲಿ. ಈಗ ನನಗೆ ನಿದ್ದೆ ಬರದಂತಾಗಿದೆ."

ಡಾಕ್ಟರ್ ಕಿರುಚಿಗೊಂಡರು.

—ಎಸ್. ವಿಶ್ವನಾಥ

ನೋವೇ ನೋವು

ಮೂರು ದಿನದಿಂದ ಕೆಲಸಕ್ಕೆ ಹಾಜರಾಗದ ಆ ತುಂಟ ಹುಡುಗನಿಗೆ ಯಜಮಾನ ಬೆತ್ತ ಹಿಡಿದು ಗದರಿದ.

"ಏನೋ, ಮೊನ್ನೆ ಯಾಕೆ ಬರಲಿಲ್ಲ?"

"ಕಾಲು ನೋವು, ಸಾರ್."

"...ನಿನ್ನೆ?"

"ಸೊಂಟ ನೋವು."

"ಇವತ್ತು?"

"ತಲೆ ನೋವು."

ಯಜಮಾನ ಕಿಡಿಕಿಡಿಯಾಗಿ ಅರಚಿದ: "ಮತ್ತೆ-ನಾಳೆ?"

"ಬೇಡ ಸಾರ್— ಆ ಬೆತ್ತದಿಂದ ಹೊಡೆದರೆ ನಾಳೆ ಖಂಡಿತ ಸರ್ವಾಂಗ ನೋವು."

ಆ ಭಂಡ ಹುಡುಗ ನುಡಿದ.

—ಕಕ್ಕೆನೇಜ ವಾಸುದೇವರಾವ್

ಒಳ್ಳೇದಾಯ್ತು

ಎಂಕ— "ಇವತ್ತು ಅರ್ಧ ಗಂಟೆ ಹೆಚ್ಚು ಕೆಲಸ ಮಾಡಲು ಮ್ಯಾನೇಜರ ಹೇಳಿದ್ದಾರಂತೆ."

ಶೀನ— "ಸರಿ, ಅರ್ಧ ಗಂಟೆ ಹೆಚ್ಚು ನಿದ್ದೆ ಮಾಡಲು ಅವಕಾಶವಾಯ್ತು."

ಭೂಮಿಯ ತೂಕ

"ಭೂಮಿಯ ತೂಕ ಎಷ್ಟು ಸಾರ್?" ಹತ್ತು ವರುಷದ ಮರಿಸಿದ್ದ ಮೇಸ್ಟ್ರನ್ನು ಪ್ರಶ್ನಿಸಿದ.

ಉತ್ತರ ತಿಳಿಯದ ಮೇಸ್ಟ್ರು ತಮ್ಮ ಬುದ್ಧಿ ಉಪಯೋಗಿಸಿ: "ಇದೊಂದು ಒಳ್ಳೆಯ ಪ್ರಶ್ನೆ. ನಾಳೆಯ ಹೊತ್ತಿಗೆ ನಿಮ್ಮಲ್ಲಿ ಯಾರಾದರೂ ಇದಕ್ಕೆ ಉತ್ತರ ಹೇಳಬಲ್ಲಿರೇನೋ ನೋಡೋಣ" ಎಂದರು.

ಮೇಸ್ಟ್ರು ರಾತ್ರಿಯೆಲ್ಲಾ ಹುಡುಕಿ ಆ ಪ್ರಶ್ನೆಗೆ ಉತ್ತರ ಕಂಡು ಕೊಂಡರು. ಮರುದಿನ ತರಗತಿಯಲ್ಲಿ: "ಯಾರಾದರೂ ಉತ್ತರ ಹೇಳಬಲ್ಲಿರಾ?" ಎಂದು ಕೇಳಿದರು. ಯಾರೂ ಹೇಳದಿರಲು, ಮೇಸ್ಟ್ರು, ತಾವು ಕಂಡು ಹಿಡಿದಿದ್ದ ಉತ್ತರವನ್ನು ಹೆಮ್ಮೆಯಿಂದ ಹೇಳಿದರು. ವಿದ್ಯಾರ್ಥಿಗಳೆಲ್ಲ ಮೇಸ್ಟ್ರರ ಉತ್ತರ ಕೇಳಿ ತಲೆದೂಗುತ್ತಿರುವಂತೆಯೇ ಮರಿಸಿದ್ದ ಎದ್ದು ನಿಂತು: "ಸಾರ್ ತಾವು ತಿಳಿಸಿದ ತೂಕ ಜನರನ್ನು ಸೇರಿಸಿಯೋ ಅಥವಾ ಜನರನ್ನು ಬಿಟ್ಟೋ?" ಎಂದು ಮರು ಸವಾಲ್ ಹಾಕಿದ,

—ಕುಮಾರ ಅರಕಲೆವಾಡ

ಆನೆ–ಮೊಲ

ಆನೆಮರಿಯಂಥ ಹೆಂಗಸೊಬ್ಬಳು ಡಾಕ್ಟರರ ಬಳಿಗೆ ಔಷಧಕ್ಕಾಗಿ ಬಂದಳು. ಅವಳ ಪರೀಕ್ಷೆಯ ನಂತರ ಡಾಕ್ಟರರು "ಇನ್ನು ಮೇಲೆ ನೀವು ಪೂರ್ಣವಾಗಿ ಅನ್ನಹಾರ ಬಿಡಬೇಕು. ಅಲ್ಲದೆ, ಗಡ್ಡೆ-ಗೆಣಸು, ಹಣ್ಣು ಇತ್ಯಾದಿ ಸ್ವಲ್ಪ ತಿನ್ನಿರಿ" ಎಂದರು.

ನಂತರ ಅವಳ ಶರೀರವನ್ನು ನೋಡಿ ಮತ್ತೊಮ್ಮೆ ಏನೋ, ನೆನಪಾದಂತಾಗಿ,

"ನೀವು ಇನ್ನು ಮೇಲೆ 'ಮೊಲ' ಎಂದು ತಿಳಿದುಕೊಂಡರೆ ಒಳ್ಳೆಯದು" ಎಂದರು.

ವಿನಾಯಕ ಕುಲಕರ್ಣಿ

ನಿನ್ನೆ ಬೆಳಿಗ್ಗೆ

ಪುಟ್ಟ ಸುಮಾ, ಅಂದು ಸ್ಕೂಲಿಗೆ ಬಂದಾಗ, ಅವರ ಮೇಡಂ ಹೇಳಿದರು "ನೋಡಮ್ಮ, ಸುಮಾ, ನೀನು ದಿನವೂ ಬೆಳಿಗ್ಗೆ ಎದ್ದ ತಕ್ಷಣ ಚೆನ್ನಾಗಿ ಹಲ್ಲುಜ್ಜಿ ಕೊಂಡೇ ಸ್ಕೂಲಿಗೆ ಬರಬೇಕು; ಈಗ ನೋಡು, ನೀನು, ಹಲ್ಲೇ ಉಜ್ಜಿಲ್ಲ; ಅದಕ್ಕೆ ಇವತ್ತು ಬೆಳಿಗ್ಗೆ ನೀನು ಬ್ರೆಡ್ ತಿಂದುಕೊಂಡು ಬಂದಿರುವುದು ಸುಲಭವಾಗಿ ಹೇಳ್ಬಹುದು."

ಸುಮ ನಗುತ್ತಾ ಹೇಳಿದಳು- ಇಲ್ಲಾ, ಮೇಡಂ, ನೀವು ಹೇಳಿದ್ದು ತಪ್ಪು... ನಾನಿವತ್ತು ಬ್ರೆಡ್ ತಿನ್ನಲೇ ಇಲ್ಲ. ನಾನು ಬ್ರೆಡ್ ತಿಂದಿದ್ದು ನಿನ್ನೆ ಬೆಳಿಗ್ಗೆ!"

—ಸಿ. ಮಾಲಿನಿ ವಾಮನರಾವ್

ಕರತಾಡನ

ಅವರೊಬ್ಬ ಮಹನೀಯರು ಪ್ರಸಿದ್ಧ ಭಾಷಣಕಾರರು ಹಳ್ಳಿಯೊಂದಕ್ಕೆ ಭೇಟಿ ಇತ್ತರು. ಕಲ್ಲು ಹಾಕುವ ಸಮಾರಂಭ. ಭರ್ಜರಿ ಭಾಷಣ ಬಿಗಿದರು.

ಆ ಹಳ್ಳಿಯ ಮುಗ್ಧ ಸಭಿಕರು ಅವರ ಭಾಷಣದುದ್ದಕ್ಕೂ ಅನಾವಶ್ಯಕವಾಗಿ ನಗುತ್ತಿದ್ದರು. ಇಲ್ಲವೇ ಚಪ್ಪಾಳೆ ತಟ್ಟುತ್ತಿದ್ದರು.

ಭಾಷಣವೆಲ್ಲ ಮುಗಿದ ಮೇಲೆ ಆ ಮಹನೀಯರು ಸ್ಥಳೀಯ ಹಿರಿಯ ಪುಢಾರಿಯನ್ನು ಕೇಳಿದರು.

"ಅದೇಕೆ ಈ ಜನ ಸುಮ್ಮ ಸುಮ್ಮನೆ ನಗುತ್ತಿದ್ದರು ಮತ್ತು ಚಪ್ಪಾಳೆ ತಟ್ಟುತ್ತಿದ್ದರಲ್ಲಾ?"

ಆ ಪುಢಾರಿ ತಕ್ಷಣ ಬಾಯ್ತೆರೆದು ತೊದಲಿದ: "ನಾನೇ ಹೇಳಿದ್ದೆ ಸ್ವಾಮಿ, ಭಾಷಣ ಅರ್ಥವಾಗಲೀ, ಆಗದಿರಲಿ ಆಗಾಗ್ಗೆ ನಗ್ತಾ ಇರಿ ಮತ್ತು ಚಪ್ಪಾಳೆ ತಟ್ತಾ ಇರಿ ಎಂದು!"

ಸಿ. ಹಿ. ಪ್ರಾತಃಕಾಲ

ಜುಲ್ಮಾನೆ

ಒಂದು ಬಾರಿ ಒಬ್ಬ ವ್ಯಕ್ತಿ ಲಂಡನ್ ಮ್ಯೂಜಿಯಮ್ ವೀಕ್ಷಿಸಲು ತೆರಳಿದ. ನಂತರ ಅಲ್ಲಿ ಸಿಗರೇಟು ಸೇದಲು ಪ್ರಾರಂಭಿಸಿದಾಗ, ಅಲ್ಲಿಯ ನೌಕರ ನುಡಿದ, "ಇಲ್ಲಿ ಧೂಮ್ರಪಾನ ನಿಷೇಧ. ಇದನ್ನು ಉಲ್ಲಂಘಿಸಿದರೆ ತಾವು ಹತ್ತು ಷಿಲ್ಲಿಂಗ್ ಜುಲ್ಮಾನೆ ನೀಡಬೇಕಾಗುತ್ತದೆ."

ಆ ವ್ಯಕ್ತಿ ಸಿಗರೇಟು ಸೇದುತ್ತಾ, ನೌಕರನಿಗೆ ಒಂದು ಪೌಂಡಿನ ನೋಟು ಕೊಡುತ್ತಾ ಹೇಳಿದ, "ತೆಗೆದುಕೊ ಜುಲ್ಮಾನೆ."

ನೌಕರ ಆಶ್ಚರ್ಯದಿಂದ ನುಡಿದ, "ನಿಮಗೆ ವಾಪಸ್ ಕೊಡಬೇಕಾದ ಹತ್ತು ಷಿಲಿಂಗ್ ನನ್ನಲ್ಲಿಲ್ಲ."

"ಪರವಾಗಿಲ್ಲ." ಎಂಬುದಾಗಿ ನುಡಿದು ಆ ನೌಕರನಿಗೆ ಸಿಗರೇಟು ನೀಡಿ, ಸಿಗರೇಟು ಸೇದುವಂತೆ ತಿಳಿಸಿ ನುಡಿದ, "ಈಗ ಒಂದು ಪೌಂಡು ಪೂರ್ಣವಾಯಿತು."

—ಎನ್. ಕೆ. ನರಸಿಂಹಮೂರ್ತಿ

ದೀರ್ಘಾಯುಷ್ಯ

ನೂರು ವರ್ಷಗಳಿಗಿಂತ ಹೆಚ್ಚಿಗೆ ಬದುಕಬೇಕಾದರೆ ಈ ಶೀಷೆಯಲ್ಲಿರುವ ಟಾನಿಕ್ ಅನ್ನು ಕುಡಿಯಲೇಬೇಕು. ನೋಡಿ ನನ್ನ ವಯಸ್ಸು ೨೫೦" ಎಂದು ರಸ್ತೆಯಲ್ಲಿ ಒಬ್ಬ ಯುವಕ ಚೀರುತ್ತಿದ್ದ. ಅವನ ಶಿಷ್ಯ ನೆರೆದವರಿಗೆಲ್ಲಾ ತೋರಿಸುತ್ತಾ ಬೆಲೆ ವಿವರಗಳನ್ನು ತಿಳಿಸುತ್ತಿದ್ದ. ರಾಯರು ಅವನನ್ನು ಕೇಳಿದರು. "ಏನಯ್ಯಾ, ಅವನು ಹೇಳುತ್ತಿರುವುದು ನಿಜವೇ?" ಶಿಷ್ಯ ಉತ್ತರಿಸಿದ, "ನನಗೆ ತಿಳಿಯದು ಸಾರ್. ನಾನು ಇವರ ಜೊತೆ ಕೆಲಸ ಮಾಡಲು ಆರಂಭಿಸಿ ೧೫೦ ವರ್ಷಗಳಾಯಿತು. ಅಷ್ಟೇ!"

—ಶ್ರೀಮತಿ ಆರ್. ಕಿರಣ


ಎಲ್ಲಾ ಋತು
ಸಂದರ್ಭಗಳಿಗೂ
ಇವೆ ಅಪ್ರತಿಮ
ಸೀರೆಗಳು
MAFATLAL GROUP
ನಿಜವಾಗಿಯೂ, ಮಫತಲಾಲ ಗ್ರುಪ್ ಅವರ
ಬಟ್ಟೆಗಳು ಅನುಪಮವಾಗಿರುತ್ತವೆ !

ಈ ಜಗತ್ತು ಹೇಗೆ ಕೊನೆಗೊಳ್ಳಬಹುದು?

ಅಮೇರಿಕದ ವೈಜ್ಞಾನಿಕ ಸಾಹಿತ್ಯ ಕ್ಷೇತ್ರವನ್ನು ಸಾಕಷ್ಟು ಕೃಷಿ ಮಾಡಿದವರಲ್ಲಿ ಬಾಬ್ ಅಲಿಸನ್ ಒಬ್ಬರು. ಇತ್ತೀಚೆ ಅವರು ಅನೇಕ ವಿಜ್ಞಾನಿಗಳನ್ನು ಸಂದರ್ಶಿಸಿ, ಜಗತ್ತು ಯಾವ ರೀತಿಯಲ್ಲಿ ಕೊನೆಗೊಳ್ಳಬಹುದು? ಎಂದು ಪ್ರಶ್ನಿಸಿದಾಗ ಅವರಿಂದ ಮೂಡಿಬಂದ ಅಭಿಪ್ರಾಯಗಳು ಈ ಲೇಖನ ರೂಪುಗೊಳ್ಳಲು ಕಾರಣವಾದವು. ಇಲ್ಲಿ ಕೊಟ್ಟ ಕೆಲವು ಅಭಿಪ್ರಾಯಗಳು ಸಂಭಾವ್ಯದ ಪರಿಧಿಯಾಚೆ ಹೋಗಬಹುದೆನಿಸಿದರೂ ಅವು ವಿಜ್ಞಾನಿಗಳ ಮನೋವಿಲಾಸವನ್ನು ಪರಿಚಯಿಸುವುದೆಂಬ ದೃಷ್ಟಿಯಿಂದ ಈ ಲೇಖನವನ್ನೋದಬಹುದು. ವಿನಾಶವನ್ನು ಚಿತ್ರಿಸುವಲ್ಲಿಯೂ ಅವರ ಕಾಲ್ಪನಿಕತೆ ಎಷ್ಟು ಸೃಜನಶೀಲವಾಗಿರುತ್ತದೆಂಬುದಕ್ಕೆ ಈ ಲೇಖನ ಒಂದು ನಿದರ್ಶನ.

–ಸಂ.

ಕೆಂಪು ಸೂರ್ಯ

ಯೇಸುವಿನ ಪರಮ ಶಿಷ್ಯರಲ್ಲೊಬ್ಬನಾದ ಸಂತ ಪೀಟರನು ಈ ಭೂಮಿ ಉರಿದು ಧ್ವಂಸವಾಗುವುದೆಂದು ಭವಿಷ್ಯ ನುಡಿದಿದ್ದ. ಎರಡು ಸಾವಿರ ವರ್ಷಗಳ ನಂತರ ಅನೇಕ ವಿಜ್ಞಾನಿಗಳು ಅವನ ಈ ಮಾತನ್ನು ಒಂದು ಕರಾರಿಗೊಳಪಟ್ಟು ಸಮರ್ಥಿಸುತ್ತಾರೆ. ಹಾಗಾಗುವಷ್ಟರಲ್ಲಿಯೇ ಈ ಪೃಥ್ವಿಯು ಇನ್ನಾವುದೇ ಕಾರಣದಿಂದ ಉಧ್ವಸ್ತಗೊಂಡಿರಬಾರದು ಎಂಬುದೇ ಆ ಕರಾರು.

ಖಗೋಲಶಾಸ್ತ್ರಜ್ಞರು ಉಳಿದೆಲ್ಲ ನಕ್ಷತ್ರಗಳ ಇತಿಹಾಸವನ್ನೂ ಯಥಾವತ್ತಾಗಿ ತಿಳಿದುಕೊಂಡಿರುವುದರಿಂದ ನಮಗೆ ತುಲನಾತ್ಮಕವಾಗಿ ಅತಿ ಸಮೀಪದ ನಕ್ಷತ್ರವಾದ ಸೂರ್ಯನಿಗೂ ಉಳಿದ ನಕ್ಷತ್ರಗಳಿಗೆ ಒದಗಿದ ಗತಿ ಒದಗುವುದೆಂದು ಅನುಮಾನವಿಲ್ಲದೆ ಭಾವಿಸಬಹುದು. ಅರ್ಥಾತ್ ಲಕ್ಷಾಂತರ ವರ್ಷಗಳ ಬಳಿಕ ಸೂರ್ಯಗೋಲ ಆರತೊಡಗಿ ಅದರ ಆಕಾರ ವಿಸ್ತಾರಗೊಳ್ಳುವುದು. ಹೀಗೆ ವಿಸ್ತಾರಗೊಂಡ ಗೋಲವು ಶುಕ್ರಗ್ರಹದ ಪರಿಧಿಯನ್ನು ಸಮೀಪಿಸುವುದೆಂದು ಡಾ. ಚಾರ್ಟ್ರಂಡರು ಹೇಳಿದರೆ ಸೂರ್ಯಗೋಲ ಪೃಥ್ವಿಯ ಪರಿಧಿಯನ್ನು ತಾಕುವಷ್ಟು ವಿಸ್ತಾರಗೊಳ್ಳುವುದೆಂದೂ ಹಾಗೆ ಆಗುವ ಮೊದಲು ಇಡೀ ಪೃಥ್ವಿ ಭಸ್ಮೀಭೂತವಾಗುವುದೆಂದೂ ಡಾ. ಬೀವರ್ಲೆ ಲಿಂಡ್ಸ್‌ರಂತಹ ವಿಜ್ಞಾನಿಗಳು ಭವಿಷ್ಯ ನುಡಿಯುತ್ತಾರೆ. ನಾನು ಸಂದರ್ಶಿಸಿದ ವಿಜ್ಞಾನಿಗಳೆಲ್ಲರೂ ಸುಮಾರು ನಾಲ್ಕೈದು ಬಿಲಿಯನ್ ವರ್ಷಗಳ ನಂತರ ಹೀಗಾಗುವುದೆಂಬ ಒಮ್ಮತದ ನಿರ್ಧಾರವನ್ನು ಪ್ರಕಟಿಸಿದರು.

ಆದರೆ ಆ ವೇಳೆಗೆ ನಾವಾರೂ ಜೀವಂತ ಉಳಿದಿರುವುದಿಲ್ಲ. ಸೂರ್ಯಗೋಲ ಕ್ರಮೇಣ

ತಣ್ಣಗಾಗುತ್ತ ನಡೆದರೂ ಅದರ ಆಕಾರ ದೊಡ್ಡದಾಗಿ ಅದು ಪೃಥ್ವಿಗೆ ಹತ್ತಿರವಾಗುವುದರಿಂದ ಆಗ ಇಲ್ಲಿ ಬಿಸಿಯೇರತೊಡಗುವುದು. ತತ್ಪರಿಣಾಮವಾಗಿ ಸಕಲ ಜೀವಜಾತಗಳೂ ನಾಶವಾಗುವವು.

ಸುಮಾರಾಗಿ ಎಲ್ಲ ನಕ್ಷತ್ರಗಳೂ ಇಂತಹ ಸ್ಥಿತಿಯನ್ನು ತಲುಪಿದ ನಂತರ ತಮ್ಮಲ್ಲೇ ಮುದುಡಿಕೊಳ್ಳುವುದರಿಂದ ನಕ್ಷತ್ರಗಳೊಳಗೆ ಕೋಟ್ಯಂತರ ಅಂಶಗಳಷ್ಟು ಬಿಸಿಯೇರುತ್ತದೆ. ಆದರೆ ಸೂರ್ಯಗೋಲಕ್ಕೆ ಹಾಗಾಗದೆ ಅದು ಶ್ವೇತ ಕುಬ್ಜದ (White dwarf) ಸ್ಥಿತಿಯನ್ನು ತಲುಪುವುದೆಂದು ಡಾ. ಚಾಟ್ರ್ಜಿಂಡರು ಹೇಳುತ್ತಾರೆ. ಆಗ ಸೂರ್ಯಗೋಲದ ಗುರುತ್ವ ಎಷ್ಟು ಅಧಿಕವಾಗಿರುವುದೆಂದರೆ ಒಂದು ಮುಷ್ಟಿಯಷ್ಟು ಸೂರ್ಯಗೋಲದ ಪದಾರ್ಥ ಸಾವಿರಾರು ಟನ್ನುಗಳಷ್ಟು ತೂಗುವುದು. ಅನಂತರದ ಅವಧಿಯಲ್ಲಿ ಸೂರ್ಯಗೋಲ ಕ್ರಮೇಣವಾಗಿ ಆರತೊಡಗಿ ಮುಂದೆ ಅದು ನಿರ್ಜೀವವಾದ ಕರಿಯ ಉಂಡೆಯಾಗಿ ಉಳಿಯುವುದು.

ಚಂದ್ರನಿಂದ ಪ್ರಳಯ!

ದೀರ್ಘಾವಧಿಯಲ್ಲಿ ಚಂದ್ರನಿಂದಲೂ ನಮಗೆ ಅಪಾಯ ತಪ್ಪಿಲ್ಲ. ಭರತಿ-ಓಹಟಿಗಳು ನಡೆಯುವುದು ಚಂದ್ರನಿಂದಲೇ. ಇದು ಕಾಲಾಂತರದಲ್ಲಿ ಪೃಥ್ವಿಯು ತನ್ನ ಅಕ್ಷದ ಸುತ್ತ ತಿರುಗುವ ವೇಗವನ್ನು ತಗ್ಗಿಸುತ್ತದೆ. ಫಲವಾಗಿ ದಿನದ ಅವಧಿ ಹೆಚ್ಚಾಗುತ್ತದೆ. (ನಾಲ್ವತ್ತುಕೋಟಿ ವರ್ಷಗಳ ಹಿಂದೆ ದಿನಕ್ಕೆ ೨೧ ಗಂಟೆಗಳಿದ್ದವು. ಇಂದು ದಿನಕ್ಕೆ ೨೪ ಗಂಟೆಗಳು.)

ಸಮುದ್ರದ ತೆರೆಗಳೂ ಚಂದ್ರನನ್ನು ಆಚೆಗೆ ತಳ್ಳುತ್ತವೆ. ಹೀಗಾಗಿ ಸಮುದ್ರದ ಮೇಲೆ ಚಂದ್ರನ ಪ್ರಭಾವ ಕಡಿಮೆಯಾಗುವುದಾದರೂ ಸೂರ್ಯನ ಪ್ರಭಾವ ಇದ್ದೇ ಇರುವುದು. ಹೀಗಾಗಿ ಪೃಥ್ವಿಯ ಅಕ್ಷ ಪರಿಭ್ರಮಣ ಇನ್ನೂ ಕುಂಠಿತಗೊಳ್ಳುವುದು.

ಈ ವೇಳೆಗೆ ಚಂದ್ರ ಪೃಥ್ವಿಯತ್ತ ಆಕರ್ಷಿತನಾಗತೊಡಗುವನು. ಅವನು ೬೦೦೦ ಮೈಲುಗಳಷ್ಟು ಪೃಥ್ವಿಗೆ ಹತ್ತಿರವಾದಾಗ ಪ್ರತಿ ೯೦ ನಿಮಿಷಕ್ಕೊಂದು ಸಲ ಪೃಥ್ವಿಯನ್ನು ಸುತ್ತತೊಡಗುತ್ತಾನೆ. ಆಗ ಚಂದ್ರನ ಗುರುತ್ವಾಕರ್ಷಣ ಶಕ್ತಿಯಿಂದಾಗಿ ಸಮುದ್ರದಲ್ಲಿ ನೂರಾರು ಅಡಿ ಎತ್ತರದ ತೆರೆಗಳು ಏಳತೊಡಗಿ ಜಲಪ್ರಳಯವಾಗುವುದು.

ಚಂದ್ರ ಇನ್ನೂ ಹತ್ತಿರವಾದ ಕೂಡಲೇ ಒಡೆದು ಚೂರಾಗಿ ಚಂದ್ರನ ದೊಡ್ಡ ತುಣುಕುಗಳು ಪ್ರತ್ಯೇಕವಾಗಿ ಪೃಥ್ವಿಯನ್ನು ಸುತ್ತುವರಿಯುವವು. ಸಣ್ಣ ತುಣುಕುಗಳು ಉಲ್ಕೆಯ ರೂಪದಲ್ಲಿ ಮಳೆಗರೆಯುವವು.

ಅನೇಕ ವಿಜ್ಞಾನಿಗಳು ಈ ವಿಚಾರವನ್ನು ಒಪ್ಪುವುದಿಲ್ಲ. ವಿಚಾರವನ್ನು ಒಪ್ಪುವವರಾದರೂ ಆ ವೇಳೆಗೆ ಸೂರ್ಯಗೋಲ ದೊಡ್ಡದಾಗಿರುವುದರಿಂದ ಪೃಥ್ವಿಯ ಮೇಲೆ ಜೀವಿಗಳು ಬದುಕುಳಿದಿರುವುದಿಲ್ಲವಾದ್ದರಿಂದ ಈ ಭಯ ನಮಗಿಲ್ಲ ಎಂದು ಹೇಳುತ್ತಾರೆ.

ಗುರುಗ್ರಹದ ಪ್ರಭಾವ

ಇತ್ತೀಚೆ ಗ್ರಿಬಿನ್ಸ ಹಾಗೂ ಪ್ಲೇಜ್‌ಮನ್ ಎಂಬಿಬ್ಬರು 'ಗುರುಗ್ರಹದ ಪ್ರಭಾವ'ವೆಂಬ ಪುಸ್ತಕವನ್ನು ಬರೆದು ಹೊಸದೊಂದು ವಾದವನ್ನು ಮುಂದಿಟ್ಟಿದ್ದಾರೆ. ೧೯೮೨ ರಲ್ಲಿ ಸೌರ ಮಂಡಲದ ಎಲ್ಲ ಗ್ರಹಗಳೂ ಒಂದೇ ಸಾಲಿನಲ್ಲಿ ಬರುವುದರಿಂದ ಆಗ ಇಲ್ಲಿ ಪೃಥ್ವಿಯ ಮೇಲೆ ಭೂಕಂಪ, ಮಹಾಪೂರ ಇತ್ಯಾದಿಯಾಗಿ ಅನೇಕ ಉತ್ಪಾತಗಳು ಸಂಭವಿಸುವವೆಂಬುದೇ ಆ ವಾದ. ಗ್ರಹಗಳು ಹೀಗೆ ಒಟ್ಟುಗೂಡಿದಾಗ ಸಮುದ್ರದ ತೆರೆಗಳ ಮೇಲೆ ಅವುಗಳ ಗುರುತ್ವಾಕರ್ಷಣದ ಪ್ರಭಾವ ಶೇಕಡಾ ಒಂದರಷ್ಟು ಮಾತ್ರ ಹೆಚ್ಚಾಗುವುದರಿಂದ ಈ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬೇಕಾಗಿಲ್ಲವೆಂದು ಡಾ. ಮುಲ್ ಹಾಲಂಡರು ಹೇಳುತ್ತಾರೆ,

ಕ್ಷುದ್ರ ಗ್ರಹಗಳಿಂದ ದಾಳಿ

೧೯೬೮ರಲ್ಲಿ ಇಕಾರಸ್ ಎಂಬ ಕ್ಷುದ್ರ ಗ್ರಹ

ಗಂಟೆಗೆ ೬೬,೦೦೦ ಮೈಲುಗಳ ವೇಗದಲ್ಲಿ ಪೃಥ್ವಿಯನ್ನು ಸಮೀಪಿಸಿ ನಾಲ್ವತ್ತು ಲಕ್ಷ ಮೈಲುಗಳಷ್ಟು ದೂರವಿರುವಾಗಲೇ ಪೃಥ್ವಿಯ ಕಕ್ಷೆಯಾಚೆ ಸಾಗಿಹೋಯಿತು. ಇದು ಪೃಥ್ವಿಯನ್ನು ಅಪ್ಪಳಿಸಿ ಹಾನಿಯುಂಟು ಮಾಡುವ ಸಂಭವ ತೀರ ಕಡಿಮೆಯೆಂದು ಅನೇಕ ವಿಜ್ಞಾನಿಗಳು ಭವಿಷ್ಯ ನುಡಿದಿದ್ದರೂ ಕೆಲ ಯುರೋಪಿಯನ್ ದೇಶಗಳಲ್ಲಿ ಭಯಭೀತರಾದ ಜನ ಪ್ರಾಣ ರಕ್ಷಣೆಗಾಗಿ ನಿರ್ಜನ ಪ್ರದೇಶಗಳನ್ನಾಶ್ರಯಿಸಿದರು.

ಅಕಸ್ಮಾತ್ತಾಗಿ ಇಕಾರಸ್ ಭೂಮಿಗೆ ಅಪ್ಪಳಿಸಿದ್ದರೆ ಏನಾಗುತ್ತಿತ್ತು? ಅದು ನಾಲ್ವತ್ತರಿಂದ ಐವತ್ತು ಮೈಲುಗಳಷ್ಟು ಅಗಲವಾದ ಹಾಗೂ ಸುಮಾರು ಐದು ಮೈಲುಗಳಷ್ಟು ಆಳವಾದ ಗುಳಿಯನ್ನು ನಿರ್ಮಿಸುತ್ತಿತ್ತು. ಅದು ಜನವಸತಿಯಿರುವಲ್ಲಿ ಬಿದ್ದಿದ್ದರಂತೂ ದೇವರೇ ಗತಿ. ಒಂದು ವೇಳೆ ಇಕಾರಸ್ ಸಮುದ್ರದಲ್ಲಿ ಬಿದ್ದಿದ್ದರೆ ಬಿದ್ದು ಮೂರು ಗಂಟೆಯೊಳಗಾಗಿ ಇನ್ನೂರಡಿ ಎತ್ತರದ ತೆರೆಗಳು ತೀರದಲ್ಲಿ ನೂರೈವತ್ತು ಮೈಲುಗಳಷ್ಟು ಒಳಗೆ ನುಗ್ಗಿ ಮನೆಮಾರುಗಳನ್ನು ಕೊಚ್ಚಿಕೊಂಡು ಹೋಗುತ್ತಿದ್ದವು.

ಕ್ಷುದ್ರಗ್ರಹವೊಂದು ಹೀಗೆ ಪೃಥ್ವಿಯ ಸಮೀಪದಲ್ಲಿ ಹಾದು ಹೋದದ್ದು ಇದೇ ಮೊದಲು ಸಲವಲ್ಲ. ಇಕಾರಸ್‌ಗಿಂತ ದೊಡ್ಡದಾದ ಹರ್ಮಿಸ್ ಎಂಬ ಕ್ಷುದ್ರಗ್ರಹ ೧೯೩೭ರಲ್ಲಿ ಐವತ್ತು ಲಕ್ಷ ಮೈಲುಗಳಷ್ಟು ದೂರದಲ್ಲಿಯೇ ಹಾಯ್ದುಹೋಯಿತು. ಆದರೆ ಅದು ಪೃಥ್ವಿಗೆ ಅಪ್ಪಳಿಸಲಿಲ್ಲವಾಗಿ ಯಾವ ಅಪಾಯಗಳೂ ಸಂಭವಿಸಲಿಲ್ಲ. ಆದರೆ ಹೀಗೆ ಅಪಾಯವುಂಟಾಗುವ ಸಂಭವ ತೀರಾ ಕಡಿಮೆ. ಸುಮಾರು ಸಾವಿರ ವರ್ಷಕ್ಕೊಮ್ಮೆ ಹೀಗಾಗಬಹುದು ಎಂದು ವಿಜ್ಞಾನಿಗಳು ಲೆಕ್ಕ ಹಾಕಿದ್ದಾರೆ. ಕ್ಷುದ್ರಗ್ರಹ ಅಪ್ಪಳಿಸಿ ಉಂಟಾದ ಗುಳಿಯನ್ನು ಮಳೆ, ಗಾಳಿಗಳಂತಹ ಪ್ರಾಕೃತಿಕ ಘಟಕಗಳು ಕಾಲಾಂತರದಲ್ಲಿ ಮುಚ್ಚಿ ಹಾಕುವುದರಿಂದ ಇಂತಹ ಗುಳಿಗಳು ನೋಡದೊರೆಯುವುದು ತೀರಾ ಕ್ವಚಿತ್ತಾಗಿ. ಇವುಗಳಲ್ಲಿ ದಕ್ಷಿಣ ಆಫ್ರಿಕದ ಗುಳಿ ಬಹು ಪ್ರಸಿದ್ಧವಾಗಿದ್ದು ೨೭ ಮೈಲು ಅಗಲವಾಗಿದೆ.

ಉಲ್ಕೆಗಳಿಂದ ನಮಗೆ ಅಷ್ಟಾಗಿ ಭಯವಿಲ್ಲ. ಪ್ರತಿದಿನ ಸುಮಾರು ಏಳೂವರೆ ಕೋಟಿ ಉಲ್ಕೆಗಳು ಪೃಥ್ವಿಯ ಕಕ್ಷೆಯಲ್ಲಿ ಪ್ರವೇಶಿಸುತ್ತವಾದರೂ ಅವು ವಾತಾವರಣದಲ್ಲಿ ಉರಿದು ಹೋಗುವುದೇ ಹೆಚ್ಚು. ಪೃಥ್ವಿಯನ್ನು ತಲುಪುವಂತಹವು ಬಹಳವೆಂದರೆ ಒಂದೋ ಎರಡೋ.

ಧೂಮಕೇತುವಿನ ಶಾಪ

ಧೂಮಕೇತುವಿನ ಬಗೆಗೆ ಜನರಿಗೆ ಮೊದಲಿನಿಂದಲೂ ಭಯ. ಬಹು ಪುರಾತನ ಕಾಲದಿಂದಲೂ ಅದು ಅಪಶಕುನದ ಚಿಹ್ನವೆಂದು ಬಗೆಯುತ್ತ ಬಂದಿದ್ದಾರೆ. ೧೯೧೦ರಲ್ಲಿ ಹ್ಯಾಲಿಯ ಧೂಮಕೇತು ಪೃಥ್ವಿಯನ್ನು ಸಮೀಪಿಸುವುದೆಂದಾಗ ಅದು ಭೂಮಿಗೆ ಅಪ್ಪಳಿಸಿದರೆ ಹೇಗೆ? ಎಂಬ ಭಯದಿಂದ ಯುರೋಪಿನಲ್ಲಿ ಅನೇಕ ಜನ ಆತ್ಮಹತ್ಯೆ ಮಾಡಿಕೊಂಡರಂತೆ. ಆದರೆ ಧೂಮಕೇತು ಭೂಮಿಗೆ ಅಪ್ಪಳಿಸುವ ಸಾಧ್ಯತೆ ಬಹಳವೆಂದರೆ ಒಂದು ಲಕ್ಷವರ್ಷಕ್ಕೊಮ್ಮೆ. ಆದರೆ ಅಕಸ್ಮಾತ್ತಾಗಿ ಅಪ್ಪಳಿಸಿದರೆ ಮಹಾ ಅನರ್ಥ ಸಂಭವಿಸುವುದು ಖಂಡಿತ. ೧೯೦೮ರಲ್ಲಿ ಆಕಾಶಕಾಯವೊಂದು —ಅದು ಧೂಮಕೇತುವೆಂದು ಬಹು ಜನ ವಿಜ್ಞಾನಿಗಳು ಭಾವಿಸುತ್ತಾರೆ— ಸೈಬೀರಿಯದಲ್ಲಿ ಅಪ್ಪಳಿಸಿದಾಗ ಐವತ್ತು ಮೈಲುಗಳಷ್ಟು ಸುತ್ತಲಿನ ಪ್ರದೇಶದಲ್ಲಿ ಗಿಡಮರಗಳು ಬೇರು ಸಹಿತವಾಗಿ ಕಿತ್ತುಬಿದ್ದವಂತೆ.

ಗ್ರಹಗಳಿಂದ ವಿಪತ್ತು!

ಒಂದು ಗ್ರಹಕ್ಕೆ ಮತ್ತೊಂದು ಗ್ರಹವು ಅಪ್ಪಳಿಸುವ ಸಂಭವವೇ ಇಲ್ಲವೆಂದು ವಿಜ್ಞಾನಿಗಳು ಹೇಳುವರಾದರೂ ಇಂತಹ ಘಟನೆ ಈಗಾಗಲೆ ಸಂಭವಿಸಿದೆ ಎಂದು ಸಾಧಿಸುವ ಪುಸ್ತಕವೊಂದನ್ನು ಬರೆದು ಡಾ. ಇಮ್ಯಾನುಯೆಲ್ ವೆಲಿಕೋವಸ್ಕಿ ಎಂಬ ಸಮಾಜವಿಜ್ಞಾನಿ

ಪಾಶ್ಚಾತ್ಯ ಬೌದ್ಧಿಕ ವಲಯಗಳಲ್ಲಿ ಚರ್ಚೆಯ ಅಲೆಗಳನ್ನೆಬ್ಬಿಸಿದ್ದಾನೆ. ಅವನ ಪ್ರಕಾರ ಶುಕ್ರಗ್ರಹ ಗುರುವಿನಿಂದ ಸಿಡಿದು ಉತ್ಪನ್ನ ವಾಗಿದೆ. ಅದು ಕ್ರಿ. ಪೂ. ೧೫೦೦ ರಲ್ಲಿ ಪೃಥ್ವಿಯ ಸನಿಹದಲ್ಲಿ ಹಾಯ್ದುಹೋದಾಗ ಪ್ಲೇಗು ಹಾಗೂ ಕ್ರಿಮಿಗಳಿಂದ ಜಗತ್ತು ಜರ್ಜರಿತವಾಯಿತು. ಅಲ್ಲದೆ ಅದು ಮಂಗಳ ನಿಗೆ ಅಪ್ಪಳಿಸಿದ್ದರಿಂದ ಮಂಗಳ ಗ್ರಹ ಕ್ರಿ. ಪೂ. ೭೪೭ರಲ್ಲಿ ಪೃಥ್ವಿಯ ಹತ್ತಿರ ಬಂದಿತ್ತೆಂದೂ ವೆಲಿಕೋವಸ್ಕಿಯವರು ಸಾಧಿ ಸುತ್ತಾರೆ.

ಆದರೆ ಇತ್ತೀಚೆ ಡಾ. ಪೀಟರ್ ಹಬ್ಬರ್ ಎಂಬ ಸ್ವೀಡಿಶ್ ಪ್ರೊಫೆಸರರು ಕ್ರಿ. ಪೂ. ೩೦೦೦ ವರ್ಷದಷ್ಟು ಹಳೆಯದಾದ ಶಿಲಾ ಫಲಕವೊಂದರ ಚಿತ್ರವನ್ನು ಪ್ರಸಿದ್ಧಿಸಿ ಅದ ರಲ್ಲಿ ಶುಕ್ರಗ್ರಹದ ಉಲ್ಲೇಖವಿರುವುದನ್ನು ಎತ್ತಿ ತೋರಿಸಿದಂದಿನಿಂದ ವೆಲಿಕೋವಸ್ಕಿಯ-ವರ ವಾದಕ್ಕೆ ಅಷ್ಟಾಗಿ ಸಮರ್ಥನೆ ಕಂಡು ಬರುತ್ತಿಲ್ಲ.

ನಕ್ಷತ್ರಗಳಿಂದ ಅಪಾಯ ಒದಗಬಹುದೇ?

ಸಾಧಾರಣ ಗಾತ್ರದ ನಕ್ಷತ್ರಗಳು ಮಳೆಹನಿ ಗಳಷ್ಟು ಚಿಕ್ಕದಾಗುವ ; ಹಾಗೆ ಇಡಿ ವಿಶ್ವ ಸಂಕುಚಿತವಾದರೆ ನಮ್ಮ ಸೌರ ಮಂಡಲಕ್ಕೆ ತೀರಾ ಹತ್ತಿರವಾದ ನಕ್ಷತ್ರವೂ ೫೦ ಮೈಲು ದೂರದಲ್ಲಿರುವುದರಿಂದ ನಕ್ಷತ್ರಗಳಿಂದ ಅಪಾಯವುಂಟಾಗುವುದು ಸಾಧ್ಯವೇ ಇಲ್ಲ.

ಕೃಷ್ಣವಿವರದಿಂದ ಮಹಾಸ್ಫೋಟ


ಮಹಾಕಾಯದ ನಕ್ಷತ್ರವೊಂದು ಅತಿಯಾಗಿ ಸಂಕುಚಿತಗೊಂಡುದರ ಪರಿಣಾಮವೇ ಕೃಷ್ಣ ವಿವರ (Black hole). ಅಲ್ಲಿ ಪದಾರ್ಥ ಎಷ್ಟು ಸಂಕುಚಿತಗೊಂಡಿರುತ್ತದೆ ಎಂದರೆ ಒಂದು ಗುಂಡು ಸೂಜಿಯಷ್ಟು ಪದಾರ್ಥ ಸಹಸ್ರಾವಧಿ ಟನ್ನುಗಳಷ್ಟು ತೂಗೀತು! ಸ್ವಾಭಾವಿಕ ವಾಗಿಯೆ ಅಲ್ಲಿ ಗುರುತ್ವಾಕರ್ಷಣ ಶಕ್ತಿ ಹೆಚ್ಚಾಗಿರುತ್ತದೆ. ಅದು ಬೆಳಕಿನ ಕಿರಣ ಗಳನ್ನೂ ಎಳೆದುಕೊಳ್ಳುವಷ್ಟು ಪ್ರಬಲವಾಗಿ ರುವುದರಿಂದ ಆ ಪ್ರದೇಶ ನಮಗೆ ಕಪ್ಪಾಗಿ ಗೋಚರಿಸುವುದು. ಇದೇ ಕೃಷ್ಣ ವಿವರ, ಇದು ಅಕಸ್ಮಾತ್ತಾಗಿ ಸೌರವ್ಯೂಹದತ್ತ ಸಾಗಿ ಬಂದರೆ ಸೂರ್ಯ ಸಂಸ್ಥಾಯದ ಹೊರ ವಲಯದಲ್ಲಿರುವ ಗ್ರಹಗಳು ಪಥಭ್ರಷ್ಟ ಗೊಂಡು ತತ್ಪರಿಣಾಮವಾಗಿ ನಮಗೆ ಬರಲಿ ರುವ ಅಪಾಯದ ಸೂಚನೆ ದೊರೆಯುವುದು. ಆದರೆ ಹಾಗೆಂದು ನಾವು ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಕೊಳ್ಳುವಂತಿಲ್ಲ. ಯಾವ ಕ್ಷಣಕ್ಕೂ ಅದು ಪೃಥ್ವಿಯತ್ತ ಧಾವಿಸಿ ಇಡಿ ಭೂಮಂಡಲವನ್ನು ಸೀಳಿ ಅದರ ತುಂಡು ಗಳನ್ನು ತನ್ನ ಗುರುತ್ವಬಲದಿಂದ ಸೆಳೆದು ಕೊಂಡು ಬಿಡಬಹುದು.

ಸೂಪರ್‌ನೋವಾಗಳು

ನಮಗೆ ಹತ್ತಿರವಾಗಿರುವ ಸುಪರ್‌ನೋವಾ ಅಥವಾ ಅಸ್ಫೋಟಿತವಾಗುತ್ತಿರುವ ನಕ್ಷತ್ರವು ಯಾವುದೇ ಕಾಲಕ್ಕೆ ಅಂತರಿಕ್ಷ ಕಿರಣಗಳಿಂದ ಪೃಥ್ವಿಯನ್ನು ವಿಕಿರಣಗೊಳಿಸಿ ಸಮಸ್ತ ಜೀವಜಾತಗಳನ್ನು ನಾಶಗೊಳಿಸಬಲ್ಲದು. ಪುರಾತನ ಕಾಲದಲ್ಲಿ ಪೆಡಂಭೂತಗಳು ಹೀಗೇ ನಿರ್ವಂಶವಾಗಿಹೋದವೆಂದು ಕೆಲವರು ತರ್ಕಿ-ಸುತ್ತಾರೆ.

ಪ್ರತಿಪದಾರ್ಥದಿಂದ

ಅಣುಗಳು ಮುಖ್ಯವಾಗಿ ಪ್ರೋಟಾನ್, ಎಲೆಕ್ಟ್ರಾನ್ ಹಾಗೂ ನ್ಯೂಟ್ರಾನ್ ಎಂಬ ಪರಮಾಣುಗಳಿಂದ ಸಂಯೋಜಿಸಲ್ಪಟ್ಟಿವೆ ಯಷ್ಟೆ. ಇವುಗಳಲ್ಲಿ ಪ್ರೋಟಾನು ಧನವಿದ್ಯು-ತ್ತನ್ನೂ ಎಲೆಕ್ಟ್ರಾನು ಋಣವಿದ್ಯುತ್ತನ್ನೂ ಹೊಂದಿರುತ್ತವೆ. ಆದರೆ ಋಣವಿದ್ಯುತ್ತನ್ನು ಹೊಂದಿದ ಪ್ರೋಟಾನುಗಳೂ ಧನ ವಿದ್ಯುತ್ತನ್ನು ಹೊಂದಿದ ಎಲೆಕ್ಟ್ರಾನುಗಳೂ ಇರು ವಂಥ ಪರಮಾಣುಗಳ ಅಸ್ತಿತ್ವವಿರಬಹುದೆಂಬ ಊಹೆ ವಿಜ್ಞಾನಿಗಳಲ್ಲಿ ಬಲವತ್ತರವಾಗಿಯೇ ಇತ್ತು. ಇತ್ತೀಚೆಗೆ ಅಮೇರಿಕದ ಬ್ರೂಕ್-ಹ್ಯಾವನ್‌ದಲ್ಲಿಯ ರಾಷ್ಟ್ರೀಯ ಪ್ರಯೋಗ



ನಿಮ್ಮ ಹಣಕ್ಕೆ ಅಧಿಕ ಮೌಲ್ಯ ಪಡೆಯಿರಿ
Reshma
2 × 2
Suchitra
Mysore Queen
Mysore Beauty
ದಿ ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್
ದಾವಣಗೆರೆ, ಕರ್ನಾಟಕ
ಅಲ್ಲಿ ಪರಂಪರೆಯು ಆಧುನಿಕತೆಯ ರೂಪವನ್ನು ಧರಿಸುತ್ತದೆ

ಶಾಲೆಯ ವಿಜ್ಞಾನಿಗಳು ಇಂತಹ ಪ್ರತಿ ಪ್ರೋಟಾನನ್ನು ಸೃಷ್ಟಿಸಿದುದೇ ಅಲ್ಲದೆ ಪ್ರೋಟಾನು ಪ್ರತಿ ಪ್ರೋಟಾನುಗಳ ಸಂಯೋಗದಿಂದ ಕಾಸ್ಮಿಯಾನ್ ಎಂಬ ಹೊಸ ಪದಾರ್ಥವನ್ನು ಉತ್ಪಾದಿಸಿದಂದಿನಿಂದ ಪ್ರತಿಪದಾರ್ಥದ ಅಸ್ತಿತ್ವದ ಬಗೆಗೆ ಸಂಶಯವೇ ಉಳಿದಿಲ್ಲ. ಪ್ರತಿ ಪದಾರ್ಥದ ಅಸ್ತಿತ್ವ ಸಾಧ್ಯವಿದೆಯೆಂದಾದರೆ ಪ್ರತಿ ಪದಾರ್ಥದಿಂದುಂಟಾದ ಪ್ರತಿ ಗ್ರಹಗಳಿರುವುದೂ ಸಾಧ್ಯ. ಇದೇ ವಾದಸರಣಿಯನ್ನು ಮುಂದುವರಿಸಿದರೆ ಪ್ರತಿವಿಶ್ವದ ಅಸ್ತಿತ್ವವೂ ಅಸಾಧ್ಯಕೋಟಿಯ ಮಾತೇನಲ್ಲ. ಅಕಸ್ಮಾತ್ತಾಗಿ ಪ್ರತಿಗ್ರಹವೊಂದು ಸೂರ್ಯ ಸಂಸ್ಥಾಯವನ್ನು ಪ್ರವೇಶಿಸಿದರೆ? ಆಗ ನಮಗೆ ದೇವರೆ ಗತಿ.

ಅಣುಗಾತ್ರದ ರಾಕ್ಷಸರು !

೧೯೬೯ ರಲ್ಲಿ ಅಪೊಲೊ ಉಪಗ್ರಹವು ಭೂಮಿಗಿಳಿದಾಗ ಗಗನಯಾತ್ರಿಕರು ಚಂದ್ರಗ್ರಹದಿಂದ ತಮ್ಮೊಂದಿಗೆ ಬಹು ಮಾರಕವಾದ ಹಾಗೂ ಇಲ್ಲಿನವರಿಗೆ ಅಪರಿಚಿತವಾದ ರೋಗಾಣುಗಳನ್ನು ತಂದಿರುವರೋ ಏನೋ ಎಂಬ ಭಯ ಸಾರ್ವತ್ರಿಕವಾಗಿತ್ತು. ಅದಕ್ಕಾಗಿಯೆ ಗಗನಯಾತ್ರಿಕರನ್ನು ಸಾಕಷ್ಟು ಕಾಲ ಮಾನವಸಂಪರ್ಕದಿಂದ ದೂರವಿಡಲಾಗಿತ್ತು. ಸಂಪೂರ್ಣವಾಗಿ ರೋಗಾಣುರಹಿತರಾಗಿದ್ದಾರೆಂಬುದು ಖಚಿತವಾದ ನಂತರವೇ ಅವರು ತಮ್ಮ ದೇಶದ ನೆಲದ ಮೇಲೆ ಕಾಲಿಟ್ಟಿದ್ದು.

ಆದರೆ ಸೈನ್ಯಶಾಖೆಯ ಸಂಶೋಧನಾಲಯಗಳಲ್ಲಿ ಕಾರ್ಯನಿರತರಾದ ಜೀವಾಣುವಿಜ್ಞಾನಿಗಳಿಂದ ಇಲ್ಲಿ ಪೃಥ್ವಿಯ ಮೇಲೆಯೇ ಅಂತಹ ಅಪಾಯವೊದಗುವ ಸಾಧ್ಯತೆಯಿದೆಯೆಂಬುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ. DNA ವಂಶವಾಹಿನಿಯನ್ನು ಪ್ರತ್ಯೇಕಿಸಿ ಅದನ್ನು ಮತ್ತೊಂದು ಜಾತಿಗೆ ಸೇರಿದ ಪ್ರಾಣಿಯ DNAದಲ್ಲಿ ಮಿಶ್ರಿಸಲು ವಿಜ್ಞಾನಿಗಳಿಗೆ ಸಾಧ್ಯವಾಗಿದೆ. ಜಠರದಲ್ಲಿ ಈ. ಕೋಲಿ ಎಂಬ ಹೆಸರಿನ ಬ್ಯಾಕ್ಟೀರಿಯಗಳು ಕಂಡುಬರುತ್ತವೆ. ಕೆಲ ವಿಜ್ಞಾನಿಗಳು ದಕ್ಷಿಣ ಆಫ್ರಿಕದ ಒಂದು ಜಾತಿಯ ಕಪ್ಪೆಯ ವೀರ್ಯಾಣುವಿನಿಂದ DNAಅನ್ನು ಪ್ರತ್ಯೇಕಿಸಿ ಅದನ್ನು ಈ. ಕೋಲಿ ಬ್ಯಾಕ್ಟೀರಿಯಕ್ಕೆ ಬೆರೆಸಿ ಇನ್ನೊಂದು ಬಗೆಯ ಅಣುಜೀವಿಯನ್ನು ಸೃಷ್ಟಿಸಿದ್ದಾರೆ. ಇದು ಜಠರದ ಪರಿಸರಕ್ಕೆ ಚೆನ್ನಾಗಿ ಒಗ್ಗಿಸಿಕೊಳ್ಳುತ್ತದಂತೆ. ಅಲ್ಲದೆ ಇದು ಕ್ಯಾನ್ಸರನ್ನೂ ಉಂಟುಮಾಡುತ್ತದಂತೆ. ಇವುಗಳನ್ನು ಪ್ರಯೋಗಾಲಯದ ಶೀಶೆಗಳಲ್ಲಿ ಭದ್ರವಾಗಿಡಲಾಗಿದೆಯೇನೋ ನಿಜ. ಆದರೆ ಹುಚ್ಚುತಲೆಯ ಸರ್ವಾಧಿಕಾರಿಯೊಬ್ಬನಿಗೆ ಇವು ದೊರೆತರೆ ಆತ ಇವುಗಳನ್ನು ಶತ್ರು ಪ್ರದೇಶದಲ್ಲಿ ಪಸರಿಸಲು ತನ್ನ ಸೈನ್ಯ ಶಾಖೆಗೋ ಗುಪ್ತಚಾರರ ವಿಭಾಗಕ್ಕೋ ಆದೇಶ ನೀಡಬಹುದು. ಹೀಗಾದರೆ ಪ್ರಪಂಚಕ್ಕೆ ಅಪಾಯವೊದಗುವದು ಖಂಡಿತ. ಒಂದಕ್ಕೆ ಎರಡಾಗಿ ಎರಡಕ್ಕೆ



"ಅಪ್ಪಾ, ನನ್ನ ಬರವಣಿಗೆ ನೋಡಿ, ನಮ್ಮ ಮೇಷ್ಟ್ರು ಈಗ್ಲೆ ಹೇಳ್ಬಿಟ್ಟಿದ್ದಾರೆ, ನಾನು ಡಾಕ್ಟರ್ ಆಗ್ತೀನಂತ."

ನಾಲ್ಕಾಗಿ ಒಂದೇ ದಿನದಲ್ಲಿ ಕೋಟಿಗಟ್ಟಳೆಯ ಸಂಖ್ಯೆಯಲ್ಲಿ ಬೆಳೆಯುವ ಇವು ಕ್ಷಿಪ್ರದಲ್ಲಿಯೆ ಪ್ರಪಂಚಾದ್ಯಂತ ಕ್ಯಾನ್ಸರನ್ನು ಪಸರಿಸಿ ಸಮಸ್ತ ಜೀವಜಾತಗಳನ್ನೂ ಬಲಿತೆಗೆದು ಕೊಳ್ಳುವುದು ಖಂಡಿತ.

ಸಾಮಾನ್ಯವಾಗಿ ಮಧ್ಯವಯಸ್ಕರಿಗೆ ನೆರಡಿ ರೋಗ (ಆ್ಯಂಥ್ರಾಕ್) ತಗಲುವ ಸಾಧ್ಯತೆ ಹೆಚ್ಚು. ಆಕಸ್ಮಾತ್ತಾಗಿ ತಗಲಿದರೆ ಅದರಿಂದ ಪಾರಾಗುವುದೂ ಕಠಿಣ. ಈ ರೋಗಕ್ಕೆ ಕಾರಣವಾದ ಅಣುಜೀವಿಗಳನ್ನು ಅಮೇರಿಕದ ಯುದ್ಧಶಾಖೆ ಬೆಳೆಸಿ ಶೇಖರಿಸಿದೆ. ಅಮೇರಿಕದ ಹಾಗೆಯೆ ಮುಂದುವರಿದ ಉಳಿದ ಕೆಲವು ದೇಶಗಳೂ ಇಂತಹ ರೋಗಾಣುಗಳನ್ನು ಸಂಗ್ರಹಿಸಿರಬಹುದು. ಇವುಗಳನ್ನು ಶತ್ರುಪ್ರದೇಶದಲ್ಲಿ ಉಪಯೋಗಿಸಬಹುದೇನೋ ನಿಜ. ಆದರೆ ಹಾಗೆ ಮಾಡುವಾಗ ಗಾಳಿ ವಿರುದ್ಧ ದಿಕ್ಕಿನಲ್ಲಿ ಬೀಸಿದರೆ ಉಪಯೋಗಿಸುವವರಿಗೇ ಹೆಚ್ಚು ಅಪಾಯ. ಆದ್ದರಿಂದ ಇಂತಹ ಜೈವಿಕ ಅಸ್ತ್ರಗಳ ಉತ್ಪಾದನೆಯನ್ನು ಪ್ರತಿಬಂಧಿಸಬೇಕೆಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ಅದು ಸಾಧ್ಯವಾಗುವವರೆಗೆ ರೋಗಾಣುಗಳಿಂದ ಪ್ರಪಂಚ ಉಧ್ವಸ್ತಗೊಳ್ಳುವ ಭಯತಪ್ಪಿಲ್ಲ.


ಹಾಗೆಯೆ ಪ್ರತಿಜೈವಿಕಗಳಿಗೂ ಮಣಿಯದಂತಹ ರೋಗಾಣುಗಳನ್ನು ವಿಜ್ಞಾನಿಗಳು ನಿರ್ಮಿಸಿದ್ದಾರಂತೆ. ಇವು ಪ್ರಯೋಗಾಲಯಗಳಿಂದ ತಪ್ಪಿಸಿಕೊಂಡು ಹೊರಬಿದ್ದರೆ ಜಗತ್ತಿನ ತುಂಬಾ ಪಸರಿಸಿಕೊಂಡು ಅನೇಕ ಬಗೆಯ ಪಿಡುಗುಗಳನ್ನುಂಟುಮಾಡಬಹುದು. ಯಾವ ಔಷಧಿಗಳಿಗೂ ಇವು ಮಣಿಯುವುದಿಲ್ಲವಾದ್ದರಿಂದ ಮಾನವಕುಲ ವಿವಿಧ ರೋಗಗಳಿಗೆ ಬಲಿಯಾಗಿ ನಾಶಹೊಂದುವುದರಲ್ಲಿ ಸಂಶಯವಿಲ್ಲ.

ಓಝೋನ್ ವಲಯಕ್ಕೆ ಅಪಾಯ!

ದೂರ ಗಗನದಲ್ಲಿ ಇಲ್ಲಿಂದ ಹದಿನೈದು ಮೈಲುಗಳಷ್ಟು ಅಂತರದಲ್ಲಿ ಓಝೋನ್ ವಾಯುವಿನ ವಲಯ ಪೃಥ್ವಿಯನ್ನು ಸುತ್ತುವರಿದಿದೆ. ಸೂರ್ಯನಿಂದ ಬರುವ ನೀಲಾತೀತ ಕಿರಣಗಳನ್ನು ಈ ವಲಯ ಹೆಚ್ಚುಮಟ್ಟಿಗೆ ತಡೆಗಟ್ಟುತ್ತಿರುವುದರಿಂದ ಸಕಲ ಜೀವಜಾತಗಳು ಬದುಕಲು ಸಾಧ್ಯವಾಗಿದೆ. ಆದರೆ ವೈಜ್ಞಾನಿಕ ಪ್ರಗತಿಯಿಂದಾಗಿ ಇಂದು ಈ ಓಝೋನ್ ವಲಯಕ್ಕೇ ಧಕ್ಕೆ ತಟ್ಟುತ್ತಿದೆ. ಪ್ಲಾಸ್ಟಿಕ್ ಉದ್ದಿಮೆಯಲ್ಲಿ ಬಳಸಲಾಗುವ ಬ್ರೋಮೈಡ್, ಗೊಬ್ಬರದ ರೂಪದಲ್ಲಿ ಉಪಯೋಗಿಸಲ್ಪಡುವ ನೈಟ್ರೇಟುಗಳು ಹಾಗೂ ನೀರನ್ನು ಶುದ್ಧಗೊಳಿಸಲು ಬಳಸಲಾಗುವ ಕ್ಲೋರೀನುಗಳು ಸಾವಕಾಶವಾಗಿ ಓಝೋನ್ ವಲಯವನ್ನು ಸವೆಸುತ್ತಿವೆ. ಅಲ್ಲದೆ ಅಸಂಖ್ಯ ಉದ್ದಿಮೆಗಳಲ್ಲಿ ಬಳಸಲಾಗುವ ಫ್ಲೂರೋಕಾರ್ಬನ್ನುಗಳೂ ಓಝೋನಿಗೆ ಮಾರಕವಾಗಿವೆ. ಇವೆಲ್ಲ ಸೇರಿ ಈ ಶತಮಾನ ಕೊನೆಗೊಳ್ಳುವ ಹೊತ್ತಿಗೆ ಓಝೋನ್ ವಲಯವನ್ನು ಶೇಕಡಾ ನಾಲ್ಕರಿಂದ ಏಳರಷ್ಟು ಸವೆಸಿರಬಹುದೆಂದು ಡಾ. ಶರ್ವುಡ್ ರೋಲ್ಯಾಂಡ್ ಎಂಬ ವಿಜ್ಞಾನಿಗಳು ಲೆಕ್ಕಹಾಕಿದ್ದಾರೆ. ಓಝೋನ್ ವಲಯ ಸೇಕಡಾ ಅರ್ಧದಷ್ಟು ಸವೆದರೆ ಅಮೇರಿಕವೊಂದರಲ್ಲೆ ವರ್ಷಂಪ್ರತಿ ಸರಾಸರಿಯಾಗಿ ಈಗಿನಗಿಂತ ೬೦೦೦ ದಷ್ಟು ಹೆಚ್ಚು ಜನರು ಚರ್ಮದ ಕ್ಯಾನ್ಸರಿಗೆ ಆಹುತಿಯಾಗಬಹುದು. ಅಂತಹುದರಲ್ಲಿ ಅದು ಶೇಕಡಾ ನಾಲ್ಕರಷ್ಟು ಕಡಿಮೆಯಾದರೂ ಅನೇಕ ಪ್ರಾಣಿಜಾತಿಗಳು ನಿರ್ವಂಶವಾಗಿಹೋಗಬಹುದು. ಹೀಗೆ ನಿರ್ವಂಶವಾಗುವ ಪ್ರಾಣಿಗಳ ಪಟ್ಟಿಯಲ್ಲಿ ಮಾನವಪ್ರಾಣಿಯೂ ಸೇರಿಕೊಂಡರೆ ಆಶ್ಚರ್ಯವಲ್ಲ. ✡



2 ಫಾಸ್ಫೋಮಿನ್
ಟಾನಿಕ್‌ಗಳು ಕುಟುಂಬದ ಎಲ್ಲರಿಗೂ ಆರೋಗ್ಯಕರ



ಫಾಸ್ಫೋಮಿನ್ ಅಯರ್ನ್

ಸ್ತ್ರೀಯರಿಗಾಗಿ
ಅಯರ್ನ್ ಟಾನಿಕ್

ಇದು ಆರೋಗ್ಯವಂತ ಕೆಂಪು ರಕ್ತಕಣಗಳನ್ನು ತಯಾರಿಸಲು ಸಹಕರಿಸುವ ಮತ್ತು ದೇಹದ ಕಬ್ಬಿಣದ ಸಂತುಲನವನ್ನು ಇರಿಸುವ ಅಮೂಲ್ಯ ಕಬ್ಬಿಣದ ಇನ್ನೊಂದು ಮೂಲವಾಗಿದೆ. ಇದರಲ್ಲಿ ಬಿ ಕಾಂಪ್ಲೆಕ್ಸ್ ವಿಟಮಿನ್ ಮತ್ತು ವಿವಿಧ ಗ್ಲಿಸರೋಫಾಸ್ಫೇಟ್‌ಗಳೂ ಇವೆ. ಆರೋಗ್ಯ ಮತ್ತು ಚೈತನ್ಯವನ್ನು ಇರಿಸಿಕೊಳ್ಳಲು ಇದು ಸಹಕರಿಸುತ್ತದೆ. ನಿಶ್ಶಕ್ತಿ ಮತ್ತು ಆಯಾಸವನ್ನು ಹೋಗಲಾಡಿಸುತ್ತದೆ. ಸ್ತ್ರೀಯರಿಗಾಗಿ ವಿಶೇಷವಾಗಿ ತಯಾರಿಸಲ್ಪಟ್ಟ ಪ್ರಥಮ ಟಾನಿಕ್—ಫಾಸ್ಫೋಮಿನ್ ಅಯರ್ನ್.



ಫಾಸ್ಫೋಮಿನ್ ವಿಟಮಿನ್

ಕುಟುಂಬದ ಎಲ್ಲರಿಗಾಗಿ
ವಿಟಮಿನ್ ಟಾನಿಕ್

ಹಣ್ಣಿನ ರುಚಿಯಿರುವ ಈ ಟಾನಿಕ್ ಒಂದು ಆದರ್ಶ ಪೂರಕಾಹಾರವಾಗಿದೆ. ಇದರಲ್ಲಿ ಮಹತ್ವಪೂರ್ಣ ಬಿ ಕಾಂಪ್ಲೆಕ್ಸ್ ವಿಟಮಿನ್‌ಗಳು ಮತ್ತು ವಿವಿಧ ಗ್ಲಿಸರೋಫಾಸ್ಫೇಟ್‌ಗಳಿವೆ. ಇವು ನಿಮ್ಮ ಕುಟುಂಬದ ಎಲ್ಲರನ್ನೂ ಆರೋಗ್ಯವಾಗಿ ಮತ್ತು ಚಟುವಟಿಕೆಯಿಂದ ಇಟ್ಟಿರುತ್ತವೆ. ಕುಟುಂಬದ ಎಲ್ಲರೂ ಮೆಚ್ಚುವ ಟಾನಿಕ್—ಫಾಸ್ಫೋಮಿನ್ ವಿಟಮಿನ್.

ಫಾಸ್ಫೋಮಿನ್ ಟಾನಿಕ್‌ಗಳು ಹಸಿವನ್ನು ಉದ್ದೀಪನಗೊಳಿಸುತ್ತವೆ, ದೇಹದಾರ್ಢ್ಯ, ದೇಹದ ರೋಗನಿರೋಧಕ ಶಕ್ತಿ ಹೆಚ್ಚಿಸುತ್ತವೆ.

SQUIBB® SARABHAI CHEMICALS LTD.

ಬೇಹುಗಾರರ ಬೇಟೆ

"ಶ್ರೀ ಹರಿವಂಶ"

ದ್ವಿತೀಯ ವಿಶ್ವಸಮರದ ಸಮಯ.

ಕಳೆದ ನಾಲ್ಕು ದಿನಗಳಿಂದ ನಾಜಿಗಳ ಚಟುವಟಿಕೆ ತೀವ್ರವಾಗಿತ್ತು. ಜರ್ಮನಿಯಿಂದ ರಷ್ಯದ ಕಡೆಗೆ ಹೋಗುತ್ತಿದ್ದ ರಹಸ್ಯ ಸಂದೇಶಗಳನ್ನು ಹಿಡಿಯಲು ಕ್ರಾಂಜ್ ಎಂಬಲ್ಲಿ ರೇಡಿಯೋ ಕೇಂದ್ರವೊಂದನ್ನು ಸ್ಥಾಪಿಸಲಾಗಿತ್ತು.

ಅಪರಾಹ್ನ ಮೂರು ಹೊಡೆದು ಐವತ್ತೈದು ನಿಮಿಷಗಳುರುಳಿದ್ದವು. ಕ್ರಾಂಜ್ ಕೇಂದ್ರ ವಿಚಿತ್ರ ಸಂದೇಶವೊಂದನ್ನು ಸಂಗ್ರಹಿಸಿ ಕುತೂಹಲ ಕೆರಳಿಸಿತು. ಐದೈದು ಅಂಕೆಗಳ ಇಪ್ಪತ್ತೆರಡು ಗುಂಪುಗಳವು! ಇದನ್ನು ರಹಸ್ಯ ಭಾಷಾ ತಜ್ಞರ ಬಳಿ ಒಯ್ದ ಆಪರೇಟರ್. ಆದರೆ ಯಾರಿಗೂ ಅದರ ಆದಿ, ಅಂತ್ಯ ತಿಳಿಯದಾಯಿತು!

ಅಂದಿನಿಂದ ಕ್ರಾಂಜ್ ಕೇಂದ್ರದಲ್ಲಿ ಅಹರ್ನಿಶಿಯಾಗಿ ಇಂತಹ ಸಂದೇಶಗಳು ಸಂಗ್ರಹವಾಗತೊಡಗಿದವು. ಕ್ರಮೇಣ ಇವುಗಳ ಸಂಖ್ಯೆ ಎಷ್ಟು ಹೆಚ್ಚಿತೆಂದರೆ ಸಂದೇಶ ಗ್ರಹಣಕ್ಕೆ ಒಬ್ಬರ ಬದಲು ಆರು ಜನರನ್ನು ನಿಯಮಿಸಬೇಕಾಯಿತು. ಆದರೆ ಸಂದೇಶ ಜೇಡರಬಲೆಯಂತೆ ಹಬ್ಬುತ್ತಿದೆಯೆನ್ನುವದರ ವಿನಾ ಮತ್ತೇನೂ ತಿಳಿಯಲಿಲ್ಲ.

ಈಗ ಸಂದೇಶವನ್ನು ಎಲ್ಲಿಂದ ಕಳಿಸಲಾಗುತ್ತದೆಂಬುದನ್ನು ಪತ್ತೆ ಹಚ್ಚುವ ಪ್ರಯತ್ನ ಪ್ರಾರಂಭವಾಯಿತು. ಇವುಗಳ ಉಗಮಸ್ಥಾನ ಬ್ರುಸೆಲ್ಸ್, ಪ್ಯಾರೀಸ್, ಮತ್ತು ಜ್ಯೂರಿಚ್‌ಗಳಲ್ಲಿದ್ದವಲ್ಲದೇ ಎರಡು ದೊಡ್ಡ ಕೇಂದ್ರಗಳು ಜರ್ಮನಿಯ ರಾಜಧಾನಿ ಬರ್ಲಿನ್ನಿನಲ್ಲೆಯೇ ಇರುವದನ್ನು ತಿಳಿದಾಗ ಅವರು ನಿಬ್ಬೆರಗಾದರು. ಇನ್ನೊಂದು ವಿಶೇಷವೆಂದರೆ ಎಲ್ಲಾ ಸಂದೇಶಗಳ ಗುರಿ ಒಂದೇ– ಸೋವಿಯತ್ ರಾಜಧಾನಿ ಮಾಸ್ಕೋ. ಈಗ ಇವೆಲ್ಲ ಜರ್ಮನಿಯಲ್ಲಡಗಿದ ಸೋವಿಯತ್ ಯುದ್ಧ ಬೇಹುಗಾರರ ಕೈವಾಡವೆಂಬುದು ಖಚಿತವಾಯಿತು.

ಆದರೆ ಅವರ ಕೆಲಸ ಇಷ್ಟಕ್ಕೇ ಮುಗಿಯುವಂತಿರಲಿಲ್ಲ. ಈ ರಹಸ್ಯ ಭಾಷೆಯನ್ನವರು ಅರ್ಥವಿಸಬೇಕಾಗಿತ್ತು. ಜರ್ಮನಿಯ ಭಾಷಾ ತಜ್ಞರಿಗೂ, ಬೇಹುಗಾರ ಇಲಾಖೆಗೂ, ಇದೊಂದು ಸವಾಲಾಗಿತ್ತು. ವಿಚಿತ್ರವೆಂದರೆ ಸಂದೇಶಗಳ ಕೊನೆಯಲ್ಲಿ ಪ್ರೇಷಕರ ಹೆಸರು ಮಾತ್ರ ರಹಸ್ಯ ಭಾಷೆಯಲ್ಲಿರದೇ 'ಕೆಂಟ್ ಮತ್ತು' 'ಕೋರೋ' ಎಂದು ಸರಳ ಭಾಷೆಯಲ್ಲಿಯೇ ಇರುತ್ತಿದ್ದವು. ಪ್ರೇಷಕರು ತಮ್ಮ ನಿಜವಾದ ಹೆಸರುಗಳನ್ನು ಕಳಿಸುವಷ್ಟು ಮೂರ್ಖರಾಗಿದ್ದರೆ? ಸಂಕೇತಗಳೂ ತುಂಬಾ ರಹಸ್ಯಮಯವಾದುದರಿಂದ ಹಾಗೆ ಭಾವಿಸಲು ಎಡೆಯಿರಲಿಲ್ಲ.

ಹಾಗಾದರೆ ಕೆಂಟ್ ಮತ್ತು ಕೋರೋ ಯಾರು?

ಯುರುಗ್ವೆ ದೇಶದ ನಿವಾಸಿ ವಿನ್ಸೆಂಟ್

ಒಬ್ಬ ಗೌರವಾನ್ವಿತ ವ್ಯಕ್ತಿ. ಈತ ಬ್ರುಸೆಲ್ಸ್‌ನಲ್ಲಿ ಸಿಮೆಕ್ಸೋ ಕಾರ್ಪೊರೇಶನ್ನಿನ ಅಧ್ಯಕ್ಷನಾಗಿದ್ದ. ಈ ಕಾರ್ಪೊರೇಶನ್ ಮಾರ್ಸೆಲಿಸ್, ರೋಮ್, ಪ್ರಾಗ್, ಓಸ್ಲೋ ಮತ್ತು ಸ್ಟಾಕ್‌ಹೋಮ್‌ಗಳಲ್ಲಿ ತನ್ನ ಶಾಖೆಗಳನ್ನು ಹೊಂದಿತ್ತು. ಅಲ್ಲದೇ ಕೆಲವು ವಿದೇಶೀ ಸಂಸ್ಥೆಗಳೊಡನೆ ಕೂಡ ಅದು ಸಂಬಂಧವನ್ನಿರಿಸಿಕೊಂಡಿತ್ತು. ಪ್ಯಾರಿಸ್ಸ್‌ನಲ್ಲಿ ಈ ಕಾರ್ಪೊರೇಶನ್ ಸಿಮೆಕ್ಸೋ ಎಂಬ ಹೆಸರಿನಲ್ಲೇ ರಜಿಸ್ಟರ್ ಆಗಿತ್ತಲ್ಲದೇ ಎಮ್. ಗಿಲ್ಬರ್ಟ್ ಎಂಬವನೊಬ್ಬ ಈ ಸಂಸ್ಥೆಯ ವ್ಯವಸ್ಥಾಪಕನಾಗಿದ್ದ.

ಸದಾ ಪ್ರವಾಸದಲ್ಲಿಯೇ ಇರುತ್ತಿದ್ದ ವಿನ್ಸೆಂಟ್ ಜರ್ಮನ್ ಸೈನ್ಯಕ್ಕೆ ಸರಕು ಸಂಗ್ರಹಗಳನ್ನೊದಗಿಸುವ ಜವಾಬ್ದಾರಿಯನ್ನೂ ವಹಿಸಿಕೊಂಡಿದ್ದ. ಪಶ್ಚಿಮದ ರಾಷ್ಟ್ರಗಳನ್ನು ನಾಜಿಗಳು ಆಕ್ರಮಿಸಿದ ನಂತರ ವಿನ್ಸೆಂಟ್‌ನ ಸಂಬಂಧ ಜರ್ಮನಿಯೊಡನೆ ಇನ್ನಷ್ಟು ಬಲಗೊಂಡಿತು. ಆ ದಿನಗಳಲ್ಲಿ ಜರ್ಮನಿಯೊಂದಿಗೆ ವ್ಯಾಪಾರವು ಅಷ್ಟು ಸುಲಭದ್ದಾಗಿರಲಿಲ್ಲ. ಆದಿಯಿಂದಲೂ ನಾಜಿಗಳೊಂದಿಗೇ ವ್ಯಾಪಾರೀ ಸಂಬಂಧವನ್ನು ನಿರಾತಂಕವಾಗಿ ನಡೆಸಿಕೊಂಡು ಬಂದ ಸಂಸ್ಥೆಗೆ ಮಾತ್ರ ಇದು ಸಾಧ್ಯವಾಗಿತ್ತು. ಹೀಗಾಗಿ ಸಿಮೆಕ್ಸೊ ಕಾರ್ಪೊರೇಶನ್ನಿಗೆ ನಾಜಿ ಸರಕಾರದಿಂದ ಸಾಕಷ್ಟು ಪ್ರಮಾಣದಲ್ಲಿ ಆರ್ಡರುಗಳು ದೊರೆಯತೊಡಗಿದವು. ಅವುಗಳನ್ನು ಪೂರೈಸುವುದೇ ಕಾರ್ಪೊರೇಶನ್ನಿಗೆ ದುಃಷ್ಕರವಾಯಿತು. ಫಲವಾಗಿ ವಿನ್ಸೆಂಟನ ವ್ಯಾಪಾರವು ಸದಾ ವೃದ್ಧಿಯಾಗುತ್ತಲೇ ಬಂದಿತು.

ಆದರೆ ವಿನ್ಸೆಂಟನೇ ತಮಗೆ ಸಿಂಹಸ್ವಪ್ನವಾಗಿದ್ದ ಕೆಂಟ್‌ನೆಂಬುದು ನಾಜಿಗಳಿಗೇನು ಗೊತ್ತು!

ಒಂದು ದಿನ ಬ್ರುಸೆಲ್ಸ್‌ನ ಭವ್ಯವಾದ ಎರಡಂತಸ್ತಿನ ಕಟ್ಟಡವೊಂದರಲ್ಲಿ ನುಗ್ಗಿದ ವಿನ್ಸೆಂಟ್. ಒಳಗೆ ಚಿಕ್ಕ ಕೋಣೆಯೊಂದರಲ್ಲಿ ಕಟ್ಟಡದ ಮಾಲಿಕಳಾದ ರೀಟಾ ಆರ್ನಾಲ್ಡ್ ರೇಡಿಯೋದ ಬಳಿ ಕುಳಿತು ಅವಸರವಸರವಾಗಿ ಸಂದೇಶಗಳನ್ನು ಸಂಗ್ರಹಿಸುತ್ತಿದ್ದಳು. ಆ ಸಂದೇಶಗಳಲ್ಲಿ ಐದಂಕೆಗಳ ಹಲವು ಗುಂಪುಗಳ ವಿನಾ ಮತ್ತೇನೂ ಇರಲಿಲ್ಲ. ಲೆಫ್ಟಿನೆಂಟ್ ಮೈಕಲ್ ಮಾರ್ಕೋವ್ ಮತ್ತು ಆಂತೋನ್ ದಾನಿಲೋವ್ ಅವುಗಳನ್ನು ಎಲ್ಲರಿಗೂ ಅರ್ಥವಾಗುವ ಸಾಮಾನ್ಯ ಭಾಷೆಗೆ ಅನುವಾದಿಸುತ್ತಿದ್ದರು.

ಕೆಂಟ್‌ನ ಕೈ ಕುಲುಕಿ ಸಂತೋಷ ವ್ಯಕ್ತಪಡಿಸಿದ ಮಾರ್ಕೋವ್, "ಬಾಸ್, ನಿಮಗಾಗಿ ಒಂದು ರಾಶಿ ಬಿದ್ದಿದೆ!", ಎನ್ನುತ್ತ ಕಾಗದವೊಂದನ್ನು ಕೊಟ್ಟ.

"ರಾಸ್ಸಾಯನಿಕ ಯುದ್ಧದಲ್ಲ ಜರ್ಮನಿಯ ಕ್ಷಮತೆಯನ್ನು ತಿಳಿಸಿರಿ."

"ಜನರಲ್ ವಾನ್ ರುಂಡ್‌ಸ್ಟೆಟ್ ಮತ್ತು ಅವರ ಮೂವರು ಸೈನಿಕರನ್ನು ಫ್ರಾನ್ಸ್‌ದಲ್ಲಿ ಪತ್ತೆ ಹಚ್ಚಿರಿ."

ಕೆಂಟ್‌ನ ಮುಖ ಗಂಭೀರವಾಯಿತು.

"ನಾವೇನು ಸಂದೇಶ ಕಳಿಸಿದ್ದೇವೆ?" ಕಾಗದವನ್ನು ಹಿಂತಿರುಗಿಸುತ್ತ ಕೇಳಿದ ಕೆಂಟ್, ತಾವು ಕಳಿಸಿದ ಸಂದೇಶಗಳನ್ನು ತಿಳಿಸಿದ ಮಾರ್ಕೋವ್.

"ಅಣ್ವಸ್ತ್ರದ ಉತ್ಪಾದನೆ ದಿನಂಪ್ರತಿ ಒಂಬತ್ತರಿಂದ ಹತ್ತು. ಪ್ರತಿ ದಿನ ಸರಾಸರಿ ೪೦ ವಿಮಾನಗಳು ನಾಶವಾಗುತ್ತಿವೆ–ಕೋರೋ."

"ಕ್ರಯ್ಬ್ಟಯಲ್ಲಿದ್ದ ಸೈನಿಕ ತುಕಡಿಗಳನ್ನು ಪೂರ್ವದ ಕಡೆಗೆ ಕಳಿಸಲಾಗಿದೆ. ಕೆಲವನ್ನು ಕ್ರೀಮಿಯಾಕ್ಕೆ ಕಳಿಸಲಾಗಿದೆ–ಕೋರೋ."

ಇಂತಹ ನೂರಾರು ಸಂದೇಶಗಳು ಮಾಸ್ಕೋ ತಲುಪಿದ್ದವು. ಆದರೆ ನಾಜಿಗಳಿಗೆ ಮಾತ್ರ ಈ ಐದಂಕೆಗಳ ಸೂತ್ರ ಸಮಸ್ಯೆಯಾಗಿಯೇ ಉಳಿಯಿತು.


ಕೊನೆಗೆ ನಾಜೀ ಬೇಹುಗಾರರ ತಂಡ ತಮ್ಮ ಸಾಮರ್ಥ್ಯಕ್ಕೇ ಸವಾಲಾದ ಕೋರೋನ ರಹಸ್ಯ ಜಗತ್ತನ್ನು ಪತ್ತೆಮಾಡಿ ಅದರೊಳಗೆ ನುಗ್ಗುವುದಾಗಿ ನಿರ್ಧರಿಸಿತು. ಈ ಗುಪ್ತ ಪ್ರಸಾರಗಳ ರೇಡಿಯೋ ತರಂಗಾಂತರಗಳನ್ನು ಪ್ರತಿ ದಿನವೂ ಬದಲಿಸಲಾಗುತ್ತಿತ್ತು. ಅಲ್ಲದೇ

ಸಂದೇಶಗಳೆಲ್ಲ ಒಂದೆರಡು ನಿಮಿಷಗಳಲ್ಲೇ ಮುಗಿದು ಹೋಗುವಷ್ಟು ಮೋಟಕಾಗಿರುತ್ತಿದ್ದವು. ಕೆಲವಂತೂ ಕೆಲವೇ ಸೆಕೆಂಡುಗಳಲ್ಲಿ ಮುಗಿದು ಹೋಗುತ್ತಿದ್ದವು. ಎಡ್ಮಿರಲ್ ಕನಾರಿಸ್‌ನಿಗೆ ಈ ಬಗ್ಗೆ ಎಚ್ಚರಿಕೆ ಕೊಡಲಾಯಿತು. ತಕ್ಷಣ ಕಾರ್ಯೋನ್ಮುಖನಾಗುವಂತೆ ಹಿಮ್ಲರನಿಗೂ ಆದೇಶ ಬಂತು. ಎಲ್ಲಾ ರೇಡಿಯೋ ತಂತ್ರಜ್ಞರನ್ನೂ ಒಂದೆಡೆ ಜಮಾಯಿಸಲಾಯಿತು. ಆದರೆ ಶತ್ರುಗಳ ಚಾಕಚಕ್ಯತೆ, ಬುದ್ಧಿವಂತಿಕೆ, ಅನುಭವದೆದುರು ಎಲ್ಲವೂ ನಿರರ್ಥಕವಾದವು.

೧೯೪೧ ನವಂಬರ್ ೧೨.

ಅಪರಾಹ್ನ ಎರಡು ಹೊಡೆದು ಮೂವತ್ತು ನಿಮಿಷಗಳಾದಾಗ ಬರ್ಲಿನ್ನಿನ ಗುಪ್ತ ರೇಡಿಯೋ ಕೇಂದ್ರವು ಒಮ್ಮೆಲೇ ಅವಾಕ್ಕಾಯಿತು! ಆಪರೇಟರ್‌ಗಳ ಬೆರಳುಗಳನ್ನು ಮಧ್ಯದಲ್ಲೇ ಕತ್ತರಿಸಿದ ಅನುಭವ! ಸಂದೇಶವನ್ನು ಗ್ರಹಿಸುವದರಲ್ಲಿ ಮಗ್ನರಾಗಿದ್ದ ನಾಜೀ ರೇಡಿಯೋ ಕಂಟ್ರೋಲ್ ಡಿವಿಜನ್ನಿನ ಎಂಟು ಆಪರೇಟರ್‌ಗಳೂ ದಿಗ್ಭ್ರಮೆಯಿಂದ ಒಬ್ಬರ ಮುಖವನ್ನೊಬ್ಬರು ನೋಡಿದರು. ಎಲ್ಲಾ ರೇಡಿಯೋ ತರಂಗಗಳಲ್ಲೂ ಸಂಕೇತಗಳನ್ನು ಗ್ರಹಿಸಲು ಪ್ರಯತ್ನಿಸಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಕೋರೋ ಒಮ್ಮಿಂದೊಮ್ಮೆಲೇ ಸ್ತಬ್ಧವಾಗಿತ್ತು! ಅದೂ ಸಂದೇಶ ಪ್ರಸಾರದ ಮಧ್ಯದಲ್ಲಿ! ಯಂತ್ರೋಪಕರಣದಲ್ಲೇನಾದರೂ ದೋಷವೇ? ಅಥವಾ ಏನೋ ವಿಪರೀತ ಪರಿಸ್ಥಿತಿಯನ್ನು ಗ್ರಹಿಸಿ ಕೋರೋನೇ ಸ್ತಬ್ಧನಾದನೇ? ಹಾಗಾದರೆ ಏನಾಯಿತು?

ಕೋರೋನ ಬೇಟೆಗಾಗಿ ಬೇಹುಗಾರರು. ಹಗಲಿರುಳೆನ್ನದೇ [illegible]ಾರ್ಕ್, ರ್ಝೊ,



ಮಾರ್ಕೆಟ್, ಏರೋಡ್ರಮ್ ಇತ್ಯಾದಿ ಎಲ್ಲಾ ಕಡೆಗಳಲ್ಲೂ ತಿರುಗುತ್ತಿದ್ದರು. ಅಂಚೆ ಇಲಾಖೆಯ ಕೆಲಸಗಾರರಾಗಿ ತಿರುಗುತ್ತಿದ್ದ ಅವರ ವೇಷ ಭೂಷಣದಲ್ಲಿ ಯಾವ ಅನುಮಾನವೂ ಬರುವಂತಿರಲಿಲ್ಲ. ಮೊದಲು ಕೋರೋನ ಅನ್ವೇಷಣೆಗೆ ವಿದ್ಯುತ್ ನೌಕರರ ವೇಷ ಧರಿಸಿದ್ದರು. ಎಲೆಕ್ಟ್ರಿಕ್ ಲೈನನ್ನು ದುರಸ್ತಿ ಮಾಡುವ ನೆಪದಲ್ಲಿ ಏಕಾಂತ ಸ್ಥಳವೊಂದರಲ್ಲಿ ತಗ್ಗುತೋಡಿ ಕೋರೋನ ಸಂದೇಶಗಳನ್ನು ಹಿಡಿಯುವ ಪ್ರಯತ್ನ ನಡೆಸಿದ್ದರು. ಆದರೆ ಬೇಹುಗಾರನೊಬ್ಬ ತನ್ನ ಯಂತ್ರವನ್ನು ಕಾರ್ಯಗತಗೊಳಿಸಿ ಅದನ್ನು ತನ್ನ ಸಂಗಾತಿಗೆ ತಿಳಿಸುತ್ತಿದ್ದಾಗ ಅಲ್ಲಿ ಸುಳಿದಾಡಿದ ಕೋರೋನ ಪ್ರತಿನಿಧಿಯೊಬ್ಬ ಇದನ್ನು ಕೇಳಿಸಿಕೊಂಡ. ಈ ಸಮಾಚಾರ ಕೋರೋನಿಗೆ ತಲುಪಿದಾಗ ನಾಜೀ ಬೇಹುಗಾರರ ಜಾಲ ಸಂಪೂರ್ಣವಾಗಿ ನಿಷ್ಪ್ರಯೋಜಕವಾಗಿ ಹೊಸದಾರಿ ಹುಡುಕಬೇಕಾಯಿತು.

ಅತ್ತ ಕೋರೋನ ಸಂದೇಶ ಸ್ತಬ್ಧವಾಗುತ್ತಲೇ ರೇಡಿಯೋ ನಿಯಂತ್ರಕವು ಬೆಲ್ಜಿಯಂ, ಹಾಲೆಂಡ್. ಮತ್ತು ಫ್ರಾನ್ಸ್‌ಗಳಿಂದ ನಿರಂತರವಾಗಿ ಸಂದೇಶವಹನವಾಗುತ್ತಿರುವದನ್ನು ಸೂಚಿಸಿತು. ರೇಡಿಯೋ ಕಂಟ್ರೋಲ್ ಡಿವಿಜನ್ನಿನಲ್ಲಿ ಯಾರಿಗೂ ಈ ಜಂಜಾಟದ ಮಧ್ಯೆ ಕೋರೋ ಪುನಃ ತನ್ನ ಸಂದೇಶ ಕಳಿಸಲು ಪ್ರಾರಂಭಿಸಿದುದರ ಅರಿವಾಗಲೇ ಇಲ್ಲ! ಅಲ್ಲದೇ ಇಷ್ಟರಲ್ಲಿ ಹಲವಾರು ಮಹತ್ವಪೂರ್ಣ ಸಂದೇಶಗಳು ಮಾಸ್ಕೋ ತಲುಪಿಬಿಟ್ಟಿದ್ದವು.

ಈಗ ಕೆಂಟ್‌ನಿಗೆ ಅಜ್ಞಾತವಾಗಿ ಕೋರೋನನ್ನು ಭೇಟಿ ಮಾಡಬೇಕಾಗಿತ್ತು. ಅವನಿಗಾಗಿ ಹೊಸ ಆದೇಶವೊಂದನ್ನು ಕಳಿಸಿತ್ತು ಮಾಸ್ಕೋ.

ಆ ದಿನ ರಾತ್ರಿ ಬರ್ಲಿನ್ನಿನ 'ಫ್ರೀದೆನಾಡ್' ಮಹಲಿನಲ್ಲಿ ಕುಕೋಫ ದಂಪತಿಗಳು ಅತಿಥಿಯೊಬ್ಬನನ್ನು ಸ್ವಾಗತಿಸುವುದರಲ್ಲಿದ್ದರು. ಕುಕೋಫ್ ಪ್ರಸಿದ್ಧ ಲೇಖಕನಾಗಿದ್ದನಲ್ಲದೇ ಚಿತ್ರ ನಿರ್ಮಾಪಕನೂ ಆಗಿದ್ದ. ಅವನ ಒಂದು ಚಿತ್ರಕ್ಕೆ ನಾಜೀ ಪ್ರಚಾರಮಂತ್ರಿ ಗೋಪೋಲ್ಸ್‌ನಿಂದ ಪುರಸ್ಕಾರವೂ ದೊರೆತಿತ್ತು. ಕುಕೋಫನ ಹೆಂಡತಿ ಅರ್ಥಶಾಸ್ತ್ರದಲ್ಲಿ ನುರಿತವಳಾಗಿದ್ದಳು. ಇವಳು ಗೋಪೋಲ್ಸ್‌ನ ವಿಭಾಗದಲ್ಲಿ ಹಿಟ್ಲರನ ಘೋಷಣಾಪತ್ರ, ನಾಜಿಗಳ ಬೈಬಲ್ ಆದ 'ಮೈನ್ ಕಾಂಫ್'ಗಳಲ್ಲದೇ ಹಲವಾರು ಗುಪ್ತ ದಾಖಲೆಗಳನ್ನು ಅನುವಾದಿಸಿದ್ದಳು.

೧೯೪೧ ರ ನವಂಬರ್ ೧೨ ರ ರಾತ್ರಿ ಹತ್ತು ಗಂಟೆಗೆ ಕೆಂಟ್‌ನು ಕುಕೋಫ್ ದಂಪತಿಗಳ ಮನೆ ಸೇರಿದ. ನಾಜಿಗಳಿಗೆ ಯಾವ ಐಬೂ ಸಿಗದಂತೆ ಗೌಪ್ಯ ವ್ಯವಹಾರ ನಡೆಸಲು ಅಲ್ಲಿ ವ್ಯವಸ್ಥೆಯಿತ್ತು. ಕೆಂಟ್‌ನಿಗೆ ಕುಕೋಫ್‌ನನ್ನು ಭೇಟಿಯಾಗುವ ಯೋಗ ಅಲ್ಲಿ ಕೂಡಿಬಂತು. ಅವರಿಬ್ಬರೂ ಅರ್ಧಗಂಟೆಯ ವರೆಗೆ ಮಾತಾಡಿದ ನಂತರ ಬರ್ಲಿನ್ನಿನಲ್ಲಿ ತುಸು ಹೊತ್ತು ತಿರುಗಾಡಿ ಮಾಸ್ಕೋಕ್ಕೆ ಸಂದೇಶ ಕಳಿಸಿದ ಕೋರೋ.

"ಪ್ರಾಗ್‌ದೊಂದಿಗೆ ಸಂಪರ್ಕ ಏರ್ಪಡಿಸಲಾಗಿದೆ."

ಸ್ಲೋವಾಕ್ ಪಾರ್ಟಿಶನ್ ದಳಕ್ಕೆ ಯಾವ ತರಂಗಾಂತರ ಬಳಸಬೇಕೆಂದು ತಿಳಿಸಲಾಗಿದೆ."

"ಬಹಳಷ್ಟು ಸಾಮಗ್ರಿಗಳನ್ನು ಕೂಡಿಹಾಕಲಾಗಿದೆ. ಹೆಚ್ಚಿನ ಟ್ರಾನ್ಸ್‌ಮೀಟರಿನ ಅಗತ್ಯವಿದೆ."

"ನಾಜೀ ರೇಡಿಯೋ ಡಿಫೆನ್ಸ್‌ದಲ್ಲಿ ಸಂದೇಶ ಸಂಗ್ರಹಕ್ಕೆ ನಿಯಮಿಸಿದ ಹೊಸ ಯೂನಿಟ್ಟಿನಲ್ಲಿಯ ಒಬ್ಬ ವ್ಯಕ್ತಿ ಕೋರೋನ ಬಲೆಗೆ ಬಿದ್ದಿದ್ದಾನೆ."

*

ಕೆಂಟ್ ಮತ್ತು ಕೋರೋರ ಹೆಸರು ಕ್ರಾಂಜ್ ಕೇಂದ್ರಕ್ಕೆ ತಿಳಿದು ಆರು ತಿಂಗಳು ಕಳೆದರೂ ಪ್ರಯೋಜನವಾಗಿರಲಿಲ್ಲ. ಸಮಗ್ರ ನಾಜೀ ಸೈನ್ಯ, ಬೇಹುಗಾರ ಇಲಾಖೆ, ಹಾಗೂ ಪೋಲೀಸ್ ಪಡೆಗಳು ಇವರ ಮೇಲೆ ಅಜ್ಞಾತ ಯುದ್ಧ ಸಾರಿದ್ದವು. ಆದರೆ ಇವರ ಕುಶಲತೆ, ದಕ್ಷತೆಯ ಎದುರು ನಾಜಿಗಳ ಸಕಲಬಲವೂ ಹತಬಲವಾಯಿತು. ಊಟ,

ನಿದ್ರೆ ಬಿಟ್ಟು ಇವರ ರಹಸ್ಯವನ್ನು ಭೇದಿಸಲು ಕನಾರಿಸ್ ಪಣತೊಟ್ಟ. ಬೆಲ್ಜಿಯಂ ಹಾಗೂ ಫ್ರಾನ್ಸಗಳಲ್ಲಿ ಇವರ ಜಾಡನ್ನು ಕಂಡುಹಿಡಿಯಲು ವಿಶೇಷ ಇನ್‌ಸ್ಪೆಕ್ಟರುಗಳನ್ನು ಕಳಿಸಲಾಯಿತು. ಸಂಬಂಧಿತ ಕ್ಷೇತ್ರಗಳ ಪೋಲೀಸ್ ದಳಗಳಿಗೆ ವಿಶೇಷ ಎಚ್ಚರಿಕೆ ನೀಡಲಾಯಿತು. ಇವರಿಗೆಲ್ಲ ಬೇಕಾದಷ್ಟು ರೇಡಿಯೋ ಆಪರೇಟರುಗಳನ್ನೂ ರಹಸ್ಯ ಭಾಷಾ ತಜ್ಞರನ್ನೂ ಒದಗಿಸಲಾಯಿತು.

೧೯೪೧ರ ಡಿಸೆಂಬರ್ ೨೦ರ ಮಧ್ಯ ರಾತ್ರಿ.

ಬ್ರುಸೆಲ್ಸ್‌ನ ಆ ಒಂದು ಸೌಧ ಕತ್ತಲೆಯಲ್ಲಿ ನಿಃಶಬ್ದವಾಗಿತ್ತು. ಎರಡು ದೊಡ್ಡ ಗಾಡಿಗಳು ಮಂದ ಪ್ರಕಾಶದಲ್ಲಿ ಸಾಗುತ್ತಿದ್ದವು. ಟ್ರಾನ್ಸ್‌ಮೀಟರ್ ಜೋಡಿಸಿದ ಕೆಂಟ್‌ನ ಎರಡಂತಸ್ತಿನ ಆ ಸೌಧವನ್ನು ಪೋಲೀಸರು ಸದ್ದಿಲ್ಲದೆ ಸುತ್ತುಗಟ್ಟಿದರು.

ಗೇಟಿನ ಶಬ್ದದಿಂದ ಮನೆಯೊಡತಿ ಮುದುಕಿಗೆ ನಿದ್ರಾಭಂಗವಾಯಿತು. ಅವಳು ಟಾರ್ಚ್ ಹಿಡಿದು ಹೊರ ಬಂದು ಬಾಗಿಲ ಬಳಿ ನಿಂತಳು. ಕೂಗಲು ಬಾಯಿ ತೆರೆಯಬೇಕೆನ್ನುವಷ್ಟರಲ್ಲಿ ಬಲವಾದ ಕೈಯೊಂದು ಅವಳ ಬಾಯನ್ನು ಗಟ್ಟಿಯಾಗಿ ಮುಚ್ಚಿತು. ಇನ್ನೊಬ್ಬ ಪಿಸ್ತೂಲು ಹಿಡಿದು ಮಹಡಿಯನ್ನೇರಿದ.

ಯುವತಿಯೊಬ್ಬಳು ರೇಡಿಯೋದ ಬಳಿ ಕುಳಿತಿದ್ದಳು. ಪುರುಷರಿಬ್ಬರು ಸಂಕೇತ ಭಾಷೆಯ ಅನುವಾದದಲ್ಲಿ ಮಗ್ನರಾಗಿದ್ದರು. ಪರಿಸ್ಥಿತಿಯ ಅರಿವಾಗಿ ಪಿಸ್ತೂಲು ತೆಗೆಯುವಷ್ಟರಲ್ಲಿ ಶತ್ರುಗಳ ಎರಡು ಗುಂಡುಗಳು ಅವರನ್ನು ಉರುಳಿಸಿದವು. ರೇಡಿಯೋದ ಬಳಿ ಕುಳಿತ ಯುವತಿಯು ಕಾಗದ ಪತ್ರಗಳ ಕಟ್ಟಿಗೆ ಬೆಂಕಿ ಹಚ್ಚಿದಳು. ಆದರೆ ಪೋಲೀಸನೊಬ್ಬ ತಕ್ಷಣ ಅದನ್ನು ಆರಿಸಿದ.

ಗುಂಡಿನೇಟು ತಿಂದವರಿಬ್ಬರೂ ಸತ್ತಿರಲಿಲ್ಲವಾದ್ದರಿಂದ ಅವರನ್ನು ದಸ್ತಗಿರಿ ಮಾಡಲಾಯಿತು. ಇವರಿಬ್ಬರೂ ಆ ರಾತ್ರಿ ಬ್ರುಸೆಲ್ಸ್‌ನಲ್ಲಿ ಕೆಂಟ್ ಭೇಟಿ ಮಾಡಿದ ಲೆಫ್ಟಿನೆಂಟ್ ಮಕಾರೋವ್ ಮತ್ತು ದಾನಿಲೋವ್. ಅತಿ ಚಾಣಾಕ್ಷ ಸೋವಿಯತ್ ಬೇಹುಗಾರರಾದ ಇವರು ೧೯೩೯ರಿಂದಲೇ ಬೆಲ್ಜಿಯಂನಲ್ಲಿ ಸಕ್ರಿಯರಾಗಿದ್ದರು.

ಕೆಂಟ್—ಕೋರೋ ಗುಂಪಿನ ಒಂದು ಟ್ರಾನ್ಸ್‌ಮೀಟರನ್ನೇನೋ ನಾಜಿಗಳು ವಶಪಡಿಸಿಕೊಂಡರು. ಆದರೆ ಗುಂಪಿನ ನೇತಾರರಿಬ್ಬರೂ ಫರಾರಿಯಾಗಿದ್ದರು. ಬ್ರುಸೆಲ್ಸ್‌ದಲ್ಲಿ ಸಿಕ್ಕಿದ ಕಾಗದ ಪತ್ರಗಳು ಬರ್ಲಿನ್ ತಲುಪಿದವು. ಅವುಗಳಿಂದ ಕೆಲವು ಮಹತ್ವದ ವಿಷಯಗಳು ಬಯಲಾದವು. ಕೈದಿಯಾದ ಬೇಹುಗಾರರು ಹಿಂಸೆ ಸಹಿಸಲಾರದೇ ಕೆಲವು ರಹಸ್ಯ ಸಂಗತಿಗಳನ್ನು ಬಹಿರಂಗ ಪಡಿಸಿದರು.

ಕೆಂಟ್ ಮತ್ತು ಕೋರೋ ತಮಗೊದಗಿದ ಅಪಾಯವನ್ನು ಅರಿತಿದ್ದರು. ಆದರೂ ಪ್ಯಾರೀಸ್, ಆಮ್ಸ್‌ಟರ್ಡ್ಯಾಮ್, ಮಾರ್ಸೇಲಿಸ್, ಜಿನೇವಾಗಳಿಂದ ನಿರಂತರವಾಗಿ ಸಂದೇಶಗಳು ಸಾಗುತ್ತಲೇ ಇದ್ದವು. ನಾಜಿಗಳ ಯುದ್ಧ ಚಟುವಟಿಕೆಯೂ ಅಧಿಕವಾಗಲು ಪ್ರಾರಂಭಿಸಿದ್ದರಿಂದ ಕೆಂಟ್ ಮತ್ತು ಕೋರೋ ಗುಂಪುಗಳ ಜವಾಬ್ದಾರಿಯೂ ಹೆಚ್ಚಿತ್ತು. ಸೈನ್ಯಗಳು ಯಾವ ಯಾವ ದಾರಿಯಲ್ಲಿ ಎಲ್ಲೆಲ್ಲಿ ಸಾಗುತ್ತಿವೆ; ದೈನಿಕ ಉತ್ಪಾದನೆ ಎಷ್ಟು; ಹೊಸದಾಗಿ ಯಾವ ಯಾವ ಶಸ್ತ್ರಗಳು ಬಳಕೆಯಾಗುತ್ತಿವೆ, ಕೊಲ್ಲಲ್ಪಟ್ಟ ಸೈನಿಕರೆಷ್ಟು, ಸೈನ್ಯಕ್ಕೆ ಸಾಮಗ್ರಿಗಳ ಸರಬರಾಜು ಹೇಗಾಗುತ್ತಿದೆ ಇತ್ಯಾದಿ ಎಲ್ಲಾ ವಿಷಯಗಳನ್ನೂ ಅವರು ಮಾಸ್ಕೋಕ್ಕೆ ತಿಳಿಸಬೇಕಾಗಿತ್ತು.

ಈಗ ಸುಮಾರು ಮುನ್ನೂರು ನಾಜೀ ಟ್ರಾನ್ಸ್‌ಮೀಟರಗಳು ನಿರಂತರವಾಗಿ ಕೆಲಸ ಮಾಡುತ್ತಿದ್ದವು. ಬ್ರುಸೆಲ್ಸ್‌ನಲ್ಲಿ ಕಾಗದ ಪತ್ರಗಳನ್ನು ವಶಪಡಿಸಿಕೊಂಡಂದಿನಿಂದ ರಹಸ್ಯ ಭಾಷಾ ತಜ್ಞರ ಜವಾಬ್ದಾರಿ ಅಧಿಕವಾಗಿತ್ತು. ಈ ರಹಸ್ಯ ದಾಖಲೆಗಳಿಂದ ಶತ್ರುಶೋಧಕ್ಕೆ ಇನ್ನಷ್ಟು ನೆರವು ದೊರೆತಿತ್ತು. ಈ ಕೆಲಸದ ಮುಖ್ಯ ಜವಾಬ್ದಾರಿಯನ್ನು ಹ್ಯಾಲ್‌ಮನ್‌ನಿಗೆ ಒಪ್ಪಿಸಲಾಯಿತು. ಉತ್ಸಾಹಿ ಹಾಗೂ ಪ್ರತಿಭಾನ್ವಿತ ಯುವಕನಾಗಿದ್ದ ಹ್ಯಾಲ್‌ಮನ್ ಯುದ್ಧ ಪ್ರಾರಂಭ

ವಾಗುವದಕ್ಕಿಂತ ಮೊದಲು ವಿದೇಶ ವ್ಯವಹಾರದ ಸಂಸ್ಥೆಯಲ್ಲಿ ಶಿಕ್ಷಣ ಪಡೆದಿದ್ದ. ಈತ ಇಂಗ್ಲೀಷ್ ಹಾಗೂ ರಷ್ಯನ್ ಭಾಷೆಯನ್ನು ಚೆನ್ನಾಗಿ ಬಲ್ಲವನಾಗಿದ್ದ. ೧೯೩೭ರಿಂದ ಹಿಟ್ಲರನ ತರುಣ ಸಂಘದಲ್ಲಿ ಕೆಲಸ ಮಾಡುತ್ತಿದ್ದ ಆತ ನಾಜಿಗಳ ವಿಶ್ವಾಸಕ್ಕೆ ಪಾತ್ರನಾಗಿದ್ದರಿಂದಲೇ ಅವನಿಗೆ ವಾಯುಸೇನೆಯ ವಿಚಾರ ವಿಭಾಗದಲ್ಲಿ ಲೆಫ್ಟಿನೆಂಟ್ ಹೋರೋ ಶೂಲ್ಸ್ ಬ್ಯೋಜನ್‌ನ ಬಳಿ ಒಂದು ಸ್ಥಾನ ದೊರಕಿತ್ತು.

ಹ್ಯಾಲ್‌ಮನ್‌ನ ಜೀವನ ವೈವಿಧ್ಯಮಯವಾಗಿತ್ತು. ಆತ ಪ್ರತಿದಿನ ಸಂಜೆ ತನ್ನ ಮಿತ್ರ ಲೆಫ್ಟಿನೆಂಟ್ ಹೋರೋ ಶೂಲ್ಸ್ ಬ್ಯೋಜನ್‌ರ ಮನೆಯಲ್ಲಿ ಕಾಲ ಕಳೆಯುತ್ತಿದ್ದ. ಅವನ ಪಾಲಿಗೆ ಅದೊಂದು ಅರಿಯಲಾಗದ ವಿಚಿತ್ರ ಜಗತ್ತಾಗಿತ್ತು. ಅಲ್ಲಿ ವಾದವಿವಾದಗಳು, ಟೀಕೆ-ಉಪನ್ಯಾಸಗಳು ನಡೆಯುತ್ತಿದ್ದವು. ಅವೆಲ್ಲವನ್ನೂ ಲಕ್ಷಗೊಟ್ಟು ಕೇಳುತ್ತಿದ್ದ ಹೈಲ್‌ಮನ್. ತನ್ನದೇ ಆದ ಸಿದ್ಧಾಂತಗಳಿಂದ ಹ್ಯಾಲ್‌ಮನ್‌ನ ಹಲವಾರು ಮೌಲಿಕ ವಿಚಾರಗಳನ್ನು ಗಾಳಿಗೆ ತೂರಿ ಬಿಡುತ್ತಿದ್ದ ಹೋರೋ. ಇದರಿಂದ ಹಾಲ್ಮನ್ ಒಮ್ಮೊಮ್ಮೆ ಕೋಪಗೊಂಡರೂ ಪ್ರತಿಭಟಿಸದೇ ಹಿಂತಿರುಗುತ್ತಿದ್ದ.

ಒಂದು ದಿನ ಸಂಕೇತಗಳನ್ನು ಅರ್ಥವಿಸುವ ವಿಭಾಗವು ಮಹತ್ವದ ರಹಸ್ಯವೊಂದನ್ನು ಪತ್ತೆಹಚ್ಚಿತು. ಅದರ ಆಧಾರದಿಂದ ಡಚ್ ಟ್ರಾನ್ಸ್‌ಮೀಟರ್ ದಳವೊಂದು ಹಿಡಿಯಲ್ಪಟ್ಟಿತಲ್ಲದೇ ಪ್ಯಾರಿಸ್ಸಿನಲ್ಲಿ ತಮ್ಮ ಮನೆಯಿಂದ ಸಂದೇಶ ರವಾನಿಸುತ್ತಿದ್ದ ಸೋಕೋಲ್ ಎಂಬವನನ್ನು ಪತ್ನಿ ಸಹಿತವಾಗಿ ಬಂಧಿಸಲಾಯಿತು. ಹಾಲೆಂಡಿನ ಬೇಹುಗಾರರು ಹಾಗೂ ಸೋಕೊಲ್ ದಂಪತಿಗಳು ಶತ್ರುಗಳ ಚಿತ್ರಹಿಂಸೆಯನ್ನು ತಾಳಲಾರದೇ ಸಂಬಂಧಪಟ್ಟ ಪ್ರಮುಖ ವ್ಯಕ್ತಿಗಳ ಹೆಸರು ವಿಳಾಸವನ್ನೆಲ್ಲ ಬಹಿರಂಗಪಡಿಸಿದರು.

ಸಜ್ಜನನೆಂತಿದ್ದ ತನ್ನ ಮಿತ್ರನಮೇಲೂ ಈಗ ಕಪ್ಪು ಛಾಯೆ ಬಿದ್ದಿರುವುದನ್ನು ಗ್ರಹಿಸಿದ ಹ್ಯಾಲ್‌ಮನ್ ಅವನ ನಂಬರ್ ತಿರುಗಿಸಿದ. ಆದರೆ ಫೋನಿನಲ್ಲಿ ಅವನು ಸಿಗದಿದ್ದಾಗ ತುರ್ತು ಕೆಲಸವಿರುವುದರಿಂದ ತಕ್ಷಣ ಅವನನ್ನು ಕರೆಯುವಂತೆ ಅವನ ಕಾರ್ಯದರ್ಶಿಗೆ ಹೇಳಿದ.

ಕೆಂಟ್ ಮತ್ತು ಕೋರೋ ಗುಂಪಿನ ರಹಸ್ಯವನ್ನು ಭೇದಿಸುವ ಕಾರ್ಯ ಒಬ್ಬ ಕಾರ್ಪೊರೀರಲ್‌ನ ಜವಾಬ್ದಾರಿಯಲ್ಲಿ ನಡೆಯುತ್ತಿತ್ತು. ಶತ್ರುಗಳ ಷಡ್ಯಂತ್ರವನ್ನು ನಿರ್ಮೂಲಗೊಳಿಸಲು ಅಹರ್ನಿಶಿಯಾಗಿ ಪ್ರಯತ್ನಿಸುತ್ತಿದ್ದ ಈತ ಅವಿಶ್ರಾಂತವಾಗಿ ದುಡಿಯುತ್ತಿದ್ದ. ಊಟೋಪಚಾರಕ್ಕೂ ತನ್ನ ಜಾಗ ಬಿಟ್ಟು ಕದಲುತ್ತಿರಲಿಲ್ಲ.

ಮಧ್ಯಾಹ್ನದ ಊಟದ ವೇಳೆ. ಹ್ಯಾಲ್‌ಮನ್‌ನ ಟೇಬಲ್ ಮೇಲಿನ ಟೆಲಿಫೋನ್ ಗಂಟೆ ಬಾರಿಸಿತು. ರಿಸೀವರ್ ಎತ್ತಿದ ಕಾರ್ಪೋರೀರಲ್ ಅನೌಪಚಾರಿಕವಾಗಿ ಕೇಳಿದ.

"ಹಲೋ ?"

"ಹೋರೋ ಮಾತಾಡುತ್ತಿದ್ದೇನೆ," ಇನ್ನೊಂದು ಕೊನೆಯಿಂದ ಉತ್ತರ ಬಂತು, ಹ್ಯಾಲ್‌ಮನ್ನನಿಗಾಗಿ ಫೋನ್ ಮಾಡುತ್ತಿದ್ದ ಹೋರೋ.

"ಆಂ ? ಕೋರೋ ? !" ಉದ್ವೇಗದಿಂದ ಕೇಳಿದ ಕಾರ್ಪೋರೀರಲ್. ಹಲವು ದಿನಗಳಿಂದ ಅವನ ತಲೆಯತುಂಬ ಕೋರೋ ಶಬ್ದವೇ ನಾಟ್ಯವಾಡುತ್ತಿದ್ದರಿಂದ ಫೋನಿನಲ್ಲಿ ಬಂದ 'ಹೋರೋ' ಅವನಿಗೆ 'ಕೋರೋ' ಆಗಿ ಕೇಳಿಸಿದ್ದು ಸಹಜವಾಗಿತ್ತು. ಆದರೆ ಅತ್ತಕಡೆಯಿಂದ ಬಂದ ಧ್ವನಿಯಲ್ಲಿ ಭಯ, ಕಾತರ, ಗಾಬರಿಗಳು ತುಂಬಿಕೊಂಡಿದ್ದವು.

"ಏನಂದೆ ? ನಿನಗೇನಾದರೂ ತಲೆಕೆಟ್ಟಿದೆಯೆ ? ಇನ್ನೆಂದೂ ಆ ಹೆಸರಿನಿಂದ ನನ್ನನ್ನು ಕರೆಯಬೇಡ."

ಸ್ತಂಭೀಭೂತನಾದ ಕಾರ್ಪೋರೀರಲ್. ರಿಸೀವರ್ ಹಿಡಿದ ಕೈ ಕ್ಷಣಕಾಲ ಜಡವಾಯಿತು. ಆದರೆ ಮರುಕ್ಷಣವೇ ಜಾಗ್ರತನಾದ,

"ಹಾಂ ಹಾಂ, ಕೋರೋ... ಹಲೋ ಕೋರೋ... ನಾನು ಹಾಗೇ ಕರೆಯು

ತ್ತೇನೆ...ಹಲೋ ಕೋರೋ...ಈಗ..." ಆದರೆ ಆ ಕಡೆಯಿಂದ ಯಾವಾಗಲೋ ಡಿಸ್ ಕನೆಕ್ಟ್ ಆಗಿಹೋಗಿತ್ತು !

ರಿಸೀವರ್ ಹಿಡಿದೇ ಕುಳಿತ ಕಾರ್ಪೋರಲ್ ತಾನೇನೂ ಕನಸು ಕಾಣುತ್ತಿಲ್ಲವಷ್ಟೇ ? ಎಂದು ಯೋಚಿಸಿದ. ಮೈಯಲ್ಲಿ ವಿದ್ಯುತ್ ಸಂಚಾರ ವಾಯಿತು. ತನ್ನ ಆಫೀಸರ್ ಬಳಿ ಓಡಿದ.

"ನಾನು ಈಗ ತಾನೇ ಕೋರೋನ ಬಳಿ ಫೋನಿನಲ್ಲಿ ಮಾತಾಡಿ ಬಂದೆ!" ಏದುಸಿರು ಬಿಡುತ್ತ ಹೇಳಿದ ಆತ.

ಮುಂದಿನ ಕೆಲಸ ಸುಲಭವಾಗಿತ್ತು. ಫೋನಿನಲ್ಲಿ ಮಾತಾಡಿದವರು ಯಾರೆಂಬುದೂ ಗೊತ್ತಾಗಿತ್ತು. ಸಂಕೇತಗಳನ್ನು ಸಾಮಾನ್ಯ ಭಾಷೆಗೆ ತರ್ಜುಮೆಗೊಳಿಸಿರುವ ವಿಭಾಗದಲ್ಲಿ ಕೋರೋನ ರಹಸ್ಯೋದ್ಘಾಟನೆಯಾದ ಸಮಾಚಾರ ಹರಡಿತು. ಜಟಿಲ ಸಮಸ್ಯೆಗಳೆಲ್ಲ ಒಂದೊಂದಾಗಿ ಬಗೆಹರಿಯಲು ಪ್ರಾರಂಭಿಸಿದವು. ಬಲಿಷ್ಠ ರಾಷ್ಟ್ರವೊಂದರ ರಕ್ಷಣಾಪಡೆಯ ಕಣ್ಣಿಗೆ ಮಣ್ಣೆರಚಿದ, ಉನ್ನತ ಅಧಿಕಾರಿಗಳನ್ನೆಲ್ಲ ಅಶಾಂತಿಯಲ್ಲಿ ಮುಳುಗಿಸಿ ಆ್ಯಮ್ಸ್ಟರ್ಡಮ್, ಬ್ರುಸೆಲ್ಸ್, ಪ್ಯಾರೀಸ್, ಮಾರ್ಸೆಲಿಸ್‌ಗಳಿಗೆ ನೂರಾರು ಬಾರಿ ಹಿಂದೆ ಮುಂದೆ ತಿರುಗಿಸಿದ, ನಾಜಿಗಳ ಸಿಂಹಸ್ವಪ್ನವಾಗಿದ್ದ ಕೋರೋ ತಾನಾಗಿಯೇ ಪ್ರಕಟವಾಗಿ ಶತ್ರುಜಾಲದಲ್ಲಿ ಸಿಕ್ಕಿಕೊಂಡಿದ್ದ.

೩೧ ಅಗಸ್ಟ್ ೧೯೪೩. ಹೋರೋ ಶೂಲ್ಸ ಬ್ಯೋಜೋನ್‌ನ ಆಫಿಸಿನ ಟೆಲಿಫೋನ್‌ನ ಗಂಟೆ ಬಾರಿಸಿತು.

"ನಾನು ಮೂರನೇ ಬಾಗಿಲಿನ ಕಾವಲುಗಾರ ಮಾತಾಡುತ್ತಿರುವುದು. ಯಾರೋ ಒಬ್ಬರು ನಿಮ್ಮನ್ನು ಕಾಣಲು ಬಯಸುತ್ತಾರೆ,"

"ಸರಿ. ನಾನೇ ಬರುತ್ತಿದ್ದೇನೆ," ಹ್ಯಾಟ್ ಹಾಗೂ ರಿವಾಲ್ವರನ್ನು ಅಲ್ಲಿಯೇ ಬಿಟ್ಟು ಮಹಡಿಯನ್ನಿಳಿಯತೊಡಗಿದ ಹೋರೋ.

ಕೊನೆಯ ಬಾರಿ ಮಗನನ್ನು ಸಂಧಿಸಲು ಬಂದಿದ್ದ ಅವನ ತಂದೆ. ನೌಕಾ ವಿಭಾಗದಲ್ಲಿ ಉಚ್ಚಾಧಿಕಾರಿಯಾಗಿದ್ದ ಆತ. ಮಗ ವಾಯುಪಡೆಯ ಉನ್ನತ ಪದವಿಯಲ್ಲಿದ್ದ. ಇನ್‌ಸ್ಪೆಕ್ಟರ್ ಕೋಫ್ಕೊ ಅವನನ್ನು ಒಂದು ಕೋಣೆಗೆ ಕರೆದೊಯ್ದು ಕೂಡ್ರಿಸಿದ. ಮೂಲೆಯಲ್ಲಿದ್ದ ಬಟ್ಟೆ ಹೊದಿಸದ ಮೇಜು, ಗೋಡೆಗೊರಗಿಸಿದ ಒಂದು ಸೋಫಾ, ಎರಡು ಸಾದಾ ಖುರ್ಚಿಗಳಿಂದ ನಿರಾಡಂಬರವಾಗಿದ್ದ ಆ ಕೋಣೆ ಜನಸಂಪರ್ಕದಿಂದ ಮುಕ್ತವಾಗಿತ್ತು.

ಸುಮಾರು ಐದು ನಿಮಿಷಗಳು ಕಳೆದಾಗ ಬಾಗಿಲು ತೆರೆದುಕೊಂಡಿತು. ಹೋರೋ ಒಳಬಂದ. ಅವನೊಂದಿಗೆ ಇನ್‌ಸ್ಪೆಕ್ಟರ್ ಕೋಫ್ಕೊ ಮತ್ತು ಇನ್ನೊಬ್ಬ ಆಫೀಸರರಿದ್ದರು.

ಕೈಗಳನ್ನು ಹಿಂದಕ್ಕೆ ಕಟ್ಟಿ ಭಾರವಾದ ಹೆಜ್ಜೆಗಳನ್ನಿಡುತ್ತಾ ಸಾವಧಾನವಾಗಿ ನಡೆದು ಬರುತ್ತಿದ್ದ ಹೋರೋ. ಮುಖದ ಮೇಲೆ ಚಿಂತೆ ಮುತ್ತಿಕೊಂಡಿತ್ತು. ಹಣೆ ಸುಕ್ಕುಗಟ್ಟಿತ್ತು. ಮಗನ ಕೈಹಿಡಿದುಕೊಂಡು ಮೇಜಿನ ಬಳಿ ಬಂದ ತಂದೆ ಅವನಿಗೊಂದು ಖುರ್ಚಿ ಎಳೆದುಕೊಟ್ಟು ತಾನೊಂದರಲ್ಲಿ ಕುಳಿತುಕೊಂಡ. ಜೊತೆಗಿದ್ದ ಅಧಿಕಾರಿಗಳಿಬ್ಬರೂ ಸೋಫಾದಲ್ಲಿ ಆಸೀನರಾದರು.

"ಬ್ಯೋಜನ್, ಮಗನೆಂಬ ವಾತ್ಸಲ್ಯದಿಂದ ನಿನ್ನ ಬಳಿ ಬಂದಿದ್ದೇನೆ. ನಿನಗೆ ಸಹಾಯ ಮಾಡಲು ನಾನು ಏನು ಮಾಡಬೇಕೆಂಬುದನ್ನು ಹೇಳು. ನಿನ್ನನ್ನು ಅರೆಸ್ಟ್ ಮಾಡಿದ್ದೇಕೆ? ನಿನ್ನ ತಾಯಿ ಹಾಗೂ ಸಹೋದರರು ನಿನ್ನನ್ನು ಕಾಣಲು ಬಯಸುತ್ತಿದ್ದರು. ಆದರೆ ಅವರಿಗೆ ಅನುಮತಿ ದೊರೆಯಲಿಲ್ಲ." ಎಂದು ತಂದೆ ಹೇಳಿದ.

"ನನಗೆ ಈಗ ಸಹಾಯ ಸಲ್ಲಿಸುವ ತೊಂದರೆಯನ್ನು ವೃಥಾ ತೆಗೆದುಕೊಳ್ಳಬೇಡಿ. ಹಾಗೆ ಮಾಡುವುದು ವ್ಯರ್ಥ. ಮುಂದಿನ ಪರಿಣಾಮವನ್ನು ಚೆನ್ನಾಗಿ ಅರಿತೇ ಈ ಸಾಹಸಕ್ಕಿಳಿದಿದ್ದೇನೆ. ನಿಜ ಹೇಳಬೇಕೆಂದರೆ ಸರಕಾರದೊಳಗಿದ್ದೇ ಸರಕಾರದೊಂದಿಗೆ ಹೋರಾಟ ನಡೆಸಿದ್ದೇನೆ. ಅವಕಾಶ ಸಿಕ್ಕಿದರೆ ಇನ್ನು ಮುಂದೂ ಇದನ್ನೇ ಮುಂದುವರಿಸದೆ ಬಿಡುವುದಿಲ್ಲ. ನಾನು ಅಪಾಯದ ದವಡೆಯಲ್ಲಿರುವುದು ನನಗೆ ತಿಳಿಯದೇ ಇಲ್ಲ. ಈ ಮುಂದಿನ

ಪರಿಣಾಮವನ್ನೆದುರಿಸಲು ಸಿದ್ಧವಾಗಿಯೇ ಇದ್ದೇನೆ,"

ಶಾಂತವಾಗಿ ಹೇಳಿದ ಹೋರೋ

"ಬ್ರ್ಯೋಜನ್, ನಿನಗೀಗ ಎಂತಹ ಪರಿಸ್ಥಿತಿಯನ್ನೇದುರಿಸಬೇಕಾಗಿದೆಯೆಂದರೆ... "ಅವನ ಕಂಠ ಬಿಗಿಯಿತು. "ಹೂಂ. ನಿನಗೆ ಇನ್ನಷ್ಟು ತೊಂದರೆಯನ್ನೇಕೆ ಕೊಡಲಿ! ನಾನು ಹೋಗುತ್ತೇನೆ."

ಇಬ್ಬರೂ ಮೇಲೆದ್ದರು. ಸ್ವಾಭಿಮಾನದಿಂದ ಕೈಕುಲುಕುತ್ತ ಬ್ರ್ಯೋಜನ್ ತಂದೆಯ ಮುಖ ನೋಡಿದ. ಕಣ್ಣುಗಳು ಸಜಲವಾದವು.

"ಮಗೂ, ನಾನು ನಿನ್ನನ್ನು ಸದಾಕಾಲವೂ ಪ್ರೀತಿಸಿದ್ದೇನೆ."

"ಹೌದು ಡ್ಯಾಡಿ. ಅದರಲ್ಲಿ ಸಂಶಯವೇ ಇಲ್ಲ,"

ಬ್ರ್ಯೋಜನ್ ತನ್ನ ತಂದೆಯನ್ನು ಬಾಗಿಲವರೆಗೆ ಬೀಳ್ಕೊಟ್ಟು ಮೌನವಾಗಿ ಹಿಂತಿರುಗಿದ. ಇದು ತಮ್ಮ ಕೊನೆಯ ಭೇಟಿ ಎಂಬುದು ತಂದೆ, ಮಗ ಇಬ್ಬರಿಗೂ ತಿಳಿದಿತ್ತು.

ಬಂಧಿಸಲ್ಪಟ್ಟವರಲ್ಲಿ ಸೈನಿಕರು, ಅಧಿಕಾರಿಗಳು, ಸರ್ಕಾರೀ ನೌಕರರರು, ಲೇಖಕರು, ಪತ್ರಿಕಾಕರ್ತರು, ವಿದ್ಯಾರ್ಥಿಗಳು ಎಲ್ಲರೂ ಇದ್ದಾರೆ. ಕೆಳದರ್ಜೆಯ ಜನರು ಬಹಳ ಕಡಿಮೆ ಎಂದು ಹಿಟ್ಲರನಿಗೆ ರಿಪೋರ್ಟು ಕಳಿಸಲಾಯಿತು.

೧೯೪೨ರ ಸಪ್ಟಂಬರ್‌ದಿಂದ ನವಂಬರದವರೆಗೆ ಯುರೋಪದ ತುಂಬೆಲ್ಲ ಕೆಂಟ್—ಕೋರೋ ಗುಂಪಿಗೆ ಸೇರಿದ ಅಸಂಖ್ಯ ವ್ಯಕ್ತಿಗಳು ಬಂಧಿಸಲ್ಪಟ್ಟರು. ನಾಜೀ ರಾಷ್ಟ್ರದಲ್ಲಿ ಸೋವಿಯತ್ ಬೇಹುಗಾರರ ಸೊಂಟ ಮುರಿದುಬಿತ್ತು. ಆದರೂ ಇವರ ಜಾಲ ಸಂಪೂರ್ಣವಾಗಿ ಹರಿದಿರಲಿಲ್ಲ. ಆಗಲೂ ಹಲವಾರು ಕೇಂದ್ರಗಳಿಂದ ಗುಪ್ತ ಸಂದೇಶಗಳು ಮಾಸ್ಕೋಕ್ಕೆ ರವಾನೆಯಾಗುತ್ತಲೇ ಇದ್ದವು. ವಾಸ್ತವವಾಗಿ ಕೆಂಟ್ ಮತ್ತು ಅವನ ಗುಂಪು ಇನ್ನೂ ಬದುಕಿತ್ತಲ್ಲದೇ ಅದಕ್ಕೆ ಹೊಸ ಹೊಸ ಉತ್ಸಾಹೀ ಮುಖಗಳೂ ಬಂದುಸೇರಿದ್ದವು.

ಹೋರೋ ಶೂಲ್ ಬ್ರ್ಯೋಜನ್‌ನನ್ನು ಗಲ್ಲಿಗೇರಿಸುವಲ್ಲಿಗೆ ಕರೆದುಕೊಂಡು ಹೋಗಲಾಯಿತು. ಶಾಂತಚಿತ್ತನಾಗಿ, ಗಂಭೀರವಾಗಿ ಫಾಸಿಯ ಹಲಗೆಯ ಕಡೆ ನಡೆಯುತ್ತಿದ್ದನಾತ. ಸಿಪಾಯಿಗಳು ಕಪ್ಪು ವಸ್ತ್ರ ಧರಿಸಿ ಅವನ ಹಿಂದೆ ಬರುತ್ತಿದ್ದರು. ಒಬ್ಬರ ಹಿಂದೊಬ್ಬರು ಕಪ್ಪು ಪರದೆಯ ಹಿಂದೆ ನುಗ್ಗಿದರು. ಕೆಲವೇ ಸೆಕೆಂಡುಗಳಲ್ಲಿ ಹೊರಬಂದ ಸಿಪಾಯಿ, ಫಾಸಿಯಾಯಿತು! ಎಂದು ಉದ್ಗರಿಸಿದ.

ಹೋರೋನ ನಂತರ ಮೂವರು ಮಹಿಳೆಯರೂ ಸೇರಿದ್ದಂತೆ ಏಳು ಜನರು ಕಪ್ಪು ಪರದೆಯ ಹಿಂದೆ ನುಗ್ಗಿದರು. ಇವರೆಲ್ಲ ಅವನ ಸಹಾಯಕರಾಗಿದ್ದರು. ಮುಂದೆ ೧೯೪೩ರ ಜನವರಿ, ಫೆಬ್ರುವರಿ ತಿಂಗಳುಗಳಲ್ಲಿ ಕೋರೋ ಗುಂಪಿನ ಅರವತ್ತಕ್ಕೂ ಹೆಚ್ಚು ಜನರನ್ನು ಗಲ್ಲಿಗೇರಿಸಲಾಯಿತು.

ಕೋರೋ ಗುಂಪು ನಿರ್ನಾಮವಾಯಿತು. ಆದರೆ ಕೆಂಟ್ ಪಾರ್ಟಿ ಇನ್ನಷ್ಟು ಜಾಗ್ರತವಾಯಿತು. ಇವರ ಶೋಧಕ್ಕಾಗಿ ಹಣ ನೀರಿನಂತೆ ವ್ಯಯವಾಗುತ್ತಿತ್ತು. ಹಿಟ್ಲರ್ ಪ್ರತಿದಿನವೂ ಈ ಸಂಬಂಧದ ವರದಿಗಳನ್ನು ನೋಡುತ್ತಿದ್ದ. ನೂರಾರು ಜನರ ಬಂಧನವಾಯಿತು. ಡಜನ್‌ಗಟ್ಟಲೆ ಟ್ರಾನ್ಸ್‌ಮಿಟರ್‌ಗಳನ್ನು ಪತ್ತೆ ಹಚ್ಚಿ ವಶಪಡಿಸಿಕೊಳ್ಳಲಾಯಿತು. ಆದರೆ ಮಾಸ್ಕೋಕ್ಕೆ ಸಂದೇಶ ತಲುಪುವುದು ಮಾತ್ರ ತಪ್ಪಲಿಲ್ಲ.

೧೯೪೨ರ ಅಗಸ್ಟದಲ್ಲಿ ಜರ್ಮನ್ ಗುಪ್ತಚರ ವಿಭಾಗ ಕೆಂಟ್‌ನ ಕಾಲ್ಪನಿಕ ವ್ಯಕ್ತಿ ಚಿತ್ರವೊಂದನ್ನು ತಯಾರಿಸಿತು. ಇದರ ಆಧಾರದ ಮೇಲೆ ಶೋಧ ಪ್ರಾರಂಭಿಸಿದ ಬೇಹುಗಾರರು ಮಾರ್ಸೆಲೀಸ್ ತಲುಪಿದರು. ಮಾರ್ಸೆಲೀಸ್ ನಾಜಿಯ ಆಡಳಿತಕ್ಕೆ ಹೊರತಾಗಿದ್ದುದರಿಂದ ಶೋಧ ಕಾರ್ಯ ತುಸು ವಿಳಂಬವಾಯಿತು. ಆದರೆ ಬಹಳ ದಿನಗಳಿಂದ ಬೆನ್ನು ಹತ್ತಿದ ಬೇಟೆಗಾರರಿಗೆ ಮಣ್ಣುಮುಕ್ಕಿಸುವುದು ಕೆಂಟ್‌ನಿಗೆ ಅಸಾಧ್ಯವಾಗಿತ್ತು. ಒಂದು ದಿನ

ಬೆಳಿಗ್ಗೆ ಮಾರ್ಸೆಲೀಸದಿಂದ ಪ್ಯಾರಿಸ್‌ಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಕೆಂಟ್ ತನಗರಿವಿಲ್ಲದಂತೆ ಬೇಟೆಗಾರರಿಂದ ಸುತ್ತುವರಿಯಲ್ಪಟ್ಟ!

ಕೆಂಟ್‌ನ ಬಂಧನದಿಂದ ಜರ್ಮನ್ ಬೇಹುಗಾರರ ಹದಿನಾರು ತಿಂಗಳುಗಳ ದುಃಸ್ವಪ್ನ ದೂರವಾಯಿತು. ವಿಶೇಷ ವಿಮಾನದಲ್ಲಿ ಅವನನ್ನು ಪ್ಯಾರೀಸ್‌ದಿಂದ ಬರ್ಲಿನ್ನಿಗೆ ಸಾಗಿಸಲಾಯಿತು. ನವೆಂಬರ್ ೩ರಂದು ವಿಚಾರ ನಡೆಯಿತು. ಕೆಂಟ್‌ನ ಹೇಳಿಕೆಗಳೆಲ್ಲ ತೀರಾ ಸಂಕ್ಷಿಪ್ತವಾಗಿದ್ದು ನಾಜಿಗಳಿಗೆ ನಿರಾಶೆಯನ್ನುಂಟು ಮಾಡಿದವು.

"ನಾನೊಬ್ಬ ರಷ್ಯನ್ ಆಫೀಸರ್. ನನಗೆ ಈ ಕೆಲಸ ಒಪ್ಪಿಸಿದಂದಿನಿಂದ ನಾನು ನಾಜಿಗಳ ವಿರುದ್ಧ ಬೇಹುಗಾರಿಕೆ ಪ್ರಾರಂಭಿಸಿದೆ. ತಾವು ನನಗೆ ಸಂತೋಷದಿಂದ ಗುಂಡಿಕ್ಕಬಹುದು!" ಇಷ್ಟೇ ಅವನ ಹೇಳಿಕೆ.

ಎರಡು ಗಂಟೆಗಳ ವಿಚಾರಣೆಯಲ್ಲಿ ನಲವತ್ತು ಸಿಗರೇಟುಗಳನ್ನು ಸೇದಿ ಬಿಸಾಡಿದ ನೀತ! ತಿಂಗಳುಗಟ್ಟಲೆ ವಿಚಾರಣೆ ನಡೆದರೂ ಯಾವ ಪ್ರಯೋಜನವೂ ಆಗಲಿಲ್ಲ. ಜೈಲಿನ ಹಿಂಸೆಯಿಂದ ಆತ ಇನ್ನಷ್ಟು ಜಡವಾದ. ನಿಜವಾಗಿಯೂ ಕೆಂಟ್ ಒಬ್ಬ ಆದರ್ಶ ಬೇಹುಗಾರನಾಗಿದ. ಅವನಲ್ಲಿ ಭಾವನೆ ಉದ್ರೇಕ ಹಾಗೂ ಯಾತನೆಯನ್ನು ತಡೆದುಕೊಳ್ಳುವ ಶಕ್ತಿ ಅದ್ಭುತವಾಗಿತ್ತು. ಆದರೆ ಐದನೆ ವಾರವೂ ಕಳೆಯುತ್ತ ಬಂದಾಗ ಅವನ ಸಹನಶಕ್ತಿ ಕ್ಷೀಣಿಸತೊಡಗಿತು.

ಕೆಂಟ್‌ನನ್ನು ಬರ್ಲಿನ್‌ಗೆ ತಂದ ಕೆಲವು ದಿನಗಳಲ್ಲಿಯೆ ಅವನ ಪ್ರೇಯಸಿ ಮಾರ್ಗಾರೆಟ್‌ಳನ್ನು ಬಂಧಿಸಲಾಯಿತು. ಅನುಪಮ ಸೌಂದರ್ಯದ ಖಣಿಯಾಗಿದ್ದಳು ಆಕೆ. ಅವಳಿಗಾಗಿ ಪ್ರತ್ಯೇಕ ವಿಚಾರಣೆ ನಡೆಯುತ್ತಿತ್ತು. ಪ್ರಣಯಿ–ಪ್ರಣಯಿನಿಯರನ್ನು ಬೇರೆ ಬೇರೆಯಾಗಿಯೇ ಇಡುವಂತೆ ಜರ್ಮನ್ ಸರಕಾರದಿಂದ ಕಟ್ಟಪ್ಪಣೆಯಾಗಿತ್ತು.

ಒಂದು ದಿನ ಕೆಂಟ್‌ನ ಕೋಣೆಗೆ ಇನ್ಸ್‌ಪೆಕ್ಟರನೊಬ್ಬ ಮಾರ್ಗಾರೆಟ್‌ಳನ್ನು ಕರೆತಂದಾಗ ಕೆಂಟ್‌ನು ಸಂಪೂರ್ಣವಾಗಿ ಸಂಯಮವನ್ನು ಕಳೆದುಕೊಂಡು ಅಧಿಕಾರಿಗಳೆದುರೇ ಅವಳನ್ನು ಬರಸೆಳೆದು ತಬ್ಬಿಕೊಂಡ!

"ಇನ್‌ಸ್ಪೆಕರ್! ನಾನು ಎಲ್ಲವನ್ನೂ ಹೇಳುತ್ತೇನೆ. ಇವಳನ್ನು ಮಾತ್ರ ಬಿಟ್ಟುಬಿಡಿ. ನಿಮಗೆ ರಾಬಿನ್ಸನ್, ಜಿಮ್, ರಾಡೋ, ಲುಸೀ, ಸಿಸೀ ಒಬ್ಬರ ವಿಷಯವೂ ಗೊತ್ತಿಲ್ಲ. ಇವಳನ್ನು ಬಿಟ್ಟು ಬಿಡಿ. ಎಲ್ಲವನ್ನೂ ಹೇಳಿಬಿಡುತ್ತೇನೆ. ನಾನು ನಿಮ್ಮ ಪರವಾಗಿ ಕೆಲಸ ಮಾಡಲೂ ತಯಾರಿದ್ದೇನೆ!" ಕೆಂಟ್ ಭಾವೋದ್ರೇಕದಿಂದ ಹುಚ್ಚನಾಗಿದ್ದ. ಇನ್‌ಸ್ಪೆಕ್ಟರರ ಪಾದಗಳ ಮೇಲೆ ಬಿದ್ದು ಮಗುವಿನಂತೆ ಅಳತೊಡಗಿದ.

ಎರಡು ವಾರಗಳ ನಂತರ ಅವನು ಪೂರ್ವಸ್ಥಿತಿಗೆ ಮರಳಿ ನಾಜಿಗಳ ಪರವಾಗಿ ಕೆಲಸ ಮಾಡಲು ಪ್ರಾರಂಭಿಸಿದ. ಹಿಮ್ಲರ್ ಮತ್ತು ಗೋರಿಂಗ್ ಅವನ ಸೇವೆಯನ್ನು ಒಪ್ಪಿಕೊಂಡರು. ಮಾಸ್ಕೋದ ವಿಖ್ಯಾತ ಬೇಹುಗಾರ ಇನ್ನೊಂದು ಮುಖವಾಡ ಧರಿಸಿ ಮೂಲಕ್ಕೇ ಕೊಡಲಿಯೇಟು ಹಾಕಿದ್ದ.

ಕೆಂಟ್‌ನ ಅನುಚರರನ್ನೆಲ್ಲ ಗಲ್ಲಿಗೇರಿಸಲಾಯಿತು. ಅವನ ಪ್ರೇಯಸಿ ಮಾರ್ಗಾರೆಟ್‌ಳಿಗೆ ವ್ಯಾಮರ್‌ನಲ್ಲಿ ವಾಸಿಸಲು ವ್ಯವಸೆ ಮಾಡಿಕೊಡಲಾಯಿತು.

ಒಂದೂವರೆ ವರ್ಷದ ನಂತರ ವಿಶ್ವಸಮರ ಅಂತಿಮ ಘಟ್ಟದಲ್ಲಿರುವಾಗ ಕೆಂಟ್ ಒಬ್ಬ ಯುವತಿ ಹಾಗೂ ಎಂಟು ವರ್ಷದ ಮಗಳೊಂದಿಗೆ ಜರ್ಮನಿಯಲ್ಲಿ ಕೊನೆಯ ಬಾರಿ ಕಾಣಿಸಿಕೊಂಡ. ಆತ ಹಾಗೆಯೆ ಅಮೇರಿಕದತ್ತ ಮುಂದುವರಿಯುತ್ತಿದ್ದ. ✡

ಪ್ರಾಚೀನ ಕಾವ್ಯ ಸುಧೆ

ಶ್ರೀ ಬಾಲಕೃಷ್ಣ ಲೀಲೆ

ಶ್ರೀ ಪ್ರಸನ್ನ ವೆಂಕಟದಾಸರು (೧೬೮೦–೧೭೫೨) ವಿಜಾಪುರ ಜಿಲ್ಲೆಯ ಬಾಗಲಕೋಟೆಯಲ್ಲಿ ಜನಿಸಿದರು. ಕಾಖಂಡಕಿ ನರಸಪ್ಪಯ್ಯನ ಮಕ್ಕಳಾದ ಇವರಿಗೆ ವೆಂಕಪ್ಪಯ್ಯ ಎಂಬ ಹೆಸರಿತ್ತು. ಚಿಕ್ಕಂದಿನಲ್ಲಿ ತಾಯ್ತಂದೆಗಳನ್ನು ಕಳೆದುಕೊಂಡು ತಬ್ಬಲಿ ಆದ ಇವರು ಮನೆಯಲ್ಲಿಯ ಅಣ್ಣ ಅತ್ತಿಗೆಯರ ಕಿರುಕುಳ ತಡೆಯಲಾರದೆ ತಿರುಪತಿಗೆ ಪ್ರಯಾಣ ಮಾಡಿದರು. ಅಲ್ಲಿ ಅನ್ನ ಸತ್ಯಾಗ್ರಹದಿಂದ ವೆಂಕಪ್ಪನನ್ನು ಒಲಿಸಿಕೊಂಡರು. ಸಾಕ್ಷಾತ್ ಶ್ರೀ ವೆಂಕಟೇಶನೇ ಇವರ ನಾಲಿಗೆ ಮೇಲೆ 'ವೆಂಕಟೇಶ' ಎಂದು ಬರೆದದ್ದರಿಂದ ಇವರಲ್ಲಿ ಕವಿತ್ವ ಗುಣ ಜಾಗ್ರತವಾಯಿತು. 'ಶ್ರೀ ಪ್ರಸನ್ನ ವೆಂಕಟೇಶ' ಎಂಬ ಅಂಕಿತದಿಂದ ಭಗವದ್ಭಕ್ತಿಯ ಪದಗಳನ್ನು ಬರೆಯಹತ್ತಿದರು. ಹರಿದಾಸರಾಗಬೇಕು ಎಂಬುದು ಇವರ ಅಂತಃಕರಣದ ಒಲವು. ತಮ್ಮ ಪ್ರಾಂತಕ್ಕೆ ಹಿಂತಿರುಗಿ ಮುದ್ಗಲ ಜನಾರ್ದನಾಚಾರ್ಯರಲ್ಲಿ ಭಾರತ ಭಾಗವತಗಳನ್ನು ಅಧ್ಯಯನ ಮಾಡಿ ಬಾಗಲಕೋಟೆಗೆ ಹಿಂತಿರುಗಿದರು. ಶ್ರೀ ಪ್ರಸನ್ನ ವೆಂಕಟರ ಮುದ್ದು ದೈವ ಶ್ರೀ ಬಾಲಕೃಷ್ಣ. ಆತನನ್ನು ವರ್ಣಿಸಿ ೩೦೦ ಕ್ಕೂ ಮಿಕ್ಕಿ ಪದಗಳನ್ನು ಬರೆದಿದ್ದಾರೆ. ಇವರು ಭಾಗವತವನ್ನೂ ಭ್ರಮರಗೀತೆಯನ್ನೂ ಬರೆದಿದ್ದಾರಾಗಿ ತಿಳಿಯುತ್ತದೆ. ತಮ್ಮ ಜೀವನದ ಉತ್ತರಾರ್ಧ ಬದಾಮಿಯಲ್ಲಿ ಕಳೆದು ಅಲ್ಲಿಯೆ ದೇಹ ತ್ಯಾಗ ಮಾಡಿದರು. ಅವರ ಶ್ರೀಕೃಷ್ಣ ಬಾಲಲೀಲೆಯ ಪದಗಳನ್ನಿಲ್ಲಿ ಕೊಡಲಾಗಿದೆ.

ಎಂಥ ಬಾಲಕೃಷ್ಣ

ಎಂಥ ಬಾಲಕೃಷ್ಣ ಗೋಪೇರಂತಃ ಚೋರನು
ಕಂತು ಕೋಟಿ ಚೆಲುವ ಎಲ್ಲರ
ಭ್ರಾಂತ ಮಾಡಿದನಿವ ।ಪಲ್ಲ।
ಬಾಲನಾದರೊಳಿತು ಒಳ್ಳೆ
ಬಾಲೆಯರ ಮೊಗ್ಗುಮೊಲೆ
ಆಲದಾ ಹಣ್ಣೆಂದು ನಖದಲಿ ಸೀಳಿ
ನೋಡುವರೆ
ಹೇಳಲೇನೆಂತೆನ್ನ ನಳಿತೋಳಲಪ್ಪಿ
ತೊಂಡೆಹಣ್ಣು
ಪೋಲುವದೆಂದಧರಸುಂಡ
ತಾಳಬಹುದೇನಮ್ಮಯ್ಯ ॥ ೧ ॥
ನಿಚ್ಚಟ ಮೈಯೊಳು ನಾವು ನಿಚ್ಚ
ಮೈಮ್ಯುದೊಳೆಯುವಾಗ
ಬಚ್ಚಲೊಳು ಬಂದು ಕಣ್ಣು ಮುಚ್ಚಿ
ಅಟ್ಟಹಾಸದಿ
ಸಚ್ಚಿದಾನಂದ ಗೋಪಾಲ ಎಚ್ಚರದ
ಗಂಗಳೆಯರ
ಹುಚ್ಚುಮಾಡಿ ಹೋದನಿವನ
ನೆಚ್ಚಬಹುದೇನಮ್ಮಯ್ಯಾ ॥ ೨ ॥
ಹತ್ತಿಲಿದ್ದ ಸುಪ್ತ ಪುರುಷರನ್ನೊತ್ತಿ
ರತಿಕಳೆದೋರಿ
ಚಿತ್ತ ಸೂರೆಗೊಂಬುದ್ಯಾ[illegible] ಕೃತ್ಯ ರಂಗಗೆ
ಸುತ್ತಿನವರರಿಯರೇನು ಚಿತ್ತವಾಯಿತಲ್ಲದೆ
ಅತ್ತೆ ಮಾವ ಕಂಡರೆಮ್ಮ ತೊತ್ತು
ಮಾಡಿ ಬಿಡುವರೆ ॥ ೩ ॥
ತಟ್ಟನೆ ಬಂದು ಬಾಯೊಳು ಬಾಯಿಟ್ಟು
ಮುದ್ದುಗಳನ್ನಿಟ್ಟು
ಬಿಟ್ಟು ಕುಚವಿಡಿದೆಮ್ಮ ವ್ರತ ರಟ್ಟು ಮಾಳ್ಪನು
ಧಿಟ್ಟ ಜಾರನಿಗೆ ಕೈಯ ಕಟ್ಟುವೆನೆಂದರೆ ಚೆಲ್ವ
ಬಟ್ಟೆಗೆಲ್ಲ ಕಚ್ಚಿ ಜಗಜಟ್ಟಿ ಓಡಿದ
ನಮ್ಮಯ್ಯಾ ॥ ೪ ॥
ಚಿನ್ನನಾದರೇನು ಜೊಕ್ಕ ಚಿನ್ನದಂಥ
ಗುಣವುಳ್ಳ
ಚೆನ್ನಿಗನ ರೂಪಗೊಲಿದ ಕನ್ನೆಯರು
ಪೂರ್ವದ

ಪುಣ್ಯವಂತರಲ್ಲದೆ ದೊರಕನನ್ಯರಿಗೆಂದೂ ಪ್ರ
ಸನ್ನ ವೆಂಕಟೇಶ ಸಿಕ್ಕಿದಿನ್ನು
ಸುಖದಕ್ಕೀತೇ ನಮ್ಮಯ್ಯಾ ॥ ೫ ॥

ದೂರ ಬ್ಯಾಡಿರೆ

ಬ್ಯಾಡಿರವ್ವ ಎನ್ನ ಕಂದನ್ನ ದೂರ ಬ್ಯಾಡಿರೆ
ಗಾರು ಮಾಡಿ ಚೋರನೆಂದು ಸಾರಿತಂದು
ದುರುಳನೆನ್ನ ॥ ಪಲ್ಲ ॥
ಹಸಿದೆ ಮಗುವೆ ಹಸಿದೆ ಚಿನ್ನ ಶಿಶುವೆ
ಪಾಲ್ಕುಡಿಯು ಬಾರೆನ್ನೆ
ಮೀಸುನಿ ಬಟ್ಟಲೊಳಿಪ್ಪ ಹಾಲಿನ ಬಿಸಿಗೆ
ಬೊಬ್ಬೆಂದು ಬೆದರುವ
ಮೊಸರು ಹರಿವೆಯೊಡೆದು ನಿಮ್ಮ
ಪೊಸಬೆಣ್ಣೆಯಾ ಮೆಲುವನೆಂತೊ
ಸೊಸೆಯರೊಂದುಕೂಡೆನ್ನ ಕೂಸಿಗೆ
ಪುಸಿಯತಾ ವಾಕುನುಸುರಿ ದೂರ ॥ ೧ ॥
ಮುದ್ದು ತಾರೊ ರಂಗ ಎನಲು ಎದ್ದು
ಚಪ್ಪಳೆಗಳಿಕ್ಕುತ
ಬಿದ್ದು ಅಂಬೆಗಾಲನಿಕ್ಕಿ ಮುದ್ದು
ನೀಡಲರಿಯಾನೆ
ಕದ್ದು ನಿಮ್ಮನೆ ಕೆನೆವಾಲನು ಗೆದ್ದು
ನಿಮ್ಮ ಬಾಲರ ಬೆನ್ನು
ಗುದ್ದಿ ಓಡಿ ಬರುವಾನೆಂತೊ
ಬುದ್ಧಿಲ್ಲಾವೇನೆ ನಿಮಗೆ ॥ ೨ ॥
ಎತ್ತಿಕೊಂಡು ರಮ್ಮಿಸಿ ಬಾಯೊಳು
ತುತ್ತು ನೀಡಲು ಉಣ್ಣಲರಿಯಾ
ಕತ್ತಲೆಯೊಳು ಹೆಂಗಳ ಪಿಡಿದು
ಚಿತ್ತ ಮೋಹಿಸಬಲ್ಲನೆ
ಹೆತ್ತಮಕ್ಕಳಿಲ್ಲವೆ ನಿಮಗೆ ವ್ಯರ್ಥ
ಜಾರನೆನ್ನುವಿರಮ್ಮಾ
ಕರ್ತ ಶ್ರೀ ಪ್ರಸನ್ನೆಂಕಟರಾಯಗೆ
ಭಕ್ತವತ್ಸಲ ತಾನಲ್ಲೆಂದು ॥ ೩ ॥

ನೀನೇ ಲಾಲಿಸಮ್ಮಾ

ನಿನ್ನ ಮಗನ ಮುದ್ದು ನೀನೇ
ಲಾಲಿಸಮ್ಮಾ ಚೆನ್ನಾನೆಂದಾಡಿಸಮ್ಮ
ಬಣ್ಣ ಬಾಲೇರ ಭೋಗಿಪ ಚದುರತೆ
ಪಣ್ಣವರ ಸರಸೇನಮ್ಮಾ ॥ ಪಲ್ಲ ॥
ತಾಳಬೇಕೆಷ್ಟೆಂದು ಗಾಡಿಕಾರನ
ಮಾತು ಕೇಳಲಂಜುವೆನಮ್ಮಾ ನ
ಮ್ಮಾಳುವ ಪತಿಗಳ ವಂಚಿಸಿ ನಮ್ಮ
ಲಜ್ಜೆ ಹಾಳು ಮಾಡಿಪೋದಾನೆ ॥ ೧ ॥
ಕೃಷ್ಣ ಸಿಕ್ಕನೆಂದು ನಮ್ಮ ಮಕ್ಕಳ ನಾವೇ
ಅಟ್ಟಿಸಿಕೊಳುವೆವಮ್ಮಾ
ದೃಷ್ಟಿ ಮರೆಯು ಜಾಲ ನೋಡೆ ನಂದನರಾಣಿ
ಸೃಷ್ಟಿಸ್ಯಾರಿಗೆ ತೀರದೂ ॥ ೨ ॥
ಕನ್ನೆಯುರೊಡಗೂಡಿ ಕಳ್ಳನಾ ಕೈಕಟ್ಟಿ
ನಿನ್ನೆಡೆಗೆ ತರುತಿದ್ದೇವೆ
ಕಣ್ಣೀಯು ಕೊರಳಿನ ಕರುವೆಂದು ಜನನಾಡೆ
ಖಿನ್ನರಾಗಿ ಹೋದೇವೆ ॥ ೩ ॥
ಆವಾವಕೇರಿಲಿ ಜಾರಚೋರನ ಮಾತು
ಆವಾವ ಮನೆಗಳಲ್ಲಿ
ಭಾಲೆಯರೆಳೆಮೊಲೆ ಮೂಗು ಚಿವುಟ
ಜಾವಜಾವಕಂಜಿಸಿಕೊಂಬನೇ ॥ ೪ ॥
ನಾವು ಮಾಡಿದ ಸುಕೃತವೆಂತೊ ಗೋಪಾಲ
ಭಾವನೆ ಮೆಚ್ಚಿದನೇ
ದೇವರ ದೇವ ಪ್ರಸನ್ನ-ಕಟೇಶಾ ತಾ
ಜೀವಕೆ ಹೊಣೆಯಾದನೇ ॥ ೫ ॥

ಶ್ರೀ ಬಾಲಕೃಷ್ಣನ ಸಾಕ್ಷಾತ್ಕಾರ

ದಾರು ನೀ ಚಿನ್ನಾ ದಾರೊ, ಗಾರು
ರಾತ್ರಿಯೊಳೆಮ್ಮಾಗರಕ್ಕೆ ಬಂದಿ । ಪ ।
ಇಕ್ಕಿದ ಕದಗಳಿಕ್ಯಾವೊ, ನಿದ್ರೆ ಉಕ್ಕೇರಿ
ಕಣ್ಣು ಮುಚ್ಚ್ಯಾವೊ, ನಮ್ಮ
ತಕ್ಕೈಸುವಂತೆ ನೀ ಕಳ್ಳ ಚಿಕ್ಕ
ಮಕ್ಕಳಾಟವಿದಲ್ಲೊ ಚಲುವಾ ॥ ೧ ॥
ಆಗ ಗೋಪಾಲನಂತಿದ್ದಿ ನೀ ಬ್ಯಾಗ
ಚಟುಲ ರೂಪನಾದಿ
ಈಗೆಮ್ಮನಲ್ಲಾ ರಂತ್ಯದಿ ಕೋಟಿ ಪೂಗಣೆರ
ಹೋಲುತ್ತೈದೆ ನೀ ಹಾದೆ ॥ ೨ ॥
ಸಪ್ಪಳಿಲ್ಲದೆ ಕೂಡು ಕಾಣೊ ಬಳಿ
ಬಪ್ಪರಿನ್ನಾರಾರು ಕಾಣೊ
ಕಪ್ಪವನಿತ್ತೆನ್ನ ಪ್ರಾಣ ಕಾಯೊ
ಶ್ರೀ ಪ್ರಸನ್ನೆಂಕಟ ಪರಮ ಪ್ರವೀಣಾ ॥ ೩ ॥

—ದಲಕೆ



ವಿ. ಎ. ಕುಲಕರ್ಣಿ

ಪುರಾಣ ಕಾಲದಿಂದ ಇಂದಿನ ವರೆಗೂ ಹಾವಿಗಾಗಿ ಪ್ರತ್ಯೇಕ ಸ್ಥಾನಮಾನಗಳು ಕಾಯ್ದಿರಿಸಲ್ಪಟ್ಟಿವೆ. ಬೇರೆ ಯಾವ ಪ್ರಾಣಿಯಿಂದಲೂ ಸಾಧಿಸದ ವಿಶೇಷ ಯಶಸ್ಸನ್ನು ಹಾವು ಸಾಧಿಸಿದೆ. ಬೌದ್ಧಿಕ ವಿಕಾಸದ ಉನ್ನತ ಶಿಖರವನ್ನು ಮುಟ್ಟಿದ ಮಾನವನೇ ತನ್ನ ಕೈಗಳನ್ನು ಜೋಡಿಸಿ ತಲೆಬಾಗಿಸಿ ಹಾವಿಗೆ ಸಾಷ್ಟಾಂಗವೆರಗಿದ್ದಾನೆ. ಯುಗಯುಗಾಂತರಗಳಿಂದ ಬಂದ ಅಂಧಶ್ರದ್ಧೆಯೇ ಇದಕ್ಕೆ ಕಾರಣ.

ಮೂಢ ನಂಬಿಕೆಗಳು ಇಂದು ನಿನ್ನಿನವಲ್ಲ. ಶಿಲಾಯುಗದಲ್ಲಿ ಅವತರಿಸಿ ಆಧುನಿಕ ಯುಗದವರೆಗೂ ತಮ್ಮ ಅಸ್ತಿತ್ವವನ್ನು ಕಾಯ್ದುಕೊಂಡು ಬಂದಿವೆ. ಅತಿ ಕಾಡು ಸ್ಥಿತಿಯಲ್ಲಿದ್ದಾಗಿನಿಂದಲೂ ಭಯಾನಕ ಘಟನೆಗಳಿಗೆ ಏನೋ ಸಂಬಂಧ ಕಲ್ಪಿಸುತ್ತ ಭಯವಿದ್ದಲ್ಲಿ ಭಗವಂತನಿದ್ದಾನೆಂಬ ತರ್ಕ ಸಿದ್ಧಾಂತಕ್ಕೆ ತಲುಪಿದುದೇ ಮೂಢನಂಬಿಕೆಗಳಿಗೆ ಆದಿಯಾಯಿತು. ಇದಕ್ಕೆ ನಮ್ಮ ಪುರಾಣಗಳು ಸಾಕ್ಷಿ. ಶಿವನ ಕೊರಳಲಂಕಾರವಾಗಿ ಹೆಡೆ ಬಿಚ್ಚಿದ ನಾಗ ಇರದಿದ್ದರೆ ಆತ ಶಿವನೇ ಅಲ್ಲ! ಆದಿಶೇಷನ ದೀರ್ಘ ಗೋಲಾಕಾರದ ಮೈಯ ಸುತ್ತುಗಳೇ ಅಲ್ಲವೆ ವಿಷ್ಣುವಿನ ಹಾಸಿಗೆ? ಮಹಾಶೇಷನ ಸಾವಿರ ತಲೆಗಳನ್ನು ಆಶ್ರಯಿಸಿ ನಿಂತಿದೆಯಲ್ಲವೇ ನಾವು ವಾಸಿಸುವ ಈ ಪೃಥ್ವಿ? ವಿಜ್ಞಾನಿ ಗೆಲಿಲಿಯೋ ಸೊನ್ನೆಯ ಶಕ್ತಿಯ ವಿಚಾರವನ್ನು ವಿವರಿಸುವಾಗ "ನಿಲ್ಲಲು ಸಾಕಷ್ಟು ಸ್ಥಳವನ್ನೂ, ಕೈಯಲ್ಲಿ ಸಾಕಷ್ಟು ಉದ್ದವಾದ ಕೋಲನ್ನೂ ಕೊಟ್ಟರೆ ಪೃಥ್ವಿಯನ್ನೇ ಉರುಳಿಸಬಲ್ಲೆ" ಎಂದು ಹೇಳಿದ್ದ. ಆ ಮಹಾನುಭಾವ ಹಾಗೇನಾದರೂ ಮಾಡಿದ್ದರೆ ಸಾವಿರ ಹೆಡೆಗಳ ಆದಿಶೇಷ ಭುಸಗುಟ್ಟಿ ಎಂಥ ಭಯಂಕರ ಪ್ರಳಯಕ್ಕೆ ಕಾರಣನಾಗುತ್ತಿದ್ದನೋ ಏನೋ!

ಪ್ರಾಚೀನ ಮಾನವನ ಪದ್ಧತಿಗಳನ್ನು ಬಹುಮಟ್ಟಿಗೆ ಆಚರಣೆಯಲ್ಲಿ ತಂದು ಹೆಚ್ಚಿನ ಬಣ್ಣ ಬಳಿದವರೆಂದರೆ ಸರ್ಪಪೂಜಕರೆಂದು ಹೆಸರಾದ ದ್ರಾವಿಡರು. ಹಾವುಗಳನ್ನು 'ದೇವಾಂಶ ಸಂಭೂತ' ಎಂದು ಕರೆದರು. ಕಾಲಿಲ್ಲದ ಈ ಪ್ರಾಣಿಗಳಿಗೆ ತಲೆ ಬಾಗಿದರು. ಅವು ಹರಿದ ಜಾಗವನ್ನೂ ಅರಿಷಿಣಕುಂಕುಮಗಳಿಂದ ಪೂಜಿಸಿದರು. ಅವುಗಳ ಶಾಪಕ್ಕೆ ಭಯಭೀತರಾಗಿ ಅವುಗಳನ್ನು ಪ್ರಸನ್ನಗೊಳಿಸಿದರೇನೇ ಜನಾಂಗಕ್ಕೆ ಹಿತವೆಂದು ಭಾವಿಸಿದರು. ಹಾವುಗಳ ಸಳಸಳ ಹರಿದಾಟ, ಹೆಡೆ ಎತ್ತಿ ನಿಲ್ಲುವ ವಿಲಕ್ಷಣ ಭಂಗಿ, ಭುಸುಗುಟ್ಟುತ್ತ ತಲೆಯನ್ನು ನೆಲಕ್ಕಪ್ಪಳಿಸುವ ದರ್ಪ, ನಿಯತಕಾಲಿಕ ಪರೆ ಬಿಚ್ಚುವಿಕೆ, ನೋಡನೋಡುವಷ್ಟರಲ್ಲಿಯೇ ನುಸುಳಿ ಮರೆಯಾಗುವ ಚತುರತೆ ಅಂದಿನ ಮಾನವನನ್ನು ಭಯ ಚಕಿತನನ್ನಾಗಿ ಮಾಡಿ ಮೂರ್ತಿಪೂಜೆಗೆ ಅವಕಾಶಮಾಡಿ

ಕೊಟ್ಟಿರಬೇಕು. ದ್ರಾವಿಡ ಸಂಸ್ಕೃತಿಯನ್ನು ಕಾಯ್ದುಕೊಂಡ ಮೂಲ ನಿವಾಸಿಗಳು ಭಾರತದ ಗುಡ್ಡಗಾಡುಗಳಲ್ಲಿ ಇಂದಿಗೂ ಇದ್ದಾರೆ.

ಅಂದು ವಿಚಾರವು ಅಂಥವಾಗಿದ್ದರೂ ಶ್ರದ್ಧೆ ಸತ್ಯವಾಗಿತ್ತು. ಈ ಅಂಧಶ್ರದ್ಧೆಯ ದುರುಪಯೋಗವನ್ನು ಸ್ವಪ್ರಯೋಜನಕ್ಕಾಗಿ ಮಾಡಿಕೊಂಡವರು ಆ ಕಾಲದಿಂದಲೂ ನಡೆದು ಬಂದ ಧರ್ಮಬೋಧಕರು ಹಾಗೂ ದೇವಾಲಯದ ಪೂಜಾರಿಗಳು; ಹಾವಾಡಿಗರೂ ಇದಕ್ಕೆ ಹೊರತಾಗಲಿಲ್ಲ. ಅವರ ಕಟ್ಟುಕತೆಗಳನ್ನು ಪೃಥಕ್ಕರಿಸಿ ವೈಜ್ಞಾನಿಕವಾಗಿ ವಿಚಾರಿಸುವುದು ನಾಗರಿಕತೆಗೆ ಭೂಷಣವೆನಿಸುತ್ತದೆ.

ಆದಿಶೇಷನು ಪೃಥ್ವಿಯನ್ನು ಹೊತ್ತು ನಿಂತಿದ್ದಾನೆಂಬ ಗ್ರಹಿಕೆ ಮಿಥ್ಯವಾದುದು. ಚಳಿಗಾಲದ ತಂಪು ಹಾವುಗಳಿಗೆ ಬಾಧಕ. ಶೀತೋಷ್ಣಗಳ ಸಮತೂಕವನ್ನು ಕಾಯ್ದುಕೊಳ್ಳುವ ಅಂತಃರಚನೆ ಅವುಗಳಿಗಿಲ್ಲ. ಅಲ್ಲದೆ ಚಳಿಗಾಲದಲ್ಲಿ ಆಹಾರದ ಕೊರತೆಯೂ ಹೆಚ್ಚುತ್ತದೆ. ಈ ಕಾರಣಗಳಿಂದ ಹಾವುಗಳು ಭೂಮಿಯಲ್ಲಿ ಆಳವಾದ ತಾವುಗಳನ್ನು ಹುಡುಕಿ ತಿಂಗಳುಗಟ್ಲೆ ಒಂದೊಂದು ಸಲ ವರುಷದ ವರೆಗೂ ನಿರಾಹಾರದಿಂದ ಶಿಶಿರ ನಿದ್ರೆಯನ್ನು ಕಳೆಯುತ್ತವೆ. ಅವುಗಳ ಈ ವರ್ತನೆಯೇ ಆದಿಶೇಷನ ಕಲ್ಪನೆಗೆ ಅವಕಾಶ ಕೊಟ್ಟಿರಬೇಕು.

ಹಾವುಗಳು ಹೂಳಿಟ್ಟ ಧನವನ್ನು ರಕ್ಷಿಸುತ್ತವೆಂದು ಅನೇಕರು ತಿಳಿಯುತ್ತಾರೆ. ಕಾರಣವೇ ಅವುಗಳಿಗೆ 'ಧನಗಾಹಿ' ಎಂದು ಹೆಸರು. ವಾರಸುದಾರನಿಲ್ಲದ ಶ್ರೀಮಂತನೊಬ್ಬ ನಿಧನ ಹೊಂದಿದರೆ ಆತ ಹೂಳಿಟ್ಟ ಧನಕ್ಕೆ ಘಟಸರ್ಪವೊಂದು 'ಸರ್ಪಕಾವಲು' ಹಾಕಿ ಕುಳಿತಿರುತ್ತದೆಂದೂ, ಆಸ್ತಿಯು ಯಾರ ದೈವಲಿಖಿತದಲ್ಲಿದೆಯೋ ಅವನ ಕನಸಿನಲ್ಲಿ ಅದು ಕಾಣಿಸಿಕೊಂಡು, ಹೂಳಿಟ್ಟ ಸ್ಥಳದ ಪರಿಚಯ ಕೊಟ್ಟು ಆ ತಾವಿನಿಂದ ಮರೆಯಾಗಿ ಬಿಡುತ್ತದೆಂದೂ ನಂಬಿಕೆ. ಇದು ಕೇವಲ ಕತೆ! ಭೂಮಿಯಲ್ಲಿ ನಾವು ಮಾಡುವ ಪೊಳ್ಳು ಜಾಗೆಯಿಂದ ಹಾವಿಗೆ ಬೆಚ್ಚಗಿನ ಹಿತಕರವಾದ ಮನೆಯನ್ನೇ ನಿರ್ಮಿಸಿ ಕೊಟ್ಟಂತಾಗುತ್ತದೆ. ಸಾಮಾನ್ಯವಾಗಿ ಹಾವುಗಳು ಇಂಥ ಸ್ಥಳದಲ್ಲಿ ಬಂದು ವಾಸಿಸುವದರಿಂದ ಅವು ಧನವನ್ನು ಕಾಯುತ್ತವೆಂಬ ತಪ್ಪು ತಿಳುವಳಿಕೆ ಜನಗಳಲ್ಲಿ ಬಂದಿದೆ. ಆಸ್ತಿಯನ್ನು ಕಾಯುವಷ್ಟು ತೀಕ್ಷ್ಣವಾದ ಬುದ್ಧಿಶಕ್ತಿ ಹಾವುಗಳಿಗಿದೆ ಎಂಬುದಕ್ಕೆ ಯಾವ ವೈಜ್ಞಾನಿಕ ಆಧಾರಗಳೂ ಇಲ್ಲ.

ನಮ್ಮ ಪೂರ್ವಜರು ಎಲ್ಲ ಜಾತಿಯ ಹಾವುಗಳಿಗೂ ದೇವಪಟ್ಟವನ್ನು ಕೊಡಲಿಲ್ಲ. ಒಟ್ಟಿಗಿರುವ ೩೦೦ ಜಾತಿಯ ಹಾವುಗಳಲ್ಲಿ 'ನಾಜಾ ಟ್ರಿಪುಡಿಯನ್ಸ್' ಎಂಬ ಹೆಸರಿನ ನಾಗರ ಹಾವಿಗೆ ಮಾತ್ರ ಪೂಜೆ ಪುನಸ್ಕಾರಗಳು ದೊರೆತವು. ಅದರ ಹೆಡೆ ಪೂಜೆಗೆ ಪ್ರಧಾನ ಲಕ್ಷಣವಾಗಿರಬೇಕು. ಈ ಹಾವಿನ ಬಗೆಗೆ ಅಸಂಖ್ಯಾತ ವಿಚಿತ್ರ ಕಲ್ಪನೆಗಳುಂಟು. ಇದನ್ನು ಕೊಂದರೆ ಹಿತವಾಗದೆಂಬ ಭಯ ಹಲವರಿಗೆ, ಅದನ್ನು ಪ್ರಸನ್ನಗೊಳಿಸಲು ಹಾಲು, ತತ್ತಿ ಕೊಡುವದುಂಟು. ನಾಗರ ಪಂಚಮಿಯ ದಿನ ಹಾವಾಡಿಗರು ವಿಷದ ಹಲ್ಲುಗಳನ್ನು ಹೊರತೆಗೆದ ನಾಗರ ಹಾವನ್ನು ಬುಟ್ಟಿಯಲ್ಲಿಟ್ಟುಕೊಂಡು ಓಣಿಗುಂಟ ತಿರುಗುವ ದೃಶ್ಯ, ಹೆಣ್ಣುಮಕ್ಕಳು ಹಾಲು ನೆಲಗಡಲೆ ಅರ್ಪಿಸುವ ರೀತಿನೀತಿಗಳು ಹೊಸವೇನಲ್ಲ.

ನಾಗಗಳಲ್ಲಿ ನಾಗರಾಜ ದೊಡ್ಡದು. ಹದಿನೆಂಟು ಅಡಿಗಳಷ್ಟು ಉದ್ದ ಬೆಳೆಯುತ್ತದೆ. ಇದರ ಹೆಡೆಯಲ್ಲಿ ನೀಲಮಣಿ ಇರುತ್ತದೆಂದೂ, ರಾತ್ರಿ ಅದನ್ನು ಹೊರತೆಗೆದಿಟ್ಟು ಅದರ ಬೆಳಕಿನಲ್ಲಿ ಬೇಟೆ ಹುಡುಕುತ್ತದೆಂದೂ, ಇಂಥ ನೀಲಮಣಿಯು ಸಾಮಾನ್ಯವಾಗಿ ವಯಸ್ಕ ನಾಗರಹಾವಿನಲ್ಲಿ ಇರುತ್ತದೆಂದೂ ಸರ್ವಸಾಮಾನ್ಯವಾದ ಜನಶ್ರುತಿ. ಪಾಶ್ಚಾತ್ಯದೇಶಗಳಲ್ಲಿ ನಾಗರಹಾವು ಇಲ್ಲದಿರುವದರಿಂದ ನೀಲಮಣಿಯ ಘನತೆಯನ್ನು ಕಾಡುಕಪ್ಪೆಗೆ ಕೊಡಲಾಗಿದೆ. ಶೇಕ್ಸಪಿಯರನು ತನ್ನ 'ಆ್ಯಜ ಯು ಲೈಕ್ ಇಟ್' ನಾಟಕದಲ್ಲಿ "ವಿದ್ರೂಪಿ ವಿಷಪೂರಿತ ನೆಲಗಪ್ಪೆಯಾದರೂ ಅದರ ತಲೆಯಲ್ಲಿ ಅಮೂಲ್ಯ ರತ್ನ ಇದೆ"

ಎಂದು ಹೇಳುತ್ತಾನೆ, ನಿಜವಾಗಿ ಹಾವು ನಿಶಾಚರ ಪ್ರಾಣಿ. ಆಹಾರವನ್ನು ಹುಡುಕುವಾಗ ಬೆಳಕು ಬೇಕಾಗುವದಿಲ್ಲ ಎಂಬುದಕ್ಕೆ ಆಧಾರಗಳಿವೆ.

ಒಂದು ಜಾತಿಯ ಮಣ್ಣಿನ ಹಾವಿನ ದುರುಪಯೋಗವನ್ನು ಕೆಲವು ಹಾವಾಡಿಗರು ಮಾಡಿಕೊಂಡಿದ್ದಾರೆ. ಬಾಲದ ತುದಿಯಲ್ಲಿ ಅಡ್ಡವಾಗಿ ಒಂದು ಸೀಳು ಹಾಕಿ, ಕೃತ್ರಿಮ ಬಾಯಿಮಾಡಿ ಎರಡು ತಲೆಯ ಹಾವು ಎಂದು ಹೇಳುತ್ತಾರೆ. ಅಲ್ಲದೆ ಅದು ಸೂರ್ಯನ ದೂತನೆಂದು, ಸೂರ್ಯನು ಹೇಗೆ ಆರು ತಿಂಗಳಿಗೊಮ್ಮೆ ಕರ್ಕ ಮಕರ ವೃತ್ತಗಳಿಗೆ ತಲುಪುವನೋ ಹಾಗೆಯೇ ಈ 'ದ್ವಿಮುಖ' ಹಾವು ಪ್ರತಿ ಆರು ತಿಂಗಳಿಗೊಮ್ಮೆ ಒಂದೊಂದು ತಲೆಯಿಂದ ಚಲಿಸುತ್ತದೆಂದು ಹೇಳಿ ಜನರನ್ನು ಮೋಸ ಮಾಡುತ್ತಾರೆ. ಸತ್ಯವಿಷ್ಟೇ; ಈ ಹಾವಿನ ಬಾಲ ಮೊಂಡಾಗಿದ್ದು ಇನ್ನೊಂದು ತಲೆಯಂತೆ ಕಾಣುತ್ತದೆ. ಇದೇ ಹಾವು ದೇಹಕ್ಕೆ ತಗುಲಿದ ಮಾತ್ರಕ್ಕೆ ಕುಷ್ಠರೋಗ ಉಂಟಾಗುತ್ತದೆಂಬುದು ಇನ್ನೊಂದು ವಿಚಿತ್ರ ನಂಬಿಕೆ. ಇಂಥ ಸುಳ್ಳಿನ ಕಂತೆಗೆ ಕಾರಣರು ಗಾರುಡಿಗರೇ. ಸುಳ್ಳಿನ ಬ್ರಹ್ಮನಿಗೆ ನಿವಾರಣೋಪಾಯವೂ ಗೊತ್ತಿರಬೇಕಾದುದು ನ್ಯಾಯವಲ್ಲವೇ? ತಾಕಿದ ಹಾವನ್ನು ಹಿಡಿದು, ಬಾಲದ ಚೂರನ್ನು ಕಡಿದು, ಬಾಳೆಯ ಎಲೆಯಲ್ಲಿ ಮಡಿಚಿ ರೋಗಿಗೆ ತಿಳಿಯದಂತೆ ತಿನ್ನಿಸಿದರೆ ರೋಗ ನಿವಾರಣೆಯಾಗುವದಂತೆ! ಇಂಥ ಅಸಂಬದ್ಧ ಅವಿಚಾರಗಳಿಗೆ ವಿಜ್ಞಾನ ಮೌನವಾದೀತೇ ವಿನಾ ಉತ್ತರಿಸಲಾರದು.

ಭಾರತದ ಅನೇಕಕಡೆಗಳಲ್ಲಿ ಧಮನ್ ಎಂಬ ನಿರುಪದ್ರವಿ ಹಾವು ಸಾಮಾನ್ಯವಾಗಿ ಕಾಣಸಿಗುತ್ತದೆ. ಇದನ್ನೂ, ನಾಗರಹಾವನ್ನೂ ಕೂಡಿಯೇ ನೋಡಿದರೆ ಕುರುಡರಾಗುತ್ತಾರೆಂಬ ಹುಚ್ಚು ಕಲ್ಪನೆ, ಹಲವರಲ್ಲಿ. ಪ್ರಾಣಿಗಳ ಕೂಟ ನೋಡಬಾರದೆಂಬುದೇ 'ಘನ' ಉದ್ದೇಶವಾಗಿರಬೇಕು. ಈ ಹಾವಿನ ವಿಷಯವಾಗಿ ವಿಲಕ್ಷಣ ಕತೆಗಳು ಹುಟ್ಟಿಕೊಂಡಿವೆ. ಇದು ದನಕರುಗಳನ್ನು ಕೊಲ್ಲುವ ವರೆಗೆ ರಕ್ತ ಹೀರುವದೆಂದೂ, ಇದನ್ನು ಕಂಡ ಮಾತ್ರಕ್ಕೆ ಮನುಷ್ಯನು ಕುರುಡನಾಗುವನೆಂದೂ ನಂಬಿಕೆ. ಇದೇ ಜಾತಿಗೆ ಸೇರಿದ ಯುರೋಪದ 'ಝಾಮಿನಿಸ್ ವಿರಿಡಿಫ್ಲೆವಸ್' ಎಂಬ ಹಾವು ಕೆಚ್ಚಲು ಬತ್ತುವವರೆಗೂ ಆಕಳವೊಲೆಯುಣ್ಣುವದೆಂದು ಪಾಶ್ಚಾತ್ಯರಲ್ಲಿ ಹಲವರು ನಂಬುತ್ತಾರೆ. ಈ ಹಾವು ಒಂದು ತರದ ಸೂಕ್ಷ್ಮ ಧ್ವನಿಯನ್ನು ಹೊರಡಿಸಿ ಪಕ್ಷಿಗಳನ್ನು ಕೂಡ ಮರುಳು ಮಾಡಬಲ್ಲದಂತೆ. ವಯಸ್ಕ ಹುಲ್ಲುಹಾವುಗಳು ಆಕಳ ಹಾಗೂ ಹೆಣ್ಣುಮಕ್ಕಳ ಮೊಲೆಯುಣ್ಣುತ್ತವೆಂದು ಫ್ರಾನ್ಸ ದೇಶದ ಒಕ್ಕಲಿಗರು ನಂಬುತ್ತಾರೆ. ಹುಲ್ಲುಹಾವಿನ ಮರಿಗಳು ಮುಂದಿ ಹುಂಜದ ತತ್ತಿಗಳಿಂದ ಹುಟ್ಟುತ್ತವೆಂದು ತಿಳಿಯುವುದು ಅವಿವೇಕದ ಪರಮಾವಧಿಯೇ ಸರಿ! ಇಂಥ ಅಸಂಭಾವ್ಯ ಸಂಗತಿಗಳನ್ನು ಹಲವರಾದರೂ ನಂಬುತ್ತಾರೆಂದರೆ ಪ್ರಾಣಿಶಾಸ್ತ್ರವು ಆತ್ಮಹತ್ಯೆಗೇ ಸಿದ್ಧವಾಗಬೇಕು!

ಹಾವು ತನ್ನ ದೇಹಗಾತ್ರಕ್ಕಿಂತ ಹಿರಿದಾದ ಪ್ರಾಣಿಯನ್ನು ನುಂಗಬಲ್ಲದೆಂಬುದು ಸತ್ಯಸಂಗತಿ. ಈ ಸಾಮರ್ಥ್ಯ ನಿಜವಾಗಿಯೂ ವಿಲಕ್ಷಣವಾದುದು. ಬೇಟೆ ಚಪಲವಿದ್ದಷ್ಟೂ ಹಾವಿಗೆ ಸಂತೋಷ. ಚಂಚಲವಾದ ಬೇಟೆ ಪಾರಾಗಲು ಎಷ್ಟು ಹವಣಿಸುತ್ತದೋ ಅಷ್ಟು ಆಳವಾಗಿ ಹಾವಿನ ಜೀರ್ಣಾಂಗದಲ್ಲಿ ಇಳಿಯುತ್ತದೆ. ಹಾವಿನ ಒಳವಕ್ರವಾದ ಹಲ್ಲುಗಳು ಬೇಟೆಯನ್ನು ಚುಚ್ಚದೆ, ಕಚ್ಚದೆ, ಕಡಿಯದೆ ಕೇವಲ ಬೇಟೆ ಹೊರಬೀಳದಂತೆ ನೋಡಿಕೊಳ್ಳುತ್ತವೆ—ಜೇಲಿನ ಸಿಪಾಯಿಗಳಂತೆ. ೨೫ ಅಡಿಗಳ ಹಾವು ೭೫ ಪೌಂಡು ಭಾರದ ಚಿಗರಿಯನ್ನು ಅನಾಯಾಸವಾಗಿ ನುಂಗಬಲ್ಲದು. ಬೇಟೆಯ ಆಕಾರ ಮಹತ್ವವಾದುದು; ಅದರ ತೂಕವಲ್ಲ. ಬೇಟೆ ಉದ್ದವಿದ್ದಷ್ಟೂ ಹಾವಿಗೆ ಹಗುರ.

ಏಶಿಯದ ಒಂದು ಜಾತಿಯ ಹಾವು ಹಾರಾಡುತ್ತದೆ ಎಂಬುದು ಕೇವಲ ಅತಿಶಯೋಕ್ತಿ. ಇದು ಗಿಡದ ಟೊಂಗೆಗಳಲ್ಲಿ ವಾಸಿಸುವ

ಪ್ರಾಣಿ. ಒಂದು ಟೊಂಗೆಯಿಂದ ಇನ್ನೊಂದಕ್ಕೆ ನುಸುಳುವಾಗ ತನ್ನ ಬಾಲವನ್ನು ಒಂದು ಟೊಂಗೆಗೆ ಸುತ್ತಿ, ನೀಳವಾದ ತೆಳು ದೇಹವನ್ನು ಭೂಮಿಗೆ ಸಮಾಂತರವಾಗಿ ಚಾಚಿ ಬಾಯಿಯಿಂದ ಇನ್ನೊಂದು ಟೊಂಗೆಯನ್ನು ಅವಚುತ್ತದೆ. ಈ ರೀತಿ ಸದ್ದಿಲ್ಲದೆ ಜಾರುತ ದೆಯೇ ಹೊರತು ಹಾರುವುದಿಲ್ಲ.

ಹಾವುಗಳು ಮಳೆಯನ್ನೂ ನೀರನ್ನೂ ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿವೆ ಎಂಬುದು ಇನ್ನೊಂದು ಅಸಹಜವಾದ ಕಲ್ಪನೆ. ಮಳೆಗಾಲದಲ್ಲಿ ಅವು ಹೆಚ್ಚಾಗಿ ಕಾಣಸಿಗುವುದರಿಂದ ಈ ಭಾವನೆ ಬಂದಿರಬೇಕು. ದಟ್ಟಡವಿ, ಹೆಚ್ಚು ಮಳೆ ಬೀಳುವ ಪ್ರದೇಶಗಳಾದ ಬಂಗಾಲ ಆಸಾಮು ಪ್ರಾಂತಗಳ ಜನಗಳಲ್ಲಿ ಈ ಮೂಢ ನಂಬಿಕೆ ಹೆಚ್ಚು.

ಹಾವುಗಳ ಗಾತ್ರದ ಬಗೆಗೆ ಕೂಡ ಅಬದ್ಧ ಕಲ್ಪನೆಗಳಿವೆ. ಹಾವುಗಳಲ್ಲಿ ಏಶಿಯದ ಹೆಬ್ಬಾವು ದೊಡ್ಡದು. ಅದು ೩೨ ಅಡಿಗಳ ಉದ್ದಕ್ಕೂ ಬೆಳೆಯುತ್ತದೆ. ಅಮೇರಿಕದ ಹೆಬ್ಬಾವು ೩೦ ಅಡಿ ಉದ್ದವಿರುತ್ತದೆ, ಆಫ್ರಿಕಾ ಹಾಗೂ ಆಸ್ಟ್ರೇಲಿಯಗಳಲ್ಲಿ ಕಾಣಸಿಗುವ ಹೆಬ್ಬಾವುಗಳು ಅನುಕ್ರಮವಾಗಿ ೨೫ ಹಾಗೂ ೨೧ ಅಡಿಗಳ ವರೆಗೆ ಬೆಳೆಯುತ್ತವೆ.

ಕೆಲವು ಹಾವುಗಳು ತಮ್ಮನ್ನು ಹಿಂಸಿಸಿದವರನ್ನು ಗುರುತಿಸಿ ಬೆನ್ನುಹತ್ತುವವೆಂದೂ ಧ್ವನಿಯನ್ನು ಕೂಡ ಗುರುತಿಸಬಲ್ಲವೆಂದೂ ವೈರ ಸಾಧಿಸುವ ನಾಗರ ಹಾವು ವರುಷಗಟ್ಲೆ ಆ ದಾರಿಯಲ್ಲಿ ಪ್ರತೀಕಾರಕ್ಕಾಗಿ ಕಾಯುತ್ತಿರುವದೆಂದೂ ಅನೇಕರು ಹೇಳುತ್ತಾರೆ. ಇದು ಹುರುಳಿಲ್ಲದ ವದಂತಿ. ವಾಸನೆಯ ತೀಕ್ಷ್ಣ ಶಕ್ತಿಯಿಂದ ಸ್ಥಳಗಳನ್ನು ಗುರುತಿಸಬಲ್ಲವೇ ವಿನಾ ಮನುಷ್ಯರನ್ನು ಗುರುತಿಸುವ ಜ್ಞಾನ ಇವುಗಳಿಗಿರುವದಿಲ್ಲ.

ಚಿಣಗಿ ಹಾವು ಕೂಡ ಸೇಡಿನ ಪ್ರಾಣಿ ಎಂದು ಹೇಳುತ್ತಾರೆ. ಇದರ ವಿಷಯವಾಗಿ ಒಂದು ಮೋಜಿನ ಕತೆಯಿದೆ. ತನ್ನ ಆಕ್ರಮಣಕಾರನನ್ನು ಕಚ್ಚಿ ಆಹುತಿ ತೆಗೆದುಕೊಂಡು ಗಿಡದ ದಹನಕ್ರಿಯೆಯ ಹೊಗೆಯನ್ನು ಕಂಡ ಮೇಲೆಯೇ ಕೆಳಗೆ ಇಳಿಯುವದಂತೆ !

ಹಾವಿಗೆ ಎರಡು ನಾಲಗೆಗಳು ಎಂದೇ ಎಲ್ಲರೂ ಸಾಮಾನ್ಯವಾಗಿ ತಿಳಿಯುತ್ತಾರೆ. ಅದಕ್ಕಿರುವುದು ಒಂದೇ ನಾಲಗೆ. ಅದರ ಮುಂಭಾಗದಲ್ಲಿ ಸೀಳು ಇರುವುದರಿಂದ ಎರಡು ನಾಲಗೆಗಳಂತೆ ಕಾಣುತ್ತದೆ. ಎಂತಲೇ ಹಾವಿಗೆ 'ದ್ವಿಜಿಹ್ವ' ಎಂಬ ತಪ್ಪು ಹೆಸರು ರೂಢಿಯಲ್ಲಿ ಬಂದಿದೆ.

ಹಾವಿನ ಭಯವೂ ಸಾವಿನ ಭಯವೂ ಕೂಡಿಯೇ ಬರುವದರಿಂದಲೋ ಏನೋ ಹಾವಿನಿಂದ ಕಚ್ಚಲ್ಪಟ್ಟವನು ಸಾಯುವುದೇ ಹೆಚ್ಚು. ಪ್ರತಿ ವರುಷವೂ ನಮ್ಮ ದೇಶದಲ್ಲಿ ಹಾವಿನ ಕಡಿತದಿಂದ ೩೦,೦೦೦ ಜನರು ಸಾಯುತ್ತಾರೆಂದು ಎಣಿಕೆಮಾಡಲಾಗಿದೆ. ಇದರಲ್ಲಿ ಪ್ರತಿಶತ ತೊಂಬತ್ತರಷ್ಟು ಜನ ಸಾಯುವುದು ವಿಷಕಾರಿ ಹಾವುಗಳಿಂದಲ್ಲ; ಮಾನಸಿಕ ದೌರ್ಬಲ್ಯದಿಂದ; ರಕ್ತಗತವಾದ ಹಾವಿನ ಭಯದಿಂದ. ಎರಡು ಮೂರಾಂಶ ಹಾವುಗಳು ನಿರ್ವಿಷವಾಗಿದ್ದು ನಿರುಪದ್ರವಿಗಳಾಗಿವೆ. ಉಳಿದವುಗಳಲ್ಲಿ ಹತ್ತರಲ್ಲೊಂಬತ್ತು ಹಾವುಗಳು ಕಾದಾಟಕ್ಕೆ ಇಳಿಯದೆ ನುಸುಳಿ ಮರೆಯಾಗುವ ಜಾತಿಗಳು, ಹೀಗಾಗಿ ಅತಿಕ್ರಮಣ ಮಾಡಬಲ್ಲ ಹಾವುಗಳು ಬೆರಳಿನಿಂದೆಣಿಸುವಷ್ಟು. ಘಟಸರ್ಪ, ನಾಗರ, ಬಳೆಗಡಕ, ಕರಗಸ ಹೊರೆಗಳ ಮಂಡಲ ಹಾಗೂ ರಸೆಲ್ ಮಂಡಲ. ಈ ಐದು ಪ್ರಭೇದಗಳಿಂದ ಅವುಗಳ ಇಡೀ ಕುಲಕ್ಕೇ ಅಳಿಸಲಾರದ ಕಲಂಕ ತಗಲಿದುದು ಅವುಗಳ ದುರ್ದೈವವೋ ನಮ್ಮ ಅಸಮರ್ಪಕ ಜ್ಞಾನವೋ ತಿಳಿಯದು.

ಹಾವಿನ ವಿಷಯವಾಗಿ ಸರಿಯಾದ ಜ್ಞಾನ ಇರುವವರು ಅತಿ ವಿರಳ. ತಪ್ಪು ತಿಳಿದವರೇ ಬಹಳ. ಹಾವನ್ನು ಕಂಡರೆ ಸಾಕು, ಮೊದಲನೆಯ ವಿಚಾರ ಅದನ್ನು ಕೊಲ್ಲುವುದು. ಹಾವು ವಿಷಕಾರಿಯೇ ನಿರ್ವಿಷಕಾರಿಯೇ ಎಂಬುದನ್ನು ತಿಳಿಯುವ ಗೊಡವೆಗೆ ಕೂಡ ಹೋಗುವದಿಲ್ಲ. ಈ ಅಜ್ಞಾನ ಅಳಿಸಬೇಕು. ಇಲಿಗಳಂಥ ದಂಶಕ

ಗಳ ಪಾತ್ರ ಹಿರಿದು ಎಂಬ ತಿಳಿವಳಿಕೆ ಜನಗಳಿಗಾಗಬೇಕು.

ನಮ್ಮ ದೇಶದಲ್ಲಿ ಹಾವುಗಳೂ ಬಹಳ, ಹಾವಾಡಿಗರ ಸಂಖ್ಯೆಯೂ ದೊಡ್ಡದು. ಇಲ್ಲಿರುವಷ್ಟು ಹಾವಾಡಿಗರು ಬೇರಾವ ದೇಶದಲ್ಲಿಯೂ ಇಲ್ಲ. ಬಂಗಾಲದ 'ಸಂಗೀಜ' ಅಥವಾ 'ತುಬ್ರಿವಾಲ್' ಎಂಬ ಜನಾಂಗವು ನಿಜವಾದ ಹಾವಾಡಿಗರದು. ಕುಂಬಳಕಾಯಿಯ ಪುಂಗಿಯಿಂದ ಮೃದುವಾದ, ಒಂದೇ ರಾಗದ ಶ್ರುತಿಯನ್ನು ಹೊರಡಿಸಬಲ್ಲರು. ಈ ಧ್ವನಿ ತರಂಗಗಳನ್ನು ನೇರವಾಗಿ ಕೇಳಲು ಹಾವಿಗೆ ಕಿವಿಗಳಿರುವದಿಲ್ಲ. ಭೂಮಿಯಲ್ಲಿ ಸೇರುವ ಕಂಪನಗಳನ್ನು ಗ್ರಹಿಸುವಷ್ಟು ಹಾವಿನ ಪೊರೆಗಳು ಶೀಘ್ರ ವೇದಿಗಳಿರುತ್ತವೆ. ಅಲ್ಲದೆ ಕಣ್ಣುಗಳು ತೀಕ್ಷ್ಣವಾಗಿರುವುದರಿಂದ ಹಾವಾಡಿಗನ ಕೈಯಲ್ಲಿಯ ಪುಂಗಿಯು ಹೇಗೆ ಗೋಲಾಕಾರವಾಗಿ ತಿರುಗುತ್ತದೆಯೋ ಹಾಗೆ ಹಾವು ತನ್ನ ಹೆಡೆಯನ್ನೂ ತಾಳಬದ್ಧವಾಗಿ ತಿರುಗಿಸುತ್ತದೆ–ಶ್ರವಣದಿಂದಲ್ಲ, ಕಣ್ಣೋಟದಿಂದ. ಕಾರಣವೇ ಹಾವಿಗೆ ಒಂದು ಅನ್ವರ್ಥಕ ಹೆಸರು 'ಚಕ್ಷುಶ್ರವ.'

ಮಲೆನಾಡಿನಲ್ಲಿ ಹಾವುಗಳ ಉಪಟಳ ಹೆಚ್ಚಾಗಿರಬಹುದೆಂದು ತೋರುತ್ತದೆ. ಅಲ್ಲಿರುವ ದಟ್ಟಡವಿ, ನೀರಿನ ವಿಪುಲತೆಗಳೇ ಕಾರಣಗಳಿರಬಹುದು. ಮಲೆನಾಡಿನ ಜನತೆ ಹಾವುಗಳ ಬಗೆಗೆ ಗೌರವ ಭಾವನೆ ತಾಳಿದವರು ಎಂಬುದಕ್ಕೆ ಅವರ ಸಂಸ್ಕೃತಿ, ಸಾಮಾಜಿಕ ನಡೆ ನುಡಿಗಳೇ ಸಾಕ್ಷಿ. 'ಭೂಸಪ್ಪನವರು' ಎಂಬ ಹೆಸರಿನ ನಾಗಪೂಜೆ ಇಂದಿಗೂ ಅಲ್ಲಿ ಪ್ರಚಲಿತವಿದೆ. ತೊಟ್ಟಿಲು ಕೂಸಿನ ನಾಮಕರಣ 'ನಾಗ' ಹೆಸರಿನಿಂದಲೇ ಆರಂಭವಾಗುತ್ತದೆ. ನಾಗರಾಜ, ನಾಗಮ್ಮ, ನಾಗಮಣಿ, ನಾಗಭೂಷಣ, ನಾಗರತ್ನ, ಶೇಷಯ್ಯ ಎಂಬ ಹೆಸರುಗಳು ಅಲ್ಲಿ ಸಾಮಾನ್ಯ. ಅದು ಆವರಿಸಿಕೊಂಡ 'ನಾಗಮಹತಿ'ಯನ್ನು ತೋರಿಸುತ್ತದೆ.

ಹೀಗೆ ನಮ್ಮ ದೇಶದಲ್ಲಿ ಹಾವುಗಳ ವಿಷಯವಾಗಿ ಪರಂಪರೆಯಿಂದ ಬಂದ ಕಟ್ಟುಕತೆಗಳಿಗೆ ಲೆಕ್ಕವಿಲ್ಲ. ಒಂದೊಂದು ಊರಿನಲ್ಲಿ ನೂರಾರು ತರದ ದಂತ ಕಥೆಗಳು. ಗಂಡು ಸಂತತಿ ನಾಗರ ಹಾವಿನ ನಿಯಂತ್ರಣದಲ್ಲಿ ಇದೆಯುಂತೆ. ನಾಗರ ಹಾವನ್ನು ಕೊಂದವನಿಗೆ ಇಪ್ಪತ್ತು ಸಂತತಿಗಳವರೆಗೆ ಗಂಡುಮಕ್ಕಳು ಹುಟ್ಟುವದಿಲ್ಲವಂತೆ. ನಾಗರಹಾವು ಕನಸಿನಲ್ಲಿ ಕಚ್ಚಿದರೆ ಆತನ ಹೆಂಡತಿ ಗರ್ಭಿಣಿ ಇರುವಳೆಂದು ತಿಳಿಯಬೇಕಂತೆ. ಹಾವುಗಳ ಪುರಾಣಕ್ಕೆ ಆದಿ ಇದ್ದರೂ ಅವುಗಳ ಕತೆಗೆ ಅಂತ್ಯ ಇಲ್ಲದಂತೆ ಕಾಣುತ್ತದೆ. ಈ ಐತಿಹ್ಯಗಳು ಹಿಂದೂ ಜನರ ಧರ್ಮ ಇತಿಹಾಸಗಳಲ್ಲಿ ಹಾಸುಹೊಕ್ಕಾಗಿ ಬಂದಿವೆ. ಕಲ್ಪಿತ ಕತೆಗಳನ್ನು ವಿಮರ್ಶಿಸುವ ಕಾಲ ಈಗ ಬಂದಿದೆ. ಸತ್ಯಕ್ಕೆ ವಿರುದ್ಧವೆಂದು ವಿಜ್ಞಾನದ ದೃಷ್ಟಿಯಲ್ಲಿ ನಿರ್ಣಯವಾದ ಮೇಲಾದರೂ ಮೂಢನಂಬಿಕೆಗಳನ್ನು ತೊರೆದು ಹಾಕಬೇಕು. ಹಾವುಗಳ ವಿಷಯವಾಗಿ ಶಾಸ್ತ್ರೀಯ ಜ್ಞಾನವನ್ನು ಪ್ರತಿಯೊಬ್ಬರೂ ಮಾಡಿಕೊಂಡರೆ ಈಗಾಗುತ್ತಿರುವ ಅಪಮೃತ್ಯುಗಳ ಸಂಖ್ಯೆ ಅರ್ಧಕ್ಕಾದರೂ ಇಳಿದೀತು. ವಿಷಕಾರಿ ಹಾಗು ನಿರ್ವಿಷಕಾರಿ ಹಾವುಗಳನ್ನು ಗುರುತಿಸುವದೇನೂ ಕಷ್ಟವಲ್ಲ. ಪೊರೆಗಳ ಲಕ್ಷಣ ಅಭ್ಯಾಸದಿಂದ ಎಂಥ ಅನಭಿಜ್ಞನೂ ಅವುಗಳನ್ನು ಗುರುತಿಸಬಲ್ಲ. ಇಂಥ ಕ್ರಮಬದ್ಧ ಶಾಸ್ತ್ರೀಯ ಜ್ಞಾನವನ್ನು ಪಡೆದು ಮೂಢನಂಬಿಕೆಗಳಿಂದ ದೂರಾಗುವದರಲ್ಲಿ ಮಾನವನ ಕಲ್ಯಾಣವೂ ಇದೆ, ಮಾನಸಿಕ ಆರೋಗ್ಯವೂ ಇದೆ. ✡



ವೈದ್ಯಕೀಯದಲ್ಲಿ ರೇಡಿಯೊ ಐಸೋಟೋಪುಗಳು

ಕೆ. ಹರಿದಾಸಭಟ್ಟ

ನಮ್ಮ ಸುತ್ತಲೂ ದೃಷ್ಟಿಬೀರಿದಾಗ ನಮಗೆ ಗೋಚರಿಸುವುದೇನು ? ವಿವಿಧ ತರದ ವಸ್ತು (Matter) ಮಾಧ್ಯಮ ತಾನೆ. ವಸ್ತುವು ಘನರೂಪದಲ್ಲಿರಲಿ, ದ್ರವರೂಪದಲ್ಲಿರಲಿ, ಅನಿಲರೂಪದಲ್ಲಿರಲಿ ಅದು ೧೦೫ ಮೂಲಧಾತು (elements)ಗಳಿಂದ ಉಂಟಾಗಿರುವುದು. ಪ್ರತಿ ಧಾತುವಿನ ಲಕ್ಷಣಗಳನ್ನು ಅದರ ಅತ್ಯಂತ ಚಿಕ್ಕ ಕಣ ಕೂಡ ಪ್ರದರ್ಶಿಸುವುದು. ಈ ಕಣವನ್ನು ಧಾತುವಿನ ಪರಮಾಣು (atom) ಎನ್ನುವರು. ಧಾತುವೊಂದರ ಎಲ್ಲಾ ಪರಮಾಣುಗಳೂ ರಾಸಾಯನಿಕವಾಗಿ ಒಂದೇ ಗುಣಲಕ್ಷಣಗಳನ್ನು ಪ್ರದರ್ಶಿಸುವುವು. ಆದರೆ ಭೌತಿಕವಾಗಿ ತುಸುವೇ ವ್ಯತ್ಯಾಸವುಳ್ಳ ದ್ರವ್ಯಾಂಶ ಹೊಂದಿರುವುವು. ಈ ಅಂಶವನ್ನು ೧೯೧೩ರಲ್ಲಿ ಪತ್ತೆ ಹಚ್ಚಲಾಯಿತು. ಇಂತಹ ಪರಮಾಣುಗಳನ್ನು ಧಾತುವಿನ ಐಸೊಟೋಪು (Isotopes)ಗಳೆನ್ನುವರು.

ಉದಾಹರಣೆಗೆ, ಆಮ್ಲಜನಕ (Oxygen)ವನ್ನು ತೆಗೆದುಕೊಳ್ಳೋಣ. ಇದರ ಪರಮಾಣುವಿನ ನ್ಯೂಕ್ಲಿಯದಲ್ಲಿ ೮ ಪ್ರೋಟಾನುಗಳೂ ೮ ನ್ಯೂಟ್ರಾನುಗಳೂ ಇರುವುವು. ಇದನ್ನು ಆಕ್ಸಿಜನ್—೧೬ ಎಂದು ನಮೂದಿಸುವರು. ಆಮ್ಲಜನಕದ ಇನ್ನೊಂದು ತರದ ಪರಮಾಣುವಿನಲ್ಲಿ ೮ ಪ್ರೋಟಾನುಗಳೂ ೧೦ ನ್ಯೂಟ್ರಾನುಗಳೂ ಇರುವುವು. ಇದನ್ನು ಆಕ್ಸಿಜನ್—೧೮ ಎಂದು ಬರೆಯುವರು. ಈ ಪರಮಾಣುವಿನ ದ್ರವ್ಯಾಂಶವು ಆಕ್ಸಿಜನ್-೧೬ ಪರಮಾಣುವಿನ ದ್ರವ್ಯಾಂಶಕ್ಕಿಂತ ತುಸುವೇ ಜಾಸ್ತಿಯಿರುವುದು. ಆಕ್ಸಿಜನ್-೧೮ ಮತ್ತು ಆಕ್ಸಿಜನ್-೧೬ ಆಮ್ಲಜನಕದ ಎರಡು ಐಸೊಟೋಪುಗಳು ಆಗಿರುವುವು. ಆಕ್ಸಿಜನ್-೧೭ ಕೂಡಾ ಅಸ್ತಿತ್ವದಲ್ಲಿರುವುದು. ಈ ರೀತಿಯಲ್ಲಿ ಪ್ರತಿ ರಾಸಾಯನಿಕ ಧಾತುವೂ ಅನೇಕ ಐಸೋಟೋಪುಗಳನ್ನು ಹೊಂದಿರುವುದು ಕಂಡುಬಂದಿದೆ. ಈ ತನಕ ಎಲ್ಲಾ ಧಾತುಗಳ ಒಟ್ಟು ಸುಮಾರು ೩೦೦ ಸ್ಥಿರ ಐಸೋಟೋಪು (Stable Isotopes)ಗಳನ್ನೂ ಪತ್ತೆ ಹಚ್ಚಲಾಗಿದೆ.

ಕೆಲವೊಂದು ಐಸೋಟೋಪುಗಳು ಸ್ಥಿರವಾಗಿರದೆ ಕ್ರಮೇಣ ವಿಕಿರಣ (nuclear radiation)ವನ್ನು ಹೊರಸೂಸಿ ಕ್ಷಯಿಸುವುವು. ಇವನ್ನು ರೇಡಿಯೋ ಐಸೋಟೋಪುಗಳೆನ್ನುವರು. ಪ್ರಕೃತಿಯಲ್ಲಿ ಯುರೇನಿಯಮ್, ಥೋರಿಯಮ್ ಮತ್ತು ಆಕ್ಟಿನಿಯಮ್ ಮುಂತಾದ ಭಾರವಾದ ಐಸೊಟೋಪುಗಳು ಅಸ್ತಿತ್ವದಲ್ಲಿರುವುವು. ಧಾತುಗಳನ್ನು ವೇಗೋತ್ಕರ್ಷಗೊಳಿಸಿದ ಕಣಗಳಿಂದ ಬಡಿದಾಗ ರೇಡಿಯೋ ಐಸೋಟೋಪುಗಳು ಉತ್ಪನ್ನವಾಗುವುವು. ೧೯೩೪ರಲ್ಲಿ ಮೇಲಿನ ತತ್ವವನ್ನು ಅನ್ವಯಿಸಿ ರೇಡಿಯೋ ಐಸೋಟೋಪುಗಳನ್ನು ಉತ್ಪಾದಿಸತೊಡಗಿದರು. ಎರಡನೇ ಮಹಾಯುದ್ಧದ ಸಮಯದಲ್ಲಿ ನ್ಯೂಕ್ಲಿಯ ರಿಯಾಕ್ಟರುಗಳ ಬೆಳವಣಿಗೆಯಿಂದಾಗಿ ಅಧಿಕ ಪ್ರಮಾಣದಲ್ಲಿ ರೇಡಿಯೋ ಐಸೋಟೋಪುಗಳನ್ನು ಉತ್ಪಾದಿಸುವುದು ಸಾಧ್ಯವಾಯಿತು. ರಿಯಾಕ್ಟರಿನಲ್ಲಿ ಬಿಡುಗಡೆಯಾಗುವ ಶಕ್ತಿಯುತ ನ್ಯೂಟ್ರಾನುಗಳನ್ನು ಉಪಯೋಗಿಸಿ ಧಾತುಗಳ ನ್ಯೂಕ್ಲಿಯಗಳನ್ನು ಬಡಿದು ರೇಡಿಯೋ ಐಸೊಟೋಪುಗಳನ್ನು ತಯಾರಿಸುವರು. ಇಂದು ಸುಮಾರು ೬೦೦ ರೇಡಿಯೋ ಐಸೋಟೋಪುಗಳನ್ನು ಪ್ರಗತಿಹೊಂದಿದ ದೇಶಗಳು ತಯಾರಿಸಬಲ್ಲವು.

ರೇಡಿಯೋ ಐಸೋಟೋಪುಗಳು ತಾವು ವಿಸರಿಸುವ ವಿಕಿರಣ, ಕ್ಷಯಿಸುವ ದರ ಇವುಗಳಲ್ಲಿ ವಿಭಿನ್ನವಾಗಿರುವುವು. ಈ ಅಂಶಗಳಿಂದಲೇ ಅವುಗಳ ಉಪಯೋಗ ಇಲ್ಲವೇ ಹಾನಿಯನ್ನು ನಿಷ್ಕರ್ಷಿಸಬಹುದಾಗಿದೆ. ಇವು ಆಲ್ಫಾ, ಬೀಟಾ ಹಾಗೂ ಗಾಮಾ ಎಂಬ ೩ ತರದ ವಿಕಿರಣ ಹೊರಸೂಸಿ ಕ್ಷಯಿಸುವುವು. ಒಟ್ಟಿನಲ್ಲಿ ಇವನ್ನು "ವಿಕಿರಣ ಸಂಕೇತಗಳು" (radiation signals) ಎನ್ನಬಹುದು.

ರೇಡಿಯೋ ಐಸೋಟೋಪು ವಿಕಿರಣ ಸಂಕೇತ ಹೊರಸೂಸಿ ಕ್ಷಯಿಸಿದಾಗ ಸ್ಥಿರ ಐಸೋಟೋಪುವುಂಟಾಗುವುದು. ನಶಿಸುವಿಕೆಯ ದರವನ್ನು ನಿರ್ಣಯಿಸಲು 'ಅರ್ಧಾಯುಸ್ಸು' (half life) ಎಂಬ ಪದವನ್ನು ಬಳಸುವರು. ಒಂದು ರೇಡಿಯೋ ಐಸೊಟೋಪು ಪರಮಾಣುವು ಒಂದು ಅರ್ಧಾಯುಸ್ಸಿನಲ್ಲಿ ನಶಿಸುವಿಕೆಯಿಂದ ತನ್ನ ಅರ್ಧದ್ರವ್ಯಾಂಶ (Mass)ವನ್ನು ಕಳೆದುಕೊಳ್ಳುವುದು. ಅಂದರೆ ಆ ಪರಿಮಾಣದಲ್ಲಿರುವ ಅರ್ಧಾಂಶ ಸಂಖ್ಯೆಯ ನ್ಯೂಕ್ಲಿಯುಗಳು ಸಂಕೇತ ವಿಸರಿಸಿ ಇನ್ನೊಂದು ಧಾತುವಿನ ತಟಸ್ಥ ನ್ಯೂಕ್ಲಿಯುಗಳಾಗುವುವು. ರೇಡಿಯೋ ಐಸೋಟೋಪುಗಳ ಅರ್ಧಾಯುಸ್ಸುಗಳು ಬೇರೆ ಬೇರೆಯಾಗಿರುವುವು. ಉದಾಹರಣೆಗೆ–ಅಯೋಡೀನ್–೧೩೧ ರ ಅರ್ಧಾಯುಸ್ಸು ೮ ದಿನಗಳು. ಅಯೋಡೀನ್–೧೨೯ ರ ಅರ್ಧಾಯುಸ್ಸು ೧೬ ಮಿಲಿಯ ವರ್ಷಗಳು!

ರೇಡಿಯೋ ಐಸೊಟೋಪುಗಳು ಸುಮಾರು ೧೦$^{-೮}$ ಸೆಂ. ಮೀ. ಗಾತ್ರದ ಕಣಗಳು. ಇವು ನೇರವಾಗಿ ದೃಷ್ಟಿಗಾಗಲೀ ಸೂಕ್ಷ್ಮ ದರ್ಶಕಗಳಿಗಾಗಲೀ ಗೋಚರಿಸಲಾರವು. ಆದರೆ, ಇವು ವಿಸರಿಸುವ ಸಂಕೇತಗಳನ್ನು ಪತ್ತೆ ಹಚ್ಚುವ ಸಾಧನಗಳ ರಚನೆಯಾಗಿದೆ. ಗೈಗರ್ ಗಣಕ (Geiger Muller Counter) ಇಂತಹ ಒಂದು ಶೋಧಕ. ಇದು ರೇಡಿಯೋ ಐಸೊಟೋಪುಗಳು ವಿಸರಿಸುವ ಎಲ್ಲಾ ಸಂಕೇತಗಳನ್ನೂ ಪತ್ತೆಹಚ್ಚಬಲ್ಲುದು. ದರ ಮಾಪಕ (rate metre)ಕ್ಕೆ ಗೈಗರ್ ಗಣಕ ಜೋಡಿಸಿದಲ್ಲಿ ಸೂಚಕವು ತೋರಿಸುವ ಅಳತೆಯು ಪತ್ತೆ ಹಚ್ಚಿದ ಸಂಕೇತಗಳ ಸಂಖ್ಯೆಯಾಗಿರುತ್ತದೆ.

ಒಂದು ಸೆಕೆಂಡು ಅವಧಿಯಲ್ಲಿ ರೇಡಿಯೋ ಐಸೊಟೋಪು ವಿಸರಿಸುವ ಸಂಕೇತಗಳ ಸಂಖ್ಯೆಯನ್ನು 'ವಿಕಿರಣ ಚಟುವಟಿಕೆ' (radiation activity)ಯೆನ್ನುವರು. ಇದನ್ನು ಕ್ಯೂರಿ (Curie) ಎನ್ನುವ ಮಾನದಿಂದ ಅಳೆಯುವರು. ಒಂದು ಸೆಕೆಂಡಿನಲ್ಲಿ ೩.೭ $\times$ ೧೦^{೧೦} ಪರಮಾಣುಗಳು ಒಡೆದು ಅಷ್ಟೇ ಸಂಕೇತಗಳನ್ನು ಉತ್ಪತ್ತಿಸಿದಾಗ ರೇಡಿಯೋ ಐಸೊಟೋಪಿನ ಚಟುವಟಿಕೆಯು ಒಂದು ಕ್ಯೂರಿಯಾಗಿರುವುದು. ಇದು ವಿಕಿರಣದ ಅತ್ಯಂತ ಮಾರಕ ಪ್ರಮಾಣವಾಗಿದೆ. ವಿಶ್ಲೇಷಣೆಗಳಲ್ಲಿ ಮೈಕ್ರೋಕ್ಯೂರಿ (೧೦$^{-೬}$C) ಮತ್ತು ಮೈಕ್ರೋ ಮೈಕ್ರೋ (೧೦$^{-೧೨}$C) ಕ್ಯೂರಿ ಚಟುವಟಿಕೆಯ ರೇಡಿಯೋ ಐಸೋಟೋಪುಗಳನ್ನು ಬಳಸುವರು. ಇವುಗಳ ದ್ರವ್ಯಾಂಶವು ಸುಮಾರು ೧೦$^{-೯}$ ಗ್ರಾಮ್ ಇರಬಹುದು!

ಯಾವುದೇ ಒಂದು ವ್ಯವಸ್ಥೆಗೆ (ರಾಸಾಯನಿಕ, ಜೈವಿಕ ಇತ್ಯಾದಿ) ಒಂದು ರೇಡಿಯೋ ಐಸೋಟೋಪನ್ನು ಸೇರಿಸಿದಾಗ ಅದರ ಪರಮಾಣುಗಳು ಅದೇ ಧಾತುವಿನ ಸ್ಥಿರ ಪರಮಾಣುಗಳನ್ನು ಹುಡುಕತೊಡಗುವುವು. ಹಾಗೂ ಅವು ಲಭಿಸಿದಲ್ಲಿ ಇವು ಸ್ಥಿರ ಸಹೋದರರನ್ನು ಆಲಿಂಗಿಸಿಕೊಂಡು ಸಂಕೇತ ಹೊರಸೂಸುತ್ತಾ ಸಹೋದರರು ನಡೆಸುವ ಕ್ರಿಯೆಯಲ್ಲಿ ತಾವೂ ಭಾಗಿಗಳಾಗುವುವು. ಈ ವಿಧಾನಕ್ಕೆ 'ಲೇಬಲಿಂಗ್' (labelling) ಇಲ್ಲವೇ 'ಟ್ಯಾಗಿಂಗ್' (tagging) ಎಂದು ಹೆಸರು. ರೇಡಿಯೋ ಐಸೋಟೋಪು ಆ ವ್ಯವಸ್ಥೆಯಲ್ಲಿ ಎಲ್ಲೆಲ್ಲಿ ಚಲಿಸುತ್ತದೆಂಬುದನ್ನು ಅದು ವಿಸರಿಸುವ ಸಂಕೇತಗಳನ್ನು ಪತ್ತೆಹಚ್ಚಿ ಕಂಡುಕೊಳ್ಳಬಹುದು. ಆದುದರಿಂದಲೇ ಈ ವಿಧಾನಕ್ಕೆ 'ಟ್ರೇಸರ್ ತಂತ್ರ ಶಾಸ್ತ್ರ' (Tracer technique) ಎಂಬ ಹೆಸರು ಬಂದಿದೆ. ಒಂದು ವ್ಯವಸ್ಥೆಯಲ್ಲಿರುವ ಸ್ಥಿರ ಸಹೋದರರೊಂದಿಗೆ ರೇಡಿಯೋ ಐಸೋಟೋಪು ಪರಮಾಣುಗಳು ಸಮವಾಗಿ ವಿತರಣೆಗೊಳ್ಳುವುವು. ಈ ವಿಧಾ

ನಕ್ಕೆ ಐಸೋಟೋಪುವಿನ 'ನಿರ್ಬಲೀಕರಣ ತಂತ್ರ ಶಾಸ್ತ್ರ' (dilution technique) ಎಂದು ಹೆಸರು.

ವೈದ್ಯಕೀಯದಲ್ಲಿ ರೇಡಿಯೋ ಐಸೋಟೋಪುಗಳು ಎರಡು ವಿಧದಲ್ಲಿ ಬಳಕೆಗೆ ಬರುವುವು. ರೋಗದ ಕಾರಣವನ್ನು ನಿಶ್ಚಯಿಸುವುದು (diagnosis) ಹಾಗೂ ಶುಶ್ರೂಷೆ (therapy) ನೀಡುವುದು–ಇವೇ ಈ ಎರಡು ಉಪಯೋಗಗಳು.

ರೋಗ ಪತ್ತೆ ಹಚ್ಚುವಲ್ಲಿ ಬಳಸುವ ರೇಡಿಯೋ ಐಸೋಟೋಪುಗಳು ಅಲ್ಪ ಚಟುವಟಿಕೆಯುವು ಮತ್ತು ಹ್ರಸ್ವ ಅರ್ಧಾಯುಸ್ಸಿನವು ಆಗಿರಬೇಕು. ಅಧಿಕ ಚಟುವಟಿಕೆ ಮತ್ತು ದೀರ್ಘ ಅರ್ಧಾಯುಸ್ಸಿನವು ದೇಹದೊಳಗೆ ತುಂಬಾ ಸಮಯ ಉಳಿದು ಕ್ಯಾನ್ಸರ್ ಪ್ರೇರಿಸಬಲ್ಲವು! ಕ್ರೋಮಿಯುಮ್–೫೧, ಆಯೋಡೀನ್–೧೩೧, ಕೋಬಾಲ್ಟ್–೬೦, ಟ್ರೀಶಿಯುಮ್, ತಾಮ್ರ–೬೪, ಆರ್ಸೆನಿಕ್–೭೪ ಮತ್ತು ಸೋಡಿಯುಮ್–೨೪ ಇವು ಅತ್ಯುಪಕಾರಿಗಳು.

ಕ್ರೋಮಿಯುಮ್–೫೧ ನ್ನು ಬಳಸಿ ಅನೇಕ ರೋಗ ವಿಶ್ಲೇಷಣೆಗಳನ್ನು ನಡೆಸಬಹುದು. ದೇಹದಲ್ಲಿನ ರಕ್ತ ಗಾತ್ರ, ಹೃದಯದಲ್ಲಾಗುವ ರಕ್ತ ಪರಿಚಲನೆ, ರಕ್ತ ಕ್ಯಾನ್ಸರ್, ಲ್ಯುಕೇಮಿಯಾ ಪತ್ತೆ ಹಚ್ಚುವಿಕೆ, ಕರುಳಿನಲ್ಲಾಗುವ ರಕ್ತಸ್ರಾವದ ಪತ್ತೆ, ಗರ್ಭಿಣಿಯರಲ್ಲಿ 'ಪ್ಲೆಸೆಂಟಾ' ಇರುವ ಜಾಗದ ನಿಷ್ಕರ್ಷೆ ಇವು ಮುಖ್ಯ.

ರೋಗಿಯೊಬ್ಬನ ದೇಹದ ರಕ್ತಗಾತ್ರ ನಿಷ್ಕರ್ಷಿಸಲು ಮೊದಲಿಗೆ ಅವನ ದೇಹದಿಂದ ಒಂದು ಮಿಲಿಲೀಟರ್ ರಕ್ತವನ್ನು ತೆಗೆಯಬೇಕು. ಇದಕ್ಕೆ ಅತ್ಯಲ್ಪ ಚಟುವಟಿಕೆಯುಳ್ಳ ಕ್ರೋಮಿಯುಮ್–೫೧ (ಸೋಡಿಯುಮ್ ಕ್ರೋಮೇಟ್ ರೂಪದಲ್ಲಿ) ಸೇರಿಸುವರು. ರಕ್ತದ ಕೆಂಪುಕಣಗಳು ಕ್ರೋಮಿಯುಮ್‌ನ್ನು ಒಳಗೊಂಡಿರುವುದರಿಂದ ಕ್ರೋಮಿಯುಮ್–೫೧ ಪರಮಾಣುಗಳು ಸಮನಾಗಿ ಕೆಂಪು ರಕ್ತ ಕಣಗಳೊಂದಿಗೆ ಅಂಟಿಕೊಳ್ಳುವುವು. ಈ ರಕ್ತಕ್ಕೆ ಹೆಪರಿನ್ ಸೇರಿಸುವುದರಿಂದ ಇದು ಹೆಪ್ಪುಗಟ್ಟದು. ಬಳಿಕ ರಕ್ತಕಣಗಳೊಂದಿಗೆ ಸೇರಿರದ ಅಧಿಕ ಕ್ರೋಮಿಯುಮನ್ನು ಪ್ರತ್ಯೇಕಿಸಿ ವರ್ಜಿಸುವರು. ಗೈಗರ್ ಗಣಕ ಬಳಸಿ ಒಂದು ಮಿ. ಲೀಟರ್ ರಕ್ತದ ಚಟುವಟಿಕೆ ನಿರ್ಧರಿಸುವರು. (N_1 ಇರಲಿ) ಈ ರಕ್ತವನ್ನು ರೋಗಿಗೆ ಪುನಃ ಪೂರೈಸುವರು. ರಕ್ತ ಪರಿಚಲನೆಯಿಂದಾಗಿ ಸೇರಿಸಿದ ಕ್ರೋಮಿಯುಮ್–೫೧ ಪರಮಾಣುಗಳು ದೇಹದ ರಕ್ತದಲ್ಲಿ ಸಮನಾಗಿ ವಿತರಣೆಗೊಳ್ಳುವುವು. ೧೦ ನಿಮಿಷಗಳ ನಂತರ ಪುನಃ ಒಂದು ಮಿ. ಲೀಟರ್ ರಕ್ತವನ್ನು ಹೊರಕ್ಕೆ ತೆಗೆದು ಚಟುವಟಿಕೆಯನ್ನು ನಿಷ್ಕರ್ಷಿಸುವರು. (N_2 ಇರಲಿ) ದೇಹದಲ್ಲಿನ ಒಟ್ಟು ರಕ್ತ ಪರಿಮಾಣವು $\frac{N_1}{N_2}$ ಮಿಲಿಮೀಟರ್ ಆಗಿರುತ್ತದೆ! ಮೊತ್ತಮೊದಲಿಗೆ ಈ ವಿಶ್ಲೇಷಣೆಯನ್ನು ಕೋರಿಯಾ ಯುದ್ಧದಲ್ಲಿ ಬಳಸಿ ಸಾವಿರಾರು ಗಾಯಾಳುಗಳನ್ನು ರಕ್ಷಿಸಲಾಯಿತು. ಶಸ್ತ್ರ ಚಿಕಿತ್ಸೆಯ ಮೊದಲು ಮತ್ತು ನಂತರ ರೋಗಿಯ ರಕ್ತ ಗಾತ್ರವನ್ನು ನಿಷ್ಕರ್ಷಿಸಬೇಕಾಗುವುದು. ಮೇಲಿನ ವಿಧಾನದಿಂದ ನಿಖರವಾಗಿ ಹಾಗೂ ಕ್ಷಿಪ್ರವಾಗಿ ರಕ್ತ ಪರಿಮಾಣವನ್ನು ನಿಷ್ಕರ್ಷಿಸಬಹುದು.

ರಕ್ತ ಪ್ಲಾಸ್ಮಾದ ಪ್ರೋಟೀನುಗಳೊಂದಿಗೆ ಕ್ರೋಮಿಯಮ್–೫೧ ರ ಟ್ರೈಕ್ಲೋರೈಡು ಸೇರಿಕೊಳ್ಳುವುದು. ಆದುದರಿಂದ ಹೃದಯದ ಮೂಲಕ ಮತ್ತು ನಾಳಗಳಲ್ಲಿ ಹರಿಯುವ ಪ್ಲಾಸ್ಮಾದ ಗಾತ್ರವನ್ನು ನಿಷ್ಕರ್ಷಿಸುವುದೂ ಸಾಧ್ಯ. ಇದೇ ರೀತಿ ಹೃದಯದಿಂದ ಆಗುವ ರಕ್ತ ಪರಿಚಲನಾದರವನ್ನು ಕೂಡ ಕಂಡು ಹಿಡಿಯಬಹುದು. ಇಂತಹ ವಿಶ್ಲೇಷಣೆಯಿಂದ ಹೃದಯದ ಕವಾಟ ನ್ಯೂನತೆ ಇಲ್ಲವೆ ರಂಧ್ರಗಳನ್ನು ಪತ್ತೆ ಹಚ್ಚಬಹುದು.


ನಮ್ಮ ದೇಹದ ಕೆಂಪು ರಕ್ತಕಣಗಳು ೧೨೦ ದಿನ ಬಾಳುವುವು. ಅಂದರೆ ಪ್ರತಿ ದಿನ ಎಲುಬಿನಲ್ಲಿ ದೇಹದ ಒಟ್ಟು ಕೆಂಪುರಕ್ತ ಕಣಗಳ ೧/೧೨೦ ಅಂಶ ಉತ್ಪನ್ನವಾಗುತ್ತಲೂ

ರಕ್ತದಲ್ಲಿ ೧/೧೨೦ ಅಂಶ ನಶಿಸುತ್ತಲೂ ಇರುವುದು. ಎಲುಬಿನಲ್ಲಿ ಕೆಂಪು ರಕ್ತಕಣಗಳ ಉತ್ಪಾದನಾ ದರ ಇಳಿದಾಗ ಇಲ್ಲವೇ ರಕ್ತದಲ್ಲಿ ವಿಷಸೇರಿಕೊಂಡು ಕೆಂಪುರಕ್ತ ಕಣಗಳು ಬಹುಬೇಗನೆ ನಶಿಸುವಾಗ ನಿಶ್ಶಕ್ತಿಯು ತಲೆದೋರುವುದು. ಇದನ್ನು ಪತ್ತೆ ಹಚ್ಚಲು ರೋಗಿಯ ಒಂದು ಮಿಲಿಲೀಟರ್ ರಕ್ತಕ್ಕೆ ಕ್ರೋಮಿಯಮ್-೫೧ ನ್ನು ಸೇರಿಸಿ ಚಟುವಟಿಕೆ ಅಳೆದು ಅದನ್ನು ಪುನಃ ಆತನ ದೇಹಕ್ಕೆ ಪೂರೈಸಬೇಕು. ಬಳಿಕ ೧೨೦ ದಿನಗಳ ತನಕ ನಿರ್ದಿಷ್ಟ ಅವಧಿಗಳಲ್ಲಿ ಒಂದೊಂದು ಮಿಲಿಲೀಟರ್ ರಕ್ತತೆಗೆದು ಅದರ ಚಟುವಟಿಕೆ ಅಳೆದು ರಕ್ತವನ್ನು ದೇಹಕ್ಕೆ ಸೇರಿಸಬೇಕು. ಕ್ರೋಮಿಯಮ್ ಚಟುವಟಿಕೆಗಳನ್ನು ಅಳೆದ ಆಯಾಯ ದಿನಗಳಿಗೆ ಅನುಗುಣವಾಗಿಟ್ಟುಕೊಂಡು ನಕ್ಷೆ ಎಳೆಯುವರು. (ಚಿತ್ರ ೧)


ನಕ್ಷೆಯು ಕಾಲದ ಅಕ್ಷದ ೧೨೦ ದಿನಗಳ ಬಿಂದುವನ್ನು ಹಾದುಹೋದರೆ ನಿಶ್ಶಕ್ತಿಯು ಕೆಂಪುರಕ್ತ ಕಣಗಳ ಕೊರತೆಯಿಂದ ಉಂಟಾದುದಲ್ಲವೆನ್ನಬಹುದು. ನಕ್ಷೆಯು ೧೨೦ ದಿನಗಳ ಮೊದಲೇ ಕಾಲ ಅಕ್ಷವನ್ನು ಸಂಧಿಸಿದಲ್ಲಿ ರಕ್ತ ಕೊರತೆಯ ರೋಗ (anemia) ವಿದೆಯೆನ್ನಬಹುದು. ನಕ್ಷೆಯು ತುಂಬಾ ಕಡಿದಾಗಿದ್ದಲ್ಲಿ ಅದು ರಕ್ತದ ತೀವ್ರ ಕೊರತೆ (luekemia) ಯನ್ನು ಸೂಚಿಸುವುದು. ಕೆಲವೊಮ್ಮೆ ಕೆಂಪುರಕ್ತ ಕಣಗಳ ಉತ್ಪಾದನೆಯೇ ನಿಂತುಬಿಡುವುದಿದೆ. ಇದು ರಕ್ತ ಕ್ಯಾನ್ಸರ್ ಆಗಿದೆ. ಇಂತಹ ವೇಳೆ ರೋಗಿಯು ಪರಾವಲಂಬಿಯಾಗಿ ಬಿಡುವನು! ನಿರ್ದಿಷ್ಟ ಅವಧಿಗಳಲ್ಲಿ ನಿರಂತರವಾಗಿ ಬೇರೆಯವರ ರಕ್ತ ಪೂರೈಸಿ ಆತನ ಸಾವನ್ನು ಮುಂದುವರಿಸುತ್ತಾ ಹೋಗಬಹುದು.

ಕರುಳಿನ ಒಳಭಾಗದಲ್ಲಿ ಛಿದ್ರಗಳುಂಟಾದಾಗ ರಕ್ತ ಸ್ರಾವವುಂಟಾಗುವುದು. ರಕ್ತವು ಮಲದಲ್ಲಿ ಹೊರಕ್ಕೆ ಹೋಗುವುದು. ಈ ಸ್ಥಿತಿಯಿಂದಾಗಿ ನಿಶ್ಶಕ್ತಿಯು ಉಲ್ಬಣಿಸುವುದು. ಕ್ರೋಮಿಯಮ್-೫೧ ಇಲ್ಲೂ ಸಹಾಯಕ್ಕೆ ಬರುವುದು. ಇದನ್ನು ದೇಹದ ರಕ್ತಕ್ಕೆ ಪೂರೈಸಿ, ರೋಗಿಯ ಮಲವು ವಿಕಿರಣ ಪ್ರದರ್ಶಿಸುವುದೇ ಎನ್ನುವುದನ್ನು ಗೈಗರ್ ಗಣಕದಿಂದ ನಿಷ್ಕರ್ಷಿಸಬಹುದು. ರೋಗಿಯ ಮಲವು ಅಧಿಕ ಚಟುವಟಿಕೆ ಪ್ರದರ್ಶಿಸಿದಲ್ಲಿ ರಕ್ತಸ್ರಾವವು ತೀವ್ರಸ್ವರೂಪದ್ದು ಎಂದು ತಿಳಿಯಬೇಕು.


ತಾಯಗರ್ಭದಲ್ಲಿರುವ ಶಿಶುವು ತಾಯಿಯ ಆಹಾರವನ್ನು 'ಪ್ಲೆಸೆಂಟಾದ' ಮೂಲಕ ಪಡೆಯುವದು. ಕೆಲವೊಂದು ಸಂದರ್ಭದಲ್ಲಿ ಪ್ಲೆಸೆಂಟಾವು ಸ್ಥಾನಾಂತರ ಹೊಂದಿದಾಗ




ಚಿತ್ರ 1 ಎನಿಮಿಯ ವಿಶ್ಲೇಷಣೆ



ಥೈರಾಯ್ಡ್ ವಿಶ್ಲೇಷಣೆ ಚಿತ್ರ 2



ರಕ್ತ ಪರಿಚಲನೆಯ ಪರೀಕ್ಷೆ ಚಿತ್ರ 3



ಚಿತ್ರ 4

ಕೋಬಾಲ್ಟ್-೬೦ ಚಿಕಿತ್ಸೆ

(Placenta Previa) ಅಧಿಕ ರಕ್ತಸ್ರಾವವುಂಟಾಗುವುದು. ಇದು ತಾಯಿ ಹಾಗೂ ಶಿಶು ಇಬ್ಬರಿಗೂ ಮಾರಕವಾಗಿದೆ. ಕ್ರೋಮಿಯಮ್-೫೧ ನ್ನು ತಾಯಿ ರಕ್ತಕ್ಕೆ ಸೇರಿಸಿ ಗೈಗರ್ ಗಣಕವನ್ನು ಕೆಳಹೊಟ್ಟೆಯ ಮೇಲೆ ಮೆಲ್ಲನೆ ಚಲಿಸಿ ಪ್ಲೆಸೆಂಟಾದ ಜಾಗ ನಿಷ್ಕರ್ಷಿಸುವುದು ಸಾಧ್ಯ.

ನಮ್ಮ ದೇಹದ ಅನೇಕ ಜೈವಿಕಕ್ರಿಯೆಗಳನ್ನು ನಿರ್ನಾಳ ಗ್ರಂಥಿಗಳು ಸ್ರವಿಸುವ ಹಾರ್ಮೋನುಗಳು ನಿಯಂತ್ರಿಸುವವು. ಥೈರಾಯ್ಡ್ ಗ್ರಂಥಿಯು ಥೈರಾಕ್ಸಿನ್ ಎಂಬ ಹಾರ್ಮೋನನ್ನು ಉತ್ಪತ್ತಿಸುವುದು. ಇದು ಕೋಶಗಳ ಆಮ್ಲಜನಕಸೇವನೆಯನ್ನು ನಿಯಂತ್ರಿಸುವುದು. ಇದರ ತಯಾರಿಗೆ ನಾವು ಸೇವಿಸಿದ ಸುಮಾರು ೫೦% ಅಯೋಡಿನ್ ವ್ಯಯವಾಗುವುದು, ಉಳಿದಂಶ ಮೂತ್ರದೊಂದಿಗೆ ಹೊರಸಾಗುವುದು. ಅಯೋಡಿನ್-೧೩೧ ನ್ನು ಥೈರಾಯ್ಡ್ ವಿಶ್ಲೇಷಣೆಗೆ ಬಳಸುವರು. ಇದೂ ಸ್ಥಿರ ಅಯೋಡೀನ್‌ನೊಂದಿಗೆ ಸೇರಿ ಅರ್ಧಾಂಶ ಥೈರಾಯ್ಡ್ ಸೇರುವುದು ಉಳಿದ ಅರ್ಧಾಂಶ ವರ್ಜಿಸಲ್ಪಡುವುದು. ಅಯೋಡೀನ್-೧೩೧ ರ (ಸೋಡಿಯಮ್ ಅಯೋಡೈಡ್ ರೂಪದಲ್ಲಿ) ಚಟುವಟಿಕೆ ಅಳೆದು ಅದನ್ನು ರೋಗಿಗೆ ಕುಡಿಯಲು ಕೊಡುವರು. ಕೆಲವೇ ತಾಸುಗಳಲ್ಲಿ ಅದು ಥೈರಾಯ್ಡ್ ಸೇರುವುದು. ಗೈಗರ್ ಗಣಕವನ್ನು ಕುತ್ತಿಗೆಯ ಸಮೀಪ ಗ್ರಂಥಿಗೆ ಒತ್ತಿಟ್ಟು ಚಟುವಟಿಕೆ ಅಳೆಯಬಹುದು. ಇದು ಮೊದಲ ಚಟುವಟಿಕೆಯ ಅರ್ಧದಷ್ಟಿದ್ದಲ್ಲಿ ಅವಶ್ಯ ಪ್ರಮಾಣದಲ್ಲಿ ಥೈರಾಕ್ಸಿನ್ ತಯಾರಾಗುತ್ತಿವೆ ಎನ್ನಬಹುದು. ಚಟುವಟಿಕೆಯು ಅರ್ಧಾಂಶಕ್ಕಿಂತ ಕಡಿಮೆಯಿದ್ದಲ್ಲಿ ಕಡಿಮೆ ಥೈರಾಕ್ಸಿನ್ ತಯಾರಾಗುತ್ತಿರುವುದು. ಇದರ ಲಕ್ಷಣಗಳಾದರೋ ಹಸಿವಿಲ್ಲದಿರುವಿಕೆ, ತಲೆತಿರುಗುವಿಕೆ ಮತ್ತು ಕೊಬ್ಬು ಸಂಗ್ರಹ! ಚಟುವಟಿಕೆಯು ಅರ್ಧಾಂಶಕ್ಕಿಂತ ಜಾಸ್ತಿಯಿದ್ದಲ್ಲಿ– ಅದು ಅಧಿಕ ಹಾರ್ಮೋನು ತಯಾರಾಗುತ್ತಿರುವುದರ ಸೂಚನೆ. ಇದರಿಂದ ನರ ದೌರ್ಬಲ್ಯ ಕಂಡುಬರಬಹುದು. (ಚಿ.೨)

ದೇಹದ ನಿಶ್ಶಕ್ತಿಗೆ B_{12} ವಿಟಾಮಿನುಗಳ ಕೊರತೆಯೂ ಕಾರಣವಾಗಬಹುದು. B_{12} ವಿಟಾಮಿನ್ನು ಕೋಬಾಲ್ಟ್ ಸಂಯುಕ್ತವಾಗಿದೆ. ಆರೋಗ್ಯವಂತನ ರಕ್ತದ ಪ್ರತಿ ಮಿಲಿಲೀಟರಿಗೆ ಸುಮಾರು ೩೦೦-೯೦೦ ಮೈಕ್ರೋ ಮೈಕ್ರೋಗ್ರಾಮಿನಷ್ಟು B_{12} ಪ್ರಮಾಣವಿರುವುದು. ಸೇವಿಸಿದ ಅಧಿಕ B_{12} ವಿಟಾಮಿನ್ನು ಪಿತ್ತಜನಕಾಂಗದಲ್ಲಿ ಸಂಗ್ರಹವಾಗುವುದು. ಹಾಗೂ ಅವಶ್ಯಬಿದ್ದಾಗ ಅದು B_{12} ನ್ನು ರಕ್ತಕ್ಕೆ ಪೂರೈಸುವುದು. ಕೆಲವೊಮ್ಮೆ ರಕ್ತದಲ್ಲಿ ಪ್ರತಿ ಮಿಲಿಲೀಟರಿಗೆ ಈ ಪ್ರಮಾಣವು ೦–೩೦೦ ಮೈಕ್ರೋ ಮೈಕ್ರೋಗ್ರಾಮಿಗೆ ಇಳಿಯುವುದು. ಈ ಸ್ಥಿತಿಯನ್ನು ದೃಢೀಕರಿಸಲು ೭೨ ದಿನಗಳ ಅರ್ಧಾಯುಸ್ಸುಳ್ಳ ಕೋಬಾಲ್ಟ್-೫೮ ನ್ನು ರೋಗಿಯ ರಕ್ತಕ್ಕೆ ಸೇರಿಸುವರು. ಬಳಿಕ ಒಂದು ಮಿಲಿಲೀಟರ್ ರಕ್ತ ಹೊರತೆಗೆದು ಚಟುವಟಿಕೆ ಅಳೆದು B_{12} ಪ್ರಮಾಣವನ್ನು ನಿಷ್ಕರ್ಷಿಸುವರು.

ಟ್ರೀಶಿಯಮ್ ಜಲಜನಕದ ರೇಡಿಯೋ ಐಸೊಟೋಪು. ಇದನ್ನು (ಟ್ರೀಶಿಯೇಟೆಡ್ ನೀರಿನ ರೂಪದಲ್ಲಿ) ದೇಹಕ್ಕೆ ಪೂರೈಸಿದಾಗ ಇದು ನೀರಿನ ಅಣುಗಳೊಂದಿಗೆ ಸಮನಾಗಿ ವಿತರಣೆಗೊಳ್ಳುವುದು. ಟ್ರೀಶಿಯಮಿನ ಚಟುವಟಿಕೆಯನ್ನು ಅಳೆದು ಅದನ್ನು ದೇಹಕ್ಕೆ ಪೂರೈಸಬೇಕು. ಬಳಿಕ ಮೂತ್ರದಿಂದ ನೀರನ್ನು ಬೇರ್ಪಡಿಸಿ ಅದರ ಚಟುವಟಿಕೆಯನ್ನು ಅಳೆದು ದೇಹದೊಳಗಿರುವ ನೀರಿನ ಪ್ರಮಾಣವನ್ನು ಕಂಡುಹಿಡಿಯಬಹುದು.

ಮಿದುಳಿನ ಟ್ಯೂಮರಿನ ನಿಖರವಾದ ಜಾಗ ಪತ್ತೆಹಚ್ಚಲು ತಾಮ್ರ-೬೪ ಬಳಕೆಗೆ ಬಂದಿದೆ. ಇದು ವಿರುದ್ಧ ದಿಕ್ಕಿಗೆ ಸಂಕೇತಗಳನ್ನು ವಿಸರಿಸುವುದು. ರೋಗಿಗೆ ಪೂರೈಸಿದ ತಾಮ್ರ-೬೪ ಒಡನೆಯೇ ಮಿದುಳಿನ ಟ್ಯೂಮರಿನಲ್ಲಿ ಶೇಖರವಾಗುವುದು. ಗೈಗರ್ ಗಣಕಗಳನ್ನು ಜೋಡಿ ಜೋಡಿಯಾಗಿ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ತಲೆಯಸುತ್ತಲೂ ಅಳವಡಿಸುವರು. ಯಾವುದೇ ಒಂದು ಜೋಡಿ ಗಣಕಗಳಲ್ಲಿ ಅಧಿಕ

ಸಂಖ್ಯೆಯಲ್ಲಿ ಸಂಕೇತಗಳು ಪತ್ತೆಯಾದರೆ ಆ ದಿಶೆಯಲ್ಲಿ ಟ್ಯೂಮರ್ ಇದೆಯೆಂದು ಭಾವಿಸಬೇಕು.

ಆರೋಗ್ಯ ರಕ್ತದಲ್ಲಿ ೧% ಸೋಡಿಯಮ್ ಕ್ಲೋರೈಡ್ ಇರುವುದು. ಸೋಡಿಯಮ್–೨೪ನ್ನು ಉಪ್ಪಿನ ರೂಪದಲ್ಲಿ ರಕ್ತನಾಳಕ್ಕೆ ಪೂರೈಸುವರು, ದೇಹದ ವಿವಿಧ ಭಾಗಗಳಲ್ಲಿ ಶೋಧಕಗಳನ್ನು ಅಳವಡಿಸಿ ಚಟುವಟಿಕೆ ಅಳೆಯುವರು. ಯಾವುದೇ ಭಾಗದಲ್ಲಿ ಚಟುವಟಿಕೆ ಕಂಡುಬಂದರೆ ಆ ಭಾಗದಲ್ಲಿ ರಕ್ತ ಪರಿಚಲನೆ ಮಂದವಾಗಿದೆಯೆಂದು ತೀರ್ಮಾನಿಸತಕ್ಕದ್ದು. ಬಳಿಕ ಶಸ್ತ್ರ ಚಿಕಿತ್ಸೆಯಿಂದ ರಕ್ತನಾಳವನ್ನು ಸರಿಪಡಿಸಬಹುದು. (ಚಿ. ೩)

ರೋಗಶುಶ್ರೂಷೆಗೆ ಬಳಸುವ ಐಸೋಟೋಪುಗಳು ಅಧಿಕ ಚಟುವಟಿಕೆಯವು ಆಗಿರಬೇಕು. ಹಾಗೂ ದೀರ್ಘಅರ್ಧಾಯುಸ್ಸನ್ನೂ ಹೊಂದಿರಬೇಕು. ಸ್ಟ್ರೋಂಟಿಯಮ್–೯೦, ಕೋಬಾಲ್ಟ್–೬೦, ರೇಡಿಯಮ್, ಚಿನ್ನ–೧೯೮ ಇವು ಹೆಚ್ಚಿನ ಬಳಕೆಯಲ್ಲಿರುವವು.

ಕಣ್ಣಿನ ಟ್ಯೂಮರ್ ನಿರ್ನಾಮಕ್ಕೆ ಸ್ಟ್ರೋಂಟಿಯಮ್–೯೦ರ ವಿಕಿರಣ ಬಲು ಉಪಕಾರಿ. ಶಸ್ತ್ರ ಚಿಕಿತ್ಸೆಯಿಲ್ಲದೆಯೇ ದೃಷ್ಟಿಯನ್ನು ಮರುಪಡೆಯಬಹುದು. ಅನ್ನನಾಳ, ಬಾಯಿ, ಎದೆ ಮುಂತಾದೆಡೆಗಳ ಕ್ಯಾನ್ಸರುಗಳನ್ನು ಕೋಬಾಲ್ಟ್–೬೦ರ ವಿಕಿರಣದಿಂದ ಪತ್ತಿಕ್ಕಬಹುದು. ಈ ಶುಶ್ರೂಷೆಯ ವೇಳೆ ತಪ್ಪಿಯೂ ಕೂಡ ವಿಕಿರಣ ಆರೋಗ್ಯ ಕೋಶಗಳ ಮೇಲೆ ಬೀಳಕೂಡದು. ಬಿದ್ದಲ್ಲಿ ಕ್ಯಾನ್ಸರ್ ಪ್ರೇರಿತಗೊಳ್ಳುವುದು.! (ಚಿ. ೪)

ದೇಹದ ಒಳಭಾಗದ ಕ್ಯಾನ್ಸರ್ ಶುಶ್ರೂಷೆಗೆ ರೇಡಿಯಮನ್ನು ಬಳಸಬಹುದು. ಇದನ್ನು ಪುಡಿ ಮಾಡಿ ೩ ಮಿಲಿಮೀಟರ್ ಉದ್ದದ ಸಲಾಕೆಗಳಾಗಿ ಒತ್ತುವರು. ಬಳಿಕ ಇವನ್ನು ಚಿನ್ನದ ಕ್ಯಾಪ್ಸೂಲುಗಳಲ್ಲಿ ತುಂಬಿಸಿ ಸೀಲ್ ಮಾಡಿ ಟ್ಯೂಮರ್‌ನೊಳಗೆ ಸೇರಿಸುವರು. ಟ್ಯೂಮರ್ ನಿರ್ನಾಮವಾಗುವ ತನಕ ರೇಡಿಯಮ್ ಕ್ಯಾಪ್ಸೂಲು ಅಲ್ಲೇ ಉಳಿಯುವುದು. ಬಳಿಕ ಶಸ್ತ್ರ ಕ್ರಿಯೆಯಿಂದ ಅದನ್ನು ತೆಗೆಯುವರು. ಈ ವಿಧಾನದಲ್ಲಿ ಆರೋಗ್ಯ ಕೋಶಗಳು ವಿಕಿರಣಕ್ಕೆ ಒಡ್ಡಲ್ಪಡುವ ಸಂಭವ ತೀರಾ ಅಲ್ಪ.

ಮೆದುಳಿನ ಟ್ಯೂಮರನ್ನು ಶಸ್ತ್ರಕ್ರಿಯೆಯಿಂದ ಸಂಪೂರ್ಣ ಕಿತ್ತುತೆಗೆಯುವುದು ಅಸಾಧ್ಯ. ಟ್ಯೂಮರಿನ ಬೇರುಗಳು ಮೆದುಳಿನಲ್ಲಿ ಆಳದ ತನಕ ಹರಡಿರಬಹುದು. ಇಂತಹ ಕ್ಯಾನ್ಸರಿಗೆ ಒಳಗಾದ ರೋಗಿಯು ಕೆಲವೇ ತಿಂಗಳುಗಳಲ್ಲಿ ಸಾವನ್ನಪ್ಪುವನು. ಬೋರೋನ್–೧೦ (ಸ್ಥಿರ) ಸಾವನ್ನು ತಪ್ಪಿಸಬಲ್ಲ ಐಸೋಟೋಪು. ರೋಗಿಯ ರಕ್ತಕ್ಕೆ ಅಲ್ಪ ಪ್ರಮಾಣದಲ್ಲಿ ಬೋರೋನ್–೧೦ನ್ನು ಒದಗಿಸಿದ ತುಸುವೇ ಸಮಯದಲ್ಲಿ ಅದು ಟ್ಯೂಮರಿನಲ್ಲಿ ಶೇಖರವಾಗುವುದು. ಬಳಿಕ ನ್ಯೂಟ್ರಾನ್ ಕಿರಣಾವಳಿಯನ್ನು ಟ್ಯೂಮರಿನ ಮೂಲಕ ಹಾಯಿಸುವರು. ಬೋರೋನ್–೧೦ ಬೋರೋನ್ –೧೧ ಆಗಿ ಮಾರ್ಪಡುವುದು. ಇದು ರೇಡಿಯೋ ಐಸೋಟೋಪು ಆಗಿದ್ದು ಲೀಥಿಯಮ್ ಮತ್ತು ಆಲ್ಫಾ ಕಣಗಳಾಗಿ ಒಡೆಯುವುದು. ಬಿಡುಗಡೆಯಾದ ಆಲ್ಫಾ ಕಣಗಳನ್ನು ಟ್ಯೂಮರ್ ಕೋಶಗಳು ಹೀರುವುದರಿಂದ ಅವು ನಿರ್ನಾಮವಾಗುವವು.

ಹೊಟ್ಟೆಯ ಬದಿಯಲ್ಲಿ ಕ್ಯಾನ್ಸರ್ ಉಂಟಾದಾಗ ಕಿಬ್ಬೊಟ್ಟೆಯ ದ್ರವಗಳು ಹೊರಸ್ರವಿಸದೆ ಅಲ್ಲೇ ತುಂಬಿಕೊಳ್ಳುವವು. ರೋಗಿಗೆ ಉಪಶಮನನೀಡಬೇಕಾದರೆ ಆಗಾಗ್ಗೆ ದ್ರವವನ್ನು ತೆಗೆಯುತ್ತಿರಬೇಕು. ಚಿನ್ನ–೧೯೮ ಈ ಸ್ಥಿತಿಗೆ ರಾಮಬಾಣವಾಗಿದೆ. ಇದನ್ನು ದ್ರವರೂಪದಲ್ಲಿ (colloidal solution) ಕಿಬ್ಬೊಟ್ಟೆಗೆ ಪೂರೈಸುವುದರಿಂದ ಕ್ಯಾನ್ಸರ್ ನಾಶವಾಗುವುದು. ಇದರಿಂದ ದ್ರವವು ಹೊರಸಾಗುವುದು ಸಾಧ್ಯವಾಗುವುದು.

ರೋಗಗಳ ಶೋಧನೆ ಹಾಗೂ ಶುಶ್ರೂಷೆಗಳಲ್ಲಿ ರೇಡಿಯೋ ಐಸೋಟೋಪುಗಳು ಪವಾಡವನ್ನೇ ಉಂಟು ಮಾಡಿವೆ. ವೈದ್ಯಕೀಯದಲ್ಲಿ ಇವುಗಳ ಅನ್ವಯವಾದರೋ ಸಾವಿರಾರು ಈ ದಿಶೆಯಲ್ಲಿ ತೀವ್ರ ಗತಿಯಲ್ಲಿ ಸಂಶೋಧನೆಗಳು ನಡೆಯುತ್ತಿವೆ. ✡

ಅನುಭವ

ಆರ್ಥರ್ ಪ್ರೈಸ್

ನಾನು ಭಾರತೀಯನಾಗಿಯೂ ತಲೆಮರೆಸಿಕೊಂಡಾಗ....

ಅಮೇರಿಕನ್ನರು ಯುರೋಪಿನಲ್ಲಿ ಸಂಚರಿಸುತ್ತಿದ್ದಾಗ ತಾವು ಅಮೇರಿಕನ್ನರೆಂದು ಹೇಳಿದರೆ ವಿಯತ್‌ನಾಮ್ ಯುದ್ಧದ ಪ್ರಯುಕ್ತ ಟೀಕೆಗಳನ್ನೆದುರಿಸಬೇಕಾಗುತ್ತದೆಂಬ ಕಾರಣದಿಂದ ಕೆನೇಡಿಯನ್ನರೆಂದು ಹೇಳಿಕೊಂಡು ತಿರುಗುವುದು ಕೆಲ ವರ್ಷಗಳ ಹಿಂದೆ ಸಾಮಾನ್ಯವಾಗಿತ್ತು. ಹಿಚ್‌ಹೈಕ್ ಮಾಡುತ್ತಾ ಯುರೋಪಿಯನ್ ದೇಶಗಳಲ್ಲಿ ಸಂಚರಿಸುತ್ತಿದ್ದ ನನಗೂ ಇಂತಹ ಪ್ರಸಂಗ ಬರುತ್ತದೆಂದು ಕನಸುಮನಸಿನಲ್ಲಿಯೂ ಭಾವಿಸಿರಲಿಲ್ಲ.

ಭಾರತೀಯನೆಂದು ಕರೆದುಕೊಳ್ಳಲು ನನಗೆ ನಾಚುಗೆಯೆನಿಸುತ್ತದೆಂದು ಮಾತ್ರ ದಯ-ವಿಟ್ಟು ಭಾವಿಸಬೇಡಿ. ಅಥವಾ ಭಾರತದ ಬಗೆಗೆ ಬರುವ ಟೀಕೆಗಳನ್ನು ತಪ್ಪಿಸಲು ನಾನು ಹೀಗೆ ಮಾಡಿದನೆಂದೂ ಭಾವಿಸಬೇಡಿ. ನಿಜ ಹೇಳಬೇಕೆಂದರೆ ಭಾರತವನ್ನು ಅಷ್ಟಿಷ್ಟು ಅರಿತುಕೊಂಡವರ ಸಲಹೆ—ಸೂಚನೆಗಳಿಂದ ತಪ್ಪಿಸಿಕೊಳ್ಳಲೆಂದೇ ನಾನು ನನ್ನ ರಾಷ್ಟ್ರೀಯತೆಯನ್ನು ಮರೆಮಾಚಿದೆ. ಉದಾಹರಣೆಗೆ ಹೇಳುವುದಾದರೆ, ನನ್ನ ದೇಶ ಎಲ್ಲಿ ತಪ್ಪಿದೆಂಬುದನ್ನು ಚೆನ್ನಾಗಿ ಬಲ್ಲ ಟ್ರಕ್ ಡ್ರೈವರುಗಳು ಪ್ರವಾಸ ಕಾಲದಲ್ಲಿ ನನಗೆ ಬಹು ಸಂಖ್ಯೆಯಲ್ಲಿ ಭೇಟಿಯಾಗಿದ್ದರು. ಅವರು ಹೇಳಿದುದನ್ನೆಲ್ಲ ನಾನು ಸಮಾಧಾನ ಚಿತ್ತದಿಂದಲೇ ಕೇಳಿಸಿಕೊಂಡೆ. ಆದರೆ ಇಡೀ ದೇಶದ ಭವಿಷ್ಯ ನನ್ನ ಕೈಯಲ್ಲಿಯೇ ಇದೆಯೆಂಬುದನ್ನು ಅವರ ಪೈಕಿ ಕೆಲವರು ಮನಗಾಣಿಸಲು ಪ್ರಯತ್ನಿಸಿದಾಗ ಮಾತ್ರ ಸಹನೆಯನ್ನು ಕಳೆದುಕೊಂಡೆ.

ಗೋಮಾಂಸ ಸೇವನೆಯೊಂದೇ ಆಹಾರ ಸಮಸ್ಯೆಯಿಂದ ಪಾರಾಗಲು ಭಾರತಕ್ಕಿರುವ ಏಕಮೇವಮಾರ್ಗವೆಂದು ನನಗೆ ಹೇಳಿದವರ ಸಂಖ್ಯೆ ನೂರಾರು. ಇನ್ನು ಕೆಲವು ಸ್ನೇಹಮಯಿಗಳು ಭಾರತಕ್ಕೆ ಬರುವ ಇಚ್ಛೆಯನ್ನು ವ್ಯಕ್ತಪಡಿಸಿದರಾದರೂ ಮುಂಬಯಿ ಹಾಗೂ ದೆಹಲಿಗಳಲ್ಲಿ ಹುಲಿಗಳು ಅಧಿಕವಾಗಿರುವುದರಿಂದ ಅಲ್ಲಿ ಬರಲು ಧೈರ್ಯಸಾಲುತ್ತಿಲ್ಲ ಎಂದು ಹೇಳಿದರು.

ಹೆಲ್‌ಸಿಂಕಿಯಲ್ಲಿ ನನಗೊಬ್ಬ ತರುಣಿ ಭೇಟಿಯಾಗಿದ್ದಳು. ಅವಳೂ ಭಾರತವನ್ನು ನೋಡಲು ತವಕಿಸುತ್ತಿದ್ದಳು. ಆದರೆ ಕಳೆದ ವರ್ಷ ಭಾರತದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನ ಹಾವಿನ ಕಡಿತದಿಂದ ಮರಣಹೊಂದಿದರೆಂಬ ಪತ್ರಿಕಾ ವರದಿಗಳನ್ನು ಅವಳ ತಂದೆ ತಾಯಿಗಳು ನೋಡಿದ್ದರಿಂದ ಭಾರತವನ್ನು ನೋಡಲು ಅವರು

ಆ ತರುಣಿಗೆ ಅನುಮತಿಯನ್ನಿತ್ತಿರಲಿಲ್ಲ. ನಾನು ಆಸ್ಟ್ರಿಯದ ಇನ್ಸ್‌ಬ್ರುಕಿನಲ್ಲಿ ಪ್ರವಾಸಿಸುತ್ತಿರುವಾಗ ಒಬ್ಬ ಮಹನಿಯರು ಹೇಳಿದರು, "ನೀವು ಆಕಳನ್ನು ಪವಿತ್ರತೆಯ ದೃಷ್ಟಿಯಿಂದ ನೋಡುವುದರಿಂದ ಅದನ್ನು ಕೊಲ್ಲಲು ಇಷ್ಟಪಡುವುದಿಲ್ಲವೆಂಬುದು ನನಗೆ ಗೊತ್ತು. ಆದರೆ ಕಷ್ಟಪಟ್ಟು ಬೆಳೆದ ಆಹಾರಧಾನ್ಯವನ್ನೆಲ್ಲ ಹಾಳು ಮಾಡುವ ಆ ಹೆಗ್ಗಣಗಳನ್ನೇಕೆ ನೀವು ಕೊಲ್ಲುವುದಿಲ್ಲವೋ ನಾನು ಕಾಣೆ." ಆಕಳಂತೆಯೆ ಗಣೇಶನ ವಾಹನವಾದ ಇಲಿಯನ್ನು ನಾವು ಪಾವಿತ್ರ್ಯದ ದೃಷ್ಟಿಯಿಂದ ನೋಡಿ ಅದನ್ನು ಸಂಹರಿಸುವದಿಲ್ಲವೆಂದು ಅವರು ಭಾವಿಸಿಕೊಂಡಿರಬೇಕು.

ನಾನು ಆಸ್ಟ್ರಿಯದಲ್ಲಿ ಸಂಚರಿಸುತ್ತಿದ್ದಾಗ ಭಾರತವು ರಾಜಸ್ಥಾನದ ಮರಳುಗಾಡಿನಲ್ಲಿ ಅಣು ಸಾಧನವನ್ನು ಸ್ಫೋಟಿಸಿತು. ಆಸ್ಟ್ರಿಯದಲ್ಲಿ ಇಂಗ್ಲೀಷ ಪೇಪರುಗಳು ದೊರೆಯುವುದು ಕಡಿಮೆ. ದೊರೆತರೂ ಕೇವಲ ಹಿಚ್‌ಹೈಕಿನಿಂದ ಪ್ರವಾಸಿಸುತ್ತಿರುವ ನನ್ನಂತಹನಿಗಂತೂ ಬೆಲೆಯ ದೃಷ್ಟಿಯಿಂದ ಎಟುಕಲಾರದ್ದು. ಹೀಗಾಗಿ ಈ ಸುದ್ದಿ ನನಗೆ ಕೂಡಲೆ ಗೊತ್ತಾಗಲಿಲ್ಲ. ಆ ದಿನ ಡ್ರೈವರನೊಬ್ಬ ನನ್ನ ಬಳಿ ತನ್ನ ಕಾರನ್ನು ತಂದು ನಿಲ್ಲಿಸಿ "ನಿಮ್ಮ ಜನರ ಹೊಟ್ಟೆಗೆ ಹಾಕಿ, ಮೊದಲು," ಎಂದು ಕೂಗಿದ. ಅವನು ಹೀಗೇಕೆ ಮಾಡಿದನೆಂಬುದು ತಿಳಿಯಲು ಕೆಲ ಕ್ಷಣಗಳೇ ಹಿಡಿದವು. ಭಾರತ ಅಣುಸಾಧನವನ್ನು ಸ್ಫೋಟಿಸಿದ ಸುದ್ದಿ ಪತ್ರಿಕೆಗಳಲ್ಲಿ ಅಚ್ಚಾದ ದಿನ, "ಅಣು ಬಾಂಬನ್ನು ತಯಾರಿಸುವ ಆವಶ್ಯಕತೆ ಈಗ ನಿಮ್ಮ ದೇಶಕ್ಕೆ ಏನಿತ್ತು"? ಎಂದು ಕನಿಷ್ಟ ಪಕ್ಷ ನೂರು ಜನರಾದರೂ ನನ್ನನ್ನು ಕೇಳಿರಬಹುದು.

ಜನಗಳು ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಅಥವಾ ಮತ್ತಾವುದೇ ರಂಗಕ್ಕೆ ಸೇರಿರಲಿ, ಅತಿರೇಕವಾದಿಗಳಿಂದ ತೊಂದರೆಗೊಳಗಾದಷ್ಟು ನಾನು ಇನ್ನಾರಿಂದಲೂ ತೊಂದರೆಗೊಳಗಾಗಿಲ್ಲ. 'ಹರೇರಾಮ, ಹರೇ ಕೃಷ್ಣ'ದಂತಹ 'ಜಗದೋದ್ಧಾರಕರ' ಗುಂಪಿನಿಂದ ಇಂದು ಯುರೋಪ್ ಖಂಡ ತುಂಬಿ ಹೋಗಿದೆ. ಭಾರತೀಯನೊಬ್ಬ ಈ ಜನರ ಕಣ್ಣಿಗೆ ಬಿದ್ದರೆ ಸಾಕು, ಅವನನ್ನು ತಾವಾಗಿಯೇ ಕರೆದು ಮಾತನಾಡಿಸಿ, ಭಾರತದಲ್ಲಿಂದು ಆಧ್ಯಾತ್ಮಿಕ ಕ್ರಾಂತಿಯುಂಟಾಗುವುದು ಎಷ್ಟು ಅವಶ್ಯವಾಗಿದೆಯೆಂಬ ಬಗ್ಗೆ ಅವನ ತಲೆ ಸಿಡಿದು ಹೋಗುವಂತೆ ಭಾಷಣ ಬಿಗಿಯುವುದರಲ್ಲಿ ಅವರಿಗೆ ಹೆಮ್ಮೆಯೋ ಹೆಮ್ಮೆ.

ಇಂಥಾ ಪ್ರಸಂಗಗಳಲ್ಲಿ ಭಾರತೀಯನೆಂದು ಕರೆದುಕೊಳ್ಳುವುದಕ್ಕಿಂತ ಕಲ್ಯಾಣ, ಉಡುಪಿ ಅಥವಾ ಕಾರ್ಕಳವೆಂಬ ರಾಷ್ಟ್ರದ ನಿವಾಸಿಯೆಂದು ಕರೆದುಕೊಳ್ಳುವುದು ಎಷ್ಟೋ ವಾಸಿ. ಇದರಿಂದಾಗಿ ಏನಿಲ್ಲೆಂದರೂ ಅವರ ಉಪದೇಶವನ್ನು ಕೇಳುವ ಗೋಳಾದರೂ ತಪ್ಪುತ್ತದೆ. ಅಲ್ಲದೆ ಆ ಸ್ವಕಪೋಲಕಲ್ಪಿತ ದೇಶದ ಬಗ್ಗೆ ಒಳ್ಳೇ ರಸವತ್ತಾದ ಭಾಷಣವನ್ನು ಬಿಗಿಯುವ ಸುಯೋಗವೂ ನಿಮಗೆ ಲಭಿಸುತ್ತದೆ. ಆಗ ನೀವು ಉಡುಪಿಯೆಂಬ ರಾಷ್ಟ್ರವು ಶಾಂತಸಾಗರದಲ್ಲಿದೆಯೆಂದೂ ಅದರ ಜನಸಂಖ್ಯೆ ಹತ್ತು ಲಕ್ಷಕ್ಕಿಂತ ಕಡಿಮೆಯಾಗಿದೆಯೆಂದೂ ಆ ದೇಶವು ಎರಡೇ ಎರಡು ವರ್ಷಗಳ ಹಿಂದೆ ಸ್ವಾತಂತ್ರ್ಯವನ್ನು ಪಡೆಯಿತೆಂದೂ ಹೇಳಬಹುದು. ಅಲ್ಲದೆ ಆ ದೇಶದ ಸಾಗರ ತಟಕ್ಕೆ ವರ್ಷಕ್ಕೊಂದು ಸಲ ನಾವೆ ಬರುವುದರಿಂದ ವಿದೇಶಗಳಲ್ಲಿ ಸಂಚರಿಸಿದ ಆ ದೇಶದ ಹತ್ತು ಜನರಲ್ಲಿ ನೀವೂ ಒಬ್ಬರೆಂದು ಹೇಳಿ ಬೆನ್ನುಚಪ್ಪರಿಸಿಕೊಳ್ಳಲೂ ಬಹುದು. ✡

ಕೃಪೆ : 'ಇಂಡಿಯನ' ಎಕ್ಸಪ್ರೆಸ್'



ಕೀಟಗಳಿಂದ ಪಕ್ವಾನ್ನ!

ಭೌತಶಾಸ್ತ್ರ, ರಸಾಯನಶಾಸ್ತ್ರ, ಖಗೋಲಶಾಸ್ತ್ರ ಇತ್ಯಾದಿಗಳ ಜೊತೆಗೆ ಪಾಕಶಾಸ್ತ್ರದ ಹೆಸರನ್ನೂ ನೀವು ಕೇಳಿದ್ದೀರಿ. ಆದರೆ ಕೀಟ ಪಾಕಶಾಸ್ತ್ರದ ಹೆಸರನ್ನು ಎಂದಾದರೂ ಕೇಳಿದ್ದೀರಾ? ಇಲ್ಲಿಯೆ ಇರುವುದು ಸ್ವಾರಸ್ಯ. ಕ್ಯಾಲಿಫೋರ್ನಿಯದ ಕ್ಯಾರೋಲ್ ಮಿಲ್ಲರ್ ಎಂಬ ಮಹಿಳೆಯಿಂದಾಗಿ ಈ ಹೆಸರು ಇತ್ತಿತ್ತಲಾಗಿ ಅಮೇರಿಕದಲ್ಲಿ ಅಲ್ಲಲ್ಲಿ ಕೇಳಿಬರುತ್ತಿದೆ. ಅವಳೀಗ ಕೀಟ ಪಾಕಶಾಸ್ತ್ರದಲ್ಲಿ ಪದವಿ ಪಡೆಯುವ ಸನ್ನಾಹದಲ್ಲಿದ್ದಾಳೆ.


ಅನೇಕ ಬಗೆಯ ಕೀಟಗಳನ್ನು ಪರೀಕ್ಷಿಸಿದಾಗ ಅವು ಪೌಷ್ಟಿಕಾಂಶಗಳಿಂದ ಸಮೃದ್ಧವಾಗಿದ್ದುದು ಮಿಲ್ಲರಳ ಗಮನಕ್ಕೆ ಬಂದಿತು. ಜಗತ್ತು, ಅದರಲ್ಲೂ ಅಭಿವೃದ್ಧಿಶೀಲ ರಾಷ್ಟ್ರಗಳು ಪೌಷ್ಟಿಕಾಂಶಗಳ ಕೊರತೆಯಿಂದ ಬಳಲುತ್ತಿರುವಾಗ ಕೀಟಗಳ ಸೇವನೆ ಈ ಕೊರತೆಯನ್ನು ಸ್ವಲ್ಪವಾದರೂ ಹಿಂಗಿಸಲಾರದೆ? ಎಂಬ ವಿಚಾರ ಬಂದಿದ್ದು ಆಗಲೇ ಅವಳು ಪತಿ ಡೆನ್ನಿಸ್ ಮಿಲ್ಲರನಿಗೂ ಈ ವಿಚಾರ ಬಹು ಅಪ್ಯಾಯಮಾನವಾಗಿ ಕಂಡಿತು. ಅಂದಿನಿಂದಲೂ ಅವರು ಹುಳಹುಪ್ಪಡಿಗಳ ಮೇಲೆಯೆ ಜೀವಿಸುತ್ತಿದ್ದಾರೆ.

ಆಹಾರ ಪದ್ಧತಿಯನ್ನು ಬದಲಾಯಿಸುವುದು ಕಠಿಣವೆಂಬುದನ್ನು ಅವರಿಬ್ಬರೂ ಒಪ್ಪುವರಾದರೂ ಪೌಷ್ಟಿಕಾಂಶಗಳ ಕೊರತೆ ವಿಪರೀತವಾಗಿರುವ ಈ ಕಾಲದಲ್ಲಿ ಪ್ರಯತ್ನಪೂರ್ವಕವಾಗಿಯಾದರೂ ಹುಳಹುಪ್ಪಡಿಗಳನ್ನು ಆಹಾರ ಪದಾರ್ಥಗಳೆಂದು ಸ್ವೀಕರಿಸಬೇಕೆಂದು ಹೇಳುತ್ತಾರೆ. ಗೋಮಾಂಸವು ಶೇಕಡಾ ಹದಿನೈದರಿಂದ ಇಪ್ಪತ್ತರಷ್ಟು ಪ್ರೋಟೀನನ್ನೂ ಕೋಳಿಯ ಮಾಂಸ ಶೇಕಡಾ ೨೦ ರಷ್ಟು ಪ್ರೋಟೀನನ್ನೂ ಒಳಗೊಂಡಿದ್ದರೆ ಗೆದ್ದಲಿ ಶೇಕಡಾ ೪೦ ರಷ್ಟು ಪ್ರೋಟೀನನ್ನು ಒಳಗೊಂಡಿರುತ್ತದೆ. ಹಸಿರು ಜಿಟ್ಟೆ ಇದರ ಪ್ರಮಾಣ ಶೇಕಡಾ ೭೦ಕ್ಕಿಂತಲೂ ಹೆಚ್ಚು. ಅಂದಮೇಲೆ ಮಾಂಸಾಹಾರಿಗಳು ಗೋಮಾಂಸ, ಕೋಳಿಮಾಂಸಗಳನ್ನು ವರ್ಜಿಸಿ ಅವುಗಳ ಬದಲು ಗೆದ್ದಲು. ಹಸಿರು ಜಿಟ್ಟೆಗಳನ್ನು ಸೇವಿಸಿದರೆ ತಪ್ಪೇನು? ಎಂಬುದು ಅವರ ವಾದ. ಹೀಗೆಯೆ ಅವರು ಇನ್ನೂ ಅನೇಕ ಬಗೆಯ ಕೀಟಕಗಳನ್ನು ಉದಾಹರಿಸುತ್ತಾರೆ.

ಮಿಲ್ಲರ್ ದಂಪತಿಗಳು ಗೆದ್ದಲು, ಜಿರಳೆ, ಮೊಳೆಹುಳು, ಪತಂಗ, ಜಿಟ್ಟೆ ಮೊದಲಾದವುಗಳಿಂದ ಅನೇಕ ಬಗೆಯ ಖಾದ್ಯ ಪದಾರ್ಥಗಳನ್ನು ತಯಾರಿಸುವುದನ್ನು ಕಂಡು ಹಿಡಿದಿದ್ದಾರೆ. ಅವುಗಳಲ್ಲಿ ಗೆದ್ದಲು ಪುಲಾವ್ ಅವರಿಗೆ ಬಹು ಪ್ರಿಯವಾದದ್ದು. ಅದನ್ನು ಮಾಡುವುದೂ ಸುಲಭ.

ಒಂದು ಕಪ್ಪಿನಷ್ಟು ಸಣ್ಣಕ್ಕಿಗೆ ಕಾಲು ಕಪ್ಪಿನಷ್ಟು ಎಳ್ಳನ್ನು ಸೇರಿಸಿ ಕೆಂಪಾಗುವ ಹಾಗೆ ಬೆಣ್ಣೆಯಲ್ಲಿ ಹುರಿಯಬೇಕು. ಬಳಿಕ ಅದಕ್ಕೆ ನೀರು ಹಾಕಿ ಸ್ವಲ್ಪ ಉಪ್ಪನ್ನು ಕಾಲು ಕಪ್ಪಿನಷ್ಟು ಗೆದ್ದಲೆಗಳನ್ನು ಒಂದು ಕಪ್ಪಿನಷ್ಟು ಚಿಕ್ಕದಾಗಿ ಕತ್ತರಿಸಿದ ನೀರುಳ್ಳಿಯನ್ನೂ ಎರಡು ಕಪ್ಪಿನಷ್ಟು ಮಾಂಸವನ್ನೂ ರುಚಿಗೆ ಸ್ವಲ್ಪ ಉಪ್ಪನ್ನೂ ಹಾಕಿ ಮಿಶ್ರಣ ಬೆಂದು ಗಟ್ಟಿಯಾಗುವವರೆಗೆ ಬೇಯಿಸಿದರೆ ಗೆದ್ದಲಿಯ ಪುಲಾವ್ ತಯಾರಾಗುತ್ತದೆ.

ಇದನ್ನು ಓದಿ ನಿಮಗೆ ವಾಂತಿಯಾಗುವ ಹಾಗೆ ಆಗದಿದ್ದರೆ ಈ ಹೊಸ ಪಕ್ವಾನ್ನವನ್ನು ನೀವೂ ಸವಿಯಬಹುದು. ✡



ನೆತ್ತರು

[ವನ್ಯ ಮೃಗಗಳನ್ನು ಪಳಗಿಸಬಹುದೇ? ಎಂಬುದಕ್ಕೆ ಸರ್ಕಸ್ಸಿನವರು ಪ್ರಾಣಿ ಸಂಗ್ರಹಾಲಯದವರು ಹೌದೆಂದು ಉತ್ತರಿಸಬಹುದು. ಆದರೆ ಮನೆಯಲ್ಲಿ ಅಂಥ ವನ್ಯ ಪ್ರಾಣಿಯೊಂದನ್ನು ತಂದು ಬೆಕ್ಕಿನಂತೆ ಪಳಗಿಸಬೇಕು ಎಂದು ಪ್ರಯತ್ನಿಸಿದ ಓರ್ವ ಅರಣ್ಯಾಧಿಕಾರಿಗೆ ಬಂದ ಅನುಭವವನ್ನು ಶ್ರೀ ಶೇಷನಾರಾಯಣರು ಇಲ್ಲಿ ಹೃದಯಸ್ಪರ್ಶಿಯಾಗಿ ನಿರೂಪಿಸಿದ್ದಾರೆ, ಕಾಡು ಪ್ರಾಣಿಗಳನ್ನು ಎಷ್ಟೇ ಜಾಗರೂಕತೆಯಿಂದ ಬೆಳೆಸಿಕೊಂಡು ಬಂದರೂ ಅವಕ್ಕೆ ಒಮ್ಮೆ ನೆತ್ತರಿನ ರುಚಿ ದೊರೆಯಿತೆಂದರೆ ಸಾಕು, ಅವು ತಮ್ಮ ಸ್ವಭಾವದತ್ತಲೇ ಒಲಿಯುತ್ತವೆ ಎಂಬುದೇ ದಿಟ. ಈ ದಿಟ್ಟ ಪ್ರಯೋಗ ಮಾಡಲು ಹೋಗಿ ಕೈ ಸುಟ್ಟುಕೊಂಡ ಅರಣ್ಯಾಧಿಕಾರಿಯೊಬ್ಬನ ಕಥೆಯಿದು.]

ರಾಮನಾಥಯ್ಯ ಫಾರೆಸ್ಟ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿದ್ದಾರೆ. ಈಗಿನ ಕರ್ನಾಟಕದ ಆಗಿನ ಮೈಸೂರಿನ ಎಲ್ಲ ಪ್ರಸಿದ್ಧ ಕಾಡುಗಳಲ್ಲಿಯೂ ಬಂದೂಕನ್ನು ಹೆಗಲಿಗೇರಿಸಿ ಅವರು ಸುತ್ತಾಡಿದ್ದಾರೆ. ಬಂಡೀಪುರ, ಮೂಲೆಹೊಳೆ, ಬಿಳಿಗಿರಿ ರಂಗನ ಬೆಟ್ಟ ಬೂದಿಪಡಗ ಕಾಕನಕೋಟೆ ಪುಣಜೂರು ಕೋಳೀಪಾಳ್ಯ–ಹೀಗೆ.

ವಾಚ್‌ಮನ್ ಕೆಲಸಕ್ಕೆ ಸೇರಿ, ಅನಂತರ ಫಾರೆಸ್ಟ್ ಗಾರ್ಡ್ ಆಗಿ, ಬಳಿಕ ಫಾರೆಸ್ಟರ್ ಹುದ್ದೆಗೆ ಬಡ್ತಿಯಾಗಿ ಅವರು ಆ ಇಲಾಖೆಯ ಶಿಖರವೇರಿದರು. ವಿದ್ಯೆ ಇದ್ದಿದ್ದರೆ ಅವರು ರೇಂಜರರಾಗುತ್ತಿದ್ದರು. ಕನ್ಸರ್ವೇಟರರೂ ಆಗುತ್ತಿದ್ದರೋ ಏನೋ?

ಉಹೂಂ, ರಾಮನಾಥಯ್ಯನವರಿಗೆ ವಿದ್ಯೆ ಇಲ್ಲ. ಅವರು ಪ್ರಾಥಮಿಕ ಮೂರನೆಯ ತರಗತಿಯಲ್ಲಿ ಮಾತ್ರ ಕೆಲವು ದಿನಗಳು ಕಾಲಿಕ್ಕಿದ್ದರು, ಅಷ್ಟೇ.

*

ಶಾಲೆಯ ವಿದ್ಯಾಭ್ಯಾಸ ದೊರಕದಿದ್ದರೂ ರಾಮನಾಥಯ್ಯ ಪ್ರಕೃತಿಯ ಶಾಲೆಯಲ್ಲಿ ತಮ್ಮ ಜ್ಞಾನವನ್ನು ಬೆಳೆಸಿಕೊಂಡರು. ಯಾವ ಸಂಸ್ಕಾರದ ಹಿನ್ನೆಲೆಯೋ ಅದೃಷ್ಟವೋ ಅಭಿರುಚಿಯೋ ಕೆಟ್ಟ ಚಟಗಳಿಗೆ ಅವರು ಬಲಿ ಬೀಳಲಿಲ್ಲ. ಸಾಮಾನ್ಯವಾಗಿ ಪೋಲೀಸು, ಫಾರೆಸ್ಟ್ ಇಲಾಖೆಯ ಜನ ಬೇಗ ದುಶ್ಚಟಗಳಿಗೆ ಒಳಗಾಗುತ್ತಾರೆ.

ರಾಮನಾಥಯ್ಯ ಇದಕ್ಕೆ ಹೊರತು. ಅವರು ಶುದ್ಧ ಸಸ್ಯಾಹಾರಿ. ಸ್ವಭಾವವೂ ಅಷ್ಟೇ, ಸಾತ್ವಿಕ.

ಸಾತ್ವಿಕ ಎಂದೊಡನೆ ಆ ಇಲಾಖೆಯಲ್ಲಿ ಸಾಧ್ಯವೇ? ಎನ್ನುವುದೇ ಬೆನ್ನ ಹಿಂದಿನ ಪ್ರಶ್ನೆ. ರಾಮನಾಥಯ್ಯ ಕೆಲಸದಲ್ಲಿ ಗಟ್ಟಿಗ. ಪ್ರಾಮಾಣಿಕ, ಒಳ್ಳೆಯ ಗುರಿಕಾರ.

ಹಿಂದಿನ ಕಾಲದ ಕಾಡು ಎಂದರೆ ಭಯಾನಕ. ಐವತ್ತು ವರ್ಷಗಳ ಹಿಂದೆ ಬಂಡೀಪುರದಲ್ಲೋ ನೀಲಗಿರಿಯ ಸರಹದ್ದಿನಲ್ಲೋ ತಾಳವಾಡಿಯ ಆಜುಬಾಜಿನಲ್ಲೋ ಸಂಚರಿಸಿದ್ದವರಿಗೆ, ಈಗ ಸುತ್ತಾಡಿದರೆ, ಪಿಚ್ ಎನಿಸುತ್ತದೆ. ಕಾಡಿನ ಆ ವೈಭವ ರೌದ್ರತೆ ಭೋರ್ಗರೆತ ಕ್ರಮ ಕ್ರಮೇಣ ನಶಿಸಿ ಹೋಗುತ್ತಿದೆ ಎಂದೆನಿಸುತ್ತದೆ.

ಸಾತ್ವಿಕ ರಾಮನಾಥಯ್ಯ ಶಿಕಾರಿಯಲ್ಲಿ ನಿಸ್ಸೀಮ. ಅವರ ಗುರಿ ಎಂದೂ ತಪ್ಪಿದ್ದಿಲ್ಲ. ಎರಡು ಮೂರು ಹುಲಿಗಳನ್ನು ಅವರು ಹೊಡೆದು ಕೆಡವಿದ್ದಾರೆ. ಕಾಡುಹಂದಿ ಕಿರುಬ ಕರಡಿ — ಹೀಗೆ ಅನೇಕ ಪ್ರಾಣಿಗಳು ಅವರ ಬಂದೂಕಿಗೆ ಆಹುತಿಯಾಗಿವೆ. ಆಗಿನ ಕಾಲದಲ್ಲಿ ದುಷ್ಟ ಪ್ರಾಣಿಗಳನ್ನು ಕೊಂದರೆ, ಕೊಂದವರಿಗೆ, ಸರಕಾರ ಬಹುಮಾನವನ್ನು ನೀಡುತ್ತಿತ್ತು. ಹುಲಿಯನ್ನು ಗುಂಡಿಕ್ಕಿ ಕೊಂದರಂತೂ ಅವನು ಮಹಾವೀರನೇ. ಮಹಾಮಲ್ಲನೇ. ಸತ್ತ ಹುಲಿಯೊಂದಿಗೆ ಹೊಡೆದವನನ್ನೂ ಕೂರಿಸಿ ಹಾರ ಹಾಕಿ ಊರು ಊರುಗಳಲ್ಲಿ ಮೆರವಣಿಗೆ ಮಾಡುತ್ತಿದ್ದರು.

ಒಂದು ಸಲ ರಾಮನಾಥಯ್ಯನವರಿಗೂ ಅವರ ಗೆಳೆಯರಿಗೂ ಏನೋ ಮಾತಿಗೆ ಮಾತು ಬೆಳೆಯಿತು. "ಎಲ್ಲಿ, ನೀವು ಅಷ್ಟು ಗುರಿಕಾರರಾಗಿದ್ದರೆ ಆ ಹಕ್ಕಿಯನ್ನು ಹೊಡೆದು ಬೀಳಿಸಿ" ಎಂದರು.

ಏನೂ ಪಾಪ ಮಾಡದ ನೀಲಿಗರಿಯ ಒಂದು ಪುಟಾಣಿ ಹಕ್ಕಿ ಎರಡು ತೆಂಗಿನ ಮರದೆತ್ತರದ ಒಂದು ಭೀಮ ವೃಕ್ಷದ ತುಟ್ಟ ತುದಿಯಲ್ಲಿ ಕುಳಿತಿತ್ತು. ಹಸುರೆಲೆ ಮೇಲೆ ತಲೆಯಿಕ್ಕಿ. ಅದು ಆಕಾಶವನ್ನು ನೋಡುತ್ತಿತ್ತು. ಆಗಾಗ ಅದು ತನ್ನ ರೆಕ್ಕೆಗಳನ್ನು ಜಾಳಿಸುತ್ತಿದ್ದುದರಿಂದ ಒಂದು ಹಕ್ಕಿ ಅಲ್ಲಿ ಕುಳಿತಿದೆ ಎಂದು ತಿಳಿಯಬಹುದಿತ್ತು ಅಷ್ಟೇ.

ಆ ಮುದ್ದು ಪಕ್ಕಿಯ ಕೊಕ್ಕು ಅಚ್ಚ ಕಪ್ಪು. ಕತ್ತು ಬೂದು ವರ್ಣ, ಪಾದಗಳೂ ಪುಕ್ಕವೂ ಮಾತ್ರ ಕಾಣಿಸುತ್ತ ಇರಲಿಲ್ಲ. ಇನ್ನು ಅದರ ಗಾತ್ರವೋ? ಮೂರು ನಾಲ್ಕು ನಿಂಬೇಕಾಯಿ ಸೇರಿಸಿದರೆ ಆಗುವಷ್ಟು ಇಷ್ಟೇ.

ಅಂಥ ಮೋಹನ ಹಕ್ಕಿಗೆ ಕಾಲನಾಗುವುದು ರಾಮನಾಥಯ್ಯನವರಿಗೆ ಇಷ್ಟವಿಲ್ಲ. ಆದರೇನು ಮಾಡುವುದು? ಮಾತಿಗೆ ಮಾತು ಬೆಳೆದಿದೆ, ಪಂದ್ಯ ಕಟ್ಟಿದ್ದೂ ಆಗಿದೆ.

ಒಡನೆ ಅವರು ಕೋವಿಯನ್ನು ಹೊರತೆಗೆದು, ಗುರಿಯಿಟ್ಟು ಖಿನ್ನನ್ನು ಅದುಮಿದರು. ಢಮಾರ್ ಎನ್ನುವ ಭೀಕರ ಶಬ್ದದೊಂದಿಗೇ ಅಷ್ಟು ಎತ್ತರದಲ್ಲಿದ್ದ ಆ ಪುಟಾಣಿ ಚೆಲುವಕ್ಕಿ ಧೊಪ್ಪೆಂದು ಕೆಳಗೆ ಬಿತ್ತು.

ರಾಮನಾಥಯ್ಯನವರದು ಅಂಥ ಗುರಿ. ರಾಮಬಾಣ.

*

ತೇಗು ಬೀಟೆ ಹೊನ್ನೆ ಇಂಥ ಕಾಡು ಮರಗಳ ಪರಿಚಯ, ಕಾಡಿನ ರಕ್ಷಣೆ, ತುಪಾಕಿಯನ್ನು ಹೆಗಲಿಗೇರಿಸಿ ಶಿಕಾರಿ–ಇವಿಷ್ಟೇ ರಾಮನಾಥಯ್ಯನವರ ಕೆಲಸವಾಗಲಿಲ್ಲ. ಕಾಡಿನಲ್ಲಿಯೇ ಸದಾ ವಾಸಿಸುತ್ತಿದ್ದ ಅವರಿಗೆ ವನ್ಯ ಪ್ರಾಣಿಗಳ ಬಗ್ಗೆ ಆಸಕ್ತಿ ದಿನದಿನಕ್ಕೆ ಹೆಚ್ಚತೊಡಗಿತು.

ಪ್ರಾಣಿಗಳಲ್ಲಿ ನಾನಾ ಬಗೆಯ ಗುಣ ಸ್ವಭಾವ ನಡತೆ ಇರುತ್ತದೆ. ಮಾನವರಂತೆಯೇ ಅವುಗಳಲ್ಲಿಯೂ ಮಾಂಸಾಹಾರಿ ಸಸ್ಯಾಹಾರಿ ಈ ಎರಡು ವರ್ಗದವೂ ಇವೆ. ಅವುಗಳಲ್ಲಿ ಸಾಧುತ್ವ ಕ್ರೌರ್ಯ ಒಗ್ಗಟ್ಟು ಶಿಸ್ತು ಜಗಳ ಭಿನ್ನ ಭಿನ್ನವಾಗಿರುತ್ತವೆ. ಇದು ಹೇಗೆ? ಯಾಕೆ? ಇತ್ಯಾದಿ.

ಹುಲಿ ಮಾಂಸಾಹಾರಿ ಪ್ರಾಣಿ. ಕೋಳಿಯೂ ಮಾಂಸವನ್ನು ತಿನ್ನುತ್ತದೆ. ಕಾಗೆಯೂ ತಿನ್ನುತ್ತದೆ. ಆದರೆ ಕೋಳಿ ಕಾಗೆಗಿಲ್ಲದ ಕ್ರೌರ್ಯ ಹುಲಿಗಿದೆ. ಇದು ಯಾಕೆ? ಚತುಷ್ಪಾದಿಗಳಲ್ಲಿ ಹುಲಿಯೂ ಹಾರುವ ಪಕ್ಷಿಗಳಲ್ಲಿ ಗಿಡುಗನೂ ಜಲಚರ ಪ್ರಾಣಿಗಳಲ್ಲಿ ಮೊಸಳೆಯೂ ತುಂಬಾ ಕ್ರೂರಿಗಳಾಗಿರುತ್ತವೆ.

ಹುಲಿಗಿಂತ ಆನೆಗೆ ಅದೆಷ್ಟೋ ಪಟ್ಟು ಬಲವಿದೆ. ಆನೆಯಷ್ಟು ಭೀಮ ಪ್ರಾಣಿ ಜಗತ್ತಿನಲ್ಲಿ ಬೇರೊಂದಿಲ್ಲ. ಇದು ಪ್ರಕೃತಿಯ ವೈಭವವೇನೋ ಎನ್ನುವಷ್ಟು ಬೆಡಗು, ಆದರೆ ಹುಲಿಯಷ್ಟು ಕ್ರೌರ್ಯ ಆನೆಗಿಲ್ಲ ಎನ್ನುತ್ತಾರೆ. ಆನೆ ಇರಲಿ, ಆನೆಗಿಂತಲೂ ಬಲಶಾಲಿಯಾದ ಸಿಂಹಕ್ಕೆ ಕೂಡ ಹುಲಿಗಿರುವಷ್ಟು ಮತ್ಸರ, ರಕ್ತದಾಹ ಇಲ್ಲವಂತೆ. ಇದು ಬಲ್ಲವರು ಹೇಳುವ ಮಾತು. ಇದರ ಕಾರಣ ಏನು?

ಸಸ್ಯಾಹಾರದ್ದು ಶಾಂತ ಸ್ವಭಾವದ್ದೂ ಮಾಂಸಾಹಾರದ್ದು ಕ್ರೂರಿಯಾಗಿಯೂ ಇರುತ್ತದೆಂದು ಸಹ ಹೇಳುವ ಹಾಗಿಲ್ಲ.

ಆಹಾರದಿಂದ ಗುಣ, ಸ್ವಭಾವ ನಿರ್ಧರಿಸುವುದು ಕಷ್ಟ. ಮಾನವರಂತೆಯೇ ಪ್ರಾಣಿಗಳಲ್ಲಿಯೂ ಈ ರೀತಿ ಅವನ್ನು ವಿಂಗಡಿಸುವುದು ಸಲ್ಲ.

ಕೋಳಿ ಕಾಗೆ ಇರುವೆ ಇಂಥವು ಸಮಾಜ ವಾದ ಬೋಧಿಸುತ್ತವೆ. ನಾಯಿ ನಿಷ್ಠೆಯನ್ನು ತೋರಿಸುತ್ತದೆ.

ಇಂಥ ಕುತೂಹಲದಿಂದ ರಾಮನಾಥಯ್ಯ ಅನೇಕ ಪ್ರಾಣಿಗಳನ್ನು ಅವು ಎಳೆಯವಾಗಿದ್ದಾಗ ತಂದು ಸಾಕಿದ್ದುಂಟು. ಬೆಕ್ಕು, ನಾಯಿ, ಇರಲಿ. ಮುಂಗುಸಿ, ಜಿಂಕೆ, ಕಾಡುಕೋಳಿ, ಕರಡಿ–ಹೀಗೆ ಯಾವುದು ಸಿಗುತ್ತದೋ, ಮರಿಯಾಗಿದ್ದಾಗ ಅದನ್ನು ಹಿಡಿದು ತರುವುದು, ಆಹಾರ ಒದಗಿಸುವುದು, ಅವುಗಳ ಗುಣ–ಸ್ವಭಾವವನ್ನು ಪರೀಕ್ಷಿಸುವುದು.

ರಾಮನಾಥಯ್ಯನವರಿಗೆ ಇದು ಒಂದು ಹವ್ಯಾಸ, ಚಟ.

ಒಂದು ಸಂದರ್ಭದಲ್ಲಿ ಅವರು ಒಂದು ಹುಲಿ ಮರಿಯನ್ನು ಹಿಡಿದು ತರುವ ಪ್ರಮೇಯ ಒದಗಿ ಬಂತು.

*

ಮೈಸೂರು–ಕೇರಳದ ಪಶ್ಚಿಮ ಗಡಿಯಲ್ಲಿ ಕಾಡಿನ ನಡುವೆ ಒಂದು ಹಳ್ಳ. ಕಳ್ಳ ಸಾಗಾಣಿಕೆಗಾರರಿಗೆ ಈ ಹಳ್ಳ ಸ್ವರ್ಗ.

ಕಾಲನ ಬಾಯಿಯ ಹಾಗೆ ಘೋರವಾಗಿರುವ ಈ ಅಡವಿಯಲ್ಲಿ, ರಾತ್ರಿಯ ವೇಳೆಗಳಲ್ಲಿ, ಕಳ್ಳಸಾಗಾಣಿಕೆಯವರು ಮರಗಳನ್ನು ಕಡಿದು ನೀರಿನಲ್ಲಿ ಇಳಿಬಿಟ್ಟು ಸಾಗಿಸುತ್ತಾರೆ.

ಒಂದು ಸಲ ಕೇರಳದ ಕಡೆಯವರು ಈ ಹಳ್ಳದ ಬಳಿ ಬಂದು ಬಿಡಾರ ಹೂಡಿದ್ದಾರೆ ಎನ್ನುವ ಸುಳಿವು ರಾಮನಾಥಯ್ಯನವರಿಗೆ ಸಿಕ್ಕಿತು.

ಕಳೆದ ಎರಡು ತಿಂಗಳುಗಳಿಂದಲೂ ಈ ಚೋರರು ಫಾರೆಸ್ಟ್ ಇಲಾಖೆಯವರಿಗೆ ಚಳ್ಳೇಕಾಯಿ ತಿನ್ನಿಸಿದ್ದಾರೆ. ಈ ಅವಧಿಯೊಳಗೆ ನಾಲ್ಕು ಆರು ಸಲ ತೇಗು ಬೀಟೆ ಶ್ರೀಗಂಧದ ಬೆಲೆ ಬಾಳುವ ಮರಗಳನ್ನು ಅವರು ಕಡಿದು ಸಾಗಿಸಿದ್ದಾರೆ. ಇಲಾಖೆಯವರು ಎಷ್ಟು ಸಾಹಸ ಮಾಡಿದರೂ ಹಿಡಿಯಲು ಆಗದಂತೆ ತಪ್ಪಿಸಿಕೊಂಡಿದ್ದಾರೆ.

ಈ ಸಲ ಈ ಗುಂಪನ್ನು ಹೇಗಾದರೂ ಮಾಡಿ ಹಿಡಿಯಲೇಬೇಕು ಎಂದು ಪಣ ತೊಟ್ಟ ರಾಮನಾಥಯ್ಯ, ನಂಬಿಗಸ್ಥರಾದ ಕೆಲವು ಆಳು ಕಾಳುಗಳೊಂದಿಗೆ, ಒಂದು ರಾತ್ರಿ, ಬಂದೂಕೆ ಕತ್ತಿ–ಇಂಥ ಆಯುಧಗಳ ಸಮೇತ ನೀಳವಾದ ಚಳಿ ಕೋಟುಗಳನ್ನು ಧರಿಸಿ ಕಾಡಿನೊಳಗಡೆ ಪ್ರವೇಶ ಮಾಡಿದರು.

ಆಗ ಬೆಳುದಿಂಗಳ ಕಾಲ. ಆಗಸದಲ್ಲಿ ಒಂದು ತುಣುಕು ಮುಗಿಲೂ ಇಲ್ಲ. ಪಿಳಪಿಳನೆ ಮಿನುಗುತ್ತ ಕಾಡನ್ನು ಅಣಕಿಸುವಂತೆ ತಾರೆಗಳೋ ತಾರೆಗಳು. ಹೂಮಳೆ ಸುರಿದಿದೆಯೇನೋ ಎನ್ನುವ ಹಾಗೆ ಬಗೆಬಗೆಯ ಕಾಡು ಹೂಗಳ ರಾಶಿ, ಸೊಬಗು.

ರಾಮನಾಥಯ್ಯನವರ ಗುಂಪು ಬಹಳ ಎಚ್ಚರಿಕೆಯಿಂದ ಕಾಡಿನಲ್ಲಿ ಅಡ್ಡಾಡತೊಡಗಿತು. ಬೂಟು ಹಾಕಿದರೂ ಶಬ್ದವಾಗ

ಬಹುದು ಎಂದು ; ಚಪ್ಪಲಿಗಳನ್ನೇ ಅವರು ಮೆಟ್ಟಿದ್ದರು. ಟಾರ್ಚ್ ಇದ್ದರೂ ಅದರಿಂದ ಬೆಳಕನ್ನು ಚೆಲ್ಲಿರಲಿಲ್ಲ. ಅಂಥ ಬೆಳಕಿನ ಸುಳಿವಿನಿಂದಲೇ ಚೋರರು ಪಲಾಯನ ಮಾಡಲೂ ಬಹುದು–ಇಂಥ ಎಚ್ಚರಿಕೆ.

ಬೆಳುದಿಂಗಳ ಸಹಾಯದಿಂದಲೇ ಕಾಡಿನ ಮರಗಳ ನಡುವೆ ನುಸುಳಿ ನುಸುಳಿ ಕಾಡೆಲ್ಲವನ್ನೂ ಅಡ್ಡಾಡಿದ ರಾಮನಾಥಯ್ಯನವರ ತಂಡಕ್ಕೆ ಯಾವ ಪ್ರಯೋಜನವೂ ಆಗಲಿಲ್ಲ. ಇವರಿಗೆ ಸುಳಿವು ಸಿಕ್ಕಿದ್ದ ಭಾಗದಲ್ಲಿ ಯಾವ ವಿಧವಾದ ಚಲನೆಯೂ ಕಾಣೆ, ಭೀನಾಕಾರದ ವೃಕ್ಷಗಳ ಅಬ್ಬರ, ಹುಲ್ಲಿನ ರಾಶಿಯ ಸರಸರ, ಮರಗಳ ತಿಕ್ಕಾಟದ ಘೀಳು ಎಲ್ಲೆಲ್ಲಿಯೋ ಎಂಥೆಂಥದೋ ಪ್ರಾಣಿಗಳ ಕೂಗು–ಇಷ್ಟನ್ನು ಬಿಟ್ಟರೆ.

ಒಂದು ಸಮಯ ತಮ್ಮ ಧಾಳಿ ನಡೆಯುತ್ತದೆಂದು ಅವರಿಗೂ ಸುಳಿವು ಹೋಗಿರಬಹುದೋ ಹೇಗೆ? ಈ ಇಲಾಖೆಯಲ್ಲಿ ಅದೂ ಸಾಧ್ಯ. ತಾವು ಬಹುವಾಗಿ ನಂಬಿಕೊಂಡಿರುವವರಲ್ಲಿ ಒಬ್ಬನೇ ಲಂಚ ತಿಂದು ಆ ಕಡೆಗೆ ಮಾಹಿತಿ ಒದಗಿಸಲೂ ಶಕ್ಯವಿದೆ.

ಸುತ್ತಿ ಸುತ್ತಿ ಸುತ್ತಾಡಿ ಬಸವಳಿದು ಹೋದ ರಾಮನಾಥಯ್ಯನವರಿಗೆ ಈಗ ಎಲ್ಲಾದರೂ ಒಂದು ಕಡೆ ಸ್ವಲ್ಪ ಹೊತ್ತು ಕುಳಿತು ವಿಶ್ರಮಿಸಿಕೊಳ್ಳಬೇಕು. ಎನಿಸಿತು. ಅವರ ಸಂಗಡಿಗರೂ ಹಾಗೆಯೇ ದಣಿದಿದ್ದರು, ಚಳಿ ಬಹಳವಾಗಿದ್ದರೂ ತುಂಬಾ ಸುತ್ತಾಡಿದ್ದರಿಂದ ಈಗ ಅವರು ಬೆವೆತಿದ್ದರು.

ಅಲ್ಲಿ, ಒಂದು ಕಡೆ, ಕಲ್ಲು ಬಂಡೆ. ಕಪ್ಪೆ ಚಿಪ್ಪಿನ ಆಕಾರದ್ದು. ಅಷ್ಟು ಎತ್ತರ ಅಲ್ಲದ್ದು. ಅದರ ಎರಡು ಬದಿ ಜೊಂಡು ಬೆಳೆದಿದೆ. ಮತ್ತೆರಡು ಕಡೆ ಬೋಳಾಗಿದೆ.

ರಾಮನಾಥಯ್ಯ ಈಗ ಆ ಬಂಡೆಯೆಡೆಗೆ ನಡೆದರು. ಆಳುಗಳು ಅವರನ್ನು ಹಿಂಬಾಲಿಸಿದರು ಅವರೆಲ್ಲರೂ ಈಗ ಆ ಬಂಡೆಯನ್ನು ಹತ್ತಿದರು.

ಮಂಜು ಸುರಿದು ಆ ಬಂಡೆ ಕುಳುಕುಳು ಎನ್ನುತ್ತ ಹಿಮದ ಗಡ್ಡೆಯಾಗಿದೆ. ಆಳುಗಳು ತಾವು ತಲೆಗೆ ಕೊಂಗ ಮಾಡಿಕೊಂಡಿದ್ದ ಗೋಣೀ ತಾಟನ್ನು ಬಿಚ್ಚಿ ಬಂಡೆಯ ಮೇಲೆ ಹಾಸಿದರು. ದಣಿವಾರಿಸಿಕೊಳ್ಳಲು ಎಲ್ಲರೂ ಅದರ ಮೇಲೆ ಕುಳಿತರು.

ಆಗ ಬೆಳಗಿನ ಜಾವ, ನಾಲ್ಕು ನಾಲ್ಕೂವರೆ ಸಮಯ. ಬೆಳ್ಳಿ ಮೂಡಿದೆ. ಚಂದ್ರಬಿಂಬ ಬಾನಂಚಿಗೆ ಜಾರಿದೆ.

ರಾಮನಾಥಯ್ಯನವರು ಈಗ ತಮ್ಮ ಚಂಚಿಯಿಂದ ಎಲೆ ಅಡಕೆ ತೆಗೆದು ಎಲ್ಲರಿಗೂ ಹಂಚಿದರು. ತಾವೂ ಹಾಕಿಕೊಂಡರು. ತಮ್ಮ ಎಡಗೈಗೆ ಸುಣ್ಣ ಬಳಿದು ಇಷ್ಟುದ್ದದ ಹೊಗೆಸೊಪ್ಪನ್ನು ಮುರಿದು ಅದರಲ್ಲಿ ಹಾಕಿ ತೀಡಿದರು. ಅವರಲ್ಲಿ ಕೆಲವರು ಬೀಡಿ ಹಚ್ಚಿಕೊಂಡರು. ರಾಮನಾಥಯ್ಯನವರು ಬೀಡಿ, ಚುಟ್ಟಾ ಇಂಥದ್ದೆಲ್ಲ ಸೇದುವುದಿಲ್ಲ.

ಮಾತು. ಚರ್ಚೆ, ಪ್ರಶ್ನೆ?

ಇವೊತ್ತು - ಕೇರಳೀಯ ಚೋರರು ಈ ಭಾಗಕ್ಕೆ ಬರುವುದು ಖಚಿತವಿತ್ತು. ಅದು ಸುಳ್ಳು ಸುದ್ದಿಯಲ್ಲ ಮಾಹಿತಿಯಲ್ಲ. ಹಾಗೆಂದ ಮೇಲೆ ಅವರು ಬರಲಿಲ್ಲ ಯಾಕೆ?

ತಮ್ಮ ಗುಂಪಿನಲ್ಲಿಯೇ ಇದ್ದ ಫಾರೆಸ್ಟ್ ಗಾರ್ಡ್ ಒಬ್ಬನ ಬಗ್ಗೆ ರಾಮನಾಥಯ್ಯನವರಿಗೆ ಏನೋ ಸಂದೇಹ. ಅವನ ಚಲನವಲನಗಳ ಬಗ್ಗೆ ಶಂಕೆ.

ಸಿಟ್ಟೇ ಬಾರದ ರಾಮನಾಥಯ್ಯನವರ ಮುಖ ಈಗ ಬೀಗಿಕೊಂಡಿದೆ. "ಸರಕಾರದ ಉಪ್ಪು ತಿಂದು ಯಾರೋ ಮುಂಡೇ ಗಂಡುದಿರು ಎಂಜಲಿಗೆ ಕೈ ಹಾಕಿದ್ದಾರೆ" ಎಂದು ಅವರು ಕೂಗಾಡುತ್ತಾ ಬಲವಾಗಿ ಹೊಗೆಸೊಪ್ಪನ್ನು ತೀಡತೊಡಗಿದರು.

ಆಗ ಅವರಲ್ಲೊಬ್ಬ ಉಷ್ ಎಂದು ಸಂಜ್ಞೆ ಮಾಡಿ ಆ ಕಡೆ ಬೆರಳು ಮಾಡಿ ತೋರಿಸಿದ. ಎಲ್ಲರೂ ತಮ್ಮ ದೃಷ್ಟಿಯನ್ನು ಅತ್ತ ಹರಿಯಿಸಿದರು.

ಅಲ್ಲಿ, ಬಂಡೆಯ ಕೆಳಗಡೆ, ಸುಮಾರು ದೂರದಲ್ಲಿ, ಸಮತಟ್ಟಾದ ಜಾಗ. ಆ ಜಾಗದಲ್ಲಿ ಎರಡು ಹುಲಿಗಳು ಇವೆ. ಒಂದು, ಪೂರ್ವಕ್ಕೆ ಮುಖ ಮಾಡಿಕೊಂಡು ನಿಂತಿದೆ

ಮತ್ತೊಂದು ನೆಲದ ಮೇಲೆ ಮಲಗುವುದು ಏಳುವುದು ಹೀಗೆ ಮಾಡುತ್ತ ಇದೆ.

ತಕ್ಷಣ ರಾಮನಾಥಯ್ಯ ಎಲ್ಲರೂ ಹಾಗೆ ಹಾಗೆಯೆ ಮಲಗಿಕೊಳ್ಳುವಂತೆ ಪಿಸು ಪಿಸನೆ ಹೇಳುತ್ತ ಆಜ್ಞೆ ಮಾಡಿದರು. ಬಿಳಿಯ ಟವಲ್ಲುಗಳನ್ನು ತಲೆಗೆ ಸುತ್ತಿದವರು ಬೇಗ ಬಿಚ್ಚಿ ಕಂಬಳಿಯೊಳಗೆ ಹುದುಗಿಸಿಕೊಂಡರು. ಒಂದು ಸಮಯ ಆ ಹುಲಿಗಳು ಈ ಕಡೆ ತಿರುಗಿ ಕಣ್ಣು ಹಾಯಿಸಿದರೆ ಈ ಬಂಡೆಯ ಮೇಲೆ ಮಾನವರ ಒಂದು ಗುಂಪು ಇದೆ ಎಂದು ತಿಳಿಯಬಾರದು. ಕರಿಯ ಕಂಬಳಿ ಯನ್ನು ಹೊದೆದಿರುವುದರಿಂದ ದೂರಕ್ಕೆ ಇವರು ಕಲ್ಲುಗಳ ಹಾಗೆಯೆ ಕಾಣಬೇಕು— ಹಾಗೆ.

ಆ ಹುಲಿಗಳು ಈಗ ಯಾಕೊ ಏನೊ ಯಾವೊಂದು ಕಡೆಗೂ ಸರಿಯಾಗಿ ದೃಷ್ಟಿ ಯನ್ನು ಹರಿಯಿಸುತ್ತ ಇಲ್ಲ. ಒಂದು ಹುಲಿ ಬಿದ್ದುಕೊಳ್ಳುತ್ತದೆ, ಏಳುತ್ತದೆ. ಹೀಗೆ ಹಾಗೆ ಸುತ್ತು ಹಾಕುತ್ತಿದೆ. ಮರದ ಬುಡಕ್ಕೆ ತಲೆಯನ್ನು ಆನಿಸುತ್ತದೆ. ಏನೇನೊ ಮಾಡುತ್ತ ಇದೆ– ಮತ್ತೊಂದು ಹುಲಿ ಈ ಹುಲಿಗೆ ಸಮೀಪವಾಗಿ ಎರಡೂ ಪಾದವೂರಿ ಕುಳಿತುಬಿಟ್ಟಿದೆ. ಬಾಲ ಅಲ್ಲಾಡಿಸುತ್ತ ಇದೆ.

ಯಾಕೆ ಈ ಹುಲಿಗಳು ಹೀಗೆ ಮಾಡುತ್ತ ಇವೆ? ಒಂದು ಸಮಯ ಇವು ರತಿ ಮನ್ಮಥರ ಆಟ ಆಡುತ್ತ ಇವೆಯೊ ಹೇಗೆ? ಹಾಗಿದ್ದರೆ ಸಂಭೋಗ ಕ್ರಿಯೆಗಾಗಿ, ಒಂದರಮೇಲೊಂದು ಎರಗಬೇಕಲ್ಲ. ಹಾಗೆ ಸಹಾ ಇವು ಮಾಡುತ್ತ ಇಲ್ಲ. ಯಾಕೆ?

ಯಾಕೆ ಎನ್ನುವುದು ಈಗ ತಿಳಿದು ಹೋಯಿತು. ಹೌದು, ಹಾಗೆ ಚಡಪಡಿಸುತ್ತ ಇರುವ ಆ ಒಂದು ಹುಲಿ ರತಿಕ್ರೀಡೆ ಆಡುತ್ತ ಇಲ್ಲ. ಬದಲು ಅದಕ್ಕೆ ಪ್ರಸವ ವೇದನೆ ಪ್ರಾರಂಭವಾಗಿದೆ. ಅದಕ್ಕೇ ಅದು ಹಾಗೆ ಬೀಳುವುದು ಏಳುವುದು ಹೀಗೆ ಮಾಡುತ್ತ ಇದೆ. ನಿಸರ್ಗ ಹುಟ್ಟನ್ನೂ ಸಾವನ್ನೂ ಪಶು ಪಕ್ಷಿ ಪ್ರಾಣಿಗಳಿಗಾಗಲಿ ಮಾನವರಿಗಾಗಲಿ ಒಂದೇ ನೀತಿಯಿಂದ ಜಾರಿಗೆ ತಂದಿದೆ.

ಹುಟ್ಟು–ಸಾವು ಈ ಎರಡು ಸಂದರ್ಭಗಳಲ್ಲಿ ಮಾತ್ರ ವೇದನೆ ಸಂತೋಷ ಯಾವ ವರ್ಗ ಕ್ಕಾದರೂ ಒಂದೇ ರೀತಿ: ಇದರಲ್ಲಿ ತಾರ-ತಮ್ಯವಿಲ್ಲ. ಎಲ್ಲರೂ ಆಗ ಸಮಾಜವಾದಿ ಗಳೇ. ನಡುವೆ ಮಾತ್ರ ವರ್ಣಬೇಧ ಉಂಟಾ ಗುತ್ತದೆ. ಹೋರಾಟ ಕಚ್ಚಾಟ ಎಲ್ಲವೂ ಹುಟ್ಟಿನಿಂದ ಸಾವಿನ ವರೆಗಿನ ಅವಧಿಯಲ್ಲಿ. ಹುಟ್ಟು ಸಾವಿಗಲ್ಲ. ಅದು ಎಲ್ಲರಿಗೂ ಒಂದೇ ಬಗೆಯದು. ಒಂದೇ ತೆರನದು.

ಆ ಹೆಣ್ಣು ಹುಲಿ ಈಗ ತನ್ನ ಹಿಂಗಾಲು ಗಳನ್ನು ಅಗಲಿಸಿ ನಿಂತಿತು. ಬಾಲ ಮೇಲಕ್ಕೆತ್ತಿತು. ಆದರೆ ಹಿಂಭಾಗದಿಂದ ಮೆಲ್ಲಗೆ ಒಂದು ತಲೆ ಈಗ ಕಾಣಿಸಿಕೊಂಡಿತು.

ಆಹಾ, ಅಪೂರ್ವ ದೃಶ್ಯ–

ರಾಮನಾಥಯ್ಯ ಯಾವಾಗಲೂ ಕಾಡಿ ನಲ್ಲಿಯೆ ವಾಸಿಸುವವರು ಆದ್ದರಿಂದ ಅದೆಷ್ಟೊ ಹುಲಿಗಳನ್ನು ನೋಡಿದ್ದಾರೆ. ದೂರದಿಂದ

ಸೆನಿಸದಿಂದ. ಅವುಗಳೊಂದಿಗೆ ಹೋರಾಡಿದ್ದಾರೆ. ಹೊಡೆದು ಕೆಡವಿದ್ದಾರೆ. ಆದರೆ ಹೀಗೆ ಒಂದು ಹುಲಿಗೆ ಸಮೀಪವಾಗಿ ಕುಳಿತು ಅದು ಮರಿ ಹಾಕುತ್ತಿರುವುದನ್ನು ನೋಡುತ್ತಿರುವುದು ಇದೇ ಮೊದಲು.

ಒಂದು ಮರಿಯು ಜನನವಾಯಿತು. ಅದರ ಹಿಂದೆಯೆ ಮತ್ತೊಂದು ತಾಯಗರ್ಭದಿಂದ ಅವೆರಡು ಮುದ್ದುಗಳೂ ಧರೆಗಿಳಿದ ಮೇಲೆ ಅಲ್ಲಿಯ ವಾತಾವರಣ ಬೇರೆಯಾಯಿತು. ಹುಲಿವಾಸನೆ ಗಾಳಿಯಲ್ಲಿ ತೇಲಿ ಬಂತು. ತಾಯಿ ಹುಲಿ ಪ್ರೀತಿಯಿಂದ ತನ್ನೆರಡು ಕಂದಮ್ಮಗಳನ್ನು ಒಂದೇ ಸಮನೆ ನೆಕ್ಕತೊಡಗಿತು. ಮತ್ತೊಂದು ಹುಲಿಯೊ? ಈ ಮೂರನ್ನೂ ಅದು ಪ್ರದಕ್ಷಿಣೆ ಹಾಕುತ್ತ ಗರ್ಜಿಸುತ್ತ ಒಮ್ಮೆ ಈ ಮರಿಯನ್ನು ನೆಕ್ಕುತ್ತ ಮತ್ತೊಮ್ಮೆ ಆ ಮರಿಯನ್ನು ನೆಕ್ಕುತ್ತ ಮಗುದೊಮ್ಮೆ ಹೆಣ್ಣು ಹುಲಿಯ ತಲೆಯ ಮೇಲೆ ಕೊರಳಿಟ್ಟು "ನೋಡಿದೆಯೇನೇ. ನನ್ನಿಂದಾಗಿ ಇಂಥ ಮುದ್ದುಗಳನ್ನು ನೀನು ಹೆರುವುದು ಸಾಧ್ಯವಾಯಿತು" ಎನ್ನುವಂತೆ ಗುಟುಕರಿಸುತ್ತ ಏನೇನೂ ಮಾಡತೊಡಗಿತ್ತು. ಅದರ ಆಟವನ್ನೂ ಸಂತಸವನ್ನೂ ನೋಡಿದರೆ ಆ ಹುಲಿ ಈ ಹೆಣ್ಣಿನ ಬಾಣಂತಿಯ ಗಂಡನೇ ಎಂದು ಖಚಿತವಾಗಿ ಹೇಳಬಹುದಿತ್ತು. ಬಹಿರಂಗವಾಗಿ ಹೀಗೆ ಪ್ರೀತಿ ಮಾಡುವುದು ಗಂಡ ಅಲ್ಲದೆ ಗೆಣೆಕಾರನಾಗುವುದು ಸಾಧ್ಯ ಉಂಟೆ?

ರಾಮನಾಥಯ್ಯನವರಿಗೆ ಈಗ ದಿಗಿಲು. ಆ ಗಂಡು ಹುಲಿ ಈ ಮರಿಗಳನ್ನು ತಿಂದು ತಿಂದು ಮುಗಿಸುತ್ತದೆ. ಹುಲಿ ಮಾತ್ರವಲ್ಲ, ಬೆಕ್ಕು ಸಹ ಹಾಗೆಯೇ ಮಾಡುತ್ತದೆ.

ಭೇದಿಸಲು ಶಕ್ಯವಿಲ್ಲದಂತೆ ನಿಸರ್ಗನಿಯಮ. ಒಂದು ಹಸು ಒಂದೇ ಕರುವನ್ನು ಹಾಕುತ್ತದೆ. ಹುಲಿಯೊ? ಒಂದು ಸಲಕ್ಕೆ ಎರಡು ಮರಿಗಳನ್ನು ಈಯುತ್ತದೆ. ಆದರೆ ದನದ ಮಂದೆ ಹೆಚ್ಚುವಂತೆ ಹುಲಿ ಒಂದು ಬೆಳೆಯುವುದಿಲ್ಲ. ಎರಡು ಕೆಲವು ಸಮಯ ನಾಲ್ಕೈದು ಮರಿಗಳನ್ನು ಹಡೆಯುವ ಈ ಪ್ರಾಣಿವರ್ಗ, ಕಾಡಿನಲ್ಲಿ ದನದ ಮಂದೆಯ ಹಾಗೆ ಸಂಖ್ಯೆಯಲ್ಲಿ ಸಹಸ್ರಸಹಸ್ರ ಆದರೆ ಕಾಡಿನ ಗತಿ ಏನು?

ಗತಿ ಏನು? ಕಾಡಿನಲ್ಲಿ ಯಾವ ಪ್ರಾಣಿಯೂ ಇಲ್ಲದ ಹಾಗೆ ಈ ರಕ್ತ ಬೀಜಾಸುರ ನಾಲಗೆ ಚಾಚುತ್ತದೆ. ಆದರೆ ಹಾಗೇ ಆಗಲು ಎಲ್ಲಿ ಸಾಧ್ಯವಿದೆ? ಈ ಪ್ರಾಣಿಗೆ ಹೊರಗಿನವರು ಶತ್ರುವಲ್ಲ. ತನಗೆ ತಾನೇ ಶತ್ರು. ತನ್ನ ಜಾತಿಯದನ್ನು ಹುಲಿ ತಾನೇ ತಿಂದು ಮುಗಿಸುತ್ತದೆ.

ಈಗ ಆ ಗಂಡುಹುಲಿ— ಅದು ಗಂಡು ಹುಲಿಯೆ ಇರಬೇಕು— ಆರ್ಭಟ ಮಾಡುತ್ತ ಇವುಗಳನ್ನು ಸುತ್ತು ಹಾಕುತ್ತಿದ್ದಾಗ ಎಲ್ಲಿ ಇನ್ನು ಇದು ಆ ಮರಿಗಳನ್ನು ತಿಂದು ಮುಗಿಸುತ್ತದೊ ಎಂದು ರಾಮನಾಥಯ್ಯನವರಿಗೆ ಚಡಪಡಿಕೆ. ಈ ಮರಿಗಳನ್ನು ತಾವು ಹೇಗಾದರೂ ಮಾಡಿ ಲಪಟಾಯಿಸಿ ಬಿಡಬೇಕು ಎನ್ನುವ ಯೋಚನೆ ಆಗಲೇ ಮಿಂಚಿನಂತೆ ಅವರ ತಲೆಯಲ್ಲಿ ಹಾದುಹೋಗಿದೆ.

ಆದರೆ ಇಲ್ಲಿಯೂ ನಿಸರ್ಗದ ನಿಯಮವಿದೆ. ರಹಸ್ಯವಿದೆ. ತಾಯಿ ತನ್ನ ಮರಿಗಳನ್ನು ತಾನೇ ತಿಂದು ಹಾಕುವುದಿಲ್ಲ. ಇನ್ನು ಜನ್ಮ ಕೊಟ್ಟ ತಂದೆ ಹಾಗೆ ಮಾಡಿಯಾನೆ? ನಿಸರ್ಗ ಅಂಥ ಹೀನ ನಿಯಮವನ್ನು ಹೇಗೆ ಜಾರಿಗೆ ತಂದೀತು! ತಂದೆ–ತಾಯಿ ಅಂಥ ಕೆಲಸ ಮಾಡುವುದಿಲ್ಲ. ಬೇರೆಯದು ಬಾಯಿ ಚಾಚಬೇಕು, ಅಷ್ಟೇ.

ಮರಿಗಳನ್ನು ಹಡೆದ ಮೇಲೆ ಹೆಣ್ಣು ಹುಲಿ ಗಂಭೀರವಾಗಿ ಕುಳಿತುಬಿಟ್ಟಿತು. ಅದು ಗಂಭೀರವೋ? ಯಾತನೆಯ ಪರಿಣಾಮವೊ? ಗಂಡು ಹುಲಿ ಮಾತ್ರ ನೆಗೆಯುತ್ತ ಚೀರುತ್ತ ಅಟ್ಟಹಾಸ ಮಾಡತೊಡಗಿತ್ತು.

ರಾಮನಾಥಯ್ಯನವರಿಗೆ ಈಗ ಭಾರೀ ಇಕ್ಕಟ್ಟು. ಗುಂಡು ಹಾರಿಸೋಣ ಎಂದರೆ, ಆ ಗಂಡು ಹುಲಿ, ಒಂದು ಕಡೆ ಕುಳಿತುಕೊಳ್ಳದೇ ಮಿಂಚಿನಂತೆ ಹಾಗೆ ಹೀಗೆ ಹಾಯುತ್ತ ಇದೆ. ಹಾಗಿರುವಾಗ ಗುರಿ ಹೇಗೆ ಇಡುವುದು? ಗುಂಡೇಟು ದೊಡ್ಡದಕ್ಕೆ ತಾಗದೆ ಮರಿಗಳನ್ನೆ ಆಹುತಿ ತೆಗೆದುಕೊಂಡು

ಬಿಟ್ಟರೆ?

ಇಂಥ ಅವಕಾಶ ಇನ್ನು ಮುಂದೆ ತಮಗೆ ಸಿಗುವುದು ದುರ್ಲಭ ಎಂದು ಭಾವಿಸಿದ ರಾಮನಾಥಯ್ಯ, ಇನ್ನು ಯೋಚಿಸಲು ಸಮಯವಿಲ್ಲ ಎಂದು, ಕೋವಿಯನ್ನು ಸರಿಪಡಿಸಿಕೊಂಡವರೆ ಆಕಾಶದತ್ತ ಗುರಿಮಾಡಿ ಢಮಾರ್ ಢಮಾರ್ ಎಂದು ಎರಡು ಗುಂಡುಗಳನ್ನು ಹಾರಿಸಿದರು. ಹೋ ಎಂದು ಕೂಗಿಕೊಂಡು ಬಂಡೆಯಿಂದ ಕೆಳಗೆ ಜಿಗಿದರು. ಕಾಡೇ ಬಿರಿಯಬೇಕು ಹಾಗೆ ಆಳುಗಳೂ ಬೊಬ್ಬೆಯೆಬ್ಬಿಸಿದರು.

ಅನಿರೀಕ್ಷಿತವಾದ ಈ ಘಟನೆಯಿಂದ ಆ ಹುಲಿಗಳು ತಬ್ಬಿಬ್ಬಾಗಿ ಹೋದುವು. ರಾಮನಾಥಯ್ಯ ಮತ್ತೆರಡು ಗುಂಡುಗಳನ್ನು ಆಕಾಶದತ್ತ ಹಾರಿಸಿ ಹಾಹಾ ಹೋಯ್ ಎಂದು ಬೊಬ್ಬೆಹಾಕಿ ಮುನ್ನುಗ್ಗಿದರು.

ಪ್ರಾಣಭಯದಿಂದ ಆ ಹುಲಿಗಳು ಈಗ ತಲ್ಲಣಿಸಿಹೋದವು. ಕಾಡೇ ನಡಗುವ ಹಾಗೆ ಭೀಕರ ಶಬ್ದ. ಸಿಡಿಲಿನಂತೆ ಈ ಮಾನವರು ತಮ್ಮ ಮೇಲೆ ಎರಗಿದ್ದಾರೆ.

ಭಯದಿಂದ ತತ್ತರಿಸಿಹೋದ ಆ ಹೆಣ್ಣು ಹುಲಿ ಒಡನೆ ಆ ಕಡೆಗೆ ಛಂಗನೆ ಜಿಗಿಯಿತು. ಈ ಗಲಾಟೆಯಲ್ಲಿ ತನ್ನ ಮರಿಯನ್ನು ಅದು ಬಿಟ್ಟೇಬಿಟ್ಟಿತು. ಗಂಡುಹುಲಿ ಮಾತ್ರ ಒಂದು ಮರಿಯನ್ನು ಕಚ್ಚಿಕೊಂಡು ಆ ಬಿದಿರುಮೆಳೆಯತ್ತ ಹಾರಿತು. ಎಷ್ಟೆಂದರೂ ಗಂಡು ಗಂಡೇ. ನಾವು ಗಂಡಿಗೆ ಸರಿಸಮಾನ ಎಂದು ಹೆಣ್ಣು ಎಷ್ಟು ಬೊಬ್ಬೆ ಹಾಕಿದರೆ ತಾನೇ ಏನಂತೆ! ಗಂಡಾಂತರ ಸಮಯದಲ್ಲಿ ಗಂಡಿಗೆ ಇರುವ ಧೈರ್ಯ ಹೆಣ್ಣಿಗೆ ಎಲ್ಲಿಂದ ಬರಬೇಕು?

ಈಗ ಈ ಗುಂಪು, ಆ ಜಾಗಕ್ಕೆ ಧಾವಿಸಿತು. ಒಬ್ಬ ಆಳು ಆ ಮರಿಯನ್ನು ಎತ್ತಿಕೊಂಡ. ಎಲ್ಲರೂ ಕೂಗು ಹಾಕಿದರು. ಮತ್ತೆ ಹಿಂದಿರುಗಿ ಆ ಬಂಡೆಯ ಮೇಲೆಯೆ ಎಲ್ಲರೂ ಬಂದು ಕುಳಿತುಕೊಂಡರು. ಘಾಸಿಗೊಂಡಿರುವ ಆ ಹುಲಿಗಳು ಸುತ್ತುಹಾಕಿ ಬಳಸಿ ಮತ್ತೆ ತಮ್ಮ ಮೇಲೆ ಆಕ್ರಮಣ ನಡೆಸಿದರೂ ನಡೆಸಬಹುದು ಎಂದು ಹೆದರಿ, ಮತ್ತೆ ಮತ್ತೆ ರಾಮನಾಥಯ್ಯ ಎರಡು ಗುಂಡುಗಳನ್ನು ಆ ಪೊದೆಗಳತ್ತ ಹಾರಿಸಿದರು. ಆದರೆ ಆ ದೊಡ್ಡ ಹುಲಿಗಳು ಎಲ್ಲಿ ಮತ್ತೆ ಹಿಂತಿರುಗುತ್ತವೆ? ಆಕ್ರಮಣ ಮಾಡುತ್ತವೆ? ಜೀವ ಉಳಿದರೆ ಸಾಕೆಂದು ಅವು ಈಗ ಪಲಾಯನ ಸೂತ್ರ ಹಿಡಿದಿವೆ.

ಬಂಡೆಯ ಮೇಲೆ ಮರಿಯನ್ನು ಇಟ್ಟು ಅದರ ಸುತ್ತಲೂ ಈ ಗುಂಪಿನವರು ಕುಳಿತು ವಿಜಯೋತ್ಸವ ಆಚರಿಸಿದರು. ಪ್ರತಿಯೊಬ್ಬರೂ ಆ ಹುಲಿಮರಿಯ ಮೇಲೆ ಕೈಚಾಚಿ ತಮಗೆ ತೋಚಿದ್ದನ್ನು ಹೇಳುವವರೇ.

ತಾಯ ಗರ್ಭದಿಂದ ಈಗ ತಾನೆ ಧರೆಗಿಳಿದಿರುವ ಆ ಮರಿಗೆ ಇವರ ಅಟ್ಟಹಾಸವೊಂದೂ ಅರ್ಥವಾಗದೆ ಅಥವಾ ಅರ್ಥವಾಗಿಯೊ ಏನೊ ಹೀಗೆ ಹಾಗೆ ಮೆಲ್ಲಮೆಲ್ಲನೆ ತನ್ನ ಮೂತಿಯನ್ನು ಚಾಚುತ್ತಿತ್ತು. ತುಸು ಹಸಿರು ಮಿಶ್ರಿತ ನೀಲವರ್ಣದ ಅದರ ಕಣ್ಣುಗಳು ಪುಟಾಣಿ ಗೋಲಿಗಳ ಹಾಗೆ ಹೊಳೆಯುತ್ತಿದ್ದುವು.

ಸರಿಯೇ. ಅದರ ಮುಖ? ಮಗುವಾದರೆ ಮಾತ್ರ ಏನು? ಅದರ ಕ್ರೌರ್ಯ ಎಲ್ಲಿ ಹೋದೀತು? ಮುಂಡೇದರ ಮುಖ ಗುರ್ ಎಂದುಕೊಂಡೇ ಇದೆ.

ಚೆನ್ನಾಗಿ ಈಗ ಬೆಳಗಾಯಿತು. ಆ ಮರಿಯನ್ನು ಹೊತ್ತ ರಾಮನಾಥಯ್ಯನವರ ತಂಡ, ಈಗ, ಫಾರೆಸ್ಟ್ ಕ್ವಾರ್ಟರಿಸಿನತ್ತ ಅಡಿಯಿಡತೊಡಗಿತು.

*

ಫಾರೆಸ್ಟ್ ಕ್ವಾರ್ಟರ್ಸ್‌ನಲ್ಲಿ ಅಮಿತೋತ್ಸಾಹ. ಅವರ ಆ ಬಿಡದಿಯಲ್ಲಿ ಸರಕಾರದ ಏಳೆಂಟು ಕಟ್ಟಡಗಳಿವೆ. ಅಧಿಕಾರಿಯಾದ ರಾಮನಾಥಯ್ಯ, ಗಾರ್ಡುಗಳು ವಾಚ್‌ಮೆನ್ನುಗಳು ಇವರೆಲ್ಲರಿಗೆ ಸಾಲು ಸಾಲು ಮನೆಗಳು. ಹಿರಿಯ ಅಧಿಕಾರಿಗಳು ಬಂದರೆ ಉಳಿದುಕೊಳ್ಳುವುದಕ್ಕೆಂದು ಒಂದು ಬಂಗಲೆ, ಇಷ್ಟೇ. ಈ ಕ್ವಾರ್ಟರ್ಸ್ ಸಹ ಕಾಡಿನ ನಡು

ವೆಯೆ ಇದೆ.

ಈಗ ಆ ಮನೆಗಳವರೆಲ್ಲರೂ ರಾಮನಾಥಯ್ಯನವರ ಮನೆಯ ಮುಂದೆ ನೆರೆದರು. ಕೇಕೆ, ಕೂಗು, ಉತ್ಸಾಹ. ಎಲ್ಲರೂ ಈ ಹುಲಿಮರಿಯ ಮೇಲೆ ಕೈಯಾಡಿಸುವವರೇ. ಮೈದಡವುವವರೇ.

ಅವರೆಲ್ಲರೂ ಕಾಡಿನಲ್ಲಿಯೆ ವಾಸಿಸುವ ಕಾಡಿನ ಮಕ್ಕಳಾದರೂ ಹುಲಿ ಕಿರುಬ ತೋಳ ಆನೆ ಇಂಥವನ್ನು ದಿನಬೆಳಗೆದ್ದರೆ ನೋಡುವ ಅವಕಾಶವಿದ್ದರೂ ಈ ಅನುಭವ ಅವರೆಲ್ಲರಿಗೂ ಹೊಸತು. ಹುಲಿಮರಿ ತಮ್ಮ ಬಳಿಗೆ ಕೈದಿಯಾಗಿ ಬಂದಿರುವುದು. ಅದಕ್ಕೇ ಅವರೆಲ್ಲರಿಗೆ ಅಷ್ಟು ಉತ್ಸಾಹ.

ಈಗ ಅವರಲ್ಲೊಬ್ಬ ಅದರ ಬಾಲ ಹಿಡಿದು ಎತ್ತಿನೋಡಿದ. ಬಳಿಕ "ಓ, ಇದು ಇದು ಹೆಣ್ಮರಿ ಕಾಣಪ್ಪೋ..." ಎಂದು ಕೂಗು ಹಾಕಿದ.

ರಾಮನಾಥಯ್ಯನವರ ಪತ್ನಿ ಸುಂದರಮ್ಮ ಈಗ ಗೊಣಗಿಕೊಂಡಳು :

"ಹೌದು. ಇನ್ಮೇಲೆ ಇವರಿಗೆ ಇದು ಬೇರೆ ಒಂದು ಶುರುವಾಯ್ತು."

ಕಾಡು ಪ್ರಾಣಿಗಳ ಮರಿಗಳನ್ನು ಹಿಡಿದು ತಂದು, ಅವಕ್ಕೆ ಹುಲ್ಲುಹಾಕಿ, ಹಾಲು ಕುಡಿಸಿ, ಉದ್ದಕ್ಕೂ ಇಂಥ ಅನುಭವ ಇದ್ದುದರಿಂದ, ಪತಿಗೆ ಇದೊಂದು ಚಟವೇ ಆಗಿದ್ದುದರಿಂದ, ಉದ್ಗಾರ ತೆಗೆದ ಸುಂದರಮ್ಮನ ರೀತಿ ಸಹಜವೇ. ಆದರೆ ಪಾರಿವಾಳ ನವಿಲ ಜಿಂಕೆ ಇಂಥವನ್ನು ಸಾಕುವುದಕ್ಕೂ ಹುಲಿಮರಿಯನ್ನು ಸಾಕಿ ಬೆಳೆಸುವುದಕ್ಕೂ ವ್ಯತ್ಯಾಸವಿದೆ. ಇದು ಆಕೆಗೂ ಮೊದಲ ಅನುಭವ, ಕುತೂಹಲ.

ರಾಮನಾಥಯ್ಯ ಬಿದಿರ ಹಚ್ಚೆಗಳಿಂದ ಈಗ ಒಂದು ದೊಡ್ಡ ಬೋನನ್ನು ತಯಾರು ಮಾಡಿಸಿದರು. ಅದಕ್ಕೆ ಸುತ್ತ ಭದ್ರತೆ ಇರಲೂ ತಂತಿಯನ್ನು ಬಿಗಿಯಿಸಿದರು. ಈ ಬೋನು ಎರಡು ಭಾಗ. ಆಳೆತ್ತರದ್ದು, ಮುಂಭಾಗದಲ್ಲಿ ಒಂದು ಬಾಗಿಲು. ಎರಡು

ಬಾಗಿಲು, ಎರಡು ಕಡೆಗೂ ನೀರಿನ ಬಕೆಟ್ಟು ಗಳು. ಒಂದೊಂದು ಸಣ್ಣ ದಿಣ್ಣೆ. ಮುಂಬಾಗಿಲನ್ನು ತೆರೆದು ಬೋನಿನೊಳಗಡೆ ಹೋದರೆ ಹುಲಿ ಮರಿಯನ್ನು ಮತ್ತೊಂದು ಭಾಗಕ್ಕೆ ಓಡಿಸಿ ಒಂದು ಭಾಗವನ್ನು ಶುದ್ಧಿ ಮಾಡುವುದು. ಆ ಕಡೆಯಿಂದ ಈ ಕಡೆಗೆ ವರ್ಗಾವಣೆ ಮಾಡಿ ಅದರ ಮಲಮೂತ್ರವನ್ನು ಎತ್ತಿ ಹಾಕುವುದು. ವಾಸನೆ ಬಂದು ಅಸಹ್ಯ ಆಗಬಾರದು. ಅದಕ್ಕೇ ಇಷ್ಟೆತ್ತರ ಮಳಲನ್ನು ಬೇರೆ ಸುರಿಸಿದ್ದರು. ಅದು ಓಡಾಡುವುದಕ್ಕೆ ಅನುಕೂಲ ವಾಗಿರಲಿ ಎಂದು ದೊಡ್ಡದಾಗಿಯೆ ಬೋನನ್ನು ಮಾಡಿಸಿದ್ದರು.

ಹೌದು. ಈಗ ಮುಖ್ಯವಾದ ಒಂದು ಪ್ರಶ್ನೆ. ಈ ಹುಲಿ ಮರಿಗೆ ಎಂಥ ಆಹಾರವನ್ನು ಕೊಡಬೇಕು ?

ರಾಕ್ಷಸ ಪ್ರಾಣಿಯಾದ ಹುಲಿ ರಕ್ತ ಕುಡಿದೇ ಬೆಳೆಯುತ್ತದೆ. ಮಾಂಸವೇ ಇದರ ಆಹಾರ. ಪ್ರಾಣಿಗಳಲ್ಲಿಯೂ ಕೆಲವು, ಮಾಂಸಾಹಾರದ್ದು, ಸಸ್ಯಾಹಾರವನ್ನೂ ತೆಗೆದುಕೊಳ್ಳುತ್ತವೆ. ಉದಾಹರಣೆಗೆ ಹುಲಿ ಜಾತಿಗೆ ಸೇರಿದ ಬೆಕ್ಕಿಗೆ ಹಾಲು ಎಂದರೆ ಪಂಚಪ್ರಾಣ. ಎಟುಕದ ಜಾಗದಲ್ಲಿ ಬೆಣ್ಣೆಯಿದ್ದರೂ ಅದು ತನಗೆ ಸಿಕ್ಕುವುದಿಲ್ಲವೆಂದು ತಿಳಿದೂ ವಾಸನಾಶಕ್ತಿ ಛಂಗನೆ ನೆಗೆಯುತ್ತದೆ. ಆದರೆ ಹುಲಿಗೆ ಹಾಲು ಕೊಡಲು ಆದೀತೆ ? ಬೆಣ್ಣೆಯನ್ನು ಅದು ಮೂಸಿಯಾದರೂ ನೋಡುತ್ತದೆಯೆ ?

ಮನೆಯ ಗೋಡೆಯ ಬಿರುಕುಗಳಲ್ಲಿ ವಾಸಿಸುವ ತಗಣೆ ಸಹ ರಕ್ತ ಕುಡಿದೇ ಬೆಳೆಯುವಂಥದು. ಹೀಗೆಯೆ ಇನ್ನೂ ಕೆಲವು ಪ್ರಾಣಿಗಳಿವೆ.

ರಕ್ತ ಮಾಂಸ ಎಂದೊಡನೆ ರಾಮನಾಥಯ್ಯನವರಿಗೆ ಬಹಳ ವರ್ಷಗಳ ಹಿಂದೆ ನಡೆದ ಒಂದು ಘಟನೆ ಕಣ್ಣ ಮುಂದೆ ಬರುತ್ತಿದೆ.

ಹೀಗೆಯೆ ಒಂದು ಸಲ ಅವರು ಕಾಡಿನಲ್ಲಿ ಅಡ್ಡಾಡುತ್ತಿದ್ದಾಗ, ಒಂದು ಹುಲಿ, ತನ್ನ ಎರಡು ಮರಿಗಳೊಂದಿಗೆ ಆಟವಾಡುತ್ತಿರುವುದನ್ನು ಕಂಡು ಅಡಗಿ ನಿಂತು ಅವು ಏನು ಮಾಡುತ್ತಿವೆ ಎಂದು ವೀಕ್ಷಿಸಿದರು.

ಆ ಹುಲಿ, ಒಂದು ಜಿಂಕೆಮರಿಯನ್ನು ಹಿಡಿದು ತಂದಿತ್ತು. ಮೃತ್ಯುವಿನ ಬಾಯಿಗೆ ಸಿಕ್ಕಿ ಹಾಕಿಕೊಂಡ ಆ ಜಿಂಕೆ ಮರಿ ತೆವಳುತ್ತ ತೆವಳುತ್ತ ವಿಲವಿಲನೆ ಒದ್ದಾಡುತ್ತಿತ್ತು. ಹುಲಿ ಮರಿಗಳು ಅದರ ಮೇಲೆ ಬೀಳುತ್ತಿದ್ದುವು. ಕಚ್ಚುತ್ತಿದ್ದವು. ತಾಯಿ ಹುಲಿ ಗುರ್ರೆಂದು ನೋಡುತ್ತ ಕುಳಿತಿತ್ತು. ಎಂದರೆ ಮರಿಗಳಿಗೆ ಅದು ಬೇಟೆಯನ್ನು ಕಲಿಸತೊಡಗಿತ್ತು. ಅದರ ಮುಖದಲ್ಲಿ ಸಂತಸ, ತೃಪ್ತಿ. ಹೌದು, ಪರರು ಪುಟಿ ಪುಟಿದು ಒದ್ದಾಡುತ್ತಿದ್ದರೆ ಕ್ರೂರಿಗಳಿಗೆ ಅದನ್ನು ನೋಡಿ ಎಲ್ಲಿಲ್ಲದ ಸಂತಸ.

ಈ ಅಸುರಪ್ರಾಣಿ ರಕ್ತಹೀರುವುದೂ ಹಾಗೆಯೇ. ನಾವು ಫಾಂಟಾ ಕೋಕಾ ಕೋಲಾ ಶೀಷೆಯೊಳಗೆ ಸ್ಟ್ರಾ ಹಾಕಿ ಸರ್ರೆಂದು ಎಳೆಯುವುದಿಲ್ಲವೇ, ಅದೇ ಥರ. ತನ್ನ ಕ್ರೂರವಾದ ಹಲ್ಲುಗಳಿಂದ ಕಚ್ಚಿ ರಕ್ತವನ್ನು ಒಂದೇ ಸಮನೆ ಹೀರುತ್ತದೆ. ಬಳಿಕ ರಕ್ತಸಿಕ್ತವಾದ ತನ್ನ ಕೆನ್ನಾಲಗೆಯಿಂದ ಮೂತಿಯನ್ನು ಒರೆಸಿಕೊಳ್ಳುತ್ತದೆ. ರಕ್ತವನ್ನು ಹೀರಿದ ಮೇಲೆಯೆ ಛಿದ್ರ ಛಿದ್ರ ಮಾಡಿ ಮಾಂಸವನ್ನು ತಿನ್ನುತ್ತದೆ.

ಆದರೆ ಈಗ ರಾಮನಾಥಯ್ಯನವರ ವಿಚಾರ ಧಾರೆ ಬೇರೆ. ಈ ಹುಲಿಮರಿ ಈಗ ತಾನೆ ತಾಯಿಗರ್ಭದಿಂದ ಹೊರಬಂದಿದೆ. ಇನ್ನೂ ಇದಕ್ಕೆ ರಕ್ತ ಮಾಂಸ ಎಂದರೆ ಏನು ಎನ್ನುವುದು ತಿಳಿಯದು. ಹಾಗಿರುವಾಗ ಸಸ್ಯಾಹಾರವನ್ನೆ ಇದಕ್ಕೆ ಅಭ್ಯಾಸ ಮಾಡಿಸಿದರೆ, ಆ ಜೀವನಕ್ಕೇ ಇದು ಹೊಂದಿಕೊಂಡು ಬಿಡುತ್ತದಲ್ಲ; ಕ್ರೂರತ್ವ ಹೋಗಿ ಸಾಧುಪ್ರಾಣಿ ಆಗುತ್ತದಲ್ಲ.

"ಈ ಅಯ್ನೋರಿಗೆ ಎಲ್ಲೋ ಹುಚ್ಚು" ಎಂದು ಎಲ್ಲರೂ ಬಿದ್ದು ಬಿದ್ದು ನಕ್ಕರು. "ಹುಲೀ ಮರೀನ ಹಾರುವನ್ನ ಮಾಡ್ತವ್ರಂತೆ ಕಾಣ್ರುಪೋ..." ಎಂದು ನಗೆಯಾಡಿದರು.

ಆದರೆ ರಾಮನಾಥಯ್ಯ ಈ ತಿರಸ್ಕಾರಕ್ಕೆ ಸೊಪ್ಪು ಹಾಕಲಿಲ್ಲ. "ನೋಡೋಣ" ಎಂದವರೆ ಬಟ್ಟಲು ತುಂಬಾ ಹಾಲನ್ನು ಆ ಹುಲಿ

ಮರಿಯ ಮುಂದೆ ಇಟ್ಟರು. ತಟ್ಟೆಯಲ್ಲಿ ಅನ್ನವನ್ನು ಕಲಿಸಿ ನೇವೇದ್ಯ ಮಾಡಿದರು.

ಹೌದು. ಅದು ನೈವೇದ್ಯವೇ ಸರಿ. ನಿಸರ್ಗಕ್ಕೆ ವಿರುದ್ಧವಾದ ಕೆಲಸವನ್ನು ರಾಮನಾಥಯ್ಯ ಮಾಡಲು ಹೊರಟಿದ್ದಾರೆ.

ಅದು, ಆ ಹುಲಿಮರಿ, ಬಟ್ಟಲನ್ನು ಮೂಸಿ ಮೂಸಿ ನೋಡಿತು. ಅನ್ನದ ತಟ್ಟೆಯ ಬಳಿ ಹೋಗಿ ಗುರ್ ಎಂದು ಅದನ್ನು ನೋಡುತ್ತ ಆ ಮೂಲೆಯಲ್ಲಿ ಹೋಗಿ ಬಿದ್ದುಕೊಂಡಿತು.

ಎರಡು ದಿನಗಳು ಇಂಥ ಪರೀಕ್ಷೆ. ಹೋರಾಟ. ಸುಂದರಮ್ಮ ಬೊಬ್ಬೆ ಹಾಕಿದಳು :

"ನೀವು ಅನ್ಯಾಯವಾಗಿ ಈ ಮರೀನ ಹಿಡಿತಂದು ಸಾಯಿಸಿ-ಬಿಡ್ತೀರಿ ಅಷ್ಟೆ."

ನಿಜ. ಎರಡು ದಿನಗಳಲ್ಲಿಯೇ ಈ ಹುಲಿಮರಿ ಸೊರಗಿಹೋಯಿತು, ತುಂಬಾ. ಅದನ್ನು ಈಗ ನೋಡಲು ಅಯ್ಯೋ ಎನಿಸುತ್ತಿದೆ. ಪರಿತಾಪಕರವಾಗಿದೆ. ಬಟ್ಟಲಿನ ಬಳಿ ಅದು ಬರುತ್ತದೆ. ಮೂಸಿ ನೋಡುತ್ತದೆ. ಆಕಳಿಸುತ್ತದೆ-ಬಳಿಕ ಮೂಲೆಗೆ ಹೋಗಿ ಬಿದ್ದುಕೊಳ್ಳುತ್ತದೆ. ಬಾಲ ಅಲ್ಲಾಡಿಸುತ್ತದೆ.

ಆದರೆ ರಾಮನಾಥಯ್ಯನವರದು ಒಂದೇ ಪಟ್ಟು. ಎಷ್ಟು ದಿನ ಇದು ಆಹಾರ ಇಲ್ಲದೆ ಇರಲು ಸಾಧ್ಯ? ಪರೀಕ್ಷೆ ಮಾಡಿಯೇ ಬಿಡೋಣ-ಎಂದು.

ಅಂತೂ ರಾಮನಾಥಯ್ಯ ತಮ್ಮ ಪರೀಕ್ಷೆಯಲ್ಲಿ ಗೆದ್ದೇ ಗೆದ್ದರು. ಎಷ್ಟು ದಿನ ಈ ಪ್ರಾಣಿ ಆಹಾರ ತೆಗೆದುಕೊಳ್ಳದೆ ಮೊಂಡುತನ ಮಾಡಲು ಸಾಧ್ಯವಾದೀತು? ಒಂದು ದಿನ

234-17

ಹಾಲಿನ ಬಟ್ಟಲಿಗೆ ತನ್ನ ಮೂತಿಯನ್ನು ಮೆಲ್ಲನೆ ಚಾಚಿತು.

ಎಲ್ಲರಿಗೂ ಅಮಿತೋತ್ಸಾಹ. ಆಶ್ಚರ್ಯವೂ ಸಹಾ. "ಹೋ" ಎಂದು ಕೂಗಿಕೊಂಡರು.

ಹೌದು. ಹುಲಿ ಮರಿ ಹಾಲು ಕುಡಿಯುತ್ತ ಇದೆ. ನಂಬಲೂ ಸಾಧ್ಯವಿಲ್ಲದಂಥ ಸಂಗತಿ. ಆದರೆ ಕಣ್ಣೆದುರಿಗೇ ನಡೆಯುತ್ತ ಇದೆ. ನಂಬಲೇ ಬೇಕಾಗಿದೆ.

ಈ ಪ್ರಾಣಿಯ ಶರೀರ ರಚನೆಗೆ, ಬೆಳವಣಿಗೆಗೆ, ಮಾಂಸಾಹಾರದಿಂದಲೇ ಇದು ಜೀವಿಸಬೇಕಾಗಿರುವಾಗ, ಹಾಲು ಹಣ್ಣು ಅನ್ನ ಇತ್ಯಾದಿ ಸಸ್ಯಾಹಾರದಿಂದ ಕ್ರಮೇಣ ಇದು ಬದುಕಿ ಉಳಿಯುವುದು ಸಾಧ್ಯವೇ? ಎನ್ನುವುದು ಒಂದು ಪ್ರಶ್ನೆ, ಕುತೂಹಲ. ಎಲ್ಲರ ಮನಸ್ಸಿನಲ್ಲಿಯೂ.

ಸಾಧ್ಯ ಎನ್ನುವುದೇ ರಾಮನಾಥಯ್ಯನವರ ಪಟ್ಟು. ಆನೆಯಂಥ ಭೀಮ ಪ್ರಾಣಿ ಹುಲ್ಲು ತಿಂದೇ ಬಲಶಾಲಿಯಾಗುವಾಗ, ಇದೂ ಯಾಕೆ ಸಾತ್ವಿಕ ಆಹಾರದಿಂದಲೇ ಬೆಳೆಯಬಾರದು? ಜೀವಿಸಬಾರದು?

ಅಂತೂ ಇವರ ಕೈಗೆ ಸಿಕ್ಕಿ ಹಾಕಿಕೊಂಡ ಬಡಪಾಯಿ ಆ ಹುಲಿ ಮರಿ ಹಾಲು ಕುಡಿಯಿತು. ಅನ್ನ ತಿನ್ನತೊಡಗಿತು.

ಈ ಹುಲಿ ಮರಿಗೆ ಒಂದು ಒಳ್ಳೆಯ ಹೆಸರಿಡಬೇಕು ಎಂದು ರಾಮನಾಥಯ್ಯ ಯೋಚಿಸಿದರು. ಕ್ರೂರ ಪ್ರಾಣಿಯಾದ ಇದನ್ನು ತಾವು ಶಾಂತ ರೀತಿಯಲ್ಲಿ ಪರಿವರ್ತಿಸತೊಡಗಿರುವುದರಿಂದ ಸಾಧುವಾದ ಒಂದು ಹೆಸರನ್ನೇ ನಾಮಕರಣ ಮಾಡಬೇಕು ಎನ್ನುತ್ತ ಯೋಚಿಸಿ, ಬಳಿಕ, "ಶಾಂತಾ" ಎಂದು ಘೋಷಿಸಿದರು.

ಆಳುಗಳೆಲ್ಲರೂ ಚಪ್ಪಾಳೆ ತಟ್ಟಿದರು:

"ಓ, ಶಾಂತವ್ವೇರು, ಶಾಂತವ್ವೇರು..."

*

ಶಾಂತಾ ಸಾಧು ಹುಡುಗಿಯಾಗಿ ಆ ಪರ್ಣಕುಟಿಯಲ್ಲಿ ಬೆಳೆಯತೊಡಗಿದಳು. ದಿನದಿನಕ್ಕೆ ಸಸ್ಯಾಹಾರಕ್ಕೆ ಅವಳು ಹೊಂದಿಕೊಳ್ಳುತ್ತಿದ್ದಳು; ಹೊಂದಿಕೊಂಡಳು.

ಬೆಳಗ್ಗೆದ್ದರೆ ದೊಡ್ಡ ಬಟ್ಟಲು ತುಂಬಾ ಹಾಲು, ಮಧ್ಯಾಹ್ನ ಹಾಲು ಕಲಸಿದ ಅನ್ನ–ಇತ್ಯಾದಿ ಅವಳಿಗೆ ಆಹಾರವಾಯಿತು. ಶಾಂತಾ ಸಲೀಸಾಗಿ ಈಗ ಅನ್ನದ ತಟ್ಟೆಗೆ ಬಾಯಿ ಚಾಚುತ್ತಿದ್ದಳು.

ಹುಲಿ ಮರಿಯಾದ ಶಾಂತಾ ಈಗ ರಾಮನಾಥಯ್ಯನವರ ಮನೆಯಲ್ಲಿ ಬೆಕ್ಕಿನ ಮರಿಯ ಹಾಗೆ ಆದಳು. ಅವಳ ವಾಸ ಬೋನಿನಲ್ಲಿಯೇ ಆದರೂ ಕೆಲವು ಸಮಯ ಕಾವಲಿನಲ್ಲಿ ಹೊರಗೆ ಬಿಡುತ್ತಿದ್ದರು. ಆದರೂ ಇತರ ಪ್ರಾಣಿಗಳಿಗೂ ಶಾಂತಳಿಗೂ ಏನೋ ವ್ಯತ್ಯಾಸ.

ಶಾಂತಾ ಗುಣು ಗುಣೆಂದು ಗುಣುಗಾಡುವಳು. ಗುರ್ರೆನ್ನುತ್ತ ಓಡಾಡುವಳು.

ರಾಮನಾಥಯ್ಯ ಶಾಂತಳ ಮೈದಡವಿ ಸ್ವಲ್ಪ ಹೊತ್ತು ಹೊರಗೆ ಆಟವಾಡಲು ಬಿಡುತ್ತಿದ್ದರು. ಆಗ ಅವಳು ಅವರ ಕೈ ತೋಳುಗಳನ್ನು ನೆಕ್ಕುತ್ತಿದ್ದಳು. ನೀಳವಾದ ತನ್ನ ಕೆನ್ನಾಲಗೆಯನ್ನು ಅವಳು ಹೊರಚಾಚುವಾಗ ಮನೆಯವರಿಗೆ ಭಯ. ಅವಳನ್ನು ಆಟವಾಡಿಸಿ ಕುಣಿಸಿ ನಗೆಸಿ "ಹುಂ, ಸಾಕು, ಒಳಗೆ ಹೋಗಮ್ಮಾ" ಎಂದು ರಾಮನಾಥಯ್ಯ ಬೋನಿನೊಳಗೆ ಅವಳನ್ನು ಕಳಿಸಿ ಚಿಲಕ ಹಾಕುತ್ತಿದ್ದರು.

ಹೀಗೆಯೇ ದಿನಗಳು ಕಳೆಯುತ್ತಿದ್ದುವು.

ಒಂದು ದಿನ ರಾಮನಾಥಯ್ಯನವರಿಗೆ ಬೇಕಾದ ಒಬ್ಬ ರೈತ, ಹತ್ತು ಹನ್ನೆರಡು ಎಳನೀರುಗಳನ್ನು ಒಂದು ಚೀಲದಲ್ಲಿ ತುಂಬಿ ಕಳಿಸಿದ್ದ.

ಫಾರೆಸ್ಟ್ ಕ್ವಾರ್ಟರ್ಸ್‌ನಲ್ಲಿ ತೆಂಗಿನ ಮರಗಳಿಲ್ಲ. ಆದುದರಿಂದ ಮನೆಯಲ್ಲಿ ಎಲ್ಲರಿಗೂ ಎಳನೀರು ಎಂದರೆ ಆಸೆ.

ಆ ಸಂದರ್ಭದಲ್ಲಿ ಆಳುಕಾಳುಗಳು ಮನೆಯಲ್ಲಿ ಇಲ್ಲದುದರಿಂದ ರಾಮನಾಥಯ್ಯ ತಾವೇ ನಿಂತು ಎಳೆ ನೀರಿನ ಮೂತಿಯನ್ನು ಕೊಚ್ಚಿ ಮನೆಯಲ್ಲಿ ಎಲ್ಲರಿಗೂ ಕುಡಿಯಲು ಕೊಟ್ಟರು. ಬಳಿಕ ತಾವೂ ಒಂದು ಎಳನೀರನ್ನು ಕುಡಿಯಲು ಮಚ್ಚನ್ನು ಬೀಸಿದರು.

ದುರದೃಷ್ಟ. ಎಡ ಅಂಗೈ ಮೇಲೆ ಇಟ್ಟುಕೊಂಡಿದ್ದ ಕಾಯಿ ಆಯತಪ್ಪಿ ಕೆಳಗೆ ಬಿದ್ದು

ಬಿಟ್ಟಿತು. ಮಚ್ಚನ್ನು ಬೀಸಿದ ರಭಸಕ್ಕೆ ಅದರ ಅಲಗು ಅವರ ಕೈಯನ್ನು ಸವರಿಕೊಂಡು ಹೋಯಿತು. ರಕ್ತ ಚಿಲ್ ಎಂದು ಚಿಮ್ಮಿತು. ತೊಟತೊಟನೆ ತೊಟ್ಟಿಕ್ಕಿತು.

ಹಾಯ್ ಎಂದರು ರಾಮನಾಥಯ್ಯ. ಅವರು ಮಚ್ಚನ್ನು ಬೀಸಿದ ರಭಸಕ್ಕೆ ಎಡ ಕೈಯೇ ಕತ್ತರಿಸಿ ತುಂಡಾಗಬೇಕು. ಅಂಥ ಬೀಸು. ಆದರೆ ಈಗ ಮಚ್ಚಿನ ಅಲಗು ಕಾಲ ಇಂಚು ಆಳಕ್ಕೆ ಇಳಿದು ಆ ಜಾಗ ರಕ್ತದ ಮಡುವಾಗಿ ಹೋಗಿದೆ.

ಈ ಸಂದರ್ಭದಲ್ಲಿ ರಾಮನಾಥಯ್ಯ ಶಾಂತ ಳನ್ನು ಬೋನಿನಿಂದ ಹೊರಗೆ ಬಿಟ್ಟಿದ್ದರು. ಶಾಂತಾ ಆ ಕಡೆ ಏನನ್ನೊ ಕೆದಕುತ್ತ ಜಿಗಿಯುತ್ತ ಆಟವಾಡುತ್ತಿದ್ದಳು. ರಾಮ ನಾಥಯ್ಯ ಹಾ ಎನ್ನುತ್ತಲೆ ಅವಳು ಈ ಕಡೆ ತಿರುಗಿದಳು; ನೆಗೆದು ಬಂದಳು.

ಹೌದು. ಅವರ ಕೈಯಿಂದ ರಕ್ತ ಕೋಡಿ ಯಾಗಿ ಹರಿಯುತ್ತ ಇದೆ. ಶಾಂತಾ ಛಂಗನೆ ನೆಗೆದು ರಾಮನಾಥಯ್ಯನವರ ಬಳಿ ಬಂದಳು. ನೆಲದ ಮೇಲೆ ಮಡುವುಗಟ್ಟಿದ್ದ ರಕ್ತವನ್ನು ಚಪಚಪವೆಂದು ಒಂದೇ ಸಮನೆ ನೆಕ್ಕತೊಡಗಿ ದಳು.

ಇಷ್ಟರಲ್ಲಿ ಮನೆಯವರು ಎಲ್ಲರೂ ರಾಮ ನಾಥಯ್ಯನವರ ಸುತ್ತ ನೆರೆದರು. "ಅಯ್ಯೊ, ಎಂಥ ಏಟು ಬಿದ್ದಿದೆ," "ರಕ್ತ ಎಷ್ಟು ಸುರೀತಾ ಇದೆ" ಎಂದು ಕೂಗಿಕೊಂಡರು. ಹಿರಿಯ ಮಗಳು ರುಕ್ಮಿಣಿ ತಂದೆಯ ಕೈಗೆ ಬಟ್ಟೆಯನ್ನು ಸುತ್ತತೊಡಗಿದಳು. ಅವಳು ಒಂದು ಎರಡು ಮೂರು ಸುತ್ತು ಸುತ್ತುತ್ತಿ ದ್ದರೆ ರಕ್ತ ಮೇಲಕ್ಕೆ ಚಿಮ್ಮಿ ಬಟ್ಟೆ ಕೆಂಪಗಾಗಿ ತೊಯ್ದು ಹೋಗಿದೆ.

ಗುಂಪು ಕೂಡುತ್ತಲೇ ರಕ್ತವನ್ನು ನೆಕ್ಕು- ತ್ತಿದ್ದ ಶಾಂತಾ ಆ ಕಡೆಗೆ ಸರಿದಳು. ಗುರ್ ಎನ್ನುತ್ತ ಬಾಲವಲ್ಲಾಡಿಸುತ್ತ ಸೂರಿನ ಕೆಳಗೆ ಹೋಗಿ ಕುಳಿತುಕೊಂಡಳು.

ಇದೆಲ್ಲ ರಂಪ ಪ್ರಕರಣ ಮುಗಿದ ಮೇಲೆ, ರಾಮನಾಥಯ್ಯನವರಿಗೆ ಪೆಟ್ಟು ಬಲವಾಗಿ ಬಿದ್ದು ಕೈನೋವುತ್ತ ಇದ್ದುದರಿಂದ, ಶಾಂತಾ ಳನ್ನು ಬೋನಿನೊಳಗಡೆ ಕೂಡಿ ಹಾಕಿ ಹೋಗ ಬೇಕೆಂದು "ಹೋಗು, ಹೋಗು," ಎಂದು ಕೈಬೀಸಿದರು. ಈ ನಿಯಮ ಮಾತ್ರ ಬಹಳ ಕಟ್ಟಿನದು. ಶಾಂತಳನ್ನು ಬೋನಿನಿಂದ ಹೊರಗೆ ಬಿಡುವುದು ಒಳಗೆ ಕಳಿಸುವುದು ಅವರಿಗೇ ಸೇರಿದ ಕೆಲಸ. ಅಥವಾ ಅವರ ಆಳು ಪರಚನಿಗೆ ಸೇರಿದ್ದು.

ಆದರೆ ಇವೊತ್ತು ಮಾತ್ರ ಶಾಂತಾ ಯಾಕೊ ಮೊಂಡಾಟ ಮಾಡುತ್ತಿದ್ದಾಳೆ. ನಾಲಗೆಯಿಂದ ತನ್ನ ಮೂತಿಯನ್ನು ಒರಸಿ ಕೊಳ್ಳುತ್ತ ಗುರ್ ಎನ್ನುತ್ತಿದ್ದಾಳೆ. ಅವಳ ಕಣ್ಣುಗಳು ಎಂದಿನಂತಿಲ್ಲದೆ ತೀಕ್ಷ್ಣವಾಗಿವೆ. ಇಷ್ಟು ದಿನವೂ ಸಲೀಸಾಗಿ ಬೋನಿನೊಳಗೆ ಹೋಗುತ್ತಿದ್ದವಳು, ಈಗ ಬಲವಂತ ಮಾಡಿ ದರೂ ಒಳಗೆ ಹೋಗಲು ಹಿಂದೇಟು ಹಾಕುತ್ತಿ ದ್ದಾಳೆ.

ಅವಳ ಇಂದಿನ ವರ್ತನೆ, ಮೊಂಡಾಟ, ರಾಮನಾಥಯ್ಯನವರಿಗೆ ಮಾತ್ರ ಆಗ ಅರ್ಥ ವಾಗಲಿಲ್ಲ.

*

ಬೆಳಿಗ್ಗೆ. ಸೂರ್ಯೋದಯದ ಸಮಯ.

ರಾಮನಾಥಯ್ಯ ಆಗಲೆ ಸ್ನಾನ ಮುಗಿಸಿ ಶ್ಲೋಕಗಳನ್ನು ಉಚ್ಚರಿಸುತ್ತ ಸೂರ್ಯ ನಮಸ್ಕಾರ ಮಾಡುತ್ತಿದ್ದಾರೆ.

ಸೂರ್ಯ ನಮಸ್ಕಾರದ ಬಗ್ಗೆ ರಾಮ- ನಾಥಯ್ಯ ಗಂಟೆಗಟ್ಟಲೆ ವಿವರಣೆ ಕೊಡು ತ್ತಾರೆ. ದೇವರು ಪೂಜೆ ಎನ್ನುವುದರಿಂದ ಒಳ್ಳೆಯ ವ್ಯಾಯಾಮ ಎನ್ನುತ್ತಾರೆ.

ರಾಮನಾಥಯ್ಯನವರದು ಸೊಗಸಾದ ಮೈಕಟ್ಟು. ಮಿಂಚು. ಇಳಿವಯಸ್ಸಿ ನಲ್ಲಿಯೂ,

ಮನೆಯಲ್ಲಿ ಹುಡುಗರು ಇನ್ನೂ ಎದ್ದಿಲ್ಲ. ವರಾಂಡದಲ್ಲಿ ಸಾಲಾಗಿ ಮಲಗಿವೆ.

ರುಕ್ಮಿಣಿ ಇಷ್ಟು ಹೊತ್ತೂ ತನ್ನ ಮಗು ವನ್ನು ಬದಿಯಲ್ಲಿ ಮಲಗಿಸಿಕೊಂಡಿದ್ದು ಮೊಲೆ ಹಾಲು ಕೊಟ್ಟು ತೊಟ್ಟಿಲಿಗೆ ಹಾಕಿ ದ್ದಾಳೆ.

ಅವಳದು ಮುದ್ದಾದ ಗಂಡು ಮಗು.


ರುಚಿಕರ, ಪುಷ್ಟಿಕರ
ಬ್ರಿಟಾನಿಯಾ ಗ್ಲಾಕ್ಸೊ ಬಿಸ್ಕಿಟ್
BRITANNIA
ಬೆಳೆಯುವ
ಮಕ್ಕಳಿಗೆ ಸ್ವಾದಿಷ್ಟ
ಸಂಗಾತಿ
ಬ್ರಿಟಾನಿಯಾ ಬಿಸ್ಕಿಟ್ ಬಲು ಶ್ರೇಷ್ಠ
.BBC. GLX. 6-77 KN

ಮುಖ ಇಷ್ಟಗಲ. ಪುಟ್ಟ ಪುಟ್ಟ ಕೈಕಾಲು ಗಳು. ರಕ್ತದ ಮುದ್ದೆಯಂತಿದೆ. ಕೆಂಪು ಕೆಂಪಾಗಿ ನೋಡಿದರೆ ದೃಷ್ಟಿ ತಾಗುವ ಹಾಗಿದೆ.

ನಾಡಿದ್ದು ಆಕೆ ಪತಿಯ ಮನೆಗೆ ತೆರಳು ವವಳು ಇದ್ದಾಳೆ. ಇವೊತ್ತು ಮಗಳಿಗೆ ನೀರೆರೆಯಬೇಕೆಂದು ಬಚ್ಚಲು ಮನೆಯಲ್ಲಿದ್ದ ತಾಯಿ ಸುಂದರಮ್ಮ ಮೆಲ್ಲಗೆ ಒಂದು ಕೂಗನ್ನು ಹಾಕಿದ್ದಾರೆ.

"ಬಾರೇ ರುಕ್ಮಿಣಿ... ಮಲಗಿದ್ದೇನೆ..."

ರುಕ್ಮಿಣಿ ಬಚ್ಚಲ ಮನೆಗೆ ನಡೆದು ಜಡೆ ಬಿಚ್ಚಿ ನೆತ್ತಿಗೆ ಎಣ್ಣೆಯನ್ನು ಒತ್ತಿಕೊಳ್ಳ ತೊಡಗಿದಳು.

ಈಗ ಮನೆಯಲ್ಲಿ ಸೋಲಿಗರ ಪರಚ ದನದ ಕೊಟ್ಟಿಗೆ, ಶಾಂತಳ ಬೋನು, ಎಲ್ಲ ವನ್ನು ಗೂಡಿಸಿ ಶುದ್ಧ ಮಾಡಲು ಬಂದಿದ್ದ. ಅವನು ಬೋನಿನ ಬಾಗಿಲನ್ನು ತೆರೆದು ಒಳಗೆ ಹೋದ. ಶಾಂತಾ ಒಂದು ಕಡೆ ಮೂಲೆಯಲ್ಲಿ ಬಿದ್ದುಕೊಂಡಿದ್ದವಳು ಎದ್ದು ಹೊರ ಬಂದಳು. ಬಾಗಿಲನ್ನು ತೆರೆದಾಗ ಅವಳು ಏಳುವುದು, ಹೊರಗೆ ಬಂದು ನಿಲ್ಲುವುದು, ಬಳಿಕ ಒಳಗೆ ಕಳಿಸುವುದು_ ಇದು ದಿನನಿತ್ಯದ ಕೆಲಸವಾಗಿದ್ದರಿಂದ ಪರಚ ಅವಳ ಕಡೆಗೆ ಲಕ್ಷ್ಯ ಕೊಡಲಿಲ್ಲ.

ಶಾಂತಾ ಬಾಲ ಬೀಸುತ್ತ ಮನೆಯ ಬಾಗಿಲ ಬಳಿ ಬಂದಳು. ಛಂಗನೆ ಜಿಗಿದು ಒಳ ಹೊಕ್ಕಳು. ಅವಳು ಒಳಹೊಕ್ಕುದುದನ್ನು ಸೂರ್ಯನಮಸ್ಕಾರದಲ್ಲಿ ಮಗ್ನರಾಗಿದ್ದ ರಾಮನಾಥಯ್ಯ ಗಮನಿಸಲಿಲ್ಲ.

ಮನೆಯೊಳಗೆ ಯಾರೂ ಇಲ್ಲ. ಹುಡುಗ ರೆಲ್ಲರೂ ಮಲಗಿದ್ದಾರೆ. ಹಿಂಭಾಗದ ನೀರ ಮನೆಯಿಂದ ಬಳಕ್ ಬಳಕ್ ಎಂದು ನೀರು ಸುರಿಯುವ ಶಬ್ದ ಕೇಳಿಬರುತ್ತಿದೆ.

ಶಾಂತಾ ಗುರ್ ಎನ್ನುತ್ತ ಆ ಕಂಬದ ಬಳಿ ಹೋದಳು. ಅಲ್ಲಿಯೆ ತೊಟ್ಟಿಲು. ತೊಟ್ಟಿಲ ಒಳಗಡೆ ರುಕ್ಮಿಣಿಯ ಮುದ್ದು ಮಗು. ಗಾಢ ನಿದ್ರೆಯಲ್ಲಿ ಮುಳುಗಿದೆ. ತೊಯ್ದು ಪಕ್ಕಿಯ ಹಾಗೆ ಇದೆ. ತೆಳುವಾದ ಬೆಡ್‌ಷೀಟನ್ನು ರುಕ್ಮಿಣಿ ಮಗುವಿಗೆ ಹೊದಿಸಿದ್ದಳು. ಮಗು ಹೊದಿಕೆಯನ್ನು ಜಾಡಿಸಿ ಬದಿಗೆ ಸರಿಸಿದೆ. ಅದರ ಪಾದಗಳು ಅಚ್ಚ ಕೆಂಪಗೆ ಲಕ್ಷಣವಾಗಿ ಕಾಣುತ್ತ ಇವೆ.

ರಕ್ತದಲ್ಲಿ ತೊಯ್ದಂತಿರುವ ಆ ಪಾದ ಗಳನ್ನು ನೋಡಿ ಶಾಂತಳಿಗೆ ಈಗ ಏನೋ ಒಂದು ಥರ ಆಗಿಹೋಯಿತು. ಸ್ವಾಭಾವಿಕ ವಾಗಿಯೆ ಕ್ರೂರವಾಗಿರುವ ಅವಳ ಮುಖ, ಈಗ, ಇವೊತ್ತು, ಭಯಂಕರವಾಗಿದೆ. ಕಳೆದ ಎರಡು ದಿನಗಳಿಂದಲೂ ಅವಳಲ್ಲಿ ವಿಚಿತ್ರ ಬದಲಾವಣೆ.

ಹಾಲಲ್ಲಿ ರುಚಿಯಿಲ್ಲ; ಅನ್ನದಲ್ಲಿ ಸೊಗಸಿಲ್ಲ.

ಅವಳು ಈಗ ಒಂದು ನೆಗೆತ ಮೇಲಕ್ಕೆ ನೆಗೆದವಳೆ ಮೃತ್ಯುಬಾಯಿಯನ್ನು ತೆರೆದು ತನ್ನ ಕ್ರೂರವಾದ ಹಲ್ಲುಗಳಿಂದ ಆ ಮಗುವಿನ ಎರಡೂ ಪಾದಗಳನ್ನು ಸೇರಿಸಿ ಕಚ್ಚಿಕೊಂಡು ಬಿಟ್ಟಳು.

"ಕ್‌ವಾ..." ಎಂದು ಒಂದು ಸಲ ಮಗು



"ನಿಮ್ಮ ಹುಡುಗನ ವಿದ್ಯೆ, ರೂಪ, ಲಾವಣ್ಯ ವನ್ನು... ನಾನು ಮೆಚ್ಚಿದ್ದೀನಿ... ಕಾಣ್ರೀ..."

"ನಿಮ್ಮ ಮೆಚ್ಚುಗೆ ಇರಲಮ್ಮ... ನಿಮ್ಮ ಮಗಳ ಒಪ್ಪಿಗೆ ಹೇಳ್ರೀ..."


ಅಣ್ಣ ಹೇಳುತ್ತಾನೆ: ಸಾಠೆ ಮಾಲ್ಟೆಕ್ಸ್ ಇಷ್ಟು ರುಚಿಕರವಾಗಿರಲು
ಅದರಲ್ಲಿ ಇರುವ ಮಾಲ್ಟೇ ಕಾರಣ
ಸ್ವಾದಿಷ್ಟವಾದ, ಮೋಜಿನ ಮಾಲ್ಟೆಕ್ಸ್
ಬಿಸ್ಕಿಟ್ ಎಷ್ಟು ತಿಂದರೂ ಮತ್ತೆ ಮತ್ತೆ
ತಿನ್ನಬೇಕೆನಿಸುತ್ತದೆ. ಅದಕ್ಕೆ ಆ ಮಾಲ್ಟೇ ಕಾರಣ!
ಉಡುಗೊರೆ ಕೊಡಲು ಆಕರ್ಷಣೀಯ
ಪಾಕೀಟುಗಳಲ್ಲಿ ಮತ್ತು ಮನೆಗೆ ಕೊಂಡುಹೋಗಲು
ಲೂಸ್ ಕೂಡಾ ದೊರಕುತ್ತದೆ!
IS:1011
ಐ. ಯಸ್. ಐ. ಗುರುತಿರುವ
ಮಾಲ್ಟೆಕ್ಸ್ ಎಂದರೆ ಶ್ರೇಷ್ಠತೆಯ
ಖಾತ್ರಿ ನೀಡುವ ಬಿಸ್ಕಿಟ್
SATHE MALTex BISCUITS
SATHE MALTex BISCUITS
SATHE'S MALTex
ಸಾಠೆ
heros' SBC-57 C KAN

ಚೀರಿತು; ಇಷ್ಟರಲ್ಲಿ ರುಕ್ಮಿಣಿಯ ತಂಗಿ ಸುನೀತಿಗೆ ಎಚ್ಚರವಾಗಿ ಹೋಗಿ "ಅಯ್ಯೋ ಅವ್ವಾ..." ಎಂದು ಬೊಬ್ಬೆಹಾಕಿದಳು.

ರಾಮನಾಥಯ್ಯ ಒಳಗೆ ಧಾವಿಸಿದರು. ಮಲಗಿದ್ದವರು ಎಲ್ಲರಿಗೂ ಎಚ್ಚರವಾಗಿ ಹೋಯಿತು. ಎಲ್ಲರೂ ಚೀರಿಕೊಂಡರು. "ಅಯ್ಯೋ ಏನಾಯ್ತವ್ವಾ..." ಎಂದು ಕೂಗು ಹಾಕುತ್ತ ಸುಂದರಮ್ಮ ಓಡಿಬಂದಳು. ತಲೆಕೂದಲಿಂದ ನೀರು ತೊಟ್ಟಿಕ್ಕುತ್ತಿದ್ದಂತೆಯೆ ಸೀರೆಯನ್ನು ಅಡ್ಡಾದಿಡ್ಡಿಯಾಗಿ ಸುತ್ತಿಕೊಂಡು ರುಕ್ಮಿಣಿಯೂ ಧಾವಿಸಿ ಬಂದಳು.

ಒಂದು ದೊಣ್ಣೆಯನ್ನು ರಾಮನಾಥಯ್ಯ ಶಾಂತಳ ಮೇಲೆ ಬೀಸಿದರು. ಮಗುವಿನ ಪಾದಗಳನ್ನು ಕಚ್ಚಿಕೊಂಡಿದ್ದ ಶಾಂತಾ ರೊಪ್ಪನೆ ಅದನ್ನು ಕೆಳಗೆ ಹಾಕಿ ಹೊರಗೆ ಜಿಗಿದಳು.

ರಾಮನಾಥಯ್ಯ ಮತ್ತೆ ದೊಣ್ಣೆಯನ್ನು ಅದರ ಮೇಲೆ ಬೀಸಿದರು.

ಆದರೆ ಇವೊತ್ತು ಶಾಂತಾ ಉಗ್ರರೂಪಿಣಿ. ಕಾಳಿ. ಅವರು ದೊಣ್ಣೆ ಬೀಸುತ್ತಲೆ ಅವಳ ಕಣ್ಣುಗಳು ಕಿಡಿಯುದುರಿವೆ. ಛಂಗನೆ ನೆಗೆದು ಅವಳು ರಾಮನಾಥಯ್ಯನವರ ಮೇಲೆಯೆ ಹರಿಹಾಯ್ದಳು.

ಇಷ್ಟರಲ್ಲಿ ಪರಚ ಈ ಕಡೆ ಓಡಿಬಂದಿದ್ದ. ಏನು ನಡೆದಿದೆ ಎನ್ನುವುದು ಅವನಿಗೆ ಈಗ ಅರ್ಥವಾಗಿ ಹೋಗಿತ್ತು. "ಓ ಓ ಬಡ್ಡೀ ಮಗಂದು ಈವೊತ್ತು ಇದ್ನ ಬುಡಬಾರ್ದು. ರಕ್ತದ ರುಸಿ ಕಂಡೈತೆ..." ಎನ್ನುತ್ತ ಆತ ಮಚ್ಚನ್ನು ಶಾಂತಳ ಮೇಲೆ ಬೀಸಿದ.

ಶಾಂತಾ ಅವನ ಮೇಲೆಯೂ ತಿರುಗಿಬಿದ್ದಳು.

ಆದರೆ ಪರಚ ಬಲಿಷ್ಠ. ಶಾಂತಳ ದೇಹದ ಮೇಲೆ ತಲೆಯ ಮೇಲೆ, ಮತ್ತೆ ಮತ್ತೆ. ಏಟು ಹಾಕಿದ.

ಶಾಂತಾ ಅಂಗಳದಲ್ಲಿ ನೆತ್ತರು ಚಿಮ್ಮುತ್ತ ಘೋರವಾಗಿ ಒರಗಿಬಿದ್ದಳು.

ಸೂರ್ಯೋದಯವಾಗಿ ಹೋಯಿತು. ಮೂಡಣ ಬಾನು ನೆತ್ತರು ಚೆಲ್ಲಿದಂತೆ ಕೆಂಪುಕೆಂಪು. ಮುಗಿಲೂ ಕೆಂಪು ಬಾನಿಗೆ ಆ ಮುಗಿಲಿಗೆ ಸೇರಿಕೊಂಡಿದೆಯೇನೊ ಎನ್ನುವಂತೆ ದೂರವಾಗಿ ಹಾರಾಡುತ್ತ ಇರುವ ಒಂದು ಗಿಡುಗವೂ ಕೆಂಪಾಗಿ ಕಾಣುತ್ತ ಇದೆ.

ಮನೆಯೊಳಗೆ ರಕ್ತಚೀತ್ಕಾರ. ಗೋಳು. ಕರುಳು ಹಿಂಡುವ ಬೊಬ್ಬೆ.

ರುಕ್ಮಿಣಿಯ ರೋದನ ಕಾಡೆಲ್ಲವನ್ನೂ ಸೆಲೆ ಹಾಯುತ್ತ ಇದೆ. ಆ ಕ್ವಾರ್ಟರ್ಸ್‌ನಿಂದ ಪಶ್ಚಿಮಕ್ಕಿರುವ ಬಿದಿರು ಹೆಳಲು ಓ ಎನ್ನುವಂತೆ ಥಕ್ಕತ್ತೈ ಆಡುತ್ತ ಇದೆ. ಮಕ್ಕಳ ಚೀತ್ಕಾರದೊಂದಿಗೆ ಸೇರಿಕೊಂಡ ಸುಳಿಗಾಳಿಯೂ ಈಗ ಬಿಕ್ಕುವ ಹಾಗಿದೆ.

ಹೌದು. ಈಗ ರುಕ್ಮಿಣಿಯನ್ನು ಸಂತೈಸುವವರು ಯಾರು? ✡



This magazine owned by the Karnataka Patrika Private Ltd. is printed & published by Bhomeshwar Das Kohli at the Samyukta Karnatak Press: Koppikar Road, Hubli. Representatives: Bombay: V. S. Mani, Phone: 472794. Calcutta: H. Muzamdar: Phone: 46-4238; Madras: P. N. Srinivasan, Phone: 83748; New Delhi: P. R. Chopra, Phone: 224130.



ಬಟ್ಟೆಗಳಿಂದ ದೇಹಕ್ಕೆ ಶೋಭೆ.
ಬಟ್ಟೆಗಳ ಶೋಭೆ
ದಿನವಿಡೀ—
ಅನುದಿನವೂ
ಮಾಸದಿರುವುದು
ಅವಶ್ಯ!
ಶೋಭೆ ದೇಹಕ್ಕೆ?
ಅದೆಲ್ಲ ತಾಪತ್ರಯ
ಯಾತಕ್ಕೆ!
ಬಹುಕಾಲ
ಉಳಿಯುವ ಹೊಳಪಿಗಾಗಿ -
'ಟೆಬಿಲೈಸ್ಡ್' ಗುರುತು ನೋಡಿರಿ
TESTED CREASE RESISTANCE
TEBILIZED
MINIMUM IRONING • DURABLE GOOD LOOKS
TEBILIZED
ಬಹುಕಾಲ ಉಳಿಯುವ ಹೊಳಪಿನ, ಮುದುರದಿರುವ
ಬಟ್ಟೆಗಳ ಬಗ್ಗೆ ಅಭಯಮುದ್ರೆ.
Sista's-MBT-336-R/75-C-Kan.

KASTURI PRICE: 1–25 Regd. No: KRNG 45
Registered with the Registrar of Newspapers for India under No. 3633/57

